ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ - ೭



ಹಂಪಿ ಉತ್ಸವ ೨೦೦೧ ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಕೆ.ಆರ್. ರಾಮಕೃಷ್ಣ

ಟಿ.ಎಸ್. ಗಂಗಾಧರ., ಟಿ.ಎಮ್. ಮಂಜುನಾಥಯ್ಯ

ವಿಜಯನಗರ ಅಧ್ಯಯನ

ಸಂಪುಟ - ೭

ಹಂಪಿ ಉತ್ಸವ ೨೦೦೧ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಕೆ.ಆರ್. ರಾಮಕೃಷ್ಣ

ಟಿ.ಎಸ್. ಗಂಗಾಧರ

ಟಿ.ಎಂ.ಮಂಜುನಾಥಯ್ಯ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಹೊಸಪೇಟೆ

Vijayanagara Adhyayana
Vol - 7

Publisher
Director
Directorate of State Archaeology and Museums
Hospet - 583 201
Ph : 0839-430163

First Print : 2003
Pages : viii + 224

Price : Rs. 90-00

DTP
Rachana Graphics, Hospet
Ph : 0839-420005

Printed at :
Jyotsna Graphics
Bangalore - 23
Ph : 3202147

ವಿಜಯನಗರ ಅಧ್ಯಯನ
ಸಂಪುಟ - ೭

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಹೊಸಪೇಟೆ-583201
ದೂರವಾಣಿ : 0839-430163

ಮೊದಲ ಮುದ್ರಣ : 2003
ಪುಟಗಳು : viii + 224

ಬೆಲೆ : ರೂ. 90

ಅಕ್ಷರ ಜೋಡಣೆ
ರಚನ ಗ್ರಾಫಿಕ್ಸ್, ಹೊಸಪೇಟೆ
ದೂರವಾಣಿ : 0839-420005

ಮುದ್ರಣ
ಜ್ಯೋತ್ಸ್ನಾ ಗ್ರಾಫಿಕ್ಸ್, ಬೆಂಗಳೂರು - 23
ದೂರವಾಣಿ : 3202147

ರಾಣಿ ಸತೀಶ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು ೫೬೦ ೦೦೧

ಮೊದಲ ಮಾತು

ಸಾಂಸ್ಕೃತಿಕ ಚಟುವಟಿಕೆಗಳ ಪ್ರತೀಕವಾಗಿ ಮೆರೆದಂತಹ ವಿಜಯನಗರ ಸಾಮ್ರಾಜ್ಯವು ಸಾಹಿತ್ಯ, ಧರ್ಮ, ಕಲೆ, ವಾಸ್ತುಶಿಲ್ಪ, ಸಂಗೀತ ಇತ್ಯಾದಿಗಳಿಗೆ ನೀಡಿರುವ ಕೊಡುಗೆ ಅವಿಸ್ಮರಣೀಯ. ಇಲ್ಲಿನ ಸಾಂಸ್ಕೃತಿಕ ಅವಶೇಷಗಳು ಇಂದಿಗೂ ವಿಶ್ವದಾದ್ಯಂತ ಜನರ ಗಮನ ಸೆಳೆಯುತ್ತಿವೆ. ವಿಜಯನಗರದ ಅರಸರು ಆರಂಭಿಸಿದ ಪ್ರಸಿದ್ಧ ದಸರಾ ಉತ್ಸವವನ್ನು ತದನಂತರ ಮೈಸೂರು ಅರಸರು ಮುಂದುವರಿಸಿಕೊಂಡು ಬಂದು ಮೈಸೂರನ್ನು ವಿಶ್ವವಿಖ್ಯಾತಗೊಳಿಸಿದರು. ದುರದೃಷ್ಟವಶಾತ್ ಇಂತಹ ಭವ್ಯ ಸಾಮ್ರಾಜ್ಯವು ಇಂದು ಹಾಳು ಹಂಪೆಯಾಗಿ ಗುರುತಿಸಲ್ಪಟ್ಟಿದೆ. ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಸಾಂಕೇತಿಕವಾಗಿಯಾದರೂ ನೆನಪು ಮಾಡುವ ದೃಷ್ಟಿಯಿಂದ ೧೯೮೭ ರಿಂದ 'ಹಂಪಿ ಉತ್ಸವ' ಎಂಬ ಹೆಸರಿನಲ್ಲಿ ಉತ್ಸವವೊಂದನ್ನು ಕರ್ನಾಟಕ ಸರ್ಕಾರವು ವರ್ಷಂಪ್ರತಿ ನಡೆಸಿಕೊಂಡು ಬರುತ್ತಿದೆ.

ಪ್ರತಿವರ್ಷವೂ ಈ ಸಂದರ್ಭದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಆಯ್ದ ವಿದ್ವಾಂಸರುಗಳನ್ನು ಆಹ್ವಾನಿಸಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿಕೊಂಡು ಬರುತ್ತಿದೆ. ಇದರಲ್ಲಿ ಮಂಡಿಸಲಾಗುವ ಪ್ರಬಂಧಗಳನ್ನು ಸಾಮಾನ್ಯರಿಗೆ, ಸಂಶೋಧಕರಿಗೆ, ಇತಿಹಾಸಕಾರರಿಗೆ ಹಾಗೂ ಪುರಾತತ್ವಜ್ಞರಿಗೆ ಉಪಯುಕ್ತವಾಗುವ ದೃಷ್ಟಿಯಿಂದ 'ವಿಜಯನಗರ ಅಧ್ಯಯನ ಸಂಪುಟ' ಎಂಬ ಮಾಲಿಕೆಯಡಿಯಲ್ಲಿ ಪ್ರಕಟಿಸುತ್ತಿದೆ. ಪ್ರಸಕ್ತ ವರ್ಷವು 'ವಿಜಯನಗರ ಅಧ್ಯಯನ ಸಂಪುಟ - ೭' ಗ್ರಂಥವನ್ನು ಹೊರತರುತ್ತಿದ್ದು ಇದರಲ್ಲಿ ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಉತ್ಕೃಷ್ಟ ಲೇಖನಗಳು ಸೇರ್ಪಡೆಯಾಗಿವೆ. ಇಂತಹ ಉನ್ನತ ಪರಂಪರೆಯನ್ನು ಇಲಾಖೆಯು ಮುಂದುವರೆಸಿಕೊಂಡು ತನ್ಮೂಲಕ ವಿದ್ವಾಂಸರಿಗೆ ಹಾಗೂ ಸಾಮಾನ್ಯರಿಗೆ ಇನ್ನೂ ಹೆಚ್ಚಿನ ಜ್ಞಾನಾರ್ಜನೆಯನ್ನುಂಟು ಮಾಡಲಿ ಎಂಬುದಾಗಿ ಹಾರೈಸುತ್ತೇನೆ. ಇಂತಹ ಕಾರ್ಯವನ್ನು ಮಾಡುತ್ತಿರುವ ನಿರ್ದೇಶನಾಲಯದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ರಾಣಿ ಸತೀಶ್
ಸಚಿವರು

೧.೧.೨೦೦೩

ಪ್ರಸ್ತಾವನೆ

ಐತಿಹಾಸಿಕ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಮರುಕಳಿಸುವಂತೆ ಮಾಡುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಆರಂಭಿಸಿ ಉತ್ಖನನ, ಸಂರಕ್ಷಣೆ ಮತ್ತು ಸಂಶೋಧನಾತ್ಮಕವಾದ ಚಟುವಟಿಕೆಗಳೇ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಹಂಪಿಯಲ್ಲಿನ ಅವಶೇಷಗಳು ಇಂದಿಗೂ ಆಗಿನ ಶಿಲ್ಪಕಲೆ, ಚಿತ್ರಕಲೆ, ಶಾಸನಗಳು ಹಾಗೂ ಸಾಹಿತ್ಯ ಕುರಿತಂತೆ ವೈಭವವನ್ನು ಮನಮುಟ್ಟುವಂತೆ ಬಿಂಬಿಸುತ್ತಿವೆ. ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ವಿಜಯನಗರವು ಇಂದಿಗೂ ನಾಡಿನ, ರಾಷ್ಟ್ರದ ಹಾಗೂ ಅಂತರಾಷ್ಟ್ರೀಯ ವಿದ್ವಾಂಸರನ್ನು ಹಾಗೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಈಗಾಗಲೇ ಇಲ್ಲಿ ವ್ಯಾಪಕವಾಗಿ ಸಂಶೋಧನಾ ಕಾರ್ಯ ಆಗಿದೆಯಾದರೂ ಇನ್ನು ಆಗಬೇಕಾದ ಕೆಲಸ ಅಗಾಧವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಮುಂದಿನ ಪೀಳಿಗೆಗೆ ಉಪಯುಕ್ತವಾಗುವ ರೀತಿಯಲ್ಲಿ ಇಲ್ಲಿನ ಸಂಶೋಧನೆಗಳನ್ನು ದಾಖಲಿಸುವ ಸಲುವಾಗಿ ಕರ್ನಾಟಕ ಸರ್ಕಾರವು ಪ್ರತಿವರ್ಷ 'ಹಂಪಿ ಉತ್ಸವ'ದ ಸಂದರ್ಭದಲ್ಲಿ ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿ ಕುರಿತಂತೆ ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿದೆ. ೨೦೦೧ರ ಡಿಸೆಂಬರ್ ಮಾಹೆಯಲ್ಲಿ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ್ದ ಪ್ರಬಂಧಗಳನ್ನು 'ವಿಜಯನಗರ ಅಧ್ಯಯನ ಸಂಪುಟ - ೭' ರಲ್ಲಿ ಪ್ರಕಟಿಸುತ್ತಿದ್ದೇವೆ.

ಇಂತಹ ವಿದ್ವತ್‌ಪೂರ್ಣ ವಿಚಾರ ಸಂಕಿರಣ ವ್ಯವಸ್ಥೆಗೊಳಿಸಲು ಪ್ರೋತ್ಸಾಹ ನೀಡಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗೌರವಾನ್ವಿತ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್ ಅವರಿಗೆ ಮತ್ತು ಕಾರ್ಯದರ್ಶಿಗಳಾದ ಶ್ರೀ ಸಿ.ಎಸ್.ಕೇದಾರ್ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಲ್ಲದೆ ಈ ವಿಚಾರ ಸಂಕಿರಣವನ್ನು ವ್ಯವಸ್ಥಿತವಾಗಿ ಏರ್ಪಡಿಸಿದ್ದ ಇಲಾಖೆಯ ಅಂದಿನ ನಿರ್ದೇಶಕರಾದ ಡಾ. ಎಂ.ವಿ.ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು. ಈ ವಿಚಾರ ಸಂಕಿರಣದ ಏರ್ಪಾಡಿಗೆ ಬಹಳವಾಗಿ ಶ್ರಮಿಸಿದ ಇಲಾಖೆಯ ಎಲ್ಲ ಸಿಬ್ಬಂದಿವರ್ಗಕ್ಕೂ ನನ್ನ ಅಭಿನಂದನೆಗಳು ಸಲ್ಲುತ್ತವೆ. ಸಾಮಾನ್ಯರು, ಇತಿಹಾಸ ಪ್ರಿಯರು, ವಿದ್ವಾಂಸರು, ಸಂಶೋಧಕರು ಮತ್ತು ಸಾಹಿತ್ಯ ಪ್ರೇಮಿಗಳು ಇವರೆಲ್ಲರಿಗೂ ಈ ಸಂಪುಟವು ಉಪಯುಕ್ತ ವಾಗುವುದೆಂದು ನಾನು ಭಾವಿಸುತ್ತೇನೆ.

ಕೆ.ಆರ್.ರಾಮಕೃಷ್ಣ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಹೊಸಪೇಟೆ
೧.೧.೨೦೦೩

ಸಂಕ್ಷೇಪಗಳು

ಅರಿಇಂಎ	:	ಅನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಇಂಎಂ	:	ಇಂಡಿಯನ್ ಎಂಟಿಕ್ವೇರಿ
ಎಕ	:	ಎಪಿಗ್ರಾಫಿಯ ಕರ್ನಾಟಿಕ
ಜಓರಿ	:	ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್
ARIE	:	Annual Report on Indian Epigraphy
ARSIE	:	Annual Report on South Indian Epigraphy
EC	:	Epigraphia Carnatica
Ep. Car.	:	Epigraphia Carnatica
EI	:	Epigraphia Indica
MAR	:	Annual Report of the Mysore Archaeological Department
QJMS	:	Quarterly Journal of the Mythic Society
SII	:	South Indian Inscriptions
VI	:	Vijayanagara Inscriptions

ಪರಿವಿಡಿ

❑❑

೧

ಪರ್ಶಿಯಾದ ಪ್ರವಾಸಿ ಅಬ್ದುಲ್ ರಜಾಕ್ ಕಂಡ ವಿಜಯನಗರ

* ಡಾ.ಎಂ.ಟಿ.ಕಾಂಬಳೆ

ಜಗತ್ತಿನಲ್ಲಿ ಪ್ರಾಚೀನ ನಾಗರಿಕತೆ ಮತ್ತು ಇತಿಹಾಸ ಹೊಂದಿದ ದೇಶಗಳಲ್ಲಿ ಭಾರತವು ಒಂದು. ತನ್ನ ಆಧ್ಯಾತ್ಮಿಕ ಶಕ್ತಿಯಿಂದ, ಪ್ರಾಚೀನ ಶ್ರೇಷ್ಠ ನಾಗರಿಕತೆಯಿಂದ, ಜಗತ್ತಿನ ಜನರ ಮನಸ್ಸನ್ನು ಭಾರತ ತನ್ನ ಕಡೆಗೆ ಸೆಳೆದುಕೊಂಡಿದೆ. ಆಧ್ಯಾತ್ಮದ ಸೆಲೆ, ಜ್ಞಾನದ ನೆಲೆ, ಕುಬೇರನ ಭಂಡಾರದಂತಿರುವ ಸಂಪತ್ತು ಹಾಗೂ ವ್ಯಾಪಾರ, ಇಲ್ಲಿನ ವಾಸ್ತುಶಿಲ್ಪ, ಕಲೆ, ಸಾಹಿತ್ಯ, ಸಂಗೀತ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಶಾಂತಿಗಾಗಿ ಭಾರತವು ವಿದೇಶಿಯರನ್ನು ಆಕರ್ಷಿಸಿದೆ. ಆ ಕಾರಣಕ್ಕಾಗಿಯೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಭಾರತಕ್ಕೆ ಅನೇಕ ವಿದೇಶಿ ಪ್ರವಾಸಿಗರು ಬಂದಿದ್ದಾರೆ. ಇಲ್ಲಿ ಅವರು ಕಂಡದ್ದನ್ನು, ಕೇಳಿದ್ದನ್ನು ಮನಸಾರೆ ಮೆಚ್ಚಿ, ತಮ್ಮ ಪ್ರವಾಸಕಥನದಲ್ಲಿ ದಾಖಲಿಸಿದ್ದಾರೆ.

ಹೀಗೆ ಭಾರತಕ್ಕೆ ಪ್ರವಾಸ ಬಂದವರಲ್ಲಿ ಗ್ರೀಕರೆ ಮೊದಲಿಗರು. ನಂತರ ಚೀನಿಯಾತ್ರಿಕರು, ಅರಬ್ಬೀ ಪ್ರವಾಸಿಗರು, ಪರ್ಶಿಯನ್‌ರು, ಇಟಲಿ ದೇಶದವರು, ಪೋರ್ಚುಗೀಸರು, ಹಾಲೆಂಡಿನವರು ಇದೆ ರೀತಿ ಅನೇಕ ವಿದೇಶಿಯರು ಭಾರತಕ್ಕೆ ಭೇಟಿ ನೀಡಿದ್ದಾರೆ. ಅನೇಕ ಅರಸು ಮನೆತನಗಳನ್ನು ಸಂದರ್ಶಿಸಿದ್ದಾರೆ ತಮ್ಮ ಅನುಭವಗಳನ್ನು ದಾಖಲಿಸುವ ಮುಖಾಂತರ ಭಾರತದ ಇತಿಹಾಸ ರಚನೆಗೆ ಮಹದುಪಕಾರ ಮಾಡಿದ್ದಾರೆ. ಆ ಕಾರಣಕ್ಕಾಗಿ ನಾವು ಭಾರತೀಯರು ಅವರಿಗೆ ಚಿರಋಣಿಗಳಾಗಿದ್ದೇವೆ.

ಈ ರೀತಿ ಭಾರತಕ್ಕೆ ಭೇಟಿ ನೀಡಿದವರಲ್ಲಿ ಪ್ರಸಿದ್ಧ ಪ್ರವಾಸಿಗಳೆಂದರೆ, ಗ್ರೀಕ ದೇಶದ ಟಾಲಮಿ, ಇತ್ಸಿಂಗ್, ಹ್ಯೂಎನ್ ತ್ಸ್ಯಾಂಗ, ಮೆಗಾಸ್ತಾನಿಸ್ ಸುಲೇಮಾನ್, ಇಬ್ನಾ ಹೌಕಲ್, ಅಲ್ - ಮಸೂದಿ, ಇಬ್ನ್ ಬತೂತ, ನಿಕೊಲೊ ಕೊಂತಿ, ಅಬ್ದುಲ್ ರಜಾಕ, ದ್ವಾರ್ತೆ ಬರ್ಬೋಸ್, ದೊಮಿಂಗು ಪಾಯಿಶ್, ಫರ್ನಾವ್ ನ್ಯೂನಿಜ, ಸೀಜರ್ ಫ್ರೆಡರಿಕ್ ಮುಂತಾದವರು. ವಿಜಯನಗರ ಇತಿಹಾಸ ತಿಳಿಸುವ ಅತ್ಯಂತ ಗಣ್ಯ ಸಂದರ್ಶಕನೆಂದರೆ ಪರ್ಶಿಯಾದ ಅಬ್ದುಲ್ ರಜಾಕ ಇತನು ಕ್ರಿ.ಶ. ೧೪೪೨ ರಲ್ಲಿ ಇಮ್ಮಡಿ ದೇವರಾಯನ ಕಾಲದಲ್ಲಿ ಭಾರತಕ್ಕೆ ಪರ್ಶಿಯಾದ ರಾಯಭಾರಿಯಾಗಿ ಬಂದು ವಿಜಯನಗರಕ್ಕೆ ಭೇಟಿ ನೀಡಿದನು. ತನ್ನ ಪ್ರವಾಸಿ ಕಥನದಲ್ಲಿ ಅಬ್ದುಲರಜಾಕ್ ಸಾಕಷ್ಟು ಮಹತ್ವದ ಮಾಹಿತಿಯನ್ನು ದಾಖಲಿಸಿದ್ದಾನೆ.

ಅಬ್ದುಲ್ ರಜಾಕನ ಸಂಕ್ಷಿಪ್ತ ಪರಿಚಯ

ಅಬ್ದುಲ್ ರಜಾಕ್ ಕ್ರಿ.ಶ. ೧೪೧೩ರಲ್ಲಿ ಪರ್ಷಿಯಾ ದೇಶದ ಹೆರಾತಿನಲ್ಲಿ ಹುಟ್ಟಿದನು. ಇವನ ತಂದೆಯ ಹೆಸರು ಜಲಾಲುದ್ದೀನ್ ಜೊಹಾಕ್. ಇವನು ಪರ್ಶಿಯಾದ ದೊರೆ ರುಖ್‌ಷಾನ ಕಾಲದಲ್ಲಿ ಖಾಜಿಯಾಗಿದ್ದನು. ತಂದೆ ಜಲಾಲುದ್ದಿನ ಕಾಲವಾದ ನಂತರ ಕ್ರಿ.ಶ. ೧೪೩೭ರಲ್ಲಿ ಅಬ್ದುಲ್ ರಜಾಕ್ ರುಖ್‌ಷಾನ ಸೇವೆಗೆ ಸೇರಿಕೊಂಡನು. ಕ್ರಿ.ಶ. ೧೪೪೧ರಲ್ಲಿ ಅಬ್ದುಲ್ ರಜಾಕನನ್ನು ರುಖ್‌ಷಾ ವಿಜಯನಗರದ ರಾಜನ ಬಳಿಗೆ ತನ್ನ ರಾಯಭಾರಿಯಾಗಿ ಕಳುಹಿಸಿಕೊಟ್ಟನು.

ಕ್ರಿ.ಶ. ೧೪೪೨ರಲ್ಲಿ ಹೆರಾತಿನಿಂದ ಭಾರತಕ್ಕೆ ಹೊರಟ ರಜಾಕನು ಪ್ರಾರಂಭದಲ್ಲಿ ಕೇರಳದ ಕಲ್ಲಿಕೋಟೆಯಲ್ಲಿ ಇಳಿದು ಅಲ್ಲಿಯ ಜಾಮೊರಿನ್ ದೊರೆಯನ್ನು ಭೇಟಿ ಮಾಡಿ ಅಲ್ಲಿಂದ ಮಂಗಳೂರು ಮಾರ್ಗವಾಗಿ ವಿಜಯನಗರವನ್ನು ತಲುಪಿದನು. ಎರಡು ವರ್ಷಗಳ ಕಾಲ ಅಬ್ದುಲ್ ರಜಾಕ್ ಭಾರತದಲ್ಲಿದ್ದು ನಂತರ ತನ್ನ ದೇಶಕ್ಕೆ ಮರಳಿ ಹೋದನು. ತನ್ನ ಪ್ರವಾಸವನ್ನು ಕುರಿತು ಅಬ್ದುಲ್ ರಜಾಕ್ ಮತ್ಲಾ-ಅಸ್-ಸಾ-ದೈನ್ (Matla- as- sa-dain) ಎಂಬ ಪುಸ್ತಕ ಬರೆದನು. ಮುಂದೆ ಕ್ರಿ.ಶ. ೧೪೮೨ರಲ್ಲಿ ಅಬ್ದುಲ್ ರಜಾಕ್ ಮರಣ ಹೊಂದಿದನು.

ಅಬ್ದುಲ್ ರಜಾಕ್ ಕಂಡ ವಿಜಯನಗರ

ಸಂಗಮವಂಶದ ಶ್ರೇಷ್ಠ ಅರಸನಾದ ಇಮ್ಮಡಿ ದೇವರಾಯ (ಕ್ರಿ.ಶ. ೧೪೨೬ - ೧೪೬೬)ನ ಕಾಲದಲ್ಲಿ ಅಬ್ದುಲ್ ರಜಾಕ್ ವಿಜಯನಗರಕ್ಕೆ ಭೇಟಿ ನೀಡಿದನು. ಅಲ್ಲಿ ತಾನು ಕಂಡದ್ದನ್ನು, ಅನುಭವಿಸಿದ್ದನ್ನು ಮತ್ತು ಇನ್ನಿತರ ವಿವರಗಳನ್ನು ದಿನಚರಿ ರೂಪದಲ್ಲಿ ದಾಖಲಿಸಿದ್ದಾನೆ. ವಿಜಯನಗರ ಕುರಿತು ಅಬ್ದುಲ್ ರಜಾಕ್ ಹೀಗೆ ಹೇಳುತ್ತಾನೆ. "ವಿಜಯನಗರವು ಬಹಳ ದೊಡ್ಡದಾದ ಜನವಸತಿಯುಳ್ಳ ಸುಪ್ರಸಿದ್ಧ ಪಟ್ಟಣ ರಾಜನ ಖ್ಯಾತಿ ಮತ್ತು ಅವನ ಪ್ರಭುತ್ವ ಅತ್ಯಂತ ಮಹೋನ್ನತವಾಗಿದೆ."

ವಿಜಯನಗರ ಸಾಮ್ರಾಜ್ಯವು ಬಂಗಾಳದಿಂದ ಮಲಬಾರ ಕೊನೆಯವರೆಗೆ ಸಾವಿರ ಫರ್ಲಾಂಗದಷ್ಟು ವಿಸ್ತರಿಸಿತ್ತು. ದೇಶದ ಬಹುಭಾಗ ಸಾಗುವಳಿಯಲ್ಲಿದ್ದು ಬಹು ಫಲವತ್ತಾಗಿದೆ, ಮುನ್ನೂರು ಬಂದರುಗಳಿವೆ. ವಿಜಯನಗರ ಸೈನ್ಯದಲ್ಲಿ ಹನ್ನೊಂದು ಲಕ್ಷ ದಷ್ಟು ಸೈನಿಕರಿದ್ದಾರೆ. "ಈ ರಾಯನ ಶ್ರೇಷ್ಠತೆಯನ್ನು ಮೀರಿಸುವ ದೊರೆ ಇಡೀ ಹಿಂದೂಸ್ಥಾನ ದಲ್ಲಿ ಎಲ್ಲಿ ಹುಡುಕಿದರೂ ಸಿಗುವುದಿಲ್ಲ" ಎಂದು ಹೇಳಿದ್ದಾನೆ. ವಿಜಯನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಏಳು ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ ಎಂದು ವಿಜಯನಗರವನ್ನು ವರ್ಣಿಸಿದ್ದಾನೆ. ಸಮಾಜದಲ್ಲಿ ರಾಯ್‌ನನ್ನು ಬಿಟ್ಟರೆ ಬ್ರಾಹ್ಮಣರು ಉಳಿದೆಲ್ಲರಿಗಿಂತ ಶ್ರೇಷ್ಠಸ್ಥಾನವನ್ನು ಪಡೆದಿದ್ದಾರೆಂದು ಸ್ಪಷ್ಟವಾಗಿ ಗುರುತಿಸಿದ್ದಾನೆ.

ಕೋಟೆಯೊಳಗಿನ ಅಂಗಡಿ ಬೀದಿ ಮತ್ತು ಅಂಗಡಿ ಕುರಿತು ಹೇಳುತ್ತಾ ಹೂವಿನ ಅಂಗಡಿಗಳಲ್ಲಿ ಎತ್ತರವಾದ ವೇದಿಕೆಗಳನ್ನು ರಚಿಸಿಕೊಂಡು ವೇದಿಕೆಗಳ ಎರಡೂ ಕಡೆ ಹೂಗಳ ರಾಶಿಹಾಕಿ ವ್ಯಾಪಾರ ಮಾಡುತ್ತಾರೆ. ಬೀದಿಗಳಲ್ಲೆಲ್ಲಾ ಗುಲಾಬಿ ಹೂವಿನ ವಾಸನೆಯೋ ವಾಸನೆ, ಈ ಜನರು ಗುಲಾಬಿ ಹೂಗಳು ಇಲ್ಲದಿದ್ದರೆ ಬದುಕುವಂತೆಯೇ ಕಾಣುವುದಿಲ್ಲ ವೆಂದು ಆಶ್ಚರ್ಯ ವ್ಯಕ್ತಪಡಿಸಿದ್ದಾನೆ.

ವಿಜಯನಗರದಲ್ಲಿ ಬೇರೆ ಬೇರೆ ವೃತ್ತಿಗೆ ಸೇರಿದ ವರ್ತಕರ ಅಂಗಡಿಗಳು ಬೇರೆ ಬೇರೆಯಿದ್ದವು. ರತ್ನ ವ್ಯಾಪಾರಿಗಳು ಅಂಗಡಿ ಬೀದಿಗಳಲ್ಲಿ ಬಹಿರಂಗವಾಗಿ ವಜ್ರ ವೈಡೂರ್ಯಗಳನ್ನು ಮುತ್ತುಗಳನ್ನು ಮಾರುತ್ತಿದ್ದರು. ರಾಜನ ಅರಮನೆಯ ಸುತ್ತ ಕಲ್ಲಿನಿಂದ ನಿರ್ಮಿಸಿದ ಕಾಲುವೆಗಳಲ್ಲಿ ಹರಿಯುವ ನೀರಿನ ಝರಿಗಳಿದ್ದವು (ಹಂಪೆಯ ಅವಶೇಷಗಳಲ್ಲಿ ಸ್ತ್ರೀಯರ ಸ್ನಾನದ ಮನೆಯಿಂದ ಸ್ವಲ್ಪ ದೂರದಲ್ಲಿ ಈಗಲೂ ಇದರ ಅವಶೇಷಗಳನ್ನು ನೋಡಬಹುದಾಗಿದೆ).

ಆಡಳಿತ ಕಛೇರಿಗಳು ಮತ್ತು ಆಡಳಿತಾಧಿಕಾರಿಗಳು

ರಾಜನ ಅರಮನೆಯ ಮಹಾದ್ವಾರದ ಎಡಗಡೆ ಬಹುದೊಡ್ಡದಾದ ದಿವಾನ್ ಖಾನೆ ಮತ್ತು ದಫ್ತರಖಾನೆ (Records room) ಇದೆ. ಇಲ್ಲಿ ಕಾರ್ಕೂನ (ಗುಮಾಸ್ತ)ರು ಕುಳಿತುಕೊಳ್ಳುತ್ತಾರೆ. ಇವರು ಕಬ್ಬಿಣ ಕಲಮನಿಂದ ಮತ್ತು ಒಳಪದ ಕಲಮ್‌ನಿಂದ ಬರೆಯುತ್ತಾರೆ.

ಅಬ್ದುಲ್ ರಜಾಕ್ ವಿಜಯನಗರ ಆಡಳಿತದಲ್ಲಿ 'ದೈಯಾಂಗ್' ಎಂಬ ಅಧಿಕಾರಿಯ ಕಾರ್ಯಭಾರವನ್ನು ವಿವರಿಸುತ್ತಾನೆ. ಅದನ್ನು ಗಮನಿಸಿದರೆ ದಂಡನಾಯಕ ಅಥವಾ ಮುಖ್ಯಮಂತ್ರಿಯನ್ನು ರಜಾಕ್ ದೈಯಾಂಗ ಎಂದು ಕರೆದಿರಬಹುದೆಂದು ನನ್ನ ಅನಿಸಿಕೆ. ದಿವಾನ್ ಖಾನೆಯ ಮಧ್ಯೆ ಎತ್ತರವಾದ ವೇದಿಕೆಯ ಮೇಲೆ ದೈಯಾಂಗ (ದಂಡನಾಯಕ) ಕುಳಿತಿರುತ್ತಾನೆ. ಹಜಾರದ ಕೊನೆಯಲ್ಲಿ ಸಾಲಾಗಿ ಚೋಪದಾರರು (ಸರದಾರರು)

ನಿಂತಿರುತ್ತಾರೆ ಯಾವುದೆ ಕಾರ್ಯನಿಮಿತ್ತ ಬಂದರು ಚೊಪದಾರರ ಎರಡು ಸಾಲುಗಳ ಮಧ್ಯೆ ನಡೆದುಬಂದು ದೈಯಾಂಗನಿಗೆ ಕಾಣಿಕೆಯನ್ನರ್ಪಿಸಿ ದೀರ್ಘದಂಡ ನಮಸ್ಕಾರ ಮಾಡಿ ಎದ್ದುನಿಂತು ಆಮೇಲೆ ತಮ್ಮ ಅಹವಾಲನ್ನು ಕೇಳಿ ರಾಜ್ಯದಲ್ಲಿರುವ ನಿಯಮಾನುಸಾರ ತೀರ್ಪು ಕೊಡುತ್ತಾನೆ. ಆತನ ತೀರ್ಪು ಅಂತಿಮವಾದದ್ದು.

ದಿವಾನ್ ಖಾನೆಯಿಂದ ದೈಯಾಂಗ್ ಹೊರಟಾಗ ಅವನ ಮುಂದೆ ವಿವಿಧ ಬಣ್ಣಗಳ ಛತ್ರಿಗಳನ್ನು ಹಿಡಿದುಕೊಂಡು ಹೋಗುತ್ತಾರೆ. ವಾದ್ಯಗಳು ಮೊಳಗುತ್ತಿರುತ್ತವೆ. ಹೊಗಳು ಭಟ್ಟರು ಪಾರಾಕು ಎಂದು ಹೇಳುತ್ತಾರೆ. ದೈಯಾಂಗನು ಏಕಾಂತವಾಗಿ ರಾಜನಿಗೆ ಭೇಟಿಯಾಗಿ ಕೇವಲ ಐದು ನಿಮಿಷಗಳಲ್ಲಿ ರಾಜ್ಯದ ಆಡಳಿತದ ವರದಿಯನ್ನೊಪ್ಪಿಸಿ ಹಿಂದಿರುತ್ತಾನೆ. ರಾಜನ ಅರಮನೆಯ ಹಿಂಭಾಗದಲ್ಲಿ ದೈಯಾಂಗನ ವಾಸದ ಮನೆಯಿದ್ದಿತು.

ಟಂಕಸಾಲೆ ಮತ್ತು ನಾಣ್ಯಗಳು

ಅರಮನೆಯ ಎಡಭಾಗದಲ್ಲಿ ದರಬ್‌ಖಾನೆ (ಟಂಕಸಾಲೆ) ಇದೆ. ಈ ದೇಶದಲ್ಲಿ ವರಹ, ಪರ್ತಬ್ ಮತ್ತು ಪನಂ ಎಂದು ಮೂರು ತರಹದ ನಾಣ್ಯಗಳಿವೆ. ಇವು ಚಿನ್ನ ಮಿಶ್ರಿತ ಲೋಹಗಳಿಂದ ಮಾಡಲ್ಪಟ್ಟಿರುತ್ತವೆ. ಪ್ರಾಂತಗಳಿಂದ ಚಿನ್ನವನ್ನು ನಿಗದಿಯಾದ ಕಾಲದಲ್ಲಿ ಟಂಕಸಾಲೆಗೆ ತರಲಾಗುತ್ತಿತ್ತು. ಕೆಲವೊಮ್ಮೆ ಸಂಬಳವನ್ನು ದರಬ್‌ಖಾನೆಯಿಂದ ಚಿನ್ನದ ರೂಪದಲ್ಲಿ ನೀಡಲಾಗುತ್ತಿತ್ತು. ಈ ದೇಶದ ಪ್ರತಿಯೊಬ್ಬ ನಿವಾಸಿಯು ಅವನು ಮೇಲ್ ತರಗಿಯವನಾಗಲಿ ಅಥವಾ ಸಾಮಾನ್ಯನಾಗಿರಲಿ ಕೊನೆಗೆ ಅಂಗಡಿ ಬೀದಿಯಲ್ಲಿ ಕೆಲಸ ಮಾಡುವವರೂ ಸಹ, ಕೊರಳು, ಕೈ, ತೋಳು ಮತ್ತು ಬೆರಳುಗಳಿಗೆ ಮುತ್ತುಗಳನ್ನೋ ಅಥವಾ ರತ್ನಖಚಿತವಾದ ಬೆಲೆಯುಳ್ಳ ಒಡವೆಗಳನ್ನೋ ಧರಿಸಿರುತ್ತಾರೆ. ವಿಜಯನಗರದ ಗಜಶಾಲೆಯಲ್ಲಿ ಸಾವಿರಾರು ಸಂಖ್ಯೆಯ ಆನೆಗಳು ಇರುತ್ತಿದ್ದವು ಆನೆಗಳಿಗೆ ಹಾಕುವ ಆಹಾರ, ಆನೆಗಳನ್ನು ಕಟ್ಟುವ ರೀತಿ, ಅವುಗಳನ್ನು ಹಿಡಿಯುವ ವಿಧಾನ, ಆನೆಗಳ ಬೇಟೆಯಲ್ಲಿ ಅರಸರ ಆಸಕ್ತಿ ಮತ್ತು ಅಪರಾಧಿಗಳನ್ನು ಶಿಕ್ಷಿಸುವಲ್ಲಿ ಆನೆಗಳ ಬಳಕೆ ಕುರಿತು ಅಬ್ದುಲ್ ರಜಾಕ್ ಸವಿಸ್ತಾರ ವಿವರಣೆ ನೀಡಿದ್ದಾನೆ.

ನಗರದಲ್ಲಿರುವ ವೇಶ್ಯಾಗೃಹಗಳ ಭವ್ಯತೆಯನ್ನು ಅಲ್ಲಿನ ಯುವತಿಯರ ಸೌಂದರ್ಯ, ಹಾವಭಾವವನ್ನು ವರ್ಣಿಸಲು ಸಾಧ್ಯವಿಲ್ಲ. ವೇಶ್ಯಾಗೃಹಗಳ ಮೇಲೆ ತೆರಿಗೆ ಹಾಕಿ ಅದರಿಂದ ಬಂದ ಹಣದಲ್ಲಿ ಪಹರೆಯ ಸಿಬ್ಬಂದಿಗೆ ಸಂಬಳ ನೀಡಲಾಗುತ್ತಿತ್ತು ಎಂದು ತಿಳಿಸಿರುವ ಅಬ್ದುಲ್ ರಜಾಕ್ ರಾಜನ ಅರಮನೆ ಒಡ್ಡೋಲಗವನ್ನು ಮುಕ್ತ ಕಂಠದಿಂದ ವರ್ಣಿಸಿದ್ದಾನೆ.

ಅಬ್ದುಲ್ ರಜಾಕ್‌ನ ವರದಿಯಿಂದ ವಿಜಯನಗರ ಅರಸರ ಕಾಲದಲ್ಲಿ ಅರಸರು ಇತರರೊಂದಿಗೆ ಸಹಭೋಜನ ಮಾಡುತ್ತಿರಲಿಲ್ಲ ಎಂದು ತಿಳಿದುಬರುತ್ತದೆ.

ಮಹಾನವಮಿ ಹಬ್ಬದ ಕುರಿತು ಅಬ್ದುಲ್ ರಜಾಕನ ವಿವರಣೆ

ಆಡಳಿತ ನಡೆಸುವ ಈ ದೇಶದ (ವಿಜಯನಗರದ) ವಿಗ್ರಹಾರಾಧಕರು (ಹಿಂದುಗಳು)

ತಮ್ಮ ಗೌರವ ಪ್ರತಿಷ್ಠೆ ತಮ್ಮ ಅಧಿಕಾರ ಮತ್ತು ವೈಭವದ ಪ್ರದರ್ಶನಕ್ಕಾಗಿ ಪ್ರತಿ ವರ್ಷವೂ ಮಹಾನವಮಿ (ರಜಾಕ್ ತಪ್ಪಾಗಿ ಮಹಾನದಿ ಎಂದು ಉಲ್ಲೇಖಿಸಿದ್ದಾನೆ) ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವು ನಿಜವಾಗಿಯೂ ಒಬ್ಬ ಚಕ್ರವರ್ತಿಗೆ ಯೋಗ್ಯವಾದ ಹಬ್ಬವೇ ಸರಿ.

ಈ ಹಬ್ಬಕ್ಕೆ ರಾಜ್ಯದ ಎಲ್ಲಾ ಕಡೆಯಿಂದ ಮಾಂಡಲಿಕರೂ ಸರದಾರರೂ ಮುಖ್ಯಸ್ಥರೂ ಬರುತ್ತಾರೆ. ಇವರು ಸಾವಿರಾರು ಅಲಂಕೃತ ಆನೆಗಳನ್ನು ಹಬ್ಬಕ್ಕೆ ತಂದಿರುತ್ತಿದ್ದರು. ಈ ಹಬ್ಬದಲ್ಲಿ ನೃತ್ಯಗಾಯನ ವಾದ್ಯ ಡೊಂಬರಾಟ ಇನ್ನಿತರ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತಿದ್ದವು ರಾಜನು ಎಲ್ಲರಿಗೆ ಚಿನ್ನದ ಬಹುಮಾನ ಕೊಡುತ್ತಿದ್ದನು ನಿಜವಾಗಿಯೂ ವಿಜಯನಗರದ ರಾಜ ಮಹೋನ್ನತನೆ ಸರಿ. ಆದ್ದರಿಂದ ದೊಡ್ಡವರ ಮತ್ತು ಚಿಕ್ಕವರ ಮಾತು, ಪ್ರತಿಯೊಬ್ಬ ಸಾಹಿತಿಯ ಬರವಣಿಗೆ ಪ್ರತಿಯೊಬ್ಬ ರಾಯಸದವನ ಲೇಖನಿ. ಈ ರಾಜನನ್ನು ಕುರಿತು ನುಡಿಯಲೀ ಬರೆಯಲಿ ಎಂದು ಅಬ್ದುಲ್ ರಜಾಕ್ ಹಾರೈಸುತ್ತಾನೆ.

ಪರಿಸಮಾಪ್ತಿ

ಅಬ್ದುಲ್ ರಜಾಕ್ ಕಂಡ ವಿಜಯನಗರದ ಚಿತ್ರಣ ವಸ್ತು ನಿಷ್ಠವು, ವಿವರಣಾತ್ಮಕವು ಆದುದಾಗಿದೆ. ಈ ವಿವರಣೆಗಳ ಮೂಲಕ ಅಂದಿನ ಕಾಲದ ವಿಜಯನಗರದ ಚಿತ್ರಣವನ್ನು ಕಲ್ಪಿಸಿಕೊಳ್ಳಬಹುದಾಗಿದೆ. ವಿದೇಶಿ ಪ್ರವಾಸಿಗರ ವಿವರಣೆಯಲ್ಲಿ ವರ್ಣನೆಗಿಂತ ವಸ್ತು ನಿಷ್ಠತೆ ಹೆಚ್ಚಿದೆ.

ಪದಗಳ ಅರ್ಥ

ಖಾಜಿ	:	ನ್ಯಾಯವಾದಿ
ಮತ್ಲಾ - ಅಸ್ - ಸಾ - ದೈನ್		
ಫರ್ಸಲಾಂಗ್	:	ಫರ್ಲಾಂಗ್
ದಿವಾನಖಾನೆ	:	ಆಡಳಿತ ಕಛೇರಿ
ದಫ್ತರಖಾನೆ	:	ದಾಖಲೆಗಳನ್ನು ಸಂಗ್ರಹಿಸುವ ಕಛೇರಿ
ಕಾರ್ಖೂನ	:	ಗುಮಾಸ್ತ
ಕಲಮ್	:	ಲೇಖನಿ
ದೈಯಾಂಗ್	:	ದಂಡನಾಯಕ
ಚೋಪದಾರರು	:	ಅಶ್ವದಳದ ಮುಖ್ಯಸ್ಥರು
ಅಹವಾಲ	:	ಮನವಿ
ದರಬ್‌ಖಾನೆ	:	ಟಂಕಸಾಲೆ, ನಾಣ್ಯಗಳನ್ನು ಮುದ್ರಿಸುವ ತಾಣ
ಪಹರೆ	:	ಗಸ್ತು ತಿರುಗು
ರಾಯಸ	:	ಮಂತ್ರಿ

ಗ್ರಂಥಋಣ

೧. 'ಪ್ರವಾಸಿ ಕಂಡ ಇಂಡಿಯಾ' ಸಂಪುಟ - ೨ (ಎರಡು)
ಸಂಪಾದಕರು : ಹೆಚ್ .ಎಲ್ .ನಾಗೇಗೌಡ

೨. "ಮರೆತು ಹೋದ ಮಹಾ ಸಾಮ್ರಾಜ್ಯ ವಿಜಯನಗರ"
ಮೂಲ : ರಾಬರ್ಟ್ ಸಿವೆಲ್, ಅನುವಾದ : ಡಾ. ಸದಾನಂದ ಕನವಳ್ಳಿ

೩. "ಕರ್ನಾಟಕ ಚರಿತ್ರೆ" ಸಂಪಾದಕರು : ಬಿ.ಷೇಕಅಲಿ ಹಾಗೂ ಎಸ್ .ಶಿವಣ್ಣ

❑❑

೨

ಕೃಷ್ಣದೇವರಾಯನ ವಿದೇಶಿ ನೀತಿಯ ಹಿನ್ನೆಲೆಯಲ್ಲಿ ವಿಜಯನಗರದ ವಿಘಟನೆಯ ಅಧ್ಯಯನ

* ಡಾ. ಬಿ. ಸಿ. ಮಹಾಬಲೇಶ್ವರಪ್ಪ

ಪ್ರಾಚೀನ ಹಿನ್ನೆಲೆಯಿರುವ ಭಾರತೀಯ ಚರಿತ್ರೆಯಲ್ಲಿ ಪರಸ್ಪರ ವಿರೋಧಿಯಾದ ಐಕ್ಯತೆ ಮತ್ತು ವಿಘಟನೆಗಳ ಪ್ರವೃತ್ತಿಗಳು ಹರಿಯುತ್ತಾ ಬಂದಿರುವುದನ್ನು ಗುರುತಿಸಬಹುದಾಗಿದೆ. ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಮುಸ್ಲಿಮರ ಆಕ್ರಮಣದಿಂದ ರಕ್ಷಿಸುವ ಉದ್ದೇಶದಿಂದ ಪಂಚಸಂಗಮ ಹರಿಹರ, ಬುಕ್ಕ, ಹಂಪನಾ ಮಾರಪ್ಪ, ಮುದ್ದಪ್ಪ ಅವರುಗಳು ಕ್ರಿ.ಶ. ೧೩೩೬ರಲ್ಲಿ ತುಂಗಭದ್ರಾ ನದಿಯ ದಂಡೆಯಲ್ಲಿ ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯ ಕೂಡ ಮೇಲೆ ತಿಳಿಸಿರುವ ಚಾರಿತ್ರಿಕ ವಿಕಾಸದ ಪ್ರಕ್ರಿಯೆಯಿಂದ ಮುಕ್ತವಾಗಿಲ್ಲ. ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ಅರಸು ಮನೆತನಗಳು ಆಳಿದವು. ಈ ಅರಸು ಮನೆತನಗಳ ನಡುವೆ ವೈರತ್ವವಿತ್ತು. ಒಬ್ಬರನೊಬ್ಬರು ಪದಚ್ಯುತಗೊಳಿಸುವ ಪ್ರಯತ್ನಗಳಲ್ಲಿ ಅವರು ನಿರತರಾಗಿದ್ದರು. ಆದರೆ ವಿಜಯನಗರದ ಮಹಾನ್ ಉದ್ದೇಶ ಮತ್ತು ಆಶಯಗಳಿಗೆ ಎಲ್ಲ ಅರಸು ಮನೆತನಗಳೂ ಕಟಿಬದ್ಧರಾಗಿದ್ದುದರಿಂದ ಅವರನ್ನೆಲ್ಲ ಒಂದೇ ವಂಶಾವಳಿಯ ಚೌಕಟ್ಟಿನಲ್ಲಿ ಸೇರಿಸಬಹುದು. ಈ ಸಾಮ್ರಾಜ್ಯದ ಕೀರ್ತಿಯು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಉತ್ತುಂಗವನ್ನು ತಲುಪಿತು. ಈ ಸಾಮ್ರಾಜ್ಯವು ಕ್ರಿ.ಶ. ೧೫೬೫ರಲ್ಲಿ ರಕ್ಕಸಗಿ-ತಂಗಡಗಿ ಎಂಬಲ್ಲಿ ನಡೆದ ಐತಿಹಾಸಿಕ ಭೀಕರ ಯುದ್ಧದಲ್ಲಿ ಪತನಗೊಂಡಿತು.

ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಪತನಗಳನ್ನು ಒಂದೇ ಒಂದು ಕಾರಣದ ಚೌಕಟ್ಟಿನಲ್ಲಿ ವಿವರಿಸುವುದು ಅಸಾಧ್ಯ. ದುರ್ಬಲ ಉತ್ತರಾಧಿಕಾರಿಗಳು, ಪರಸ್ಪರ ಸಿಂಹಾಸನದಿಂದ ಪದಚ್ಯುತಗೊಳಿಸುತ್ತಿದ್ದುದು, ಧಾರ್ಮಿಕ ವಿಷಮತೆ, ನಾಯಕರ ವ್ಯವಸ್ಥೆ, ಮಿಲಿಟರಿ ವ್ಯವಸ್ಥೆಯಲ್ಲಿನ ದೋಷಗಳು, ಆಯಕಟ್ಟಿನ ದೋಅಬ್ ಪ್ರದೇಶಕ್ಕಾಗಿ ಬಹುಮನಿಗಳ ಜೊತೆಗಿನ ನಿರಂತರ ಹೋರಾಟ, ಕೃಷ್ಣದೇವರಾಯ ಮತ್ತು ಅಳಿಯ ರಾಮರಾಯ ಅವರುಗಳು ವಿದೇಶಿ ನೀತಿ ಮುಂತಾದ ಕಾರಣಗಳೆಲ್ಲವೂ ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಅಡಿಪಾಯವನ್ನು ಸಿದ್ಧ ಪಡಿಸಿದವು ಎಂದು ಹೇಳಬಹುದು. ಪ್ರಸ್ತುತ ಅಧ್ಯಯನದಲ್ಲಿ ಕೃಷ್ಣದೇವರಾಯನ ಆಕ್ರಮಣಕಾರಿ ಹಾಗೂ ಸಂರಕ್ಷಣಾಕಾರಿ ಯುದ್ಧಗಳು ಸಾಮ್ರಾಜ್ಯದ ವಿಸ್ತರಣೆಗೆ ಹಾಗೂ ಚಕ್ರವರ್ತಿಯ ಸ್ಥಾನವನ್ನು ಭದ್ರಗೊಳಿಸಲು ಹೇಗೆ ನೆರವಾದವು ಮತ್ತು ಅವುಗಳೇ ಹೇಗೆ ಅಂತಿಮವಾಗಿ ವಿಜಯನಗರ ಸಾಮ್ರಾಜ್ಯದ ಪತನಕ್ಕೂ ಕಾರಣಗಳಾದವು ಎಂಬುದನ್ನು ವಿಶ್ಲೇಷಿಸಲಾಗಿದೆ.

ಅವನ ಯುದ್ಧಗಳ ಪರಿಣಾಮಗಳು

ರಾಜಕೀಯ ಮುತ್ಸದ್ಧಿತನ ಹಾಗೂ ಯುದ್ಧಕಲೆಗಳನ್ನು ಮೈಗೂಡಿಸಿಕೊಂಡಿದ್ದ ಕೃಷ್ಣದೇವರಾಯನು ಸಾಮ್ರಾಜ್ಯದ ಘನತೆ ಹಾಗೂ ಸಾರ್ವಭೌಮತ್ವಗಳು ಅದೋಗತಿ ಸ್ಥಿತಿಯಲ್ಲಿದ್ದಾಗ ಕ್ರಿ.ಶ. ೧೫೦೯ರಲ್ಲಿ ವಿಜಯನಗರದ ರತ್ನಖಚಿತ ಸಿಂಹಾಸವನ್ನೇರಿದನು. ವಿಜಯನಗರದ ರಾಜಕೀಯ ರಂಗಕ್ಕೆ ಕೃಷ್ಣದೇವರಾಯನು ಪ್ರವೇಶವಾದಾಗ ಇಡೀ ದಕ್ಷಿಣ ಭಾರತದ ರಾಜಕೀಯದಲ್ಲಿ ವಿದ್ಯುತ್ ಸಂಚಾರವಾದಂತಾಯಿತು.[೧] ಶೌರ್ಯ ಮತ್ತು ಸಾಹಸಗಳ ಪ್ರತಿ ಮೂರ್ತಿಯಂತಿದ್ದ ಕೃಷ್ಣದೇವರಾಯನು ಪಾಳೆಗಾರರ ದಮನಕ್ಕಾಗಿ ಮತ್ತು ಇಡೀ ದಕ್ಷಿಣ ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಆಕ್ರಮಣಕಾರಿ ಮತ್ತು ಸಂರಕ್ಷಣಾಕಾರಿ ಯುದ್ಧ ನೀತಿಯನ್ನು ಅಳವಡಿಸಿಕೊಂಡನು. ಸಾಮ್ರಾಜ್ಯವನ್ನು ಸುತ್ತುವರಿದಿದ್ದ ಶತ್ರುಗಳೆಲ್ಲರು ಅವನಿಗೆ ಶರಣಾಗಿ ಅವನ ಸಾರ್ವಭೌಮತ್ವವವನ್ನು ಒಪ್ಪಿಕೊಂಡರು. ಬಹುಮನಿ ಮತ್ತು ಗಜಪತಿ ಅರಸರುಗಳಿಂದ ತನ್ನ ಪಿತೃ ಸಂತತಿಯವರು ಅನುಭವಿಸಿದ್ದ ಸೋಲು ಹಾಗೂ ವೈಫಲ್ಯಗಳ ವಿರುದ್ಧ ಸೇಡು ತೀರಿಸಿಕೊಳ್ಳುವುದು ಕೃಷ್ಣದೇವಾಯನ ವಿದೇಶಿ ನೀತಿಯ ಬಹು ಮುಖ್ಯ ಉದ್ದೇಶವಾಗಿತ್ತು.[೨] ಈ ಗುರಿಯನ್ನು ಸಾಧಿಸಿಕೊಳ್ಳುವ ಸಲುವಾಗಿ ಕೃಷ್ಣದೇವರಾಯನು ದೊಡ್ಡಣ್ಣನ ನೀತಿಯನ್ನು ಅನುಸರಿಸಿದನು. ಬಹುಮನಿ ಸುಲ್ತಾನರ ಮತ್ತು ಗಜಪತಿಯ ಮೇಲೆ ಅವನು ಯುದ್ಧಗಳನ್ನು ಮಾಡಿದನು. ಯುದ್ಧದಲ್ಲಿ ಅವರುಗಳೆನ್ನೆಲ್ಲಾ ಸದೆಬಡಿದನು. ದಕ್ಷಿಣದ ಸುಲ್ತಾನರ ಆಂತರಿಕ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದ ಹಾಗೂ ಅವರುಗಳ ಆಂತರಿಕ ರಾಜಕೀಯ ವಿವಾದಗಳನ್ನು ಪರಿಹರಿಸಿದ ಮೊದಲ ಚಕ್ರವರ್ತಿಯೆಂಬ ಕೀರ್ತಿಗೆ ಅವನು ಪಾತ್ರನಾಗಿದ್ದ. ಉದಾಹರಣೆಗೆ ಬಿಜಾಪುರವನ್ನು ಕ್ರಿ.ಶ. ೧೫೨೦ರಲ್ಲಿ ಸ್ವಾಧೀನ ಪಡಿಸಿಕೊಂಡ ಮೇಲೆ ಕೃಷ್ಣದೇವರಾಯನು ಗುಲಬರ್ಗಾದ ಮೇಲೆ ದಂಡೆತ್ತಿ ಹೋಗಿ ಆ ಕೋಟೆಯನ್ನು ತನ್ನ

ವಶಪಡಿಸಿಕೊಂಡನು. ಆನಂತರ ಬೀದರ್ ಮೇಲೆ ದಂಡೆತ್ತಿ ಹೋಗಿ ಅಲ್ಲಿನ ಅರಸ ಖಾಸಿಂ ಬರೀದನನ್ನು ಸೋಲಿಸಿದನು. ಕೃಷ್ಣದೇವರಾಯನು ಅಧಿಕಾರವನ್ನು ಬಳಸಿ ಸೆರೆಮನೆಯಲ್ಲಿದ್ದ ಬಹುಮನಿಗಳ ಯುವರಾಜನನ್ನು ಬಿಡುಗಡೆಗೊಳಿಸಿ ಅವನಿಗೆ ವಿಜಯನಗರದ ರಕ್ಷಣೆಯಲ್ಲಿ ಪಟ್ಟಾಭಿಷೇಕ ಮಾಡಿದನು. ಈ ಸಾಹಸಕ್ಕಾಗಿ ಆತನಿಗೆ 'ಯವನರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದುಬಂದಿತು.[೩] ಕೃಷ್ಣದೇವರಾಯನ ಈ ಕಾರ್ಯವು ಬಹುಮನಿಗಳ ರಾಜಕೀಯ ಮತ್ತು ಧಾರ್ಮಿಕ ಹಿತಾಸಕ್ತಿಗಳಿಗೆ ಪೂರಕವಾಗಿರಲಿಲ್ಲ. ಇದು ಅವರ ಮನಸ್ಸನ್ನು ಘಾಸಿಗೊಳಿಸಿತು. ಇದರಿಂದಾಗಿ ವಿಜಯನಗರದ ಮತ್ತು ಬಹುಮನಿಗಳ ನಡುವೆ ಶೀತಲಸಮರ ಉಂಟಾಯಿತು.

ವಿಜಯನಗರ ಮತ್ತು ಬಹುಮನಿ ಸಾಮ್ರಾಜ್ಯಗಳ ಇತಿಹಾಸದಲ್ಲಿ ಪ್ರಥಮ ಬಾರಿಗೆ ಸುಲ್ತಾನರ ನಾಡಿನಲ್ಲಿ ಹಿಂದೂ ಧ್ವಜಾರೋಹಣ ನಡೆಯಿತು. ಒಟ್ಟಾರೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರವು ಪ್ರಬಲ ಶಕ್ತಿಯಾಯಿತು ಮತ್ತು ಅದರ ಸೈನ್ಯವು ಎಲ್ಲೆಲ್ಲಿಯೂ ವಿಜಯವನ್ನು ಸಂಪಾದಿಸಿತು. ವಿಜಯನಗರವು ದಕ್ಷಿಣ ಭಾರತದ ರಾಜಕಾರಣದ ಕೇಂದ್ರ ಬಿಂದುವಾಯಿತು. ಇಡೀ ದಕ್ಷಿಣ ಭಾರತವು ಅವನ ಸ್ವಾಧೀನದಲ್ಲಿತ್ತು ಮತ್ತು ಸ್ವತಂತ್ರ ರಾಜ್ಯರುಗಳೆಂದು ಹೇಳಿಕೊಳ್ಳುತ್ತಿದ್ದವರು ಅವನ ಸಾಮಂತರಾಗಿದ್ದರು. ನೂನಿಜ್ ಪ್ರಕಾರ ಬಂಕಾಪುರ, ಭಟ್ಕಳ್ ಮತ್ತು ಬರ್ಕೂರ್‌ಗಳ ರಾಜರೆಲ್ಲರೂ ಅವನಿಗೆ ಸಾಮಂತರಾಗಿದ್ದರು.[೪] ಮುಂದುವರೆದು ರಾಯನು ಫೆಬ್ರವರಿ ೨೫, ೧೫೧೦ರಂದು ಉಮ್ಮತ್ತೂರು ಅರಸ ಗಂಗರಾಜನನ್ನು ಸೋಲಿಸಿದ ಎಂದು ಅವನು ಹೇಳಿದ್ದಾನೆ. ರಾಯನು ಶಿವನಸಮುದ್ರವನ್ನು ಆಕ್ರಮಿಸಿಕೊಂಡು ಶ್ರೀರಂಗಪಟ್ಟಣದ ಕೋಟೆಯನ್ನು ವಶಪಡಿಸಿಕೊಂಡನು ಎಂದು ನೂನಿಜ್ ಹೇಳುತ್ತಾನೆ.[೫] ಕೃಷ್ಣದೇವರಾಯನ ಸಾರ್ವಭೌಮತ್ವವನ್ನು ಒಪ್ಪಿಕೊಂಡ ಗೋವಾದ ಗೌರ್ವನರ್ ಜನರಲ್ ಆಲ್ಬುಕರ್ಕ್ ವಿಜಯನಗರಕ್ಕೆ ಒಬ್ಬ ಮತ್ತು ಬಂಕಾಪುರಕ್ಕೆ ಒಬ್ಬ ರಾಜ ಪ್ರತಿನಿಧಿಯನ್ನು ಕಳುಹಿಸಿಕೊಟ್ಟನು. ಬಂಕಾಪುರವನ್ನು ಕ್ರಿ.ಶ. ೧೫೧೨ರಲ್ಲಿ ವೆಂಗಾಪುರ ಎಂಬುವವನು ಆಳುತ್ತಿದ್ದನು. ಕೃಷ್ಣದೇವರಾಯನು ಗೋವಾಕ್ಕೆ ತನ್ನ ರಾಯಬಾರಿಯನ್ನು ಕಳುಹಿಸಿದನು.[೬] ಹೀಗೆ ರಾಯನು ಸಾಮ್ರಾಜ್ಯದ ವೈಭವವನ್ನು ಪುನರ್ ಸ್ಥಾಪಿಸಿದನು. ಇದರಿಂದ ಅಸೂಯೆಗೊಂಡ ಹಿಂದೂ ಅರಸರು ಮತ್ತು ಪಾಳೆಯಗಾರರು ವಿಜಯನಗರ ಸಾರ್ವಭೌಮತ್ವದ ವಿರುದ್ಧ ಬಂಡೇಳಲು ಅವಕಾಶಕ್ಕಾಗಿ ಕಾಯುತ್ತಿದ್ದರು. ಸೇಡು ತೀರಿಸಿಕೊಳ್ಳುವ ಮನೋಭಾವದಿಂದ ರಾಯನು ಅವರೆಲ್ಲರನ್ನು ಸೋಲಿಸಿ ಅವಮಾನಗೊಳಿಸಿದನು. ಅವರಿಗೆ ಬೆದರಿಕೆ ಒಡ್ಡಿದನು. ಅವರ ರಾಜ್ಯಗಳನ್ನು ವಶಪಡಿಸಿಕೊಂಡನು. ಅವಮಾನಕರ ಷರತ್ತುಗಳಿಂದ ಕೂಡಿದ ಶಾಂತಿ ಒಪ್ಪಂದಕ್ಕೆ ಅವರೆಲ್ಲರೂ ಸಹಿ ಹಾಕುವಂತೆ ಮಾಡಿದನು. ಕೆಲವು ವರ್ಷಗಳ ನಂತರ ರಾಯನ ಇಂತಹ ನೀತಿಯು ಸಾಮ್ರಾಜ್ಯಕ್ಕೆ ಮುಳುವಾಗಿ ಪರಿಣಮಿಸಿತು. ಅವನ ಇಂತಹ ನೀತಿಯು ಹೇಗೆ ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು ಎಂಬುದನ್ನು ಅವನು

ಬಹುಮನಿಗಳು ಮತ್ತು ಗಜಪತಿ ಮೇಲೆ ನಡೆಸಿದ ಯುದ್ಧಗಳ ವಿಶ್ಲೇಷಣೆಯಿಂದ ಇಲ್ಲಿ ಅರ್ಥಮಾಡಿಕೊಳ್ಳಬಹುದಾಗಿದೆ.

ವಿಘಟಿತ ಬಹುಮನಿಗಳ ಸಂಘಟಿತ ಪಡೆಗಳು ಬೀದರಿನ ಸುಲ್ತಾನ ಎರಡನೆಯ ಮಹಮದ್‌ನ ನೇತೃತ್ವದಲ್ಲಿ ಕ್ರಿ.ಶ. ೧೫೦೯ರಲ್ಲಿ ನಡೆಸಿದ ಜಿಹಾದ್ ಆಕ್ರಮಣವನ್ನು ಕೃಷ್ಣದೇವರಾಯನು ವಿಫಲಗೊಳಿಸಿದನು.[೭] ಗೊಲ್ಕೊಂಡಾದ ಅರಸ ಕುತುಬ್‌ಶಹಾನ ಮೇಲೆ ಯುದ್ಧ ಸಾರಿದನು. ಯುದ್ಧದಲ್ಲಿ ವೈರಿಯ ಸೈನಾಧಿಕಾರಿಯನ್ನು ಸೆರೆಹಿಡಿದನು. ಒಂದು ಲಕ್ಷ ಕಾಲಾಳು ಹಾಗೂ ೮೦೦ ಅಶ್ವ ಸೈನ್ಯದ ನೆರವಿನಿಂದ ಕ್ರಿ.ಶ. ೧೫೧೨-೧೫೧೩ರಲ್ಲಿ ಕೊಂಡವೀಡನ್ನು ತನ್ನ ವಶಕ್ಕೆ ತೆಗೆದುಕೊಂಡನು.[೮] ಈ ಯುದ್ಧದಲ್ಲಿ ಮಹಮದನು ತೀವ್ರ ಗಾಯಗೊಂಡನು. ಯುಸಿಫ್ ಆದಿಲ್ ಶಹಾನ ಮೇಲೆ ಯುದ್ಧ ಹೂಡುವ ಸಲುವಾಗಿ ಕುದುರೆಗಳನ್ನು ಖರೀದಿಸಲು ಗೋವಾದ ಅರಸನಾಗಿದ್ದ ಅಲ್ಬುಕರ್ಕ್‌ನಿಗೆ ೨೦೦೦೦ ಪೌಂಡ್ ಗಳನ್ನು ನೀಡಲು ಅವನು ಸಿದ್ಧನಾಗಿದ್ದ. ಕೊನೆಗೆ ಅದಕ್ಕಾಗಿ ವಾರ್ಷಿಕ ೩೦೦೦೦ ಕ್ರುಜದೋಸ್ ಗಳನ್ನು ನೀಡಲು ಒಪ್ಪಿಕೊಂಡ.[೯] ಬಿಜಾಪುರದ ಮೇಲಿನ ಯುದ್ಧದಲ್ಲಿ ಅದರ ರಾಜನು ಅಸು ನೀಗಿದ. ಯುದ್ಧದಲ್ಲಿ ಕೃಷ್ಣದೇವರಾಯನು ವಿಜಯಶಾಲಿಯಾದರೂ ಸಹ ಎರಡು ಪಕ್ಷಗಳಿಗೂ ಯುದ್ಧದ ಪರಿಣಾಮಗಳು ಭೀಕರವಾಗಿದ್ದವು. ಬಹುಮನಿಗಳ ಸಂಘಟನೆಯ ವಿಸರ್ಜನೆ, ಸುಲ್ತಾನನಿಗೆ ಉಂಟಾದ ಗಾಯ ಮತ್ತು ಯುಸಿಫ್ ಆದಿಲ್‌ಶಹಾನ ಸಾವುಗಳು ದಕ್ಷಿಣ ಭಾರತದ ಸುಲ್ತಾನರುಗಳಿಗೆ ಸಹಿಸಲಸದಳವಾದ ಅವಮಾನ ಉಂಟು ಮಾಡಿದವು. ಹಿಂದೂ ಸೈನ್ಯದ ಕೈಯಿಂದ ಮುಸ್ಲಿಂ ಸುಲ್ತಾನನೊಬ್ಬನ ಸಾವು ಸಂಭವಿಸಿದ್ದು ಅದೇ ಮೊದಲು. ಇದು ಸುಲ್ತಾನರುಗಳಲ್ಲಿ ಆತ್ಮ ವಿಮರ್ಶೆಗೆ ಕಾರಣವಾಯಿತು. ಯುದ್ಧದಲ್ಲಿ ಉಂಟಾದ ಸೋಲನ್ನು ತಡೆಯಲು ಹಾಗೂ ಹಿಂದೂ ಅರಸರ ವಿರುದ್ಧ ಸೇಡು ತೀರಿಸಿಕೊಳ್ಳಲು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ತೊರೆಯಬೇಕೆಂಬ ಜ್ಞಾನೋದಯ ಸುಲ್ತಾನರುಗಳಲ್ಲಿ ಉಂಟಾಯಿತು. ಇದು ಮುಂದೆ ವಿಜಯನಗರ ಸಾಮ್ರಾಜ್ಯಕ್ಕೆ ದೊಡ್ಡ ಅಪಾಯವಾಗಿ ಪರಿಣಮಿಸಿತು.

ಇವೆಲ್ಲಕ್ಕಿಂತ ಹೆಚ್ಚಾಗಿ ಸುಲ್ತಾನರುಗಳ ಅಪಜಯವು ಗೋವಾವನ್ನು ಮರು ಸ್ವಾಧೀನ ಪಡಿಸಿಕೊಳ್ಳುವಂತೆ ಪೋರ್ಚುಗೀಸರಿಗೆ ಪ್ರೇರಣೆ ನೀಡಿತು. ಕೃಷ್ಣದೇವರಾಯನ ನೆರವಿನೊಂದಿಗೆ ಅವರು ಕ್ರಿ.ಶ. ೧೫೧೦ರಲ್ಲಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವುದರಲ್ಲಿ ಸಫಲರಾದರು. ಈ ವಿಜಯವು ಸುಲ್ತಾನರುಗಳಿಗೆ ದೊಡ್ಡ ಅಘಾತವನ್ನುಂಟು ಮಾಡಿತು.[೧೦] ಬೆಳಗಾಂನ ಹಿಂದೂ ಅರಸರು ಮುಸ್ಲಿಮರ ಆಳ್ವಿಕೆಯನ್ನು ಕಿತ್ತೊಗೆದು ವಿಜಯನಗರದ ಸಾಮಂತರೆಂದು ಘೋಷಿಸಿಕೊಂಡರು. ಪೋರ್ಚುಗೀಸರ ಜೊತೆ ಒಪ್ಪಂದ ಮಾಡಿಕೊಂಡು ಕೃಷ್ಣದೇವರಾಯನು ಬಿಜಾಪುರ ಸುಲ್ತಾನನ ವಶದಲ್ಲಿದ್ದ ರಾಯಚೂರು ಮತ್ತು ಮುದಗಲ್‌ಗಳನ್ನು ಕ್ರಿ.ಶ. ೧೫೧೨ರಲ್ಲಿ ತನ್ನ ವಶಪಡಿಸಿಕೊಂಡನು. ಇದರಿಂದಾಗಿ ಬಿಜಾಪುರ

ಮತ್ತು ಪೋರ್ಚುಗೀಸರ ನಡುವಿನ ವ್ಯಾಪಾರಕ್ಕೆ ತಡೆವುಂಟಾಯಿತು. ಮುಂದೆ ಕ್ರಿ.ಶ. ೧೫೨೦ರಲ್ಲಿ ಬಿಜಾಪುರದ ಸುಲ್ತಾನನು ಅವೆರಡನ್ನು ಮತ್ತೆ ಗೆದ್ದುಕೊಂಡನು. ಇದರಿಂದ ಕೋಪಗೊಂಡ ಕೃಷ್ಣದೇವರಾಯನು ಬಿಜಾಪುರ ಸುಲ್ತಾನನಾದ ಇಸ್ಮಾಯಿಲ್ ಆದಿಲ್‌ಶಹಾನ ವಿರುದ್ಧ ನಿರ್ಣಾಯಕ ಯುದ್ಧ ನಡೆಸಲು ತೀರ್ಮಾನಿಸಿದನು. ಕೃಷ್ಣದೇವರಾಯನು ೨,೩೬,೦೦೦ ಕಾಲಾಳುಗಳು ಹಾಗೂ ೫೫೦ ಆನೆಗಳಿಂದ[೧೧] ಕೂಡಿದ ತನ್ನ ಬೃಹತ್ ೧೧ ಪಡೆಗಳ ನೆರವಿನಿಂದ ರಾಯಚೂರಿನ ಮೇಲೆ ಆಕ್ರಮಣ ಮಾಡಿ ಅದನ್ನು ೯,೫,೧೫೨೦ರಲ್ಲಿ ತನ್ನ ವಶಪಡಿಸಿಕೊಂಡನು.[೧೨]

ಗೋವಾ, ಬೆಳಗಾಂ ಮತ್ತು ದೋಅಬ್ ಗಳು ಕೈತಪ್ಪಿ ಹೋಗಿದ್ದರಿಂದ ಬಿಜಾಪುರದ ಸಾಮ್ರಾಜ್ಯಕ್ಕೆ ದೊಡ್ಡ ನಷ್ಟ ಉಂಟಾಯಿತು. ಸುಲ್ತಾನನ ಘನತೆ ಮತ್ತು ಪ್ರತಿಷ್ಠೆಗೆ ಕುಂದುಂಟಾಯಿತು. ಕೃಷ್ಣದೇವರಾಯನು ಜೀವಿಸಿರುವವರೆಗೆ ತಾನು ಕಳೆದುಕೊಂಡ ಪ್ರದೇಶಗಳನ್ನು ಮರು ಸ್ವಾಧೀನ ಪಡಿಸಿಕೊಳ್ಳುವ ಕನಸನ್ನು ಸುಲ್ತಾನನು ಕಾಣಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಉಳಿದ ಸುಲ್ತಾನರು ತಮ್ಮ ಉಳಿವು ಮತ್ತು ರಕ್ಷಣೆ ಬಗ್ಗೆ ಭಯಪಡತೊಡಗಿದರು. ಅವರೆಲ್ಲರೂ ರಾಯನು ವಶಪಡಿಸಿಕೊಂಡ ಪ್ರದೇಶಗಳನ್ನು ಬಿಜಾಪುರ ಸುಲ್ತಾನನಿಗೆ ವಾಪಸ್ಸು ಮಾಡುವಂತೆ ಮನವಿ ಮಾಡಿಕೊಳ್ಳಲು ರಾಯಭಾರಿಗಳನ್ನು ವಿಜಯನಗರಕ್ಕೆ ಕಳುಹಿಸಿದರು. ಕೃಷ್ಣದೇವರಾಯನಿಂದ ರಾಯಭಾರಿಗಳಿಗೆ ಕಿಂಚಿತ್ತು ಗೌರವ ದೊರೆಯಲಿಲ್ಲ.[೧೩] ಸೈನ್ಯ ಹಾಗೂ ರಾಜತಾಂತ್ರಿಕ ಪ್ರಯತ್ನಗಳು ವಿಫಲವಾದ ಮೇಲೆ ಬಿಜಾಪುರದ ಸುಲ್ತಾನ ಆದಿಲ್ ಶಹಾ ತನ್ನ ಪ್ರದೇಶಗಳನ್ನು ಹಿಂತಿರುಗಿಸುವಂತೆ ಕೃಷ್ಣದೇವರಾಯನನ್ನು ಬೇಡಿಕೊಳ್ಳಲು ನಿರ್ಧರಿಸಿದನು. ಹೀಗೆ ಮನವಿ ಮಾಡಿಕೊಳ್ಳಲು ಅವನು ವಿಜಯನಗರಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದನು. ರಾಜನ ಸಂದರ್ಶನಕ್ಕಾಗಿ ರಾಯಭಾರಿಯು ಒಂದು ತಿಂಗಳು ಕಾಯಬೇಕಾಯಿತು. ಅಹಂಕಾರ ಮತ್ತು ಸೊಕ್ಕಿನಿಂದ ಮೆರೆಯುತ್ತಿದ್ದ ರಾಯನು ಒಂದು ತಿಂಗಳು ರಾಯಭಾರಿಯನ್ನು ಕಾಯುವಂತೆ ಮಾಡಿದನು. ಕೊನೆಯಲ್ಲಿ ಬಿಜಾಪುರದ ಸುಲ್ತಾನನು ರಾಯನ ಕಾಲಿಗೆ ಬಿದ್ದು ಶರಣಾದರೆ ಅವನ ಪ್ರದೇಶಗಳನ್ನು ಹಾಗೂ ಕೋಟೆಗಳನ್ನು ಹಿಂತಿರುಗಿಸುವುದಾಗಿ ರಾಯಭಾರಿ ಮೂಲಕ ಹೇಳಿ ಕಳುಹಿಸಿದನು. ಸೋತು ಹೋಗಿದ್ದ ಪರಮ ಶತ್ರು ಆದಿಲ್‌ಶಹಾನು ಇಂತಹ ಅವಮಾನಕರ ವಾದ ಷರತ್ತನ್ನು ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಈ ಷರತ್ತನ್ನು ಒಪ್ಪಿಕೊಳ್ಳದಿದ್ದಾಗ ರಾಯನು ಬಿಜಾಪುರದ ಮೇಲೆ ಮತ್ತೊಮ್ಮೆ ದಂಡೆತ್ತಿ ಹೋಗಿ ಅದನ್ನು ನಾಶಮಾಡಿದನು.[೧೪] ವಿಜಯದ ಉನ್ಮಾದದಲ್ಲಿ ಮೆರೆಯುತ್ತಿದ್ದ ವಿಜಯನಗರ ಸೈನ್ಯವು ಗುಲಬರ್ಗಾದ ಮೇಲೆ ದಂಡೆತ್ತಿ ಹೋಗಿ ಅದನ್ನು ನೆಲಸಮ ಮಾಡಿತು. ಇದಾದ ಮೇಲೆ ರಾಯನು ಸೆರೆ ಹಿಡಿದಿದ್ದ ಸುಲ್ತಾನರುಗಳ ಮಕ್ಕಳನ್ನೆಲ್ಲ ಬಿಡುಗಡೆಗೊಳಿಸಿದನು. ಮಹಮದ್‌ಶಹಾ ಎಂಬುವವನ್ನು ಬಿಜಾಪುರದ ಸಿಂಹಾಸನದ ಮೇಲೆ ಕೂರಿಸಿದನು. ಉಳಿದ ಇಬ್ಬರನ್ನು ವಿಜಯನಗರಕ್ಕೆ ಕೊಂಡೊಯ್ದು ಅವರನ್ನು ಮುಸ್ಲಿಮರಿಂದ ಉಂಟಾಗಬಹುದಾದ ಅಪಾಯವನ್ನು

ತಡೆಗಟ್ಟಲು ಒತ್ತೆಯಾಳುಗಳಂತೆ ಬಳಸಿಕೊಂಡನು. ಹಿಂದೂಗಳ ಬೆಂಬಲದೊಂದಿಗೆ ಬಿಜಾಪುರ ಸಾಮ್ರಾಜ್ಯವನ್ನು ಪುನಶ್ಚೇತನಗೊಳಿಸುವ ಕೃಷ್ಣದೇವರಾಯನ ಪ್ರಯತ್ನವು ಯಶಸ್ವಿಯಾಗಲಿಲ್ಲ. ಇದಕ್ಕೆ ಪ್ರತಿಯಾಗಿ ಅಧಿಕಾರಕ್ಕೆ ಬರುವ ಸಲುವಾಗಿ ಸುಲ್ತಾನರುಗಳ ಮಕ್ಕಳೊಳಗೆ ಪರಸ್ಪರ ಮಾತುಕತೆ ಪ್ರಾರಂಭವಾಯಿತು.[೧೫] ಈ ಎಲ್ಲ ಘಟನೆಗಳಿಂದ ಪಾಠ ಕಲಿತ ಆದಿಲ್‌ಶಹಾನು ನೆರೆಹೊರೆಯ ಎಲ್ಲ ಮುಸ್ಲಿಮ್ ಅರಸರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದರ ಮೂಲಕ ತನ್ನ ಬಲವನ್ನು ಸಂವರ್ಧಿಸಿಕೊಳ್ಳತೊಡಗಿದನು. ಈ ಪ್ರಯತ್ನವು ಎಲ್ಲ ಸುಲ್ತಾನರನ್ನು ಒಟ್ಟಿಗೆ ತರುವಲ್ಲಿ ಯಶಸ್ವಿಯಾಯಿತು. ರಾಯಚೂರು ಯುದ್ಧದ ನಂತರ ಉಂಟಾದ ಚಾರಿತ್ರಿಕ ಬೆಳವಣಿಗೆಗಳಿಂದಾಗಿ ಬಿಜಾಪುರದ ಸುಲ್ತಾನನು ತನ್ನ ತಂಗಿಯನ್ನು ಅಹಮದ್ ನಗರದ ಬುರ್‌ಹಾನ್ ನಿಜಾಮ್‌ಶಹಾಗೆ ಕೊಟ್ಟು ೧೫೨೩ರಲ್ಲಿ ವಿವಾಹ ಮಾಡುವಂತೆ ಪ್ರೇರಣೆ ಉಂಟಾಯಿತು ಎಂದು ಫರಿಸ್ತ ಬರೆಯುತ್ತಾನೆ. ತನ್ನ ಮತ್ತೊಬ್ಬ ಸಹೋದರಿಯನ್ನು ಬೇರಾರ್‌ನ ಅಲಾವುದ್ದೀನ್ ಉಮ್ಮಾದ್‌ಗೆ ಕೊಟ್ಟು ವಿವಾಹ ಮಾಡಿದನು.[೧೬]

ಕೃಷ್ಣದೇವರಾಯನ ವಿದೇಶಿ ನೀತಿಯ ವಿಶ್ಲೇಷಣೆಯಿಂದ ಕೆಳಕಂಡ ತಥ್ಯಗಳನ್ನು ರೂಪಿಸಬಹುದಾಗಿದೆ.

೧. ಬೃಹತ್ ಸಾಮ್ರಾಜ್ಯ ಕಟ್ಟಬೇಕೆಂಬ ಕೃಷ್ಣದೇವರಾಯನ ಉತ್ಸಾಹದಿಂದಾಗಿ ಹಾಗೂ ಸಾಮ್ರಾಜ್ಯದ ಸಾಂಪ್ರದಾಯಿಕ ಶತ್ರುಗಳ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂಬ ಆಕಾಂಕ್ಷೆಯಿಂದಾಗಿ ಮೊದಲಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿಜಯನಗರಕ್ಕೆ ಶತ್ರುಗಳು ಹುಟ್ಟಿಕೊಂಡರು ಶತ್ರುಗಳ ಸಂಖ್ಯೆಯನ್ನು ಹೆಚ್ಚಿಸುತ್ತ ಮತ್ತು ಸಾಮ್ರಾಜ್ಯದ ಖಜಾನೆಯ ಮೇಲೆ ವಿಪರೀತ ಭಾರ ಹೇರುತ್ತಾ ವಿಜಯನಗರವು ಬೆಳೆಯುತ್ತ ಹೋಯಿತು.

೨. ಕೃಷ್ಣದೇವರಾಯನು ಸತತವಾಗಿ ನಡೆಸಿದ ಯುದ್ಧಗಳಿಂದಾಗಿ ಸಾಮ್ರಾಜ್ಯದ ಶತ್ರುಗಳು, ಮುಖ್ಯವಾಗಿ ದಕ್ಷಿಣ ಭಾರತದ ಮುಸ್ಲಿಮ್ ದೊರೆಗಳು ತಮ್ಮ ತಮ್ಮಲ್ಲಿನ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆಯುವಂತಾಯಿತು. ತಮ್ಮ ರಾಜಕೀಯ ಅಸ್ತಿತ್ವ ಹಾಗೂ ಸ್ವಾಭಿಮಾನವನ್ನು ರಕ್ಷಿಸಿಕೊಳ್ಳುವ ಸಲುವಾಗಿ ವಿಜಯನಗರದ ವಿರುದ್ಧ ಸಂಘಟಿತ ಶಕ್ತಿಯಾಗಿ ಶತ್ರುಗಳು ರೂಪುಗೊಳ್ಳುವಂತಾಯಿತು.

೩. ಕೃಷ್ಣದೇವರಾಯನು ನಡೆಸಿದ ಯುದ್ಧಗಳಿಂದಾಗಿ ದಕ್ಷಿಣದ ಸುಲ್ತಾನರುಗಳ ನಡುವೆ ವೈವಾಹಿಕ ಸಂಬಂಧಗಳು ಬೆಳೆಯುವಂತಾಯಿತು. ವಿಜಯನಗರದ ವಿರುದ್ಧ ಸೇಡು ತೀರಿಸಿಕೊಳ್ಳಲು ಸಂಘಟಿತ ಶಕ್ತಿಯನ್ನು ರೂಪಿಸಲು ಇದು ನೆರವಾಯಿತು.

೪. ಬಹಮನಿಗಳು ಹಾಗೂ ಬಿಜಾಪುರದ ಸುಲ್ತಾನರುಗಳ ಮೇಲೆ ರಾಯನು ನಡೆಸಿದ ಯುದ್ಧಗಳಿಂದಾಗಿ ದಕ್ಷಿಣ ಭಾರತ ಮುಸ್ಲಿಮ್ ಅರಸರಿಗೆ ಜ್ಞಾನೋದಯವಾಯಿತು. ಇಸ್ಲಾಮ್ ರಾಷ್ಟ್ರೀಯತೆಯು ಚಿಗುರೊಡೆಯಲು ಇದು ಕಾರಣವಾಯಿತು. ಮುಂದೆ ಕ್ರಿ.ಶ. ೧೫೬೫ರಲ್ಲಿ ನಡೆದ ನಿರ್ಣಾಯಕ ಭೀಕರ ತಾಳಿಕೋಟೆ ಯುದ್ಧದಲ್ಲಿ ಇದು ಸುಲ್ತಾನರಿಗೆ ಜಯವನ್ನು ತಂದು ಕೊಟ್ಟಿತು.

೫. ರಾಯನು ಹಿಂದೂ ಅರಸರ, ಮುಸ್ಲಿಮ್ ಚಕ್ರವರ್ತಿಗಳ ಹಾಗೂ ಪಾಳೆಯಗಾರರ ಮೇಲೆ ನಡೆಸಿದ ಯುದ್ಧಗಳಿಂದಾಗಿ ಸಾಮ್ರಾಜ್ಯದ ಆರ್ಥಿಕ ಸಂಪನ್ಮೂಲವು ಜನರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಕಾರ್ಯಗಳಿಗೆ ವಿನಿಯೋಗವಾದೆ, ಮಿಲಿಟರಿ ಮೇಲೆ ವಿನಿಯೋಗವಾಗುವಂತಾಯಿತು. ಯುದ್ಧೋಪಕರಣ ಹಾಗೂ ಶಸ್ತ್ರಾಸ್ತ್ರಗಳನ್ನು ಪೋರ್ಚುಗೀಸರಿಂದ ಖರೀದಿಸಲು ರಾಯನಿಗೆ ಅಪಾರ ಸಂಪನ್ಮೂಲದ ಅಗತ್ಯ ಉಂಟಾಯಿತು. ಈ ಕಾರಣಕ್ಕಾಗಿ ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅವನು ಅನೇಕ ಹೊಸ ತೆರಿಗೆಗಳನ್ನು ವಿಧಿಸಿದನು. ಇನ್ನೊಂದು ರೀತಿ ಹೇಳುವುದಾದರೆ ರಾಯನ ಯುದ್ಧ ನೀತಿಯಿಂದಾಗಿ ಸಾಮ್ರಾಜ್ಯದ ಸಂಪತ್ತೆಲ್ಲವೂ ವಿಜಯನಗರದಿಂದ ಪೋರ್ಚುಗೀಸರಿಗೆ ಹರಿದುಹೋಯಿತು. ಇದರಿಂದಾಗಿ ಅವರ ವ್ಯಾಪಾರ ಗಟ್ಟಿಯಾಗಿ ನೆಲೆಯೂರಿತು. ಪೋರ್ಚುಗೀಸರು ಅಪಾರ ಲಾಭಗಳಿಸುವಂತಾಯಿತು.

೬. ಕೃಷ್ಣದೇವರಾಯನು ಅನುಸರಿಸಿದ ಆಕ್ರಮಣಕಾರಿ ಹಾಗೂ ಸ್ವಪ್ರತಿಷ್ಠೆಯ ಯುದ್ಧಗಳಿಗೆ ರಕ್ತ ಸಂಬಂಧ ಅಥವಾ ಧಾರ್ಮಿಕ ಸಂಬಂಧಗಳೆಂಬ ಇತಿಮಿತಿಗಳಿರಲಿಲ್ಲ. ಹಿಂದೂಗಳು ಹಾಗೂ ಮುಸ್ಲಿಮರು ಇಬ್ಬರ ವಿರುದ್ಧವಾಗಿಯೂ ಅವನು ರಕ್ತಪಾತ ನಡೆಸಿದನು. ಒರಿಸ್ಸಾದ ಪ್ರತಾಪ ರುದ್ರ ಗಜಪತಿಯನ್ನು ಯುದ್ಧದಲ್ಲಿ ಸೋಲಿಸಿದ ರಾಯನು ಅವನ ಸಾಮ್ರಾಜ್ಯದ ಭಾಗಗಳಾಗಿದ್ದ ಉದಯಗಿರಿ (೧೫೧೩) ಕೊಂಡುವೀಡು (೧೫೧೫) ಮತ್ತು ಕೊಂಡಪಳ್ಳಿ (೧೫೧೬) ಗಳನ್ನು ತನ್ನ ವಶಪಡಿಸಿಕೊಂಡನು. ಇದು ಸಾಲದೆನ್ನುವಂತೆ ಪ್ರತಾಪರುದ್ರ ಗಜಪತಿಯ ಮಗನಾದ ವೀರಭದ್ರ ಗಜಪತಿಯನ್ನು ಸೆರೆಹಿಡಿದ. ವೀರಭದ್ರ ಗಜಪತಿಯು ತನಗಾದ ಅವಮಾನವನ್ನು ಸಹಿಸದೆ ವಿಜಯನಗರದಲ್ಲಿ ಪ್ರಾಣತ್ಯಾಗ ಮಾಡಲು ಸಿದ್ಧನಿದ್ದ.[೧೭] ಅವಮಾನ ಹಾಗೂ ಆಘಾತಗಳಿಂದ ತತ್ತರಿಸಿದ ಗಜಪತಿ ರಾಜನು ಕೃಷ್ಣದೇವರಾಯನ ಜೊತೆ ರಾಜಿ ಮಾಡಿಕೊಂಡು ತನ್ನ ಮಗಳಾಗ ಜಗನ್ಮೋಹಿನಿಯನ್ನು ರಾಯನಿಗೆ ಕೊಟ್ಟು ವಿವಾಹ ಮಾಡಿದನು.[೧೮] ಈ ಹಿನ್ನೆಲೆಯಲ್ಲಿ ನೋಡಿದಾಗ

ಒರಿಸ್ಸಾದ ಹಿಂದೂ ಅರಸರುಗಳು ವಿಜಯನಗರ ಹಾಗೂ ಮುಸ್ಲಿಮರ ನಡುವೆ ಯುದ್ಧ ನಡೆದಾಗ ಮುಸ್ಲಿಮರ ಪರವಹಿಸದಿದ್ದರೂ ಸಹ ಯುದ್ಧದಲ್ಲಿ ವಿಜಯನಗರದ ಪಡೆಗಳ ಜೊತೆ ಸೇರದೆ ತಟಸ್ಥರಾಗಿ ಉಳಿದದ್ದು ಅಚ್ಚರಿಯ ಸಂಗತಿಯಾಗಿ ಕಾಣುವುದಿಲ್ಲ.

೭. ಬೃಹತ್ ಸಾಮ್ರಾಜ್ಯ, ಅದರ ವೈಭವ, ಅದರ ಔನ್ನತ್ಯ - ಇವುಗಳೆಲ್ಲವೂ ಶತ್ರುಗಳ ನಾಶದ ಫಲಶೃತಿಗಳಾಗಿದ್ದವು. ತನ್ನ ಸಾಹಸ ಹಾಗೂ ಸಾಮರ್ಥ್ಯಗಳಿಂದಾಗಿ ರಾಯನು ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸಿದನು ಹಾಗೂ ಸಾಮ್ರಾಜ್ಯದ ಮಹಾ ವೈಭವವನ್ನು ಪುನರ್ ಸ್ಥಾಪಿಸಿದನು.[೧] ಇಂತಹ ಸಾಮ್ರಾಜ್ಯಗಳು ಎಲ್ಲಿಯವರೆಗೆ ಪ್ರಬಲ ಹಾಗೂ ಪರಾಕ್ರಮಿ ರಾಜನ ರಕ್ಷಣೆಯಲ್ಲಿರುತ್ತವೋ ಅಲ್ಲಿಯವರೆಗೆ ಮಾತ್ರ ಅವು ಸುರಕ್ಷಿತವಾಗಿರಬಲ್ಲವು. ಅಸಮರ್ಥ ಚಕ್ರವರ್ತಿಗಳಿಗೆ ಅಂತಹ ಬೃಹತ್ ಸಾಮ್ರಾಜ್ಯವನ್ನು ರಕ್ಷಿಸುವುದು ಕಷ್ಟ ಸಾಧ್ಯ. ಕೃಷ್ಣದೇವರಾಯನ ಸಾವಿನ ನಂತರ ಉಂಟಾದ ಅಪಾಯ ಇದೇ ಆಗಿದೆ. ಆಳುವ ಮತ್ತು ರಕ್ಷಿಸುವ ಸಾಮರ್ಥ್ಯ ಅವನ ಉತ್ತರಾಧಿಕಾರಿಗಳಿಗೆ ಇರಲಿಲ್ಲ. ರಾಯನ ಯುದ್ಧ ನೀತಿಯು ಶತ್ರುಗಳನ್ನು ದುರ್ಬಲ ಗೊಳಿಸುವುದಕ್ಕೆ ಪ್ರತಿಯಾಗಿ ಸಬಲಗೊಳಿಸಿತು. ಏಕೆಂದರೆ ಶತ್ರುಗಳು ಒಗಟ್ಟಿನಿಂದ ಲಾಭವಿದೆ ಎಂಬ ಪಾಠವನ್ನು ಕಲಿತರು. ಶತ್ರುಗಳೆಲ್ಲ ಒಂದಾಗಿ ಮೇಲೆರಗಿದಾಗ ಸಾಮ್ರಾಜ್ಯವು ಅವರನ್ನು ಎದುರಿಸುವಲ್ಲಿ ವಿಫಲವಾಯಿತು. ಈ ಹಿನ್ನೆಲೆಯಲ್ಲಿ ಲಭ್ಯವಿರುವ ಆಕರಗಳನ್ನು ನಿರಪೇಕ್ಷ ಭಾವನೆಯಿಂದ ಪರಾಮರ್ಶಿಸಿ ವಿಜಯನಗರದ ಅವನತಿಗೆ ಸಂಬಂಧಿಸಿದಂತೆ ಕೃಷ್ಣದೇವರಾಯನ ರಾಜಕಾರಣವನ್ನು ಪುನಃರಚಿಸಬೇಕಾಗಿದೆ ಎಂಬುದು ಇಲ್ಲಿನ ಪ್ರಬಂಧದ ಮುಖ್ಯ ಆಶಯವಾಗಿದೆ. ಈ ಅಧ್ಯಯನದಲ್ಲಿ ನಾನು ರೂಪಿಸಿರುವ ಪ್ರಮೇಯವು ಹೆಚ್ಚಿನ ಸಂಶೋಧನೆಗೆ ದಾರಿ ಮಾಡಿಕೊಡುತ್ತದೆ ಎಂದು ಆಶಿಸಿದ್ದೇನೆ.

ಆಕರಸೂಚಿ

೧. ಸೂರ್ಯನಾಥ್ ಯು.ಕಾಮತ್. ಎ. ಕಾನ್‌ಸೈಸ್ ಹಿಸ್ಟರಿ ಆಫ್ ಕರ್ನಾಟಕ. ಪು. ೧೫೬

೨. ಶೇರ್‌ವಾನಿ ಎಚ್.ಕೆ. ಮತ್ತು ಜೋಷಿ, ವಿ.ಎಮ್. ಹಿಸ್ಟರಿ ಆಫ್ ಮಿಡಿವಲ್ ದಖ್ಖನ್, ಸಂ, ೧, ಪು. ೪೧೬

೩. ಭಾರತೀಯ ವಿದ್ಯಾಭವನ್, ದಿ ದಖನ್ ಸುಲ್ತನೇಟ್ - VI, ಪುಟಗಳು ೩೧೦ - ೧೬, ಇದರ ಜೊತೆಗೆ ಹೆಚ್ಚಿನ ವಿವರಳಿಗೆ ನೋಡಿ: ಶಶಿಧರ್ ಎಂ. ದಿ ಲೈಫ್ ಅಂಡ್ ವರ್ಕ್ಸ್ ಆಫ್, ಬಿ.ಎ. ಸಾಲತ್ತೊರೆ. (ಎಂ.ಫಿಲ್. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೧೯೯೮)

೪. ಸೀವೆಲ್, ರಾಬರ್ಟ್, ಎ ಫರ್‌ಗಾಟನ್ ಎಂಪೈರ್, ಪುಟ ೧೨೨

೫. ಸೀವೆಲ್, ರಾಬರ್ಟ್, ಎ ಫರ್‌ಗಾಟನ್ ಎಂಪೈರ್, ಪುಟ ೧೩೦

೬. ಸೀವೆಲ್, ರಾಬರ್ಟ್, ಎ ಫರ್‌ಗಾಟನ್ ಎಂಪೈರ್, ಪುಟ ೧೨೨

೭. ನೀಲಕಂಠಶಾಸ್ತ್ರೀ ಕೆ.ಎ, ಎ ಹಿಸ್ಟರಿ ಆಫ್ ಸೌತ್ ಇಂಡಿಯಾ, ಪುಟ ೨೭೮

೮. ಸೀವೆಲ್ ರಾಬರ್ಟ್ ಪೂರ್ವೋಕ್ತ, ಪುಟ ೧೩೨ - ೩೩

೯. ಸೀವೆಲ್ ರಾಬರ್ಟ್ ಪೂರ್ವೋಕ್ತ, ಪುಟ ೧೨೭

೧೦. ರಾಮಶರ್ಮ ಎಂ.ಎಚ್. ಮತ್ತು ಗೋಪಾಲ್ ಎಂ.ಹೆಚ್. ಎ ಹಿಸ್ಟರಿ ಆಫ್ ವಿಜಯನಗರ ಎಂಪಾಯರ್, ಪುಟ ೧೧೭

೧೧. ಸೀವೆಲ್ ರಾಬರ್ಟ್ ಪೂರ್ವೋಕ್ತ, ಪುಟ ೧೩೭, ಇದರ ಜೊತೆಗೆ ರಾಯಚೂರು ಯುದ್ಧದ ದಿನಾಂಕದ ವಿವಾದದ ಬಗ್ಗೆ ನೋಡಿ, ಪುಟ ೧೪೦

೧೨. ವೆಂಕಟರಾಮಪ್ಪ ಎಂ.ಎನ್. ಔಟ್‌ಲೈನ್ ಆಫ್ ಸೌತ್ ಇಂಡಿಯಾ ಹಿಸ್ಟರಿ, ಪುಟ ೧೭೦

೧೩. ವರ್ಮ ಡಿ.ಸಿ. ಹಿಸ್ಟರಿ ಆಫ್ ಬಿಜಾಪುರ, ಪುಟ ೧೧೯

೧೪. ಹನುಮಂತಪ್ಪ, ಡಿಕ್ಲೈನ್ ಅಂಡ್ ಫಾಲ್ ಆಫ್ ವಿಜಯನಗರ, ಎಂ.ಫಿಲ್. ಪ್ರಬಂಧ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೮, ಪುಟ ೫೩

೧೫. ಅದೇ, ಪುಟ ೫೨ - ೫೩

೧೬. ಸೀವೆಲ್ ರಾಬರ್ಟ್ ಪೂರ್ವೋಕ್ತ, ಪುಟ ೧೫೫ ಮತ್ತು ೧೫೯

೧೭. ಹನುಮಂತಪ್ಪ, ಪೂರ್ವೋಕ್ತ, ಪುಟ ೫೪

೧೮. ಮಹಾಲಿಂಗಮ್ ಟಿ.ವಿ. ಆಡ್‌ಮಿನಿಸ್ಟ್ರೇಟಿವ್ ಅಂಡ್ ಸೋಷಿಯಲ್ ಲೈಫ್ ಇನ್ ವಿಜಯನಗರ, ಪುಟ ೧೩೧

೧೯. ಸಾಲತ್ತೊರೆ ಬಿ.ಎ. ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪಾಯರ್, ಸಂ, II, ಪುಟ ೮೯

❑❑

೩

ವಿಜಯನಗರ ಕಾಲದ ಕೊಡಗು

* ಎಂ.ಜಿ.ನಾಗರಾಜ್

ಚಂಗಾಳ್ವರು ವಿಜಯನಗರ ಕಾಲದಲ್ಲಿ ಕೊಡಗಿನ ಭಾಗಗಳನ್ನಾಳುತ್ತಿದ್ದ ಮಾಂಡಲಿಕ ದೊರೆಗಳು, ಗಂಗ, ಚೋಲ, ಹೊಯ್ಸಳರಿಗೂ ಮಾಂಡಲಿಕ ದೊರೆಗಳಾಗಿ ಕೊಡಗಿನ ಭಾಗಗಳನ್ನು ಆಳಿಕೊಂಡು ಬಂದವರು. ಅಂದಿನ ಕೊಡಗು ತೆರಕಣಾಂಬಿ, ಬಯಲ್ನಾಡು (ವೈನಾಡು), ಹೆಗ್ಗಡ ದೇವನಕೋಟೆ ತಾ. ಭಾಗಗಳಿಂದ ಹಿಡಿದು ಶ್ರೀಮಂಗಲ ಅರಕಲಗೂಡು, ಬೆಟ್ಟದತುಂಗ, ಬೆಟ್ಟದಪುರ, ಪಿರಿಯಾಪಟ್ಟಣ (ಸಿಂಗಪಟ್ಟಣ), ಹುಣಸೂರು ಪ್ರದೇಶಗಳನ್ನೂ ಒಳಗೊಂಡಿತ್ತು. 'ಕೊಡಗೂರ್ವಿಷಯೆ' ಎಂದಿದ್ದ ಈ ವಿಶಾಲಕೊಡಗಿನಲ್ಲಿ ಚಂಗನಾಡು ಎಂದು ವಿಜಯನಗರಕಾಲಕ್ಕೆ ಆಗುವಲ್ಲಿ ಕೊಡಗಿನ ವಿಸ್ತಾರ ಸಂಕುಚಿತಗೊಂಡಿತ್ತು. ನಾಗರಹೊಳೆ (ಹೆಗ್ಗಡದೇವನಕೋಟೆ ತಾ.) ಪಶ್ಚಿಮೋತ್ತರ ಗಡಿ)ಯಿಂದ ಅರಕಲಗೂಡಿನವರೆಗೆ ಚಂಗನಾಡು ಇತ್ತೆನ್ನಬಹುದು. ವಿಜಯನಗರ ಕಾಲದ ಮುನ್ನ ಕೊಡಗಿನಲ್ಲೆ, ಚದುರಿಹೋಗಿದ್ದ ಚಂಗಾಳ್ವರು, ಬಹುಶಃ ವಿಜಯನಗರದರಸರ ಅಮರನಾಯಕರಂಥ ಮಾಂಡಲಿಕರಾಗಿ ಕ್ರಿ.ಶ. ೧೩೮೦ರ ವೇಳೆಗೆ ಮಧ್ಯಂತರ ಚಂಗಾಳ್ವ ವಂಶ ರೂಪುಗೊಂಡಿತು. ಈ ಅವಧಿಗೆ ಮುಂಚೆ ಅಂದರೆ ಕ್ರಿ.ಶ. ೧೩೩೬ - ೧೩೮೦ರ ವೇಳೆಯಲ್ಲಿ ಕೊಡಗು ನೇರವಾಗಿ ವಿಜಯನಗರದ ಆಡಳಿತಕ್ಕೆ ಸೇರಿದ್ದ ವಿಷಯ ಶಾಸನಗಳಿಂದ ವಿದಿತವಾಗುತ್ತದೆ. ಹೀಗಾಗಿ ವಿಜಯನಗರದ ಬುಕ್ಕ, ದಂಡನಾಯಕರು, ಮಧ್ಯಂತರ ಚಂಗಾಳ್ವರು - ಇವರ ಆಳ್ವಿಕೆಯ ಕೊಡಗು ನಮ್ಮ ಪರಿಶೀಲನೆಗೆ ಒಳಗಾಗುತ್ತದೆ.

ಕ್ರಿ.ಶ. ೧೩೪೪ರ ದೊಡ್ಡಬೆಲಹಾಳು ಶಾಸನದ ರೀತ್ಯಾ[೧] ಶ್ರೀಮನು ಮಹಾಪ್ರಧಾನ ನಾಗಿಯ ದಂಣಾಯಕರ ಕುಮಾರ ಕೇತೆಯ ಡಂಣ್ನಾಯಕನು ರಾಘವದೇವ ಎಂಬುವನಿಗೆ ಹಿರಣ್ಯೋದಯ ಧಾರಾಪೂರ್ವಕವಾಗಿ ಚಂಗನಾಡ ಮೂಡಬಾಗಿಲು ಬೆಲಹಾಳು ಗ್ರಾಮವನ್ನು ಕೊಡುಗೆಯಾಗಿ ಕೊಟ್ಟ ವಿಷಯವಿದೆ; ಈ ಮುನ್ನ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಅರಸರ ಕಾಲದಲ್ಲಿಯೂ ಅಧೀನರಾಗಿದ್ದ,[೨] ಹೊಯ್ಸಳರ ಪ್ರಧಾನಿಗಳಾಗಿದ್ದ ನವದಂಣಾಯಕರು ಕೊಡಗು ಪ್ರದೇಶದ ಭಾಗವನ್ನಾಳಿದ್ದರೆಂದು ತೋರುತ್ತದೆ. ಇವರು 'ಸ್ವಸ್ತಿ (ಸ್ರೀ) ಪುರಾಧೀಶ್ವರರು' ಎಂದು ಕರೆದುಕೊಂಡಿದ್ದಾರೆ.[೩] ಕ್ರಿ.ಶ. ೧೩೩೮ರ ಅವರ ಪೈಕಿಯ ಸಿಂಗೆಯ ದಂಡನಾಯಕ ತೆರಕಣಾಂಬ ಪ್ರದೇಶದ ಫದಿನಾಲ್ಕು ನಾಡನ್ನು ಆಳಿದವ. ಆದರೆ ಕ್ರಿ.ಶ. ೧೩೯೮ರ ಮಂಗರಸನ ನಿಘಂಟುವಿನಲ್ಲಿಯ 'ಶಸಿಪುರಾಧಿಪತಿ ಸೋಮೇಶ್ವರ ಸ್ತುತಿ' ಕೊಡಗಿನ ಪಾಲ್ವರೆಯ ಸೋಮೇಶ್ವರನಿಗೆ ಅನ್ವಯವಾಗುವ ಕಾರಣ, ನವದಂಣಾಯಕರ ಪೈಕಿಯ ಸಿಂಗೆಯ ದಂಡನಾಯಕನ ಆಳ್ವಿಕೆಗೆ ಕೊಡಗು ಪ್ರದೇಶವೂ ಇತ್ತೆಂದು ತೋರುತ್ತದೆ. ತೆರಕಣಾಂಬಿಗೂ, ಕೊಡಗಿಗೂ ಪ್ರಾಚೀನದಿಂದಲೂ ಸಂಬಂಧವಿದ್ದುದು ಈ ಸಂದರ್ಭದಲ್ಲಿ ಸ್ಮರಣಾರ್ಹ. ಕ್ರಿ.ಶ. ೧೩೫೭ರಲ್ಲಿ ಶ್ರೀ ಮನ್ಮಹಾ ಮಂಡಲೇಶ್ವರ ವೀರ ಬುಕ್ಕಂಣ ಒಡೆಯರು ವಿಜಯನಗರ ಸಾಮ್ರಾಜ್ಯದ ದಕ್ಷಿಣಭಾಗವನ್ನು ಆಳುತ್ತಿದ್ದ ಸಮಯದಲ್ಲಿ (ಬಹುಶಃ ಅಣ್ಣ ಒಂದನೇ ಹರಿಹರನ ಆದೇಶದಂತೆ) ಸಿಂಗಪಟ್ಟಣದ ಚಂಗನಾಡುವಿನಲ್ಲಿ (ಸಿಂಹಪಟ್ಟಣ = ಪಿರಿಯಾಪಟ್ಟಣ) ಲೋಕೋಪಯೋಗಿ ಕಾರ್ಯ ಕೈಗೊಂಡ ಶಾಸನೋಕ್ತ ವಿಷಯವಿದೆ.[೪] ಈ ಅಂಶಗಳಿಂದ ವಿಜಯನಗರಕಾಲದಲ್ಲಿ ಬುಕ್ಕನ ಮಹಾಮಂಡಲೇಶ್ವರತ್ವದಲ್ಲಿ ಕೇತಣ್ಣ ದಂಡನಾಯಕನು ಚಂಗನಾಡಿನ ಭಾಗವನ್ನೂ ಕೊಡಗು ಪ್ರದೇಶದಲ್ಲಿ ನಿರ್ವಹಿಸುತ್ತಿದ್ದಂತೆ ಕಾಣಬರುತ್ತದೆ.

ಈ ಮೊದಲಿನ ಕಿರು ಹಿನ್ನೆಲೆಯನ್ನು ಗಮನಿಸಿದರೆ ಮಲ್ಲಿಕಾಫುರನ ದಂಡಯಾತ್ರೆಯ ಕಾರಣ ಹೊಯ್ಸಳರ ಪ್ರಾಬಲ್ಯ ಕಡಿಮೆಯಾದಂತೆ ಮಾಂಡಲಿಕ ಚಂಗಾಳ್ವರ ಪ್ರಾಬಲ್ಯವೂ ಕಡಿಮೆಯಾಯಿತು. ಕ್ರಿ.ಶ. ೧೧೪೫ರ ೧ನೇ ನರಸಿಂಹನ ಕಾಲದಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾ. ಪರಿಸರದಲ್ಲಿ ನಡೆದ ಯುದ್ಧದಲ್ಲಿ ಚಂಗಾಳ್ವನನ್ನು ಕೊಂದ ವಿಷಯವಿದೆ; ಚಂಗಾಳ್ವ ವಂಶಿಕರು ಕೊಡಗಿನ ತೀರ ದಕ್ಷಿಣ ಭಾಗಗಳಿಗೆ ಸಾಗಿದ ವಿಷಯವಿದೆ.[೫] (ಬಹುಶಃ ಬಾಡಗದ ನಂದಿದೇವ, ಕುರ್ಚಿಯ ಉದಯ್ಮಾದಿತ್ಯ ಈ ಅರಸು ಶಾಖೆಯವರಿರಬೇಕು) ಕ್ರಿ.ಶ. ೧೨೦೩ರ ಕಡೂರು ಶಾಸನದ ರೀತ್ಯಾ,[೬] ನೀರಗುಂದದ ಮಲ್ಲನು ಕಾದು ಚಂಗಾಳ್ವನ ಆನೆಯನ್ನಿರಿದು ಕೊಡೆಯನ್ನು ಹಿಡಿದ ಸಂಗತಿ ಇದೆ. ಈ ಅಂಶಗಳು ಅರಕಲಗೂಡು, ಚಿಕ್ಕಮಗಳೂರು ಹಾಗು ಶಿವಮೊಗ್ಗ ಜಿಲ್ಲೆಯ ಭಾಗಗಳಲ್ಲಿ ಚಂಗಾಳ್ವರ ಶಾಖೆಗಳು ಹರಡಿಕೊಂಡಿದ್ದ ಬಗ್ಗೆ ಸೂಚಿಸುತ್ತವೆ. ಇಂತಿರುವಲ್ಲಿ ಮಲ್ಲಿಕಾಫುರನ ದಂಡಯಾತ್ರೆಯ ಸಮಯದವರೆಗೂ ಅಲ್ಲೆಲ್ಲ ಇದ್ದ ಚಂಗಾಳವರ ಶಾಖೆಗಳು ಆ ಸಮಯದಲ್ಲಿ ಘಾಸಿಗೊಂಡು ಕೊಡಗಿನ ತಮ್ಮ ಪೂರ್ವಜರ ಭಾಗಗಳಿಗೇ ಸರಿದು ತುಂಡು ಪಾಳೆಯಪಟ್ಟುಗಳಲ್ಲಿ

ಬೀಡುಬಿಟ್ಟರೆಂದು ಕಾಣುತ್ತದೆ. ಕೊಡಗಿನಲ್ಲಿ ಕ್ರಿ.ಶ. ೧೩೦೦ - ೧೫೦೦ರ ಅವಧಿಯಲ್ಲಿ ಶಾಸನಗಳು ಲಭ್ಯವಿಲ್ಲವೆಂದರೂ ಕ್ರಿ.ಶ. ೧೫೦೨ರ ಹಿರೇಮಳಲಿ ಶಾಸನವು[೭] ಕ್ರಿ.ಶ. ೧೩೫೨ರ ಸುಮಾರಿನಲ್ಲಿ 'ಚಂಗಾಳ್ವ'ನ ಹೆಸರನ್ನೂ ವಂಶಾವಳಿ ಪಟ್ಟಿಯಲ್ಲಿ ಸೂಚಿಸುವಂತಿದೆ. (ತಲೆಮಾರಿಗೆ ೩೦ವರ್ಷದಂತೆ) ಇದು 'ಮಧ್ಯಂತರ ಚಂಗಾಳ್ವರ' ಉಗಮದ, ('ಮೊದಲ ಚಂಗಾಳ್ವ' ವಂಶಿಕರ ಪುನರುತ್ಥಾನ ಕಾಲ) ಸಮಯವೆನ್ನಬೇಕು. ಈ 'ಚಂಗಾಳ್ವ' ಹಾಗು ಮುಂದಿನ 'ನಾಗರಾಜ' ಕೊಡಗು ಶ್ರೀರಂಗಪಟ್ಟಣವನ್ನು ಆಳಿದರು.[೮] ಅಂದರೆ ಮಧ್ಯಂತರ ಚಂಗಾಳ್ವರ ಉಗಮ, ವಿಜಯನಗರದ ಆರಂಭದ ಸಂಗಮ ಅರಸುಗಳ ಕಾಲದಲ್ಲಿ ಆಯಿತೆಂದಾಗುತ್ತದೆ. ವಿಜಯನಗರಕಾಲದಲ್ಲಿ ಮಾಂಡಲಿಕರಾಗಿ ಆಳಿಕೊಂಡು ಬಂದರೂ ವಿಜಯನಗರದರಸರ ಹೆಸರನ್ನು ತಮ್ಮ ಶಾಸನದಲ್ಲಿ ಹೆಸರಿಸಿಲ್ಲ. ಬಹುಶಃ ವಿಜಯನಗರಕಾಲದ ಒಂದನೇ ವರ್ಗದ ಅಮರನಾಯಕರ ರೀತಿಯಲ್ಲಿ ಅವರು ಆಳ್ವಿಕೆ ನಡೆಸಿದಂತಿದೆ. ಈ 'ಅಮರ ನಾಯಕತ್ವ'ದ ತುಸು ವಿವರ ಅರಿತರೆ ಚಂಗಾಳ್ವರ ಅಮರನಾಯಕತನವೂ ಅರಿವಿಗೆ ಬರುವಂತಾಗುತ್ತದೆ.

ವಿಜಯನಗರಕಾಲದಲ್ಲಿ ಅಮರನಾಯಕ ವ್ಯವಸ್ಥೆ ಆಂಧ್ರದ ನಾಯಕರ ವ್ಯವಸ್ಥೆಯ (ನಾಯಕರ - ಪಾಳೆಗಾರರ ಒಕ್ಕೂಟ), ಕೇವಲ ಅನುಕರಣೆ ಅಲ್ಲ. ಪ್ರಭಾವಿತವಾಗಿದ್ದಿರಬಹುದು ಅಷ್ಟೆ. ಕಾರಣ ವಿಜಯನಗರ ಪೂರ್ವದಲ್ಲಿಯೆ ಗುಮ್ಮನಾಯಕನ ಪಾಳ್ಯ (ಕೋಲಾರ ಜಿಲ್ಲೆ) ಪಾಳೆಯಪಟ್ಟು ನಮ್ಮಲ್ಲಿತ್ತು. ಇದು ಹೊಯ್ಸಳರ ಕಾಲದಲ್ಲಿ ಕ್ರಿ.ಶ. ೧೨೪೨ರಲ್ಲಿ ಉಗಮಗೊಂಡ ಪಾಳೆಯ ಸಂಸ್ಥಾನವಾಗಿತ್ತು.[೮] ಅದಾಗಿ ಅಮರನಾಯಕ ವ್ಯವಸ್ಥೆ ಸ್ಥಳೀಯ ಸ್ವರೂಪವನ್ನು ಮುಖ್ಯವಾಗಿ ಹೊಂದಿತ್ತೆನ್ನಬೇಕು. ಒಟ್ಟಾರೆ ಅಮರನಾಯಕರು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನ ಪಾಳೆಯಪಟ್ಟಿನ ನಾಯಕರಾಗಿದ್ದರು. ಕೇವಲ ಸೈನ್ಯಾಧಿಕಾರಿಗಳೂ ಎನ್ನುವಂತಿಲ್ಲ. ಸಾಮಾನ್ಯವಾಗಿ ವಾರ್ಷಿಕ ಪೊಗದಿ ಸಲ್ಲಿಕೆ ಹಾಗು ಸಾಮ್ರಾಜ್ಯಕ್ಕೆ ಅಗತ್ಯಬಿದ್ದಾಗ ಸೈನಿಕ ಸೇವೆ ಒದಗಿಸುವುದು ಎಂದು ಆ ಶಬ್ದಕ್ಕೆ (ಅಮರನಾಯಕತನ) ಅರ್ಥೈಸಲಾಗಿದೆ. ಎಂ.ಎಸ್. ಪುಟ್ಟಣ್ಣನವರು 'ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧವಾಗಿರುವವನು' ಎಂದು ನೀಡಿರುವ ಅರ್ಥಕ್ಕಿಂತ ಮುಂದುವರೆದು ಹೇಳಬೇಕು. ಕಾರಣ ಚಂಗಾಳ್ವ, ಗುಮ್ಮನಾಯಕ ಪಾಳ್ಯ ಇತ್ಯಾದಿ ವಿಜಯನಗರ ಪೂರ್ವ ಅರಸು ಸಂತತಿಯೂ ಇದ್ದಂಥ ಸಂದರ್ಭದಲ್ಲಿ ಬೇರೆಯ ರೀತಿಯಲ್ಲಿ ಅರ್ಥೈಸಿ ಅನ್ವಯಗೊಳಿಸಬೇಕಾದ ಕಾರಣ ಅಮರನಾಯಕತನದಲ್ಲಿ ಮೂರು ವರ್ಗವನ್ನು ಸೃಷ್ಟಿಸಿಕೊಳ್ಳಬೇಕಾಯಿತೆಂದು ತೋರುತ್ತದೆ. ಪ್ರಥಮ ವರ್ಗದ ಅಮರ ನಾಯಕರಿಗೆ ಪಂಚವಾದ್ಯಗಳ ಹಕ್ಕು, ಸಾಮಂತ ಸಿಂಹಾಸನ, ಚಕ್ರವರ್ತಿಗಳಿಗೆ ತಿಳಿಸದೆಯೆ ಶಾಸನೋಕ್ತವಾದ ದಾನ ನೀಡುವ ಸ್ವಾತಂತ್ರ್ಯ, ಸ್ವಂತ ನಾಣ್ಯ ಚಲಾವಣೆಯ ಸ್ವಾತಂತ್ರ್ಯವಿತ್ತು.[೯] ಚಕ್ರವರ್ತಿಗಳ ಹೆಸರನ್ನು ಶಾಸನ ಹಾಕಿಸುವಲ್ಲಿ ಸದಾ ಉಲ್ಲೇಖಿಸುವ ಅಗತ್ಯ ಇವರಿಗಿರಲಿಲ್ಲವೆನಿಸುತ್ತದೆ. ಇನ್ನು ಉಳಿದ ೨ ಮತ್ತು ೩ನೇ ವರ್ಗದ ಅಮರನಾಯಕರು

ಚಕ್ರವರ್ತಿಯ ಹೆಸರನ್ನು ನಮೂದಿಸಿಯೆ ಶಾಸನಗಳನ್ನೂ, ದಾನ, ಪರಭಾರೆ ಇತ್ಯಾದಿ ಸಂದರ್ಭಗಳಲ್ಲಿ ಹಾಕಿಸಬೇಕಿತ್ತು. ಅಮರ ನಾಯಕರಲ್ಲಿ ದಂಡನಾಯಕರೂ ಸೇರಿದ್ದರು. ಆದರೆ ಅನೇಕ ಅಮರನಾಯಕರು ಮಹಾಮಂಡಲೇಶ್ವರರ ಅಧೀನದಲ್ಲಿ ಇರುತ್ತಿದ್ದ ಸಂಗತಿಯ ಕಾರಣ ಮಹಾಮಂಡಲೇಶ್ವರತ್ವ ಹೆಚ್ಚಿನ ಸ್ಥಾನಮಾನದ್ದಾಗಿತ್ತು.

ಸಾಮ್ರಾಜ್ಯದ ಚಕ್ರವರ್ತಿಯ ನಿಕಟ ಬಂಧು ಸೋದರ, ಅಥವಾ ಕುಮಾರರು ಮಹಾಮಂಡಲೇಶ್ವರರಾಗಿದ್ದರೆ, ಉಳಿದ ಮಾಂಡಲೇಶ್ವರರು ಅವರ ಅಧೀನ ದೊರೆಗಳೆ ಆಗಿರುತ್ತಿದ್ದರು. ವೀರ ಬುಕ್ಕಂಣ್ಣ ಒಡೆಯನಿಗೆ ಸಾಮ್ರಾಜ್ಯದ ದಕ್ಷಿಣಭಾಗ ಪ್ರದೇಶದ ಆಳ್ವಿಕೆ ಇದ್ದುದರಿಂದ ಚಂಗಾಳ್ವರು ಅಧೀನ ಮಹಾಮಂಡಲೇಶ್ವರರಾಗಿ ಕ್ರಿ.ಶ. ೧೩೪೩ರ ವೇಳೆಗೆ ಕೊಡಗಿನಲ್ಲಿ ಪುನರುತ್ಥಾನಗೊಂಡರೆನ್ನಬೇಕು. ಮುಖ್ಯವಾಗಿ ವಿಜಯನಗರ ಕಾಲದ ಕೊಡಗು ಎಂದರೆ ಚಂಗಾಳ್ವ ವಂಶಿಕರಾದ 'ಮಧ್ಯಂತರ ಚಂಗಾಳ್ವರು' ಹಾಗು 'ನಂತರ ಚಂಗಾಳ್ವರ ಕೊಡಗಿನಾಳ್ವಿಕೆಯ ಸಂದರ್ಭಗಳನ್ನು ಪರಿಶೀಲಿಸುವಂತಾಗುತ್ತದೆ. ಆದರೂ ಮಧ್ಯಂತರ ಚಂಗಾಳ್ವರ ಕಾಲದಲ್ಲಿ ಕ್ರಿ.ಶ. ೧೩೯೦ರ ಮುಳ್ಳೂರು ಚಂದ್ರನಾಥ ಬಸದಿ ಶಾಸನದಲ್ಲಿ[೧೦] ವಿಜಯನಗರದರಸ ಇಮ್ಮಡಿ ಹರಿಹರ ಹಾಗು ಗುಂಡಪ್ಪ ದಂಡನಾಯಕರ ಹೆಸರಿದೆ ವಿನಃ ಹಾಗು ೧೧ನೇ ಶತಮಾನದಲ್ಲಿ ಕೊಂಗಾಳ್ವ ವಂಶದ ರಾಜಾಧಿರಾಜ ಕೊಂಗಾಳ್ವ (ಕ್ರಿ.ಶ ೧೦೫೯) ಮತ್ತು (ಬಹುಶಃ) ಅವನ ಪತ್ನಿ ರುಕ್ಮಿಣಿದೇವಿಯು, ರಾಜಾಧಿರಾಜನ ತಾಯಿ ಪೋಚಬ್ಬರಸಿಗೆ ಪುಣ್ಯಾರ್ಥವಾಗಿ ಕಟ್ಟಿಸಿದ್ದ ಬಸದಿಗೆ ದಾನಗಳನ್ನು ಗುಂಡಪ್ಪ ದಂಡನಾಯಕನ ಮೂಲಕ ಇಮ್ಮಡಿ ಹರಿಹರನು ಮುಂದುವರಿಸಿದ ಕುರಿತು ಹೇಳಿದೆ ವಿನಾ, ಚಂಗಾಳ್ವದೊರೆಗಳ ಹೆಸರೇ ಉಕ್ತವಿಲ್ಲ. ಅಂದರೆ ಚಂಗಾಳ್ವರ ಆಳ್ವಿಕೆ ಮುಳ್ಳೂರು ಭಾಗದಲ್ಲಿರದೆ, ವಿಜಯನಗರದ ನೇರ ನಿರ್ವಹಣೆಗೆ ಗುಂಡಪ್ಪ ದಂಡನಾಯಕನ ಮೂಲಕ ಸೇರಿತ್ತೆಂದಾಗುತ್ತದೆ. ಇದಲ್ಲದೆ ವಿಜಯನಗರದ ಪರವಾಗಿ ಹಲವರೆದುರು ಕಾಳಗಕೊಟ್ಟು, ಶೌರ್ಯ ತೋರಿದ ಭೃತ್ಯ ಗೊಂಕಾರೆಡ್ಡಿ ನಾಯಕನಿಗೆ ಮುಳ್ಳುನಾಡ (ಮುಳ್ಳೂರು) ನಾಯಕತ್ವವನ್ನು ಕೊಟ್ಟ ಸಂಗತಿಯೂ ಇದೆ. ಅಂದರೆ ೨ನೇ ವರ್ಗದ ಅಮರನಾಯಕತನವನ್ನು ಈ ನಾಯಕನಿಗೆ ದತ್ತಿಮಾಡಿದ ಸೂಚನೆ ಕಾಣುತ್ತದೆ. ಚಂಗಾಳ್ವರ ಅಸ್ತಿತ್ವವಿದ್ದರೂ ಅವರ ಪ್ರಾಬಲ್ಯ ಮೊದಲಿನಂತೆ ಈ ಭಾಗದಲ್ಲಿ ಇನ್ನೂ ಗರಿಗಟ್ಟಿಕೊಂಡಿರಲಿಲ್ಲವೆನ್ನುವುದು ಇದರಿಂದ ವಿದಿತವಾಗುತ್ತದೆ. ಕೊಡಗು ಶ್ರೀರಂಗಪಟ್ಟಣ ಪ್ರದೇಶ ಅಂದರೆ ಮಾಲ್ದಾರೆಯಿಂದ ಹಿಡಿದು ನಂಜರಾಯಪಟ್ಟಣ ಪ್ರದೇಶದ ವರೆಗೆ ಹಾಗು ದಕ್ಷಿಣ ಕೊಡಗಿನ ಪಾಲ್ವರೆ ಪ್ರದೇಶದಲ್ಲಿ ಅವರ ಆಳ್ವಿಕೆ ನಡೆದಿತ್ತೆಂದಾಗುತ್ತದೆ. ಇದೆಲ್ಲ ವಿಜಯನಗರ ಕಾಲದ ಅವಧಿಯದೇ ಆಗಿದೆ. ಇನ್ನು ವಿಜಯನಗರ ಕಾಲದ (ಎಫಿಗ್ರಾಫಿಯ ಸಂಪುಟ ೧ರಲ್ಲಿ) ಆರು ಶಾಸನಗಳು ಮಾತ್ರ ಇಂದಿನ ಕೊಡಗಿನಲ್ಲಿ ಇವೆ. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಮತ್ತು ಇತಿಹಾಸದರ್ಶನ ಪ್ರಕಟಿತ ಶಾಸನಗಳಿವೆ. ಅಂದಿನ ಕೊಡಗು ಪ್ರದೇಶದ ದೃಷ್ಟಿಯಿಂದ ವಿಜಯನಗರ ಕಾಲದ ಅರಕಲಗೂಡು, ಪಿರಿಯಾಪಟ್ಟಣದ ಕೆಲವು ಶಾಸನಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಹಿರೇಮಳಲಿ ಶಾಸನದ ಸೂಚನೆಯು ಚಂಗಾಳ್ವ ವಂಶಾವಳಿಯ ಇತಿಹಾಸ ಸಾಮಂಜಸವನ್ನು ಗಮನಿಸುವಾಗ 'ಚಂಗಾಳ್ವ'ನು ಕ್ರಿ.ಶ. ೧೩೮೩ರ ವೇಳೆಗೆ ಕೊಡಗು ಶ್ರೀರಂಗಪಟ್ಟಣವನ್ನು ಆಳುತ್ತಿದ್ದ ವಿಷಯ ವಿದಿತವಾಗುತ್ತದೆಯಷ್ಟೆ. ಕೊಂಗಾಳ್ವರ ಕಾಲಕ್ಕೆ ರೂಪುಗೊಂಡ ಕೊಡಗು ಶ್ರೀರಂಗಪಟ್ಟಣ, ಮೊದಲ ಚಂಗಾಳ್ವರ ಪೈಕಿಯ ಬೊಪ್ಪದೇವ, ಸೋಮದೇವರಸರು ರಾಜಧಾನಿಯಾಗಿಸಿಕೊಂಡು ಹೊಯ್ಸಳ ಸೋಮೇಶ್ವರನ ಆದೇಶದಂತೆ ಕ್ರಿ.ಶ. ೧೨೫೨ರ ಸುಮಾರಿಗೆ ಆಳಲಾರಂಭಿಸಿದ್ದರು.[೧೧] ಆ ಸಮಯದಲ್ಲಿಯೇ ಕೊಡಗು ಶ್ರೀರಂಗಪಟ್ಟಣ ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು.[೧೨] ಇಂಥ ಪ್ರಮುಖ ನೆಲೆಯಲ್ಲಿ ಚಂಗಾಳ್ವರು ತಮ್ಮ ಪುನರುತ್ಥಾನವನ್ನು ಕ್ರಿ.ಶ. ೧೩೮೩ರ ವೇಳೆಗೆ ವಿಜಯನಗರದರಸರ ಮಹಾಮಂಡಲೇಶ್ವರರಾಗಿ ಕಂಡುಕೊಂಡದ್ದು ಸಹಜವೇ ಆಗಿತ್ತು. ಅವರ ಸಚಿವ ವಂಶವೂ ೧೪ನೇ ಶತಮಾನದಲ್ಲಿ ಇದ್ದದ್ದು ಸಾಹಿತ್ಯ ಕೃತಿಗಳಿಂದ ಪೋಷಿತ ಸಾಕ್ಷ್ಯವಾಗಿ ಕಾಣಬರುತ್ತದೆ.

ಮುಂದೆ ಕ್ರಿ.ಶ. ೧೩೯೫ರ ಹುಲುಕೋಡು ಶಾಸನವು[೧೩] ತ್ರಿನಮೇರ ದೇವಣ್ಣನು ೨೨.೨.೧೩೯೫ರಂದು ಘಟ್ಟದ ಕೆಳಗಿನ ಯುದ್ಧಕ್ಕೆ ಹುಲಕೋಡ ಚಿಕ್ಕಣ್ಣಯ್ಯನ ಮಗ ಬೆಂಮ್ಮಗೌಡನೊಡನೆ ಸಾಗಿದ. ಯುದ್ಧದಲ್ಲಿ ಬೆಂಮ್ಮಗೌಡ ವೀರಮರಣವನ್ನಪ್ಪಿದ. ಬಹುಶಃ ಗವುಡ ಬೋವ ದೇಮ್ಮಯ್ಯ ಚಿಕಣ್ಣಯ್ಯರಿಗೆ ಮಂಗಳವನ್ನು ಕೋರಿರುವುದರಿಂದ ವೀರಗಲ್ಲು ಹಾಕಿಸಿ ಅವರಿಗೂ ಅನ್ವಯ ಮಾಡಿರಬಹುದೆ! ಅಲ್ಲದೆ ಸೇನಬೋವ ಪದವಯಂತೆ ಗೌಡಬೋವ ಅರ್ಥಾತ್ ಗೌಡಿಕೆ ಸೂಚನೆಯೆ? ಜಾತಿ ಗೌಡಿಕೆ ಸೂಚನೆಯೆ? ಎಂಬುದು ಸ್ಪಷ್ಟವಿಲ್ಲದಿದ್ದರೂ, 'ಗೌಡಭೋಗ' ನಂಥ ಪದವಿಸೂಚಕತ್ವ ಶಬ್ದದ ಬಗ್ಗೆ ಯೋಚಿಸುವಂತಾಗುತ್ತದೆ. ವಿಜಯನಗರಕಾಲದ ಕೊಡಗಿನಲ್ಲಿ 'ತಕ್ಕಾಮೆ', 'ಜಾತಿಗೌಡಿಕೆ' (ಜನಾಂಗ ವ್ಯವಹಾರದ ಉಸ್ತುವಾರಿ ನಾಯಕತ್ವ)ಯು ಮುಂದೆ ಹಾಲೇರಿ ಅರಸರ ಕಾಲದಲ್ಲಿ ಕಾಣಬರುವಲ್ಲಿ, ಈ ಶಬ್ದ ಪೂರ್ವ ಪರ್ಯಾಯ ಶಬ್ದವಾಗಿದ್ದಿರಬಹುದೆನಿಸುತ್ತದೆ. ಅಲ್ಲದೆ ಈ ಹುಲುಕೋಡು ಶಾಸನದಲ್ಲಿ ಬರುವ 'ಶ್ರೀ ಸಗವುಡ ಬೊವ ದೇಮ್ಮಯ್ಯಂ ಮಂಗಳವು' ಎಂಬ ಶಬ್ದಸಂಯುಕ್ತವು ಗಮನ ಸೆಳೆಯುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕನ್ನಡ ನಿಘಂಟಿನಲ್ಲಿ 'ಬೋವ' ಎಂದರೆ ಪರಿಚಾರಕ; ಬೋವಗಾರಿಕೆ ಎಂದರೆ ಪರಿಚಾರಕರ ಮುಖಂಡ ಎಂಬ ಅರ್ಥವನ್ನು ನೀಡಲಾಗಿದೆ. ಅಂದರೆ ಸೇವಾಕಾರ್ಯಗಳ ನಾಯಕತ್ವ ಎಂಬ ಅನ್ವಯಾರ್ಥಕ್ಕೆ ಅವಕಾಶವಿದೆ. ಸೇನಬೋವ - ಶಾನುಭೋಗ ಎಂಬ ಪರಸ್ಪರ ಪರ್ಯಾಯ ಶಬ್ದಗಳು ಶಾಸನಗಳಲ್ಲಿ ಉಕ್ತವಾಗಿವೆ. ಅಂತೇ ಈ ಅಂಶಗಳ ಸೂಕ್ಷ್ಮಾನ್ವಯ ವನ್ನು ಗವುಡ ಬೊವ > ಗೌಡಬೋವ ಎಂಬ ಶಬ್ದಕ್ಕೆ ಮಾಡಿದರೆ ಗೌಡಜಾತಿಯ ವ್ಯವಹಾರಗಳ ಮುಖ್ಯಸ್ಥನೆಂದು ಪರಿಗಣಿಸಬಹುದೆನಿಸುತ್ತದೆ. ಶಾಸನದಲ್ಲಿ ಬರುವ 'ಶ್ರೀ ಸಗವುಡ ಬೋವ' ಎಂಬ ಶಬ್ದವನ್ನು ೧. ಶ್ರೀ ಸೌಗೌಡಬೋವ, ೨. ಶ್ರೀ ಸಗೌಡಬೋವ, ೩. ಸಿರಿಸಗೌಡಬೋವ, ೪. ಸಿರಹಗೌಡಬೋವ ಎಂದೆಲ್ಲ ಪರಿಭಾವಿಸಬಹುದೆಂದು

ತೋರುತ್ತದೆ. ಆದರೆ ಶ್ರೀ ಸೌಗೌಡ, ಶ್ರೀ ಸಗೌಡ ಎಂಬ ಶಬ್ದ ವ್ಯಕ್ತಿನಾಮವಾಚಿಯಾಗಿ ಸಾಮಂಜಸ್ಯ ನೀಡುವಂತೆ ತೋರುವುದಿಲ್ಲ. ರೈಸರ ಹಾಗು ಪರಿಷ್ಕೃತ ಶಾಸನ ಸಂಪುಟದಲ್ಲಿನ ಆಂಗ್ಲಾನುವಾದದಲ್ಲಿ Srisaguda (?)' ಎಂದು ಪ್ರಶ್ನಾರ್ಥಕ ಚಿಹ್ನೆ ಇಟ್ಟು 'ಬೊವ' ಎಂಬ ಅದಕ್ಕೆ ಅಂಟಿದ ಶಬ್ದವನ್ನು ಬಿಟ್ಟಿದ್ದೇಕೆ? ಎಂಬುದಕ್ಕೆ ಅಲ್ಲಿ ಉತ್ತರವಿಲ್ಲದೆ ಸದ್ಯದ ವಿವೇಚನೆಗೆ ಅವಕಾಶವಾಗುತ್ತದೆ. 'ಶ್ರೀಸ್' ಎಂಬ ಪದಗಳನ್ನಷ್ಟೆ ತೆಗೆದುಕೊಂಡರೂ ಶ್ರೀಸ < ಸಿರಿಈಸ್ < ಸಿರೀಸ < ಸಿರಿಹ < ಸಿರಿಹರ (ಸಿರಿವುರ)[೨೦] ಎಂಬ ಬಾಯ್ದೆರೆ ಗ್ರಾಮನಾಮವೆ ಸಿದ್ಧಿಸುವಂತಾಗಿ ಆ ಗ್ರಾಮದ ಗೌಡಬೋವನಾಗಿ ದೇಮ್ಮಯ್ಯ ಇದ್ದ ಎಂಬುದಕ್ಕೆ ಅರ್ಥ ಸಾಮಂಜಸ್ಯವನ್ನು ಕಲ್ಪಿಸುತ್ತದೆ. ಹೀಗಾಗಿ ಆ ನಿಟ್ಟಿನಿಂದ 'ಸಿರವುರದ' ಅರ್ಥಾತ್ ಸಿರಹದ ಗೌಡಬೋವೆದೇಮ್ಮಯ್ಯ' ಆಗಿದ್ದಿರಬಹುದು. (ಸೋಮವಾರಪೇಟೆ ತಾಲೂಕಿನಲ್ಲಿ ಇಂದಿನ ಸಿರಹ ಗ್ರಾಮ ಹುಲುಕೋಡಿಗೆ ಸುಮಾರು ೧೫ ಮೈಲಿ ಫಾಸಲೆಯೊಳಗೆ ಬರುವ ಊರು) ಹಾಗು ಮೇಲಿನ ನಾಲ್ಕು ಶಬ್ದಗಳ ಸಂದರ್ಭಗಳಲ್ಲಿಯೂ 'ಗೌಡಬೋವ' (< ಬೋವ) ಶಬ್ದವು ಸಾಮಾನ್ಯವಾಗಿ ಅಂಟಿಕೊಂಡಿರುವ ಶಬ್ದವಾಗಿದೆ. ಅಂದರೆ 'ಜಾತಿಗೌಡಿಕೆ' ಪಟ್ಟವು ೧೪ನೇ ಶತಮಾನದ ವಿಜಯನಗರ ಕಾಲದ ಕೊಡಗಿನಲ್ಲಿತ್ತು ಎಂಬುದಕ್ಕೆ ಈ ವಿವೇಚನೆ ಇಂಬುಗೊಡುತ್ತದೆ. ಇದನ್ನೊಪ್ಪಿದರೆ ಹಾಲೇರಿ ಅರಸರ ಕಾಲಕ್ಕೆ 'ಗೌಡಬೋವ' ವ್ಯವಸ್ಥೆ ಮುಂದುವರಿದರೂ ಗೌಡಜಾತಿಯ ನ್ಯಾಯವ್ಯವಹಾರಗಳಿಗೆ, 'ತಕ್ಕ' ಎಂಬ ದಕ್ಷಿಣಕೊಡಗಿನ ಪ್ರಚಲಿತ ಕೊಡುವ ಭಾಷಾಶಬ್ದಕ್ಕೆ ಉತ್ತರ ಕೊಡಗಿನ ಭಾಗಗಳಲ್ಲಿ ಸಂವಾದಿಯಾಗಿ 'ಜಾತಿಗೌಡಿಕೆ' ಎಂಬ ಶಬ್ದ ಬಳಕೆಗೊಂಡಿತ್ತೆಂದಾಗುತ್ತದೆ. ಹೀಗೆ ವಿಜಯನಗರಕಾಲದ ಗೌಡಿಕೆ ವ್ಯವಸ್ಥೆಯೊಂದು ವಿಜಯನಗರೋತ್ತರ ಹಾಲೇರಿ ಅರಸರಿಗೆ ಮಾರ್ಗದರ್ಶಕವಾಯಿತೆಂದು ತೋರುತ್ತದೆ. ಅಲ್ಲದೆ "ಸಜ್ಜನಸೇವೆಯೊಳ್ವರಿಯ ಧರ್ಮ ಕರ್ಮಂಗಳೊಳ್ವಿರಿಯಂ ..... ತಾನೆನೆ ಮಾದಿ ಬೋವ" ಎಂದು ಅಧಿಕಾರಿಯ ಹೆಸರನ್ನು ಶಾಸನಗಳಲ್ಲಿ ವೃತ್ತಿಸೂಚಕವಾಗಿ ಹೇಳಿದಂತಿದೆ (ಚಿಕ್ಕಮಗಳೂರು ೧೦೮, ಮರಲೆ, ಕ್ರಿ.ಶ. ೧೧೩೦, ಎ.ಕ.ಸಂ.೧೧ ಹೊಸತು); ಹೀಗೆಯ ಕ್ರಿ.ಶ. ೧೩೪೨ರ ಮೂರನೇ ಬಲ್ಲಾಳನ ಶಾಸನದಲ್ಲಿ (ಎ.ಕ.ಸಂ. ೭, ಹೊಸತು, ಮುದ್ದೂರು ೧೨೧ ದೊಡ್ಡ ಅರಸಿನಕೆರೆ) ಧ್ರುವ ಉಂಡಿಗೆಯ ಸ್ಥಿರ ಶಾಸನವಾಗಿ ಮಹಾಜನಂಗಳ ಊಳಿಗದ ವೃತ್ತಿಯಲ್ಲಿ ನಿರತರಾದವರ ಪೈಕಿ (Service Tenure) "ಹಳಿಗಳ ವ್ರಿತಿ ಕಾಡುಕೊತ್ತನ ಹಳಿಯ ಸಂಭವದುತ್ತಾದ ಮಂ ಬೋವನ ಭಾಗೆ ೧॥" ಎಂದಿರುವಲ್ಲಿ ಕಾಡುಕೊತ್ತನಹಳ್ಳಿಯಲ್ಲಿ ಉತ್ತಾರಬಿಟ್ಟು ಬೊವನ ಭಾಗ ಒಂದೂವರೆಯಷ್ಟಿದೆ, ಎಂಬರ್ಥವು, ಗೌಡಬೊವ ಎಂದರೆ ಒಂದು ಹಳ್ಳಿಯಲ್ಲಿ ಜಾತಿಗಾರಿಕೆಯಂಥ ವ್ಯಕ್ತಿಯಾಗಿಯೂ ಹೊಯ್ಸಳರ ಕೊನೆಕಾಲದಲ್ಲಿ ವಿಜಯನಗರ ಆರಂಭಕಾಲದಲ್ಲಿ ಪ್ರಚಲಿತವಿದ್ದಿರಬೇಕು ಎನಿಸುತ್ತದೆ. ಇದು ಮೇಲಿನ ವಿಶ್ಲೇಷಣೆಗೆ ಪೂರಕವಾಗುವಂತಿದೆ.

ಸಧ್ಯ ವಿಜಯನಗರ ಬುಕ್ಕನ ಆದೇಶದಂತೆ ಘಟ್ಟದ ಕೆಳಗಿನ ಪಾಳೆಯಪಟ್ಟೆನವನ್ನ ತುಂಡರಸನನ್ನೋ ತಹಬಂದಿಗೆ ತರಲು ಅಥವ ಬೇರೆಯ ಶತ್ರುವಿನೊಡನೆ ಕಾಳಗ

ಕೊಡಲೋತ್ರಿನಮೇರ ದೇವಣ್ಣನು ಹೋದಂತಿದೆ. ಹುಲುಕೋಡು, ಶನಿವಾರಸಂತೆ, ಕಾಜೂರು, ಹೆಗ್ಗಡಹಳ್ಳಿ ಉಚ್ಚಂಗಿ, ಗೊದ್ದು ಮೂಲಕ ಬಿಸಲೆಘಾಟ್ ದಾಟಿ ಸುಬ್ರಮಣ್ಯಕ್ಕೆ ಸಾಗುವ ಹಾದಿ ಎಂದರೆ ಘಟ್ಟದ ಕೆಳಗಿನ ಪ್ರದೇಶಕ್ಕೆ ಹೋದಂತೆಯೆ ಅಥವಾ 'ತ್ರಿನಮೇರ' ಎಂಬ ಮನೆಪೆದ ಮಡಿಕೇರಿ ಸೋಮವಾರಪೇಟೆ ಹಾದಿಯ ಮಕ್ಕಂದೂರು ಬಳಿ ಬರುವಲ್ಲಿ ಅಲ್ಲಿಂದ ತ್ರಿನಮೇರ ದೇವಣ್ಣನು ಸೋಮವಾರಪೇಟೆ ತಾ. ಪಶ್ಚಿಮಕ್ಕಿರುವ ಪುಷ್ಪಗಿರಿ (ಕುಮಾರಪರ್ವತ) ಬುಡದ ಸುಬ್ರಮಣ್ಯದ ಮೂಲಕ ಮಂಗಳೂರು ಯಾ ಬಾರಕೂರು ಪ್ರಾಂತದಲ್ಲಿ ಕಾಳಗಕೊಡಲು ಹೋದಂತಿದೆ. ಇದು ಘಟ್ಟದ ಕೆಳಗಿನ ಕಾಳಗ. ಸುಬ್ರಮಣ್ಯಕ್ಕೆ ಹುಲುಕೋಡು ಬಾಳುಪೇಟೆ ಸಕಲೇಶಪುರ, ಶಿರಾಡಿಘಾಟ್ ಹಾದಿಗಿಂತ ಪುಷ್ಪಗಿರಿಯಹಾದಿ ಹತ್ತಿರದ ಹಾದಿ. ಹೀಗಾಗಿ ಈ ಮಾರ್ಗವನ್ನು ಕ್ರಮಿಸಿರುವಂತಿದೆ ದೇವಣ್ಣ. ಶಾಸನದಲ್ಲಿ ವಿಜಯನರದರಸರ ಅಥವಾ ದಂಡನಾಯಕರ ಹೆಸರಾಗಲಿ ಕಾಣಬರದು. ಅಂದರೆ ದೇವಣ್ಣ ಸೈನಿಕ ಸೇವೆಯನ್ನು ವಿಜಯನಗರಕ್ಕೆ ಸಲ್ಲಿಸುತ್ತಿದ್ದ ಒಂದನೇ ವರ್ಗದ ಅಮರನಾಯಕನಾಗಿ ಭೂರಜನಾಡಿನ ಹುಲುಕೋಡು ಪ್ರದೇಶವನ್ನಾಳುತ್ತಿದ್ದಂತೆ ತೋರುತ್ತದೆ. ಬಹುಶಃ ಮಕ್ಕಂದೂರು ವರೆಗಿನ ಆಡಳಿತ ಅವನ ಹೊಣೆಗಿದ್ದಿರಲೂಬಹುದು. ಬಾರಕೂರು ಭೈರರಸ ನಾಯಕನರನ್ನು ೨ನೇ ಬುಕ್ಕನು ಅಡಗಿಸಿದ ಸಂಗತಿ ಇದೆ. ಈ ಹಿಂದೆಯೂ ೧ನೇ ಬುಕ್ಕನ ಕಾಲದಲ್ಲಿ ಈ ನಾಯಕರನ್ನು ಕ್ರಿ.ಶ. ೧೩೫೮ರಲ್ಲಿ ಈ ತ್ರಿನಮೇರ ದೇವಣ್ಣನ ಮೂಲಕ ಹದಕ್ಕೆ ತಂದಿದ್ದಿರಬೇಕು. ಮತ್ತೆ ಜಿಗಿತ ಭೈರರಸರನ್ನು ಇಮ್ಮಡಿ ಬುಕ್ಕಣ್ಣ ಅಡಗಿಸಿದ. ಪ್ರಸ್ತುತ ಶಾಸನದಿಂದ ಕೊಡಗಿನಲ್ಲಿದ್ದ ವಿಜಯನಗರ ಕಾಲದ ಅಮರನಾಯಕನ ಹೆಸರು ಹಾಗು ಕೊಡಗಿನ ಮನೆಪೆದದ (ಮನೆತನದ ಹೆಸರು) ಇತಿಹಾಸದ ಮೊದಲ ದಾಖಲೆಯು ನಿಖರವಾಗಿ ದೊರಕುವಂತಾಗಿದೆ. ಅರಕಲಗೂಡಿನ ಕ್ರಿ.ಶ. ೧೩೫೦ರ ಶಾಸನವನ್ನು ಗಮನಿಸಿದರೆ ಚಂಗನಾಡಿನ ಸಿಂಗಪಟ್ಟಣ (ಪಿರಿಯಾಪಟ್ಟಣ)ದಲ್ಲಿ ಲೋಕೋಪಯೋಗಿ ಕಾರ್ಯ ಕೈಗೊಳ್ಳಲು ಮೊದಲ ತಮ್ಮ ೧ನೇ ಬುಕ್ಕನಿಗೆ ೧ನೇ ಹರಿಹರನು ಆದೇಶ ನೀಡಿರುವ ಸಂಗತಿ ಇದೆ.[೨೧] ಅಂದರೆ ಕೊಡಗಿನ ವ್ಯವಹಾರಗಳನ್ನು ಒಂದನೇ ಬುಕ್ಕನು ನೋಡಿಕೊಳ್ಳುತ್ತಿದ್ದ ಸೂಚನೆ ಇಲ್ಲಿ ದೊರೆಯುತ್ತದೆ.

ಕ್ರಿ.ಶ. ೧೩೦೧ರ ಪಾಲೂರು ಶಾಸನದಲ್ಲಿ,[೨೨] ಬೋಧರೂಪ ಭಾಗವರ್ ಪಾಲೂರಿನ ಮಹಾದೇವರಿಗೆ ದಾನ ನೀಡಿ ಅದರ ನಿರ್ವಹಣೆಯನ್ನು ಹದಿನೆಂಟು ದೇಶದ ಶ್ರೀ ವೈಷ್ಣವರಿಗೆ, ಹದಿನೆಂಟು ದೇಶಿ ವರ್ತಕರಿಗೆ (ಪಟ್ಟಣಸ್ವಾಮಿ!) ಹದಿನೆಂಟುನಾಡು ಬ್ರಾಹ್ಮಣರಿಗೆ ಆದೇಶಿಸಿದ್ದಾರೆ. ಅದಕ್ಕೆ ದೇಗುಲಿ ಪೂವಿಸ್ಥಾನ (ದೇವರಕಾಡು) ನೀಡಿದ್ದಾನೆ. ಈ ಶಾಸನದಲ್ಲಿ ಬರುವ 'ನಾಲು ಮುತ್ತಾಮಯ್ಯಾಳುಮ್ಮುನೂರ್ಕ ಮುನ್ತಯಿ' ಎಂದಿರುವುದು ಬಹುಶಃ ನಾಲ್ಕು ಬಗೆಯ 'ಮಯ್ಯಾಳು (> ಮುಯ್ಯಾಳು)ಗಳು ದೇಗುಲಗದ್ದೆಯ ಕೃಷಿ ಆಳುಗಳಿಗೆ ಸಂಬಂಧಿಸಿದಂತೆ ತೋರುತ್ತದೆ. ಮುಯ್ಯಾಳು ಇಂದಿಗೂ ಕನ್ನಡದಲ್ಲಿ ಪ್ರಚಲಿತವಿರುವ, ಕೃಷಿಕಾರ್ಯಗಳಲ್ಲಿ ಹಿಡುವಳಿದಾರರಲ್ಲಿ ವಿನಿಮಯ ಸಹಾಯ ಪದ್ಧತಿಯನ್ನನುಸರಿಸುವವರು

ಎಂದಾಗಿದೆ. ಕೊಡಗಿನಲ್ಲಿ ಬಹಳ ಪ್ರಚಲಿತವಿದ್ದ ಪದ್ಧತಿ ಇದಾಗಿದೆ. ಕ್ರಿ.ಶ. ೧೩೭೧ರ ಕಾಲಕ್ಕೆ ಬಹುಶಃ ದ್ರಾವಿಡ ಮೂಲದ ಶಬ್ದವಾಗಿ 'ಮಯ್ಯಾಳು' ('ಮೆಯ್' ಎಂಬ ತಮಿಳು ಮೂಲ ಗಮನಿಸಿ.) ಎಂದು ಮಲೆಯಾಳ ಗ್ರಂಥ - ತಮಿಳು ಭಾಷೆಯಲ್ಲಿ ಪ್ರಚಲಿತವಿದ್ದ ರೂಪದಲ್ಲಿ ಈ ಮಿಶ್ರ ಲಿಪಿಯ ಶಾಸನದಲ್ಲಿ ಉಕ್ತವಿರುವಂತಿದೆ. ಆದರೆ ವಿಜಯನಗರ ಕಾಲದಲ್ಲಿ ಚೆಂಗಾಳ್ವರು ಈ ಹೊತ್ತಿಗೆ ಕೊಡಗಿನಲ್ಲಿ ಅಧೀನ ಮಾಂಡಲೇಶ್ವರರಂತೆ ಇದ್ದ ಸಮಯದಲ್ಲಿ ಬೋದರೂಪ ಭಾಗವರ್ ಹಾಗು ಇದೇ ಕಾಲದ ಭಗಂಡೇಶ್ವರ ದೇಗುಲ ದಲ್ಲಿನ ಶಾಸನದ ಮೇಲ್ಪುಂಡಿ ಕುನ್ನಿ ಅರಸನು ನಾಡನ್ನಾಳುತ್ತಿದ್ದ ಎಂಬ ಪ್ರಸ್ತಾಪ ವಿರುವುದೇಕೆ? ಎಂಬುದನ್ನು ವಿವೇಚಿಸಬೇಕು.

ಕುಯ್ಯಂಗೇರಿ ನಾಡಿನ ಪಾಲೂರು ಶಾಸನದಲ್ಲಿ 'ಪುರುಷೋತ್ತಮ ಪರ್ಷದವಿದ್ಯಾಮೃತ್ಯ ಭಟ್ಟಾರಕ ಶಿಷ್ಯ ಬೋಧರೂಪ ಭಗವರ್' ಎಂಬ ದೊರೆಯ ಹೆಸರಿದ್ದು,[೨೧] ಇವನು ಹಾಸ ಜಿಲ್ಲೆ ಮಹಾರಾಜ ವರ್ಗದ 'ಬೋಧರೂಪ', ಎಂಬ ಅಭಿಪ್ರಾಯವಿದೆ. ಬೋಧರೂಪನ ಅಧೀನರಾಜನಾಗಿ ಭಾಗಮಂಡಲದ ಮೇಲ್ಪುಂಡಿ ಕುನ್ನಿ ಅರಸನಿದ್ದ ಎಂದು ಭಾಗಮಂಡಲ ಶಾಸನೋಕ್ತ ಮೇಲ್ಪುಂಡಿ ಕುನ್ನಿ ಅರಸನ[೨೨] ಕುರಿತು ಹೇಳಲಾಗಿದೆ. ಕ್ರಿ.ಶ. ೧೩೩೧ರ ವಿಜಯನಗರ ಬುಕ್ಕನ ಕಾಲದಲ್ಲಿ ಬೋದರೂಪ ಎಂಬುವನು ದುರ್ಗದಲ್ಲಿ ಆಳುತ್ತಿದ್ದ ಎಂದು ಮೂಡುಗೆರೆ ೮೭ ಶಾಸನವನ್ನೂ ಉದ್ಧೃತ ಮಾಡಲಾಗಿದೆ.[೨೩] ಆದರೆ ಕನ್ನಡನಾಡಿನವ ನಲ್ಲನೆಂಬುದಕ್ಕೆ ಶಾಸನದಲ್ಲಿ ಕನ್ನಡಪರ ನಿಲುವಿಲ್ಲದಿರುವುದು ಭಾಷೆಯ ದೃಷ್ಟಿಯಿಂದ ಗೋಚರಕ್ಕೆ ಬರುತ್ತದೆ. ಹಾಗು ಹೆಸರಿನ ರೂಪವೂ ಹಾಗೆಯೇ ಇದೆ. ಶಾಸನದ ಕಾಲ ಕ್ರಿ.ಶ. ೧೧ನೇ ಶತಮಾನ ಎಂದಿರುವುದು, 'ಕಳಂಜು' ಶಬ್ದ ನಾಣ್ಯದ ಬಳಕೆ ಆನಂತರವಿಲ್ಲ ಎಂಬ ಆಧಾರದ ಮೇಲೆ ದಿ|| ಕೆ.ಕೆ. ಸುಬ್ಬಯ್ಯ ಅವರು ಹೇಳಿರುವುದಿದೆ. ವಿಜಯನಗರದ ರಾಮರಾಯನ ತಂಜಾವೂರು ಆಕ್ರಮಣದ ಸಂದರ್ಭದಲ್ಲಿ ಬಂದ ಚಿನ್ನದ ಕಳಂಜುಗಳ ಉಡುಗೊರೆಯ ಐತಿಹಾಸಿಕ ಪುರಾವೆಯನ್ನು ಗಮನಿಸಿದರೆ, ಆ ವಾದ ಬಿದ್ದುಹೋಗುತ್ತದೆ. ರೈಸರು ಹೇಳುರುವಂತೆ, ಶಾಸನದ ಕಾಲ ಕ್ರಿ.ಶ. ೧೩೭೧ ಎಂದೇ ವಿದಿತವಾಗುತ್ತದೆ. ಅಲ್ಲದೆ ೧ನೇ ಬುಕ್ಕನು ತನ್ನ ಮಗ ೨ನೇ ಕಂಪಣ್ಣನ ನೆರವಿನಿಂದ, ದಕ್ಷಿಣದ ವೈರಿಗಳನ್ನು ಅಡಗಿಸಿದ, ಮಲಬಾರಿನ ಮುಸ್ಲಿಂ ದೊರೆಗಳು ಮಧುರೆಯ ಒತ್ತಿಗಿದ್ದ ತೊಂಡೈ ಮಂಡಲದ ಹಿಂದೂ ಜನತೆಗೆ ತುಂಬ ಕ್ಲೇಶ ಉಂಟುಮಾಡಿದ್ದರು. ಕಂಪಣ್ಣನು ಅವರನ್ನು ಶ್ರೀರಂಗದ ಬಳಿಯ ಸಮಯವರಂ ಎಂಬಲ್ಲಿ ಯುದ್ಧಮಾಡಿ ಸೋಲಿಸಿ, ತಮಿಳುನಾಡಿನ ಕಣ್ಣಾನೂರು, ಕೊಪ್ಪಂನ್ನು ಗೆದ್ದ.[೨೪] ಅಂತಾಗಿ ಮಲೆಯಾಳ ದೊರೆಗಳು ಅವನ ಹಿಡಿತಕ್ಕೆ ಬಂದರು. ಇದು ಕ್ರಿ.ಸ. ೧೩೬೦ರ ನಂತರರದ ಘಟನೆ. ಅಂತಾಗಿ 'ಬೋಧರೂಪಭಾಗವರ್' ವಿಜಯನಗರದ ಅಧೀನನಾಗಿದ್ದು, ಹಾಗು ಸ್ಪಷ್ಟವಾಗಿ ಮಲೆಯಾಳಿ ಹೆಸರಾದ ಮೇಲ್ಪುಂಡಿ ಕುನ್ನಿ ಅರಸ, ಕೊಡಗಿನ ತಾವುನಾಡಿನಲ್ಲಿ (ಭಾಗಮಂಡಲ) ಅಮರನಾಯಕನಂತೆ ಆಳುತ್ತಿದ್ದನೆನ್ನಬೇಕು. ಅಂದರೆ ಚಂಗಾಳವರ ಪುನರುತ್ಥಾನ ಕಾಲದಲ್ಲಿ ಕೊಡಗಿನ ಕುಯ್ಯಂಗೇರಿ ನಾಡು, ತಾವು

ನಾಡನ್ನು ವಿಜಯನಗರ ಮಲೆಯಾಳಿ ಮಾಂಡಲಿಕರು ಆಳುತ್ತಿದ್ದರೆನ್ನಬೇಕು. ಆದರೆ ಕೊಡಗಿನ ಬೇರೆಲ್ಲೂ ಅವರ ಶಾಸನವಿಲ್ಲದಿರುವ ಕಾರಣ ಅವರ ಆಳ್ವಿಕೆ ಈ ಭಾಗಕ್ಕೆ ಸೀಮಿತವಾಗಿ ಕೆಲಕಾಲ ನಡೆದು ಮುಕ್ತಾಯವಾದರೂ ಸಾಂಸ್ಕೃತಿಕ ಸಂಪರ್ಕ ಉಳಿದುಕೊಂಡಿತು. ಕ್ರಿ.ಶ. ೧೫೪೪ರ ಅಂಜನಗಿರಿ ಶಾಸನದಲ್ಲಿ (ಮಡಿಕೇರಿ ತಾ. ೧೯) ಇದರ ಸೂಚನೆ ಸಿಗುತ್ತದೆ. ಅಲ್ಲಿನ ಬಸದಿಗೆ (ಕೇರಳದ) ಕಣ್ಣಾನೂರಿನ ಕಾಮಸೆಟ್ಟಿ ಹಾಗು 'ಅಸುಂಡಿ ಅರಸ' ದಾನ ನೀಡಿದ ಸಂಗತಿ ಹೇಳಿದೆ. ಇದು ಭಾಗಮಂಡಲದ ಶಾಸನೋಕ್ತ 'ಮೇಲ್ಪುಂಡಿ ಕುನ್ನಿ ಅರಸ' ಮಲೆಯಾಳದವ ಎಂಬುದಕ್ಕೆ ೧೬ನೇ ಶತಮಾನದ ವ್ಯಕ್ತಿನಾಮ ಸಾಮ್ಯದ ಸಾಕ್ಷಿ ನೀಡುವಂತಿದೆ. ಇನ್ನು ಶಾಸನದ ವಿಷಯವಾಗಿ, ೧೮ ದೇಶದ ಶ್ರೀ ವೈಷ್ಣವರ, ವರ್ತಕರ, ಆಯುಧಪಾಣಿ ಆಳುಗಳ ಬ್ರಾಹ್ಮಣರು ದಾನವನ್ನು ರಕ್ಷಿಸಬೇಕು ಎಂದಿರುವುದು ಅಂದಿನ ವರ್ತಕರ ಹಾಗು ಇತರರ ಹೊಣೆಗಾರಿಕೆಯ ಚಿತ್ರ ನೀಡುತ್ತದೆ. ವರ್ತಕ ಸಂಘದ ಅಸ್ತಿತ್ವವನ್ನು ಘೋಷಿಸುತ್ತದೆ. ಅಲ್ಲದೆ ದೇಗುಲಾಚರಣೆಯ ನಿರ್ವಹಣಾಧಿಕಾರಿಯಾಗಿ ಅಮಜ್ಜಾನ್ ಎಂಬ ಅಧಿಕಾರಿ ಇದ್ದ ಬಗ್ಗೆ ಹೇಳಿದೆ; ದೇಗುಲಕ್ಕೆ ನಿಗದಿತ ಮೊಬಗಲನ್ನು ಖರ್ಚು ವೆಚ್ಚಗಳಿಗೆ ಕೊಡದಿದ್ದರೆ ಒದಗುವ ಕ್ರೂರ ಪಾಪಗಳ ಬಗ್ಗೆ ಶಾಪಾಶಯದಲ್ಲಿ ಹೇಳಲಾಗಿದೆ. ಅಂದರೆ ತಾಯಿಗೆ ಗಂಡನಾಗುವ, ಹುಟ್ಟುನಾಡಿನ ರಾಜನ ಕೊಲೆಗೈದ ಇನ್ನೊಬ್ಬನ ಮೂಗು ಕತ್ತರಿಸಿ ಹಿಂಸೆಗೈದ, ಸಗೋತ್ರ ವಿವಾಹದ ಪಾಪ ಇತ್ಯಾದಿಗಳೊದಗುತ್ತವೆ ಎಂದೆಲ್ಲ ವೈದಿಕ ಪರಂಪರೆಯ ಶಾಪಶಯಗಳನ್ನು ಹೇಳಲಾಗಿದೆ. ಹೀಗೆಯೆ ಭಾಗಮಂಡಲ ಭಗಂಡೇಶ್ವರ ಶಾಸನದ ರೀತ್ಯ ದೇಗುಲದ ನಿತ್ಯ ಖರ್ಚಿಗೆ ಜನತೆ ಕೊಡಬೇಕಾದ, ರಾಜನೂ (ಕುನ್ನಿ ಅರಸ) ಕೊಡಬೇಕಾದ ಕಳಂಜುಗಳು, ಅದು ತಪ್ಪಿದರೆ ಕೊಡಬೇಕಾಗಿದ್ದ ಅಕ್ಕಿಯ ಮೊತ್ತ (೨೬ ನಾಳಿ = ೬೧/೨ ಸೇರು) ನಿತ್ಯ ಪೂಜೆಗೆ ಹಾಗು ವೃಶ್ಚಿಕಮಾಸ ಪೂಜೆಗೆ ಹೂವು, ಹಾರ ಹಾಗು ದೀಪಗಳು, ಅಮಾರಿ (ಐರಿರ) ಎಂಬ ಬಡಗಿ ಜಾತಿಯ ಜನರ ಅಸ್ತಿತ್ವ ಬಗ್ಗೆ ಹೇಳಿದೆ. ಬಳಕೆಗಿದ್ದ 'ಕಳಂಜು' ಚಿನ್ನದ ನಾಣ್ಯದ ಪ್ರಸ್ತಾಪ ಮಾಡಿದೆ. [೧೮] ದೇಶದ ಆಯುಧ ಪಾಣಿ ಸಾವಿರಾರು ದೇಗುಲ ರಕ್ಷಿಸಬೇಕು ಎಂದು ಶಾಸನೋಕ್ತವಾಗಿರುವಲ್ಲಿ ಆ ಕಾಲದಲ್ಲಿ ದೇಗುಲಗಳ ಮೇಲಿನ ಆಕ್ರಮಣಗಳ ಸೂಚನೆ ನೀಡುತ್ತದೆ. ಧಾರ್ಮಿಕ ಸಂಘರ್ಷ ವಾಗದಿರಲು, ಎಚ್ಚರವಾಗಿರಬೇಕು ಎಂಬ ವಿವೇಚನೆ ಇಲ್ಲಿದೆ.

ಶಾಸನೋಕ್ತ ದೇವರು ಪಾಲೂರು ಮಹಾದೇವ (ಪಾಲೂರಪ್ಪ), ಕೇರಳದಿಂದ ಕೊಡಗಿಗೆ ಬಂದ ಇಗ್ಗುತಪ್ಪ ದೇವರ ಸೋದರರಲ್ಲಿ ಒಬ್ಬ. ಇವರೆಲ್ಲ ಶಿವಗಣದ ದೈವಗಳು. ಆದರೆ ಇವರಲ್ಲೊಬ್ಬನಾದ 'ತಿರುನೆಲ್ಲಿ ಪೆಮ್ಮಯ್ಯ', ತಿರುನೆಲ್ಲಿಯಲ್ಲಿ ವಿಷ್ಣುವೆಂದು ಪೂಜಿಸಲ್ಪಡುತ್ತಾನೆ. ಹರಿಹರ ಭೇದವಿಲ್ಲದೆ ಪೂಜಿಸುವ ಸಾಂಸ್ಕೃತಿಕ ಚರ್ಯೆ ಇದು. ಹೀಗೆಯೆ 'ಶಿವ'ನಾದ ಮಹಾದೇವನಿಗೆ ವೈಷ್ಣವ ಸಂಪ್ರದಾಯದ ಪುರುಷೋತ್ತಮ ಪರ್ಷದ ಅವಿದ್ಯಾಮೃತ್ಯಭಟ್ಟಾರಕನ ಶಿಷ್ಯ ದಾನ ನೀಡಿರುವುದು ಶಿವಪಾರಮ್ಯದ ನಡುವೆಯೂ ಹರಿಹಾರಭೇದದ ಕೊಡಗಿನ ಪರಂಪರೆ ಎನಿಸುತ್ತದೆ. ಪೂರ್ವ ನಿದರ್ಶನವಾಗಿ ಚಂಗಾಳ್ವರ

ಪೈಕಿ ವೀರಶೈವ ದೊರೆ ಕೊಡಗು ಶ್ರೀರಂಗಪಟ್ಟಣದ ಬೊಪ್ಪದೇವ 'ಶ್ರೀರಂಗ'ನ ಪರಮಭಕ್ತನಾಗಿದ್ದುದು ಕ್ರಿ.ಶ. ೧೨೫೨ರ ಅರಕಲುಗೂಡು ಶಾಸನದಿಂದ ಸೂಚಿತವಾಗುತ್ತದೆ.[೨೫] "ಸಿಂಹಾಷರ್ಷೆಯಭಿನವ ಪಾಶುಪತ" ಸಂಪ್ರದಾಯವು[೨೬] ಶೈವ ಸಂಪ್ರದಾಯದಿದ್ದಂತೆ, 'ಪುರುಷೋತ್ತಮ ಪರ್ಷ' ಎಂಬುದೊಂದು ವೈಷ್ಣವ ಸಂಪ್ರದಾಯದಲ್ಲಿತ್ತು. ಅದು ಕೊಡಗಿನ ಭಾಗದಲ್ಲಿ ಪ್ರಭಾವಿತವಾಗಿತ್ತು ಎಂಬ ಸೂಚನೆಯೂ ಶಾಸನದಿಂದ ಒದಗುತ್ತದೆ. ಕೊಡಗಿನ ವಿಶೇಷವಾದ ಪರಿಸರಪ್ರಜ್ಞೆಯ ದೇವರಕಾಡಿನ ಆಸ್ತಿತ್ವನ್ನು ಪೂವಿಸ್ಥಾನ ಬೆಳಸುವ ಮೂಲಕ ಈ ಶಾಸನ ನಿದರ್ಶಿಸುತ್ತದೆ. ಇಂದಿಗೂ ಪಾಲೂರು ಮಹಾದೇವರ ಕಾಡು ನಿರ್ವಹಣೆಗೊಂಡಿದೆ. ಒತ್ತುವರಿಯನ್ನು ಅಲ್ಲಿ ನಿಷೇಧಿಸಲಾಗಿದೆ.

ಸೋಮವಾರ ಪೇಟೆ ತಾಲೂಕಿನ ಕಾಜೂರಿನ ೧೪ನೇ ಶತಮಾನದ ಶಾಸನದಲ್ಲಿ[೨೭] ಶ್ರೀಮತು ಬಿಳುಗೌಡ ಹಾಗು ಅಣಬಗೌಡರು ಸೇರಿ ರಾಜೂರು ಗ್ರಾಮವನ್ನು ಬೈರ, ಕನಿಗುಯಿಗಾಮ ನಾಗಜ್ಯಯ, ಕೆಂಪಣ ಎಂಬ ನಾಲ್ವರಿಗೆ ದಾನಕೊಟ್ಟ ವಿಷಯ ಹೇಳಿದ್ದರೂ, ಏ.ಕೆ. ಕೊಟ್ಟರು ಎಂಬುದರ ಕಾರಣ ನೀಡಲ್ಲ. ಬಹುಶಃ ಈ ನಾಲ್ವರು ಸಲ್ಲಿಸಿದ ಸೈನಿಕ ಸೇವೆಗೆ, ಸಣ್ಣನಾಯಕರಿಬ್ಬರು (ವಿಯನಗರದ) ಅನುಮತಿ ಪಡೆದು ದಾನ ನೀಡಿದಂತಿದೆ. ಬಹುಶಃ ಸೈನಿಕಸೇವೆಗೆ ಹಾಲೇರಿ ಅರಸರ ಕಾಲದಲ್ಲಿ ಕೊಡುತ್ತಿದ್ದ ಜಮ್ಮ ಭೂಮಿಯಂತೆ ವಂಶ ಪಾರಂಪರ್ಯ ಅನುಭೋಗಿಕೆಗೆ ಜಮ್ಮ ಗ್ರಾಮವಾಗಿ ಕಾಜೂರನ್ನು ನೀಡಿರಬಹುದು. ಹಾಗಿದ್ದರೆ ಒಂದೇ ಗ್ರಾಮವನ್ನು ನಾಲ್ವರ ಹೆಸರಿಗೆ ಕೊಟ್ಟಿರುವಲ್ಲಿ ಈ ನಾಲ್ವರು ಸೋದರರಾಗಿದ್ದು ಸೈನಿಕ ಕುಟುಂಬುದವರಾಗಿದ್ದಿರಬೇಕೆನಿಸುತ್ತದೆ. ಸೇನೆಗೆ ಸೈನಿಕರನ್ನು ಒದಗಿಸಿದ ಮೂರನೇ ವರ್ಗದ ಸಣ್ಣ ಅಮರನಾಯಕರೋ, ಪಾಳೆಯಗಾರರೋ ಆಗಿ ವಿಜಯನಗರದ ಕಾಲದ ಸ್ವಯ ಮಾಡಳಿತಘಟಿವಾಗಿ ಸ್ಥಳೀಯ ಸರ್ಕಾರದ ಕರ್ತವ್ಯ ನಿರ್ವಹಿಸುವಂಥವರಾಗಿ ಬಿಳುಗೌಡ, ಅಣಬಗೌಡ ಇದ್ದಿರಬೇಕು. ಕ್ರಿ.ಶ. ೧೩೮೦ರ ಕಲಕಂದೂರು ಜೈನಬಸದಿಯ ಬ್ರಹ್ಮದೇವರ ಪೀಠಶಾಸನದಲ್ಲಿ[೨೮] ಜೈನಗುರುವಾದ ಮಾಣಿಕದೇವರು, ಬ್ರಹ್ಮದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದ ವಿಷಯವಿದೆ. ಇದು ಇಮ್ಮಡಿ ಹರಿಹರನ ಕಾಲ. ಇದು ಖಾಸಗಿ ಭಕ್ತರಿಂದ ಆದ ಸೇವೆಯಾದರೂ ವಿಜಯನಗರ ಕಾಲದ ಧರ್ಮಸಮನ್ವಯ, ಜಿನಧರ್ಮಕ್ಕೆ ಕೊಡಗಿನಲ್ಲಿದ್ದ ಪ್ರೋತ್ಸಾಹದ ಚಿತ್ರವೂ ದೊರಕುತ್ತದೆ. ಕಲಕಂದೂರಿನಲ್ಲಿ ಜೈನ ಬಸದಿ ಇಂದಿಗೂ ಜೀವಂತವಿದೆ. ಅದು ಪಾರ್ಶ್ವನಾಥ ಬಸದಿ ಕ್ರಿ.ಶ. ೧೩೯೦ರ ಮುಳ್ಳೂರು ಚಂದ್ರನಾಥ ಬಸದಿಯ ಶಾಸನದಲ್ಲಿ[೨೯] ಇಮ್ಮಡಿ ಹರಿಹರನ ದಂಡನಾಯಕ, ಗುಂಡಪ್ಪ ದಂಡನಾಥನು ಆ ಹರಿಹರನ ಅರಮನೆ ಒಳವ್ಯವಹಾರದ (ಅರಮನೆ ವಾರ್ತೆ) ಸಚಿವನಾಗಿದ್ದ. ಈ ಹರಿಹರನ ಅತ್ಯಂತ ಪ್ರಸಿದ್ಧ ಸೇನಾನಾಯಕನಾಗಿ ಮುಸ್ಲಿಮ್ ಧಾಳಿಗೀಡಾಗಿದ್ದ ಬೇಲೂರು ಚನ್ನಕೇಶವ ದೇವಾಲಯವನ್ನು ದುರಸ್ತಿಗೊಳಿಸಿದ. ಮುಸ್ಲಿಮರ ಮೇಲೆ ಪ್ರಸಿದ್ಧ ವಿಜಯಗಳನ್ನು ಸಾಧಿಸಿದ. ಬೇಲೂರು ಪ್ರಾಂತ್ಯದ ಆಡಳಿತ ನಿರ್ವಹಿಸುತ್ತಿದ್ದ.[೩೦] ಜೊತೆಗೆ ಕೊಡಗು ಪ್ರದೇಶವನ್ನೂ ಆಳುತ್ತಿದ್ದ ಎಂಬ ವಿಷಯ ಸದ್ಯದ

ಶಾಸನದಿಂದ ವಿದಿತವಾಗುತ್ತದೆ. ಅಷ್ಟೇ ಅಲ್ಲ ೧ನೇ ವರ್ಗದ ಅಮರನಾಯಕನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದದು ಶಾಸನದಲ್ಲಿ ಅವನ ಚರ್ಯೆಯ ವಿಷಯಗಳಿಂದ ತಿಳಿಯುತ್ತದೆ. ಈ ಗುಂಡಪ್ಪ ದಣ್ಣನಾಯಕ ಮೂಲಕ ಇಮ್ಮಡಿ ಹರಿಹರನು (ವೀರ ಹರಿಹರೋರ್ವ್ವೀಶ್) 'ಪಲವರಂ ಕಾದಿ ರಾಯ ಮರೆವೊಕ್ಕವರ ಕಾವ್ ಶರಣಾಗತ ವಜ್ರಪಂಜರ ಶಂಖ ಚಕ್ರ ಗಜದಾರ ಭೃತ್ಯ ಗೊಂಕಾರಡ್ಡಿನಾಯ್ಕಗೆ,' ಮುಳ್ಳುನಾಡಂ (ಮುಳ್ಳೂರು-೭೦) ಅನ್ನು ಕೊಟ್ಟ ವಿಷಯವಿದೆ. ಅಂದರೆ ಅಮರನಾಯಕವಂತಿಕೆಯನ್ನು ಅವನು ತೋರಿದ ಕಾರ್ಯ, ಸಾಹಸ, ಭಕ್ತಿ, ಗುಣದ ಕಾರಣ ವಿಜಯನಗರದಸರನ್ನೂ ಮರೆಹೊಕ್ಕವರಿಗೆ ರಕ್ಷಣೆಕೊಡುವಂಥ, ವೈಷ್ಣವ ಭಕ್ತನಾದ ಅವನಿಗೆ ನೀಡಿದ ಸೂಚನೆ ಇಲ್ಲಿದೆ. ಕೊಡಗಿನ ಉತ್ತರಭಾಗದಲ್ಲಿ ರೆಡ್ಡಿನಾಯಕ ಜನಾಂಗದ ಅಸ್ತಿತ್ವವನ್ನು ಸೂಚಿಸುವ ಶಾಸನವಿದಾಗಿದೆ. ಇಲ್ಲಿನ ಮುಖ್ಯವಿಷಯವಾಗಿ ೧೧ನೇ ಶತಮಾನದ ಇಮ್ಮಡಿ ರಾಜಾಧಿರಾಜ ಕೊಂಗಾಳ್ವನ್ನು ಬಹುಶಃ ಅವನ ರಾಣಿ ರುಕ್ಮಿಣಿದೇವಿ ಸಹಿತನಾಗಿ ತನ್ನ ತಾಯಿ ಪೋಜಬ್ಬರಸಿಗೆ ಪುಣ್ಯಾರ್ತ್ಥವಾಗಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದ್ದುದನ್ನು ಹರಿಹರನು ಅದರ ಜೀರ್ಣೋದ್ಧಾರ ಸಮಯದಲ್ಲಿ ದಾನದಿತ್ತಿಗಳನ್ನು ಪುನರ್ನವೀಕರಿಸಿ ಕಾರಗೋಡು ಎಂಬ ಗ್ರಾಮಕ್ಕೆ ಅಣಾಂಗಪುರವೆಂಬ ಹೆಸರಿಟ್ಟು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಹಿಂದೆ ದಾನ ಬಿಟ್ಟಿದ್ದ ಅಣಿಲವಾಡಿನ ನುಲಬಿಹಳ್ಳಿ ಪ್ರದೇಶವನ್ನೆಲ್ಲ ದಾಖಲಿಸಲಾಗಿದೆ. ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನಿಡಿತ, ಮೈಣಸ ದಾಮಿವನ್ನು (ಹುಣಿಸೆಮರದ ಕಾಡು) ಬಿಟ್ಟ ಬಗ್ಗೆ ಹೇಳಿದೆ. ಕುಮಾರನಹಳ್ಳಿಗೆ ಭೀಮಾಪುರವೆಂದು ಪ್ರನಾಮ ಸಂಪಗೆಗದ್ದೆ, ಬೋಳಗದ್ದೆ ಇತ್ಯಾದಿ ವಿವಿಧ ಬಗೆಯ ಗದ್ದೆಗಳ ಕುರಿತು ಹೇಳಿವೆ. ಕೃಷಿ ವೈವಿಧ್ಯವನ್ನು ತಿಳಿಸುತ್ತದೆ. ಗದ್ದೆಯ ಬೆಳೆವ ಖಂಡುಗ ಮಾನವನ್ನು ತಿಳಿಸಿವೆ. ಸಂಗಮವಂಶದ ವಂಶದರಸ ಜೈನಧರ್ಮಕ್ಕೆ ತೋರಿದ ಧಾರ್ಮಿಕ ಹಾಗು ಸಾಂಸ್ಕೃತಿಯ ಸಮನ್ವಯವನ್ನು ಇಲ್ಲಿ ಬಿಂಬಿಸಲಾಗಿದೆ. ಅಲ್ಲದೆ ಗೊಂಕಾರೆಡ್ಡಿಯ ಆಶಯದಂತೆ ಬಸದಿ ಜೀರ್ಣೋದ್ಧಾರ ನಡೆಯಿತು ಎನ್ನುವುದಾದರೆ ಅವನು ಜಿನಧರ್ಮಿ ಇದ್ದಿರಬಹುದು ಹಾಗು ಮುಳ್ಳೂರು ಜೈನಕೇಂದ್ರವಾಗಿ ಮುಂದುವರಿಯಲು ಅವನೂ ನೆರವಾದಂತಿದೆ. ಆದರೆ ಗುಂಡಪ್ಪ ದಂಡಪ್ಪನಾಯಕನ ಆಳ್ವಿಕೆ ಉತ್ತರಕೊಡಗಿಗೆ ಮಾತ್ರ ಸೀಮಿತವಾಗಿತ್ತೆ? ವಿಜಯನಗರ ಅಧೀನಕ್ಕೆ ದಕ್ಷಿಣ ಕೊಡಗು ಇರಲಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಇಲ್ಲಿಯೆ ಚಂಗಾಳ್ವರ ಪಾತ್ರ ಕಾಣಬರುವುದು. ಅದಕ್ಕೆ ಹಿನ್ನೆಲೆ ಗುರುತಿಸಬೇಕು.

ಸತ್ಯಮಂಗಲ ತಾ. ದಣ್ಣಾಯಕನ ಕೋಟೆ ಪಾಳೇಗಾರರು ಹೊಯ್ಸಳ ಪ್ರಧಾನಿಗಳಾಗಿದ್ದು (ಪೆರುಮಾಳೆ ದಂಡನಾಯಕನ ವಂಶಿಕರೇ ಬೆಟ್ಟದಕೋಟೆ ನವ ದಂಣಾಯಕರು ಎಂದು ರೈಸರ ಊಹೆ೩೧) ಮಲ್ಲಿಕಾಫುರನ ದಂಡಯಾತ್ರೆಯ ನಂತರ ಮುಂದಿನ ಕಾಲದಲ್ಲಿ ದಂಡಯಾತ್ರೆಯ ಹೊರಟು ಕೊಡಗಿನ ದಕ್ಷಿಣಗಡಿ (ನಾಗರಹೊಳೆಯ ನೆರೆಗಿರುವ) ದೇವಾಸಿ ಬೆಟ್ಟದಿಂದ ಉತ್ತರ ಗೋವಾದವರೆಗೆ ಸತ್ಯಮಂಗಲದಿಂದ ಪಶ್ಚಿಮದಲ್ಲಿ ಕೊಡಗಿನ

ವಾಯುತ್ಯ ತುದಿ ಬಿಸಿಲೆಘಟ್ಟದ ವರೆಗೆ ಆಕ್ರಮಿಸಿದ ಸಂಗತಿ ಇದೆ.[೩೨] ಅಲ್ಲದೆ ಸತ್ಯಮಂಗಲ ತಾಲೂಕು ಈ ದಂಣಾಯಕನ ಕೋಟೆ ಪಾಳೇಗಾರರು ವಿಜಯನಗರದ ಅರಸರ ಅಧೀನರಾಗಿ ಕ್ರಿ.ಸ. ೧೩೩೬ರ ನಂತರವೂ ಇದ್ದರು.[೩೩] ಈ ಎರಡೂ ಅಂಶಗಳ ಹಿನ್ನೆಲೆಯಲ್ಲಿ ಕೊಡಗಿನ ಭಾಗಗಳು ಕೆಲಕಾಲ ನವದಂಣಾಯಕರ ಕಾಲದಲ್ಲಿ ಅವರ ಮೂಲಕ ವಿಜಯನಗರದ ಅಧೀನಕ್ಕಿತ್ತು ಎಂದಾಗುತ್ತದೆ. ಹಾಗಾದರೆ ಕೊಡಗಿನ ಪೂರ್ವಭಾಗ ಯಾರ ಮೂಲಕ ವಿಜಯನಗರದ ಅಧೀನಕ್ಕಿತ್ತು ಎಂದರೆ ಚಂಗಾಳ್ವರ ಮೂಲಕ ಅದು ಇದ್ದಿರಬೇಕು. ಮಧ್ಯಂತರ ಚೆಂಗಾಳ್ವರಂತು ಕ್ರಿ.ಶ. ೧೩೮೩ರ ವೇಳೆಗೆ ಗರಿಗಟ್ಟಿಕೊಂಡು ವಿಜಯನಗರದರಸರ ಮಾನ್ಯತೆ ಪಡೆದ ಕಾರ. 'ಚಂಗಾಳ್ವ' ಹಾಗು 'ನಾಗರಾಜ'ರು ಉದಿಸಿ ಕೊಡಗಿನ ಪೂರ್ವಭಾಗವಾದ ಕೊಡಗು ಶ್ರೀರಂಗಪಟ್ಟಣದಲ್ಲಿ ನಿಂತು ಆಳತೊಡಗಿರಬೇಕು.

ನವದಂಣಾಯಕರು ತಮ್ಮನ್ನು 'ಸ್ವಶಿ (ಸ್ತಿ!) ಪುರಾಧೀಶ್ವರ' ಎಂದು ಕರೆದುಕೊಂಡಿದ್ದಾರೆ. ಇದು ಬಹುಶಃ ಇದು 'ಶಶಿಪುರಾಧೀಶ್ವರರು', ಎಂದಿರಬೇಕು. ಕಾರಣ ಚಂಗಾಳ್ವರ ಮೊದಲ ಕೊಡಗಿನ ರಾಜಧಾನಿ ಪಾಲ್ಪರೆ (ಪಾಲುಪುರ) ಕುರಿತು ಚಂಗಾಳ್ವ ಸಚಿವವಂಶದ ಕ್ರಿ.ಶ. ೧೪೫೮ರ ಮಂಗರಸನು ತನ್ನ ನಿಘಂಟುವಿನಲ್ಲಿ, 'ಶಶಿಪುರಾಧಿಪತಿ ಸೋಮೇಶ್ವರ'ನನ್ನು (ಪಾಲುಪುರ + ಶಶಿಪುರ) ಅಂದರೆ ಪಾಲ್ವರೆಯಲ್ಲಿರುವ ಸೋಮೇಶ್ವರನನ್ನು ಅಧಿದೇವತೆಯಾಗಿ ಸ್ತುತಿಸಿರುವಂತಿದೆ. ಹೀಗಾಗಿ ನವದಂಣಾಯಕರು ಗೆದ್ದ ಕೊಡಗಿನ ಭಾಗವಾಗಿ ಪಾಲ್ವರೆಯೂ ಸೇರಿದ್ದು ತಮ್ಮನ್ನು 'ಶಶಿಪುರಾಧೀಶ್ವರರೆಂದು ಕರೆದುಕೊಂಡಿರುವ ಸಾಧ್ಯತೆ ಇದೆ. ದಕ್ಷಿಣಕೊಡಗಿನ ನಾಗರಹೊಳೆಯ ಮೂಲನಿವಾಸಿಗಳಾದ ಜೇನುಕುರುಬರು ಹೇಳುವ ಪಾರಂಪರಿಕ ಕತೆಯ ರೀತ್ಯಾ ಕುಂತೂರನ್ನು (ನಾಗರಹೊಳೆ) ಆಳುತ್ತಿದ್ದ ಬಹು ಜನಪ್ರಿಯ ದೊರೆ ನಾಗರಾಜನ ಮೇಲೆ ನಾಯಕರು ದಂಡೆತ್ತಿ ಬಂದು ಭಾರಿ ಯುದ್ಧ ಮಾಡಿದರು. ಬಹಳ ಹೋರಾಡಿದ ನಾಗರಾಜ ಕೊನೆಗೆ ವೀರ ಮರಣವನ್ನಪ್ಪಿದ. ಅವನ ನೆನಪಿಗಾಗಿ 'ನಾಗನಹೊಲೆ (= ನಾಗರಹೊಳೆ) ಎಂದು ಹೆಸರಾಯಿತು ಎನ್ನುತ್ತಾರೆ. ಆ ರಾಜನ ವಿಗ್ರಹವನ್ನಿಟ್ಟು (ರಾಜ ದರ್ಭಾರಿನ) ನಾಗರಹೊಳೆಯ ಅಮ್ಮಾಳೆ ಗುಡಿಯಲ್ಲಿ ನಾಗರಹೊಳೆಯಲ್ಲಿ ಇಂದಿಗೂ ಪೂಜೆ ಮಾಡುತ್ತಿದ್ದೇವೆ ಎನ್ನುತ್ತಾರೆ. ಈ ಕತೆಗೂ ನವದಂಣ್ಣಾಯಕರ ದಂಡಯಾತ್ರೆಗೂ ನಂಟು ಕಾಣುತ್ತದೆ.[೩೪] ಯುದ್ಧವು ಕ್ರಿ.ಶ. ಸು. ೧೪೫೦ - ೧೪೮೫ ಅವಧಿಯಲ್ಲಿ (ಅಥವಾ ೧೪೦೦ - ೧೪೨೦ರ ಅವಧಿ) ನಡೆದಿರುವಂತಿದೆ. ಆದರೆ ಇಲ್ಲಿ ಒಂದು ತಾರ್ಕಿಕ ಊಹೆಗೆ ಅವಕಾಶವಾಗುತ್ತದೆ. ಚಂಗಾಳ್ವರು ವಿಜಯನಗರಕ್ಕೆ ಅಧೀನವಾದರೂ ಸ್ವತಂತ್ರವಾಗುವ ಪ್ರಯತ್ನವನ್ನು ಮಾಡುತ್ತಿದ್ದರೆಂದು ತೋರುತ್ತದೆ. ಅವರ ವಂಶಿಕರಲ್ಲಿ ಹೊಯ್ಸಳರ ಕಾಲದಲ್ಲಿಯೂ ಇಂಥದೇ ಪ್ರಯತ್ನಗಳನ್ನು ಮಾಡಿದುದು ಕಾಣಬರುತ್ತವೆ. ಬಹುಶಃ ನವದಂಣಾಯಕರು ವಿಜಯನಗರದರಸರ ಅಧೀನಕ್ಕೆ ಬಂದು ಸಾಕಷ್ಟು ಕಾಲವಾದಮೇಲೆ, ಇಮ್ಮಡಿ ಹರಿಹರನ ಕಾಲದಲ್ಲಿ ಚಂಗಾಳ್ವರ ಸ್ವತಂತ್ರರಾಗುವ ಪ್ರಯತ್ನವನ್ನೂ ನವದಂಣಾಯಕರ ಮೂಲಕ ಭಂಗಗೊಳಿಸಿ ಪೂರ್ಣವಾಗಿ ಚಂಗಾಳ್ವರನ್ನು

ಹಿಡಿತಕ್ಕೆ ತೆಗೆದುಕೊಂಡಂತಿದೆ. ಆದರೆ ಚಂಗಾಳ್ವರನ್ನು ಅಧೀನ ಮಾಂಡಲೇಶ್ವರರಾಗಿ ಕೊಡಗು ಶ್ರೀರಂಗಪಟ್ಟಣದಲ್ಲಿಯೆ ಇರಿಸಿದಂತಿದೆ. ನಾಗರಾಜನ ನಂತರ, ರಂಗ (ರಂಗರಾಜ) ಕೊಡಗು ಶ್ರೀರಂಗಪಟ್ಟಣದ ಉತ್ತರಕ್ಕೆ 'ರಂಗಸಮುದ್ರ'ವೆಂಬ ಪಟ್ಟಣ ಕಟ್ಟಿ ವಿಜಯನಗರದ ಅಧೀನರಾಗಿ ಆಳ್ವಿಕೆ ನಡೆಸಿದ. ಇಂದಿಗೂ ಕೊಡಗು ಶ್ರೀರಂಗಪಟ್ಟಣ ಮಾಲ್ದಾರೆ ಗ್ರಾಮದ ಉಪಗ್ರಾಮವಾಗಿ ಕುಸಿದರೂ 'ರಂಗಸಮುದ್ರ'ವೆಂಬ ಗ್ರಾಮ ನಂಜರಾಯ ಪಟ್ಟಣದ ಬದಿಗಿದೆ.

ಈ ಮೇಲಿನ ಸಂದರ್ಭದಲ್ಲಿ ನವದಂಣಾಯಕರ ದಂಡಯಾತ್ರೆ ವಿಜಯನಗರ ಪರವಾಗಿ ಆಗಿದ್ದರೆ ಕೊಡಗಿನ ಉತ್ತರ ಭಾಗ ಬಿಟ್ಟು ಆಗಿದ್ದು ಗೋವಾ, ಬಿಸಿಲೆಘಾಟಿನವರೆಗಿನ ಪಾಳೆಪಟ್ಟಗಳ ವಿರೋಧ ತಣಿಸಿದಂತಿದೆ. ಹೀಗಾಗಿ ಇಮ್ಮಡಿ ಹರಿಹರನ ಕಾಲದಲ್ಲಿ (ಕ್ರಿ.ಶ. ೧೩೭೭ - ೧೪೦೪) ಕೊಡಗಿನ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಭಾಗಗಳೆಲ್ಲವೂ ಅಂತಿಮವಾಗಿ, ಬೇಲೂರು ನಾಯಕರ ಸಹಿತವಾಗಿ ವಿಜಯನಗರ ಸಾಮ್ರಾಜ್ಯದ ಅಧೀನಕ್ಕಿತ್ತೆನ್ನಬೇಕು.

ಇತಿಹಾಸದ ಸಾಮಂಜಸ್ಯದ ದೃಷ್ಟಿಯಿಂದ ಕ್ರಿ.ಶ. ೧೫೦೩ರ ಹಿರೇಮಳಲಿ ಶಾಸನವನ್ನನುಸರಿಸಿ ಹೇಳುವಲ್ಲಿ ತಲೆಮಾರಿಗೆ ೨೫ ವರ್ಷ ಅಥವಾ ೩೦ ವರ್ಷವೆಂದರೆ ಮಧ್ಯಂತರ ಚಂಗಾಳ್ವ ವಂಶದ (೫ ತಲೆಮಾರು ಹಿಂದಕ್ಕೆ) 'ಚಂಗಾಳ್ವ'ನ ಕಾಲ ಕ್ರಿಶ. ೧೩೮೩ ಅಥವಾ ಕ್ರಿ.ಶ. ೧೪೦೩ ಆಗುತ್ತದೆ. ಅವನ ಮುಂದಿನ 'ನಾಗರಾಜ'ನ ಮೇಲಿನ ಯುದ್ಧವು ಅಂದರೆ 'ಚಂಗಾಳ್ವ'ನು ಕೊಡಗು ಶ್ರೀರಂಗಪಟ್ಟಣವನ್ನು ಅಲ್ಪಕಾಲ ಆಳಿದ ಮೇಲೆ ಕೊಡಗು ಶ್ರೀರಂಗಪಟ್ಟಣ ಆಳತೊಡಗಿದ್ದ ನಾಗರಾಜನ ಅಂಕೆಗಿದ್ದ ದೇವಾಸಿ ಬೆಟ್ಟದ ನೆರೆಯ ಕುಂತೂರಿನಲ್ಲಿ (ನಾಗರಹೊಳೆ) ಯುದ್ಧವು ನಡೆದು ಅವನು ವೀರಸ್ವರ್ಗವೇರಿರಬೇಕು. ಇದು ವಿಜಯನಗರ ಕಾಲವೇ ಅಗಿತ್ತು. ಕೊಡಗಿನಲ್ಲಿ ೧೪ನೇ ಶತಮಾನದ ವಿಜಯನಗರಕಾಲದಲ್ಲಿ ಚಂಗಾಳ್ವರು ಇರಲಿಲ್ಲ ಎಂಬ ಅಭಿಪ್ರಾಯ ಹೀಗಾಗಿ ನಿಲ್ಲುವುದಿಲ್ಲ.

ಸಾಹಿತ್ಯಕ ಸಾಕ್ಷ್ಯವಾಗಿ ಗಮನಿಸಿದರೆ ಕ್ರಿ.ಶ. ೧೫೯೮ರ ೨ನೇ ಮಂಗರಾಜನ ನಿಘಂಟು ಸೋಮೇಶ್ವರ ವರಪ್ರಸಾದದಿಂದ ರಚಿತವೆಂದಿದ್ದು ಅದರಲ್ಲಿ 'ಶಶಿಪುರಾಧಿಪತಿ ಸೋಮೇಶ್ವರ'ನನ್ನು ಸ್ತುತಿಲಾಗಿದೆ; ಜಾತಿ ವರ್ಗದ ಪದ್ಯ ೪ರಲ್ಲಿ '... ಕೊಡವ ಕೊಡಗರು ಮೃಗಲುಬ್ದರುಂ ವ್ಯಾಧನಕ್ಕುಂ', ಎಂದೂ ಹೇಳಿದೆ.[೩೫] ಇಲ್ಲಿ ಎರಡು ವಿಷಯಗಳು ವಿಶ್ಲೇಷಣೆಗೊಳ್ಳುತ್ತವೆ. ಕೊಡಗಿನಲ್ಲಿ ಚಂಗಾಳ್ವರ ರಾಜಧಾನಿಯಾಗಿದ್ದ ಪಾಲ್ವರೆಯಲ್ಲಿ ಸೋಮೇಶ್ವರ ದೇಗುಲವಿತ್ತು. ಈ ಮೊದಲೇ ಹೇಳಿದಂತೆ ಬಹುಶಃ ಕವಿಗೆ ಆ ದೇವರು ಅಧಿದೇವತೆಯಾಗಿದ್ದು ಸ್ತುತಿ ಮಾಡಿರಬಹುದು. ಪಾಲ್ವರೆಯು, ಪಾಲುಪುರ ಅರ್ಥಾಥ್ ಕ್ಷೀರಪುರವೆನಿಸಿ, ಸಂವಾದಿ ಶಬ್ದವಾಗಿ 'ಶಶಿಪರ' ಒದಗುತ್ತದೆ. 'ಸೋಮ' ಎಂಬುದು 'ಶಶಿ' ಶಬ್ದಕ್ಕೆ ಅನ್ವಯವಾಗುವ ಕಾರಣ ಸೋಮೇಶ್ವರನ ಪುರವು 'ಶಶಿಪುರ' ಪಾಲ್ವರವಾಗಿ

ಶಶಿಪುರಾಧೀಶನ ಊರಾಗಿತ್ತು ಎನ್ನಬೇಕು. ನವದಂಣಾಯ್ಕರೂ 'ಸ್ವಶಿ' (=ಶಶಿ) ಪುರಾಧೀಶರೆಂದು ಕೊಡಗಿನ ಈ ಭಾಗವನ್ನು ಗೆದ್ದು ಹೇಳಿಕೊಂಡಿರುವಂತಿದೆ. ಕೊಡಗಿನಲ್ಲಿದ್ದವರು ಕೊಡಗರು ಹಾಗು ಅವರ ಪೈಕಿ ಕೊಡವ ಜನಾಂಗವೂ ಇತ್ತು ಎಂಬುದನ್ನು ನಿಘಂಟು ಸ್ಪಷ್ಟವಾಗಿ ಸೂಚಿಸುತ್ತ ವಿಜಯನಗರ ಕಾಲದ ಕೆಲವಷ್ಟು ಸಾಂಸ್ಕೃತಿಕ ಮುಖವನ್ನು ಕೊಡಗು ಸಂಬಂಧದಲ್ಲಿ ಹೇಳಿದಂತಿದೆ.

ಕ್ರಿ.ಶ. ೧೫೦೦ರ ಸುಮಾರಿನಲ್ಲಿ ೨೫ರ ಯುವಕನಾಗಿದ್ದ ಮೂರನೆಯ ಮಂಗರಸ (ಮಂಗರಾಜ)ನ ಜಯನೃಪ ಕಾವ್ಯ ಸಂಗ್ರಹದಲ್ಲಿ (''ಮಹಾಮಂಡಲೇಶ್ವರ, 'ಚೆಂಗಾಳ್ವ' ಭೂಮಿಪನೆ ಸಚಿವ ವಂಶದಲ್ಲಿ ಹುಟ್ಟಿದ ಮತ್ತು ಮಾಧವ ಸುತನಾದ ಸನ್ನುತ ವಿಜಯೇಂದ್ರನ ಮಂಗರಸ'') ಇವನು ಕೋಟೆ ಕಲ್ಲಹಳ್ಳಿ, ಚಿಲುಕುಂದ ..... ಪಾಲುಪಾರೆ ಈ ಮುಂತಾದ ಸ್ಥಳಗಳಲ್ಲಿ ಹೂಡ್ಯಗಳ (= ಕಾವಲುಕಟ್ಟೆ, ಬತೇರಿ) ಕಟ್ಟಿಸಿದನು, ಕಿಲ್ಲ ಇಟ್ಟಿದ್ದನು,[೩೬] ಎಂದೆಲ್ಲ ಉಕ್ತವಾಗಿದೆ. ತಲೆಮಾರಿನ ಲೆಕ್ಕದಲ್ಲಿ ಮಂಗರಸನ ತಾತ ಹಾಗು ಚೆಂಗಾಳ್ವ ಸಚಿವ ಮಾಧವ ರಾಜೇಂದ್ರನ ಕಾಲ ಕ್ರಿ.ಶ.ಸು. ೧೪೨೫ ಆಗುತ್ತದೆ. ಅಂದರೆ ವಿಜಯನಗರ ಕಾಲದ ೧೩ - ೧೪ನೇ ಶತಮಾನದ ಮಹಾಮಂಡಲೇಶ್ವರ 'ಚಂಗಾಳ್ವ' ಭೂಮಿಯ ಹಾಗು ಅವನ ಜೈನ ಸಚಿವ ವಂಶದ ಅಸ್ತಿತವನ್ನು ಹೇಳಿದಂತಾಗುತ್ತದೆ. ಹಾಗು ಬಹುಶಃ ನವದಂಣಾಯಕರ ಧಾಳಿಯಲ್ಲಿ ಶಿಥಿಲಗೊಂಡ ಪಾಲುಪರೆ ಕೋಟೆಯನ್ನು ದುರಸ್ತಿಗೊಳಿಸಿದ ಸೂಚನೆಯೂ ಸಿಗುವಂತಿದೆ. ಇದಲ್ಲದೆ 'ನಾಗರಾಜ'ನ ನಂತರ ಕೊಡಗು ಶ್ರೀರಂಗಪಟ್ಟಣ ದಾಳ್ವಿಕೆಗೆ ನಿಂತ ರಂಗರಾಜ, 'ಹೊಸರಂಗಪಟ್ಟಣ' (ರಂಗಸಮುದ್ರ)ವನ್ನು ಕಟ್ಟಿಸಿದ.[೩೭] ಅದು ಶಿಥಿಲ ಕೊಡಗು ಶ್ರೀರಂಗಪಟ್ಟಣದ ಪುನ್ರ್ನವೀಕರಣದ ಹೊಸಪಟ್ಟಣದವಾಗಿದ್ದಿರಬೇಕು. ಜೊತೆಗೆ ಅಲ್ಲಿದ್ದ ಕಾವೇರಿನದಿ (ದ್ವೀಪದ ನಡುಗಡ್ಡೆಯ) ಶ್ರೀರಂಗನಾಥನ ಗುಡಿಯ ಕಾರಣವೂ ಸೇರಿದಂತೆ, ತನ್ನ ಹೆಸರಿಗೂ ಅನ್ವಯವಾಗುವಂತೆ ಆ ಪಟ್ಟಣವನ್ನು ಕಟ್ಟಿದಂತಿದೆ. ಕ್ರಿ.ಶ. ೧೨೪೫ - ೫೩ರ ಮೊದಲ ಚಂಗಾಳ್ವರ ಕಾಲದಲ್ಲಿ ಕೊಡಗು ಶ್ರೀರಂಗಪಟ್ಟಣ ಪ್ರಮುಖ ವ್ಯಾಪಾರಕೇಂದ್ರವಾಗಿದ್ದಂತೆ[೩೮] ಮಧ್ಯಂತರ ವ್ಯಾಪಾರಕೇಂದ್ರಗಳು ಹೆಚ್ಚಿದಂತೆ, ಕೊಡಗಿನ ವಿಷಯವೂ ಅದರಿಂದ ಹೊರತಾಗಲಿಲ್ಲ. ಕ್ರಿ.ಶ. ೧೫೦೨ರಲ್ಲಿ ಇದೇ ಕೊಡಗು ಶ್ರೀರಂಗಪಟ್ಟಣ ಪ್ರದೇಶದಲ್ಲಿ ತಲೆ ಎತ್ತಿದ ಚಂಗಾಳ್ವರ ಹೊಸ ರಾಜಧಾನಿ 'ನಂಜರಾಯಪಟ್ಟಣ'ವು ಪ್ರಮುಖ ವ್ಯಾಪಾರಕೇಂದ್ರವಾಗಿದ್ದುದು[೩೯] ಮೇಲಿನ ಮಾತಿಗೆ ಮುಂದುವರಿದ ಸಾಕ್ಷ್ಯವಾಗಿ ಕಾಣುತ್ತದೆ. ಈಗ 'ರಂಗಸಮುದ್ರ' ಮತ್ತು 'ಹೊಸಪಟ್ಟಣ' ಎಂದು ಮೊದಲಿದ್ದ 'ಹೊಸರಂಗಪಟ್ಟಣ'ವು ಎರಡು ಗ್ರಾಮವಾಗಿ ಪ್ರತ್ಯೇಕಗೊಂಡಿದೆ.

೧೫ನೇ ಶತಮಾನದ ದೊಡ್ಡ ಮಳತೆಯ ಶಾಸನದಲ್ಲಿ[೪೦] ಹೊನ್ನಮ್ಮನ ಕೆರೆಯ ತೂಬನ್ನು ಅನ್ನದಾನಿ ಅರಸು ಕಟ್ಟಿಸಿದ ಬಗ್ಗೆ ಹೇಳಿದೆ. ಬಸಲಿಂಗದೇವರ, ನಂನ ಗೌಡರ ಕಾಲದಲ್ಲಿ ವೆಂಕಟ್ಟೈಯ್ಯ ಮಲ್ಲಯ್ಯ ಕಟ್ಟಿಕೊಟ್ಟಿದ್ದನ್ನು ಬೊಮ್ಮರಸ ಶಾಸನ ಬರೆದು ತಿಳಿಸಿದ್ದಾನೆ.

ವಿಜಯನಗರ ಕಾಲದ ಕೆರೆ ನಿರ್ವಹಣೆಯ ಚಿತ್ರವೂ ಇಲ್ಲಿದೆ. ಊರಿನ ನಾಯಕರಾದ ಬಸಲಿಂಗದೇವರು, ನಂನ ಗೌಡರು ಮಾಡಿದ ಪ್ರಯತ್ನ, ಬಹುಶಃ ಮೂರನೆ ವರ್ಗದ ಅಮರನಾಯಕನಾದ ಅನ್ನದಾನಿ ಅರಸನ ಊರಿನ ಕೆರೆಯ ಕುರಿತ ಲಕ್ಷ್ಯವಂತಿಕೆಯ ಸೂಚನೆ ಇದಾಗಿದೆ. ಈ ಹೆಸರಿನ ಸಂದರ್ಭ ನೋಡಿದರೆ ಚಂಗಾಳ್ವರ ಶಾಖೆಯ (ಮನೆತನ)ವನೊಬ್ಬ ದೊಡ್ಡ ಮಳತೆಗೆ ಆಡಳಿತ ಪ್ರತಿನಿಧಿಯಾಗಿದ್ದಿರುವಂತಿಂದೆ. ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜನನ ಭಕ್ತನೂ ಆಗಿದ್ದಂತಿದೆ. ವೀರಶೈವ ಧರ್ಮದ ಪ್ರಭಾವದ ಸೂಚನೆಯೂ ಇವರ ಶಾಸನದಲ್ಲಿ ವ್ಯಕ್ತಿನಾಮಗಳಿಂದ ಸೂಚನೆಗೊಳ್ಳುವಂತಿದೆ. ಬಹುಶಃ ಬಸವಲಿಂಗದೇವರು ಅಲ್ಲಿದ್ದ ವೀರಶೈವಮಠದ ಗುರುವಾಗಿದ್ದು ನಂನಗೌಡರು ಅವರ ಶಿಷ್ಯನಿದ್ದಿರಬಹುದು.

ಕ್ರಿ.ಶ. ೧೪೬೪ರ ಸೋಮವಾರಪೇಟೆ ತಾಲೂಕು ಅಬ್ಬಿಮಠದ ಬಳಿದ ಅಬ್ಬಿ ಜಯಮಲ್ಲಿಕಾರ್ಜನ ಗುಡಿ ಶಾಸನದ ರೀತ್ಯಾ[೪೦] ಯಡವ ನಾಡಿನಲ್ಲಿ ಜಯಮಲ್ಲಿಕಾರ್ಜನ ಗುಡಿಯ ಅಸ್ತಿತ್ವ, ಬಹುಶಃ ಕೊಂಗಲ (ಕೊಂಗೊಳಲ) ನಾಡ ಅಮರನಾಯಕನಾಗಿ ಮಲ್ಲಪ್ಪ ನಾಯಕನಿದ್ದು, ದೇವರ ಅಂಗರಂಗಭೋಗಕ್ಕೆ ಸಿದ್ದಾಯಕೊಟ್ಟದ್ದು, ಬರಮಯನ ಮಗಿನ ಜಯಕೋರಿ ಅವನ ಹೆಂಡತಿಯನ್ನು ಕರೆಸಿಕೊಂಡು ಯಡನನಾಡಿನ ಗ್ರಾಮವೊಮದನ್ನು ಕೊಡಲಾಯಿತು, ಎಂಬ ಬಗೆಗೆಲ್ಲ ಇದೆ. ಬರಮಯ ಸೂತನನ್ನು ಅಮಜಾನ್ಕರು (ಅಮಾತ್ಯ!) ಹಾಗು ನಾಡವರು ಗ್ರಾಮದಾಳ್ವಿಕೆಗೆ ನಿಲ್ಲಿಸಿ ಜಯಮಲ್ಲಿಕಾರ್ಜುನನ ಹೆಸರಲ್ಲಿ ಆಳ್ವಿಕೆ ನಡೆಸಬೇಕೆಂದು ಶಾಸನ ಹಾಕಿಸಲಾಗಿದೆ. ಮಲ್ಲಪನಾಯಕರ ತಮ್ಮ ಬಣಕರನೇ ಬಹುಶಃ ನಾಡ ಅಮಾತ್ಯ (ಅಮಜಾನ್ಕರು)ನಂತೆ ನಿರ್ವಹಣೆ ಮಾಡುತ್ತಿದ್ದ ಸಂಗತಿ ಇದೆ. ನಾಡ ಸ್ವಯಮಾಡಳಿತ, ಪ್ರಜಾಸಮಸ್ತರು ನೀಡಿದ ಆ ಇ ಕಾರ ಇದೆಲ್ಲ ವಿಜಯನಗರಕಾಲದಲ್ಲಿ ಅಮರನಾಯಕ ವರ್ಗಕ್ಕೆ ಇತ್ತಿದ್ದ ಅಧಿಕಾರವೇ ಆಗಿತ್ತು. ವೀರಶೈವದ ಪ್ರಭಾವ ಸೂಚನೆ ಇಲ್ಲಿದ್ದು, ಇಲ್ಲಿನ ಮಠದ ಗುರುವನ್ನು, 'ದಯಭುಜಪಾದದೇವ' ಎಂಬ ಹೆಸರಿನಲ್ಲಿ ಗುರುತಿಸಲಾಗಿದೆ. ದೇವರ ಹರಕೆಯಂತೆ ಜಯ ಲಭಿಸಿದ ಕಾರಣ ಜಯಮಲ್ಲಿಕಾರ್ಜುನ ಎಂಬ ಹೆಸರು ದೇವರಿಗೆ ಹೊಸದಾಗಿ ರೂಢಿಗೊಂಡಂತಿದೆ. ಸೋಮವಾರಪೇಟೆ ತಾಲೂಕಿನ ನಿಡುತ ಗ್ರಾಮದ ಕ್ರಿ.ಶ. ೧೨೭೮ರ ಶಾಸನದಲ್ಲಿ 'ಮಲಪನಹಳ್ಳಿಯ ಮಲ್ಲಿಕಾರ್ಜನ ದೇವರು', 'ಗಡಿನಾಡು' ಎಂದೆಲ್ಲ ಪ್ರಸ್ತಾಪವಿದೆ.[೪೧] ಗಡಿನಾಡು ಯಡೂರು ಬಳಿಯ ಈ ಶಾಸನ ಪ್ರದೇಶದ ಅಬ್ಬಿ ಮಠದ ಬಳಿ 'ಮಲ್ಲನಕೊಪ್ಪ' ಗ್ರಾಮವೂ ಇತ್ತು. ಅಂದರೆ ಅಬ್ಬಿಮಠದ ಬಳಿಯ ಈ ಮಲ್ಲಿಕಾರ್ಜನನನ್ನು ಹಿಂದೆ ಮಲ್ಲಪನಹಳ್ಳಿ ಮಲ್ಲಿಕಾರ್ಜುನ ಎಂದು ಕರೆಯುತ್ತಿದ್ದರೆ? ಎಂಬ ಪ್ರಶ್ನೆ ಏಳುತ್ತದೆ. ಬಹುಶಃ ಕ್ರಿ.ಶ. ೧೪೬೩ರ ಸುಮಾರಿನಲ್ಲಿ ಹಮ್ಮೀರನು ರಾಮೇಶ್ವರದವರೆಗೂ ಮುಂದುವರಿದಿದ್ದ ಸಂದರ್ಭದಲ್ಲಿ ನಡೆದ[೪೨] ವಿಜಯನಗರ ಸೈನ್ಯದ ಕಾರ್ಯಾಚರಣೆಯಲ್ಲಿ ಸಾಮ್ರಾಜ್ಯದ ವಿವಿಧ ಭಾಗಗಳ ಸೈನಿಕ ಸಹಾಯ ಪಡೆದು ಜಯಗಳಿಸಿದ್ದಿರಬೇಕು. ಆ ಸಂದರ್ಭದಲ್ಲಿ ಮಲಪನಹಳ್ಳಿಯ

ಬರಮಯನ ಮಗನೂ ಪಾಲುಗೊಂಡು ಜಯದಲ್ಲಿ ಪಾಲುದಾರನಾಗಿರಬಹುದು. ಇಲ್ಲವೆ ಮಲಪನಹಳ್ಳಿಯ ಮೇಲೆ ನಡೆದ ಕಾಳಗದಲ್ಲಿ ಮಲ್ಲಿಕಾರ್ಜುನನ ಕೃಪೆ ಬಯಸಿ, ಜಯ ಒದಗಿದ ಕಾರಣ 'ಜಯಮಲ್ಲಿಕಾರ್ಜುನ' ಎಂಬ ಹೆಸರು ಪ್ರಚಲಿತಕ್ಕೆ ಬಂದಿರಬಹುದಾದ ಸಂದರ್ಭವಾಗಿರಬೇಕು. ಈ ಶಾಸದನ ಮತ್ತೊಂದು ಗಮನಾರ್ಹ ಸಂಗತಿ ಎಂದರೆ ಕೊಡಗು ಶ್ರೀರಂಗಪಟ್ಟಣ ಹೊಸ ರಂಗಪಟ್ಟಣದಲ್ಲಿ ಚಂಗಾಳ್ವ ರಂಗಾರಾಜನು ಆಳುತ್ತಿದ್ದ ಸಮಯದಲ್ಲಿ ಇದು ನಡೆದ ಘಟನೆ ಆಗಿದೆ. ಚಂಗಾಳ್ವರಿಗೆ ಅನ್ನದಾನಿ ಮಲ್ಲಿಕಾರ್ಜನದೇವರು ಕುಲದೇವತೆ ಆಗಿದ್ದು, ಅದರ ಸಾಕ್ಷಿ ದೇಗುಲವಾಗಿ ಮಲಪನಹಳ್ಳಿ ಮಲ್ಲಿಕಾರ್ಜುನ ದೇವರ ದೇಗುಲವಾಗಿರಬೇಕು. ಹೀಗಿದ್ದರೆ ಚಂಗಾಳ್ವರ ಆಳ್ವಿಕೆಯ ಚಾಚು ವಿಜಯನಗರ ಕಾಲದಲ್ಲಿ ಇಲ್ಲಿವರೆಗೆ ಇದ್ದಿರಬೇಕು. ಮಲ್ಲಪನಾಯಕನು ರಂಗರಾಜನ ಅಧೀನ ಅಮರನಾಗಿರಬೇಕು. ಶಾಸನದ ರೀತ್ಯಾ ಬರಮಯ್ಯನ ಸುತನ ಸತಿಗೆ ದೇವರ ಗ್ರಾಮವನಾಳುವಂತೆ ಆದೇಶಿಸಿರುವುದು ಗಾವುಣ್ಡಿತನವನ್ನು ಆಕೆಗೆ ನೀಡಿರುವ ಸಂದರ್ಭವಾಗುತ್ತದೆ. ಮೊದಲ ಚಂಗಾಳ್ವರ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಅವರ ತೊತ್ತುಗಳಿಗೆ ನೀಡುತ್ತಿದ್ದ ಆಸ್ತಿಹಕ್ಕು, ಹಾಗೂ ಸ್ತ್ರೀ ಪ್ರಾಧಾನ್ಯತೆಯು[೪೪] ವಿಜಯನಗರ ಕಾಲದ ಈ ಚಂಗಾಳ್ವರ ಕಾಲದಲ್ಲಿ ಸ್ಥಳೀಯ ವೈಶಿಷ್ಟ್ಯವಾಗಿ ಮುಂದುವರಿದಿರುವುದು ಗಮನಾರ್ಹ. ದೇವರ ಅಂಗರಂಗಭೋಗಕ್ಕೆ ಸಿದ್ದಾಯವನ್ನು ಮೊಮ್ಮುಕ ಸಾಗುವಂತಾಗಿ (ಏಕಚಿತ್ತದಿಂದ ದೇವ ಮೀಸಲಾಗಿ) ನೀಡಲಾಯಿತು. ಹಂಪೆಯನ್ನು ವಿರೂಪಾಕ್ಷನ ಹೆಸರಿನಲ್ಲಿ ಆಳುತ್ತಿದ್ದಂತೆ 'ಜಯಮಲ್ಲಿಕಾರ್ಜುನನ' ಹೆಸರಿಲ್ಲಿ ಇಲ್ಲಿ ಆಳ್ವಿಕೆಯು ನಡೆದಂತಿದೆ

ವಿಜಯನಗರಕಾಲದಲ್ಲಿ ಕ್ರಿ.ಶ. ೧೫೦೨ರಲ್ಲಿ ಮಧ್ಯಂತರ ಚಂಗಾಳ್ವವಂಶದ ನಂಜರಾಜನು ಬಹುಶಃ ಕೊಡಗು ಶ್ರೀರಂಗಪಟ್ಟಣ - ಹೊಸರಂಗಪಟ್ಟಣ ಪ್ರದೇಶವನ್ನು ಒಳಗೊಂಡಂತೆ, ತನ್ನ ಹೆಸರಿನ ನಂಜರಾಯ ಪಟ್ಟಣವನ್ನು ಕಟ್ಟಿ ಹೊಸರಾಜಧಾನಿಯನ್ನಾಗಿ ಮಾಡಿಕೊಂಡ. ಇದಕ್ಕೆ ಮೊದಲು ಕೊಡಗು ಶ್ರೀರಂಗಪಟ್ಟಣ - ಹೊಸರಂಗಪಟ್ಟಣವನ್ನು ರಾಜಧಾನಿಯಾಗಿ ಆಳಿದ ಕೊನೆಯ ರಾಜ ಪೆರಿಯಣ್ಣ ರಾಜನೇ ಆಗಿದ್ದಾನೆ. ಅಲ್ಲದೆ ಕೊಡಗು ಶ್ರೀರಂಗಪಟ್ಟಣ ನಂಜರಾಯಪಟ್ಟಣ ತಾಲೂಕಿನ ಗ್ರಾಮವಾಗಿ ಮುಂದುವರಿದ್ದುದು ಕ್ರಿ.ಶ. ೧೮೨೨ರ ಮಡಿಕೇರಿ ೬ನೇ ಶಾಸನದಿಂದ ತಿಳಿಯುತ್ತದೆ. ಇದು ಹಾಲೇರಿ ಅರಸ ಚಿಕ್ಕವೀರರಾಜೇಂದ್ರ ಒಡೆಯನ ಕಾಲ.

ಹಿರೇಮಳಲಿ ಶಾಸನ ಸೂಚಿತ ಚಂಗಾಳ್ವ ವಂಶಾವಳಿಯಲ್ಲಿ ನಂಜರಾಜನ ತಮ್ಮ ಮಹಾದೇವನೆಂದಿದೆ. ಹಾಗೂ ಈ ಮಹಾದೇವನು (ಬೆಟ್ಟದಪುರದ) ಪ್ರಸಿದ್ಧ ಅನ್ನದಾನಿಲಿಂಗಕ್ಕೆ ಕ್ರಿ.ಶ. ೧೫೦೩ರ ಸುಮಾರಿನಲ್ಲಿ ದಾನವಾಗಿ ಹಿರೇಮಳಲಿ ಗ್ರಾಮವನ್ನು ನೀಡಿದ ಸಂಗತಿ ಇದೆ.[೪೫] ಈತನು ರಾಜ್ಯವಾಳಲಿಲ್ಲ ಎಂಬ ಅಭಿಪ್ರಾಯವಿದೆ.[೪೬] ಆದರೆ ಹಿರೇಮಳಲಿ ಶಾಸನದಲ್ಲಿ 'ಮಹಾದೇವ ನೃಪತಿ' ಎಂದಿರುವುದು. ಕ್ರಿ.ಶ. ೧೫೯೦ಕ್ಕೆ ಶ್ರವಣಬೆಳಗೊಳದ ೩೯ನೇ ದೊಡ್ಡಬೆಟ್ಟದ ಶಾಸನದಲ್ಲಿ[೪೭] 'ಮಂಡಳೇಶ್ವರ ಕುಲೋತ್ತುಂಗ

ಚಂಗಾಳ್ವ' ಮಹದೇವ ಮಹೀಪಾಲ ಹಾಗು ಅವನ ಪ್ರಧಾನ ಸಿರೋಮಣಿ ಬೊಂಮ್ಮಣ ಮಂತ್ರಿ' ಎದೆಲ್ಲ ಉಕ್ತವಿರುವುದರಿಂದ, ಮಹಾದೇವನು ರಾಜ್ಯವಾಳಿದ ಸ್ಪಷ್ಟ ಸಾಕ್ಷ್ಯ ಸಿಗುತ್ತದೆ. ನಂಜರಾಯಪಟ್ಟಣದ ಶ್ರಾವಕ ಭವ್ಯಜನಂಗಳ ಸಹಾಯದಿಂದ ಗುಂಮ್ಮಟ ಸ್ವಾಮಿಯ ಬಳ್ಳಿವಾಡದ ಜೀರ್ಣೋದ್ಧಾರವನ್ನು ಬೊಮ್ಮಣಮಂತ್ರಿ ಸೋದರ ಚಂನ್ ಬೊಮ್ಮರಸ ಮಾಡಿಸಿದ್ದ ಬಗ್ಗೆಯೂ ಶಾಸನ ಹೇಳುತ್ತದೆ. ಈ ಅಂಶಗಳಿಂದ ಮಹಾದೇವನು ವಿಜಯನಗರದ ಮಂಡಲೇಶ್ವರನಾಗಿ ಚಂಗನಾಡಿನ ಪಿರಿಯಾಪಟ್ಟಣ ಪ್ರದೇಶದಲ್ಲಿ ಆಳಿದ ಸೂಚನೆ ಒದಗುತ್ತದೆ. ಸೋದರ ನಂಜರಾಯಪಟ್ಟಣದ ನಂಜರಾಜನೊಡನೆ ಸೌಹಾರ್ದ ಸಂಬಂಧ ಹೊಂದಿದ್ದುದರ ಸೂಚನೆಯೂ ಒದಗುತ್ತದೆ. ಶ್ರೀ ಆರ್.ನರಸಿಂಹಾಚಾರ್ಯರ ಅಭಿಪ್ರಾಯದಂತೆ ಶಾಸನೋಕ್ತ ಕೇಶವನಾಥ ಪ್ರಧಾನ ಸಿರೋಮಣಿ ಎಂದರ, ಅವನ ಮಗ ಬೊಂಮ್ಮಣನು, ಮಹಾದೇವನಲ್ಲಿ ಅಧೀನ ಮಂತ್ರಿಯಾಗಿದ್ದಿರಬೇಕೆನಿಸುತ್ತದೆ. ಮತ್ತು ಶಾಸನದ ಅಂಶಗಳಿಂದ, ವೀರಶೈವ ಚಂಗಾಳ್ವ ಅರಸರಲ್ಲಿ ೧೬ನೇ ಶತಮಾನದಲ್ಲೂ ಜೈನ ಸಚಿವ ವಂಶವೇ ಮುಂದುವರಿದಿರುವುದೂ, ಜಿನಧರ್ಮದ ಪ್ರಾಬಲ್ಯ ಅಥವಾ ಪ್ರಭಾವ ಕೊಡಗಿನ ನಂಜರಾಯಪಟ್ಟಣದಿಂದ ಪಿರಿಯಾಪಟ್ಟಣ ಪ್ರದೇಶದಲ್ಲಿತ್ತು. ಶ್ರವಣಬೆಳಗೊಳವು ಅಲ್ಲಿನ ಜಿನ ಶ್ರಾವಕರಿಗೆ ಸೈದ್ಧಾಂತಿಕ ಸ್ಫೂರ್ತಿ ಕೇಂದ್ರವಾಗಿತ್ತೆಂದೂ ಸೂಚಿತವಾಗುತ್ತದೆ.

ನಂಜರಾಯಪಟ್ಟಣದ ಚಂಗಾಳ್ವ ನಂಜರಾಜನು ಕ್ರಿ.ಶ. ೧೫೦೨ ರಿಂದ ೧೫೩೩ರ ವರೆಗೆ ಅಲ್ಲಿ ಆಳಿದ ಬಗ್ಗೆ ಸಿವೆಲ್ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.[೪೮] ಅಚ್ಚರಿ ಎಂದರೆ ಇಂದಿನ ಕೊಡಗಿನಲ್ಲಲಿ ಈವರೆಗೆ ಈ ಕುರಿತ ಶಾಸನ ನಂಜರಾಯಪಟ್ಟಣವೂ ಸೇರಿದಂತೆ ಲಭ್ಯವಾಗಿಲ್ಲ. ಇರಲಿ. ಕ್ರಿ.ಶ. ೧೫೨೧ರ ಅಲ್ವನಾಯಕನಹಳ್ಳಿ ಶಾಸನದಲ್ಲಿ[೪೯] ಶ್ರೀಮನ್ಮಹಾಮಂಡಳೀಕ ಮಂಡಳೇಶ್ವರ ಕುಲೋತ್ತುಂಗ ಚಂಗಾಳುವ ಶ್ರೀ ವೀರನಂಜಯದೇವರು ಶ್ರೀ ಮಂನು ಮಹಾದೇವವೋತ್ತಮ ಶ್ರೀಗಿರಿ ಅಂನದಾನಿ ಮಲ್ಲಿಕಾರ್ಜುನ ದೇವರ ಅಂಗರಂಗಭೋಗಕ್ಕೆ ಆಲಪನಾಯಕನಹಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ದಾನಕೊಟ್ಟ ಬಗ್ಗೆ ಹೇಳಿದೆ. ಈ ವೀರನಂಜಯದೇವರು, ಚಂಗಾಳ್ವ ಮಹಾದೇವನ ಅಣ್ಣ 'ನಂಜ (ರಾಜ)' ನಾಗಿರಬೇಕು ಎನ್ನಲಾಗಿದೆ.[೫೦] ಇನ್ನು 'ಶ್ರವಣಬೆಳಗೊಳದ ಬಂಡಾರ ಬಸದಿಯಲ್ಲಿ ಕಂಡುಬಂದ ಹೊಸ ಶಾಸನದಲ್ಲಿ[೫೧] 'ಶ್ರೀ ಮೊನ್ಮಹಾ ಮಂಡಳೇಶ್ವರ ಕುಲೋತ್ತುಂಗ ಚಂಗಾಳುವ ನಂಜರಾಯಪಟ್ಟಣದ ನಂಜು(ಂ)ಡೊ(ಡೆ)ಯರ ಮಹಾಪ್ರಧಾನ ಬುಕ್‌ರಾಯಗಳ ಮಗ ದೇವಪ್ಪಗಳು ಭ(ಂ)ಡಾರಿಯ ಬಸ್ತಿಯ ಸರಸ್ವತಿ ಮಂಟಪದ ಜೀರ್ಣೋದ್ಧಾರಕ್ಕೆ .....' ಎಂದಿದೆ. ಶಾಸನವು ಕ್ರಿ.ಶ. ೧೫೨೬ ನವೆಂಬರ್ ತೇದಿಯನ್ನು ಸೂಚಿಸುವುದರಿಂದ, ನಂಜರಾಜನ ಕಾಲ ಕ್ರಿ.ಶ. ೧೫೦೨ ರಿಂದ ೧೫೨೫ ಎಂದೂ, ಮುಂದಿನ ನಂಜುಂಡ ಒಡೆಯನ ಕಾಲ ಕ್ರಿ.ಶ. ೧೫೨೫ ರಿಂದ ಕ್ರಿ.ಶ. ೧೫೪೪ ಆಗಿರಬಹುದೆನ್ನಲಾಗಿದೆ. ಈ ಮೇಲಿನ ಅಂಶಗಳಿಂದ ಹೆಕ್ಕಬಹುದಾದ

ಅಂಶಗಳೆಂದರೆ ನಂಜರಾಯಪಟ್ಟಣದ ಚಂಗಾಳ್ವರು ವಿಜಯನಗರದ ಅಧೀನರಾಗಿದ್ದರೂ ಚೋಳ ವಂಶದ ಪ್ರಭಾವದಿಂದ ಮುಕ್ತರಾಗಿರಲಿಲ್ಲವೆಂಬುದಕ್ಕೆ 'ಕುಲೋತ್ತುಂಗ' (ಚೋಳ) ಎಂಬ ಉಪಾಧಿಯನ್ನು ಹೆಸರಿಗೆ ಅಂಟಿಸಿಕೊಂಡಿರುವುದಾಗಿದೆ; ನಂಜರಾಜನು ಮಹಾಮಂಡಲೇಶ್ವರನಾಗಿ, ಅವನ ಸೋದರ ಮಹಾದೇವ, ಅವನ ಅಧೀನ ಮಂಡಲೇಶ್ವರನಾಗಿದ್ದ. ಇದು ವಿಜಯನಗರಕಾಲದಲ್ಲಿ ಕಾಣಬರುವ ಪದ್ಧತಿಯೆ. ಕುಲದೈವ ಅಂನದಾನಿ ಮಲ್ಲಿಕಾರ್ಜುನನ ಪರಮಭಕ್ತರಾಗಿ, ಸಚಿವ ವಂಶದ ಜೀನಧರ್ಮದ ಸಾಂಸ್ಕೃತಿಕ ಕಾರ್ಯಗಳಿಗೆ ಉತ್ತೇಜಕರಾಗಿ ಚಂಗಾಳ್ವ ಅರಸರು ಧರ್ಮ ಸಹಿಷ್ಣುಗಳಾಗಿದ್ದರು; ನಂಜರಾಜನ ಕಾಲ ಕ್ರಿ.ಶ. ೧೫೦೨ ರಿಂದ ೧೫೨೫ ಎಂದು ಶಾಸನಾಧಾರದ ಮೇಲೆ ನಿರ್ಧರಿತವಾಗಿರುವುದು ಇವೆಲ್ಲ ಸರಿಯೆ. ಆದರೆ ಕ್ರಿ.ಶ. ೧೬೦೭ರ ಪಿಪ. ೫೦ (ಬೆಟ್ಟದಪುರ) ಶಾಸನದ ಆಧಾರದಿಂದ ಕ್ರಿ.ಶ. ೧೫೪೪ರ ಚೇರಲ ಸಿರಿಮಂಗಲದ (ಸೋ.ಪೇ. ೩೫) ಶಾಸನೋಕ್ತ ಶ್ರೀಕಂಠರಸುವಿನ ತಂದೆ ನಂಜುಂಡರಾಜನೆಂದರೂ, ನಂಜರಾಜನ ನಂತರ ನಂಜುಂಡ ಅಧಿಕಾರಕ್ಕೆ ಬಂದಂತೆ ತೋರುತ್ತದೆ[೫೨] ಎಂಬುದು ಊಹೆಯಾಗಿರುವುದರಿಂದ, ಕ್ರಿ.ಶ. ೧೫೨೫ - ೨೬ರಿಂದ ೧೫೩೩ರ ವರೆಗೆ ಅಧಿಕಾರ ಸ್ಥಾನೋನ್ನತಿ ಪ್ರಕ್ರಿಯೆಯಂತೆ ನಂಜರಾಜನ ಸೋದರ ಮಾಂಡಲೇಶ್ವರ ಮಹಾದೇವನು ಮಹಾಮಂಡಲೇಶ್ವರನಾಗಿ ಸಂತಾನವಿಲ್ಲದೆ ಹೋಗಿ ತೀರಿದ ಅಂತಾಗಿ ೧೫೩೩ ರಿಂದ ೧೫೪೪ರವರೆಗೆ ನಂಜುಂಡರಾಜನು ನಂಜರಾಜಪಟ್ಟಣವನ್ನು ಆಳಿರಬೇಕು ಎನ್ನುವುದೇ ಹೆಚ್ಚು ಸೂಕ್ತವಾಗುತ್ತದೆ. ಅಲ್ಲದೆ ಕೊಡಗಿನ ನಂಜರಾಜನು ಮಹಾಮಂಡಲೇಶ್ವರನಾಗಿದ್ದ ಕಾರಣ ಕೊಡಗಿಗೇ ಆಗ ಚಂಗನಾಡಿನ ಭಾಗಗಳೆಲ್ಲ ಸೇರಿರುವಂತಿದೆ; ಕಾವೇರಿಯ ಉತ್ತರ ಹಾಗು ಪಶ್ಚಿಮದಂಡೆಗಳೆಲ್ಲ ಹರಡಿಕೊಂಡ ನಂಜರಾಯಪಟ್ಟಣ ರಾಜಧಾನಿಯಾಗಿ ಮುಂದುವರಿದಿದೆ. ಕ್ರಿ.ಶ. ೧೫೯೦ರಲ್ಲಿ ಪಿರಿಯಾಪಟ್ಟಣ ಚಂಗಾಳ್ವರ ರಾಜಧಾನಿ ಆಗುವ ಮುನ್ನ ಕೊಡಗಿನೊಳಗಣ ನಂಜರಾಯಪಟ್ಟಣವೇ ಚಂಗಾಳ್ವ ಮಹಾಮಂಡಲೇಶ್ವರರ ರಾಜಧಾನಿಯಾಗಿರಲು ಕೊಡಗಿನ ಅಂದಿನ ಪ್ರಾಮುಖ್ಯ ಹಾಗು ವಿಸ್ತಾರದ ಕಲ್ಪನೆಯೂ ಒದಗುತ್ತದೆ. ಚಂಗನಾಡು ಕೊಡಗು ಎನ್ನುವಂತಾಗಿತ್ತು. ನಂಜರಾಯಪಟ್ಟಣ ಪ್ರಮುಖ ವ್ಯಾಪಾರಕೇಂದ್ರವೂ ಆಗಿತ್ತು. ಸು.ಕ್ರಿ.ಶ. ೧೫೩೩-೪೪ರ ನಂಜುಂಡರಾಜನ ಮಂತ್ರಿ ಆಗಿದ್ದ ದೇವಪ್ಪಕವಿ ತನ್ನ 'ರಾಮವಿಜಯ ಕಾವ್ಯ'ದಲ್ಲಿ ವರ್ಣಿಸಿರುವ ದೇಶವಿಷಯವು ಮೇಲಿನ ಮಾತಿಗೆ ಮುಂದಿನಂತೆ ಸಾಕ್ಷಿ ಆಗಿದೆ; ನಂಜರಾಯಪಟ್ಟಣದ ವರ್ಣನೆಯಾಗಿದೆ:

"ಸಿಂಗರವಡೆದ ಹೊಯಿಸಳ ದೇಶಕೊಪ್ಪುವ ಚಂಗಾನಾಡದರ ಮಧ್ಯದೊಳು ... ಶುಭಮಯವಾದ ಪಟ್ಟಣ .....

ಬಳಸಿ ಪರಿವ ಪನಿನೀರ ಕಾಲವೆ ಪೂ| ಗೊಳ ಪೂದೋಂಟ ವಾರಾಮ||
ವಿಲಸಿತ ಶಾಲಿವನಗಳಿಂದಾ ಪೊಳ| ಲಿಳೆಗೆ ಕೌತುಕವಾಗಿಹುದು".[೫೩]

(ಗ, ಚ - ಪ್ರತಿಗಳಲ್ಲಿ 'ಪನಿನೀರಕಾಲವೆ ಬಲ್ಗೆರೆ' ಎಂದಿದೆ. ಬಳಸಿಹರಿವ ಬಲ್ಗೆರೆ ಎಂದರೆ ಕಾವೇರಿ ನದಿಯನ್ನು ಸೂಚಿಸಿ ಈ ಪಟ್ಟಣವು 'ದ್ವೀಪ'ದಂತಿದೆ ಎಂಬ ಸೂಚನೆ ನೀಡಿ, ಕೊಡಗು ಶ್ರೀರಂಗಪಟ್ಟಣವನ್ನು ನೆನಸಿದಂತಿದೆ.)

ಈ ವರ್ಣನೆ, ವಿಜಯನಗರಕಾಲದ ಈ ಅವಧಿಯ ಕೊಡಗಿನ ಸಮೃದ್ಧ ಬೆಳೆ ಸಂಪತ್ತು ನೆಮ್ಮದಿಯ ಚಿತ್ರವನ್ನು ನೀಡುತ್ತದೆ. ವಿಜಯನಗರ ಕಾಲದಲ್ಲಿದ್ದರೂ 'ಹೊಯಿಸಳದೇಶ' ಎನ್ನುವ ಕವಿ ಹೊಯ್ಸಳ ಕಾಲೀನ ಕಲಾತ್ಮಕ ಬದುಕನ್ನು ಕವಿಯಾಗಿ ಪರಿಭಾವಿಸಿ ಹೇಳಿದಂತಿದೆ.

ಕ್ರಿ.ಶ. ೧೫೪೪ರ ಚೇರಲ ಸಿರಿಮಂಗಲ ಶಾಸನದಲ್ಲಿ[೫೪] ಶ್ರೀಮನ್ಮ್‌ಹಾಮಂಡಲೇಶ್ವರ ಚಂಗಾಳ್ವ ಶ್ರೀಕಂಠ ಅರಸುಗಳು, ಭಕ್ತನ ಕೋಟೆ ಗ್ರಾಮಕ್ಕೆ ಸಲ್ಲುವ ಭೂಮಿಯನ್ನು ಲಿಂಗಂಣೊಡೆಯ ದೇವರಿಗೆ ಸರ್ವಮಾನ್ಯವಾಗಿ ಕೊಡುಗೆ ಕೊಟ್ಟ ವಿಷಯವಿದೆ. 'ಭಕ್ತನಕೋಟೆ', 'ಲಿಂಗಂಣೊಡೆಯದೇವರು' ಎಂಬ ಶಬ್ದಗಳೆ ವೀರಶೈವಮಠದ ಗುರುವೊಬ್ಬನಿಗೆ ಭೂದಾನ ನೀಡಿದ ಸಂಗತಿ ಸೂಚಕಗಳೆನಿಸುತ್ತದೆ. ಅಂದರೆ ಆ ಕಾಲದ ಒಂದು ವೀರಶೈವ ಮಠದ. ಅಸ್ತಿತ್ವ ಹಾಗು ರಾಜಗೌರವದ ಸಂಕೇತ ಇಲ್ಲಿ ಕಾಣುತ್ತದೆ. ಶ್ರೀಕಂಠರಸುವಿನ ಮಹಾಮಂಡಲೇಶ್ವರತ್ವವೂ ತಿಳಿಯುತ್ತದೆ.

ಕ್ರಿ.ಶ. ೧೫೪೪ರ ಅಂಜನಗಿರಿ ಶಾಸನದಲ್ಲಿ,[೫೫] ನಂಜರಾಯಪಟ್ಟಣಕ್ಕೆ ಸಲ್ಲುವ ಬೆಮ್ಮತ್ತಿ ಬೂತನಹಳ್ಳಿ ಮಲಗನಕೆರೆಯ ಸಮಸ್ತಹಲರು, ಹನಸೋಗೆಯ ಆದಿಶ್ರೀ ಅವ್ವಗಲು, ಭುಜಬಲಿ ಶ್ರೀ ಅವ್ವಗಳು' ಶಾಂತಿತೀರ್ಥೇಶ್ವರ, ಅನಂತನಾಥಸ್ವಾಮಿ ಬಸದಿಯ ಗರ್ಭಗೃಹದ ಕಲುಗೆಲಸಕ್ಕೆ ತಮ್ಮ ಗುರುಚಾರು ಕೀರ್ತಿ ಪಂಡಿತದೇವನಿಗೆ ಹೊನ್ನು ೩೦ ಗದ್ಯಾಣ ದಾನ ಮಾಡಿದ ಸಂಗತಿ ಇದೆ. ಇಲ್ಲಿ ಆಳುತ್ತಿದ್ದ ದೊರೆಯ ಹೆಸರಿಲ್ಲದಿದ್ದರೂ ನಂಜರಾಯಪಟ್ಟಣ ಪ್ರದೇಶದ ಜನತೆಯ ಪ್ರಸ್ತಾಪವಿರಲಾಗಿ, ಆ ಕಾಲದಲ್ಲಿ ಇದ್ದ ದೊರೆ ಶ್ರೀಮನ್ಮಹಾ ಮಂಡಲೇಶ್ವರ ಚಂಗಾಳ್ವ ಶ್ರೀಕಂಠ ಅರಸುವೇ ಆಗುತ್ತಾನೆ. ಅಂಜನಗಿರಿ ಶಾಂತೀಶ್ವರ ಬಸದಿಗೆ ಬಿದಿರೆಯ ಸೀತಾಳಮಳಿಗೆಯ ಸಮಸ್ತ ಹಲರು ಕಂನಡಿಗ ಹಲರು, ನಾನಾದೇಸಿಯ ಹಲರು ಮಾಡಿದ ಧರ್ಮ; ಹಾರುವ ಸೆಟ್ಟಿಯ ವಿಜೆಯಣ ಶೆಟ್ಟಿ, ಕಣನೂರ ದೇವರರಮಶೆಟ್ಟಿ, ಅಸುಂಡಿ ಅರಸ ಮುಂತಾದವರ ಉಲೇಖ ಬರುವುದರಿಂದ ವಿವಿಧ ನೆಲೆಯ ಜಿನಧರ್ಮಿಗಳು ಇಲ್ಲಿ ದಾನಿಗಳಾಗಿದ್ದರು. ಕೊಡಗಿನ ಈ ಬಸದಿ ಪ್ರಸಿದ್ಧವಾಗಿತ್ತು. ಆ ಹೊತ್ತಿನ ವೀರಶೈವ ಚಂಗಾಳ್ವರು, ಜೈನಧರ್ಮಕ್ಕೆ ಸಮಾನ ಪ್ರೋತ್ಸಾಹ ಕೊಟ್ಟಿದ್ದರು ಎಂದಾಗುತ್ತದೆ. ಇಲ್ಲಿ ವಿಶೇಷವೆಂದರೆ ೧೨ನೇ ಶತಮಾನದ (ಕ್ರಿ.ಶ. ೧೧೭೬) ಶಾಂತಿನಾಥ, ಅನಂತನಾಥ ಜಿನಬಿಂಬಗಳನ್ನು ಸುವರ್ನ್ನಾವತಿನದಿ (ಹಾರಂಗಿಹೊಳೆ)ಯಲ್ಲಿ ಹಾಕಿದ್ದುದನ್ನು ತೆಗೆ ಪುನರ್ ಪ್ರತಿಷ್ಠಾಪಿಸಿರುವುದು; ಮೊದಲು ದಾರುಮಯ ಬಸದಿಕಟ್ಟಿಸಿ ನಂತರ ಶಿಲಾಮಯ ಬಸದಿ ಮಾಡಿಸಿದುದು; 'ದಿಗಂಬರ ಪ್ರಭಾವಮಂಡನ ವೃತ್ತಮಂತಳೆದು' ಎಂದು ಅಭಿನವ ಚಾರುಕೀರ್ತಿ ಪಂಡಿತದೇವ ಎಂದು ಜೈನಗುರುವಿನ ಹೆಸರು, ಹಾಗು ಅವನ ಹಿಂದಿನ

ಗುರುಪರಂಪರೆಯ ೫ ಗುರುಗಳನ್ನು ಸ್ಮರಿಸಿ, ದಿಗಂಬರ ಜೈನಸಮುದಾಯದ ಅನೇಕ ಮುನಿಗಳ ಗುಂಪಿನ ಸಂಕೇತವಾದ ಮೂಲಸಂಘ, ದ್ರಾವಿಡ ಸಂಘವಾಗಿ ದೇಶಿಗಣ, ಪುಸ್ತಕಗಚ್ಛ ಕುಂದ ಕುಂದಾನ್ವಯ ಶಾಖೆಯಾಗಿ ಇಂಗುಳೇಶ್ವರ ಬಳಿ ಮುನಿಶಾಖೆ ಎನಿಸಿದ್ದ ಇಲ್ಲಿನ ದಿಗಂಬರ ಮುನಿಗಳ ಪ್ರಾಬಲ್ಯ ತೋರಿರುವುದು; 'ಬಲ್ಲಾಳರಾಯ ಜೀವರಕ್ಷಪಾಲಕಾದ್ಯನೇಕ ಬಿರುದಾವಲೀವಿರಾಜ ಮಾನರಪ್ಪ... ಶ್ರೀ ಮದ್ರಾಯ ರಾಜಗುರು ಮಂಡಲಾಚಾರ್ಯ' ಎಂದು ಚಾರುಕೀರ್ತಿ ಪಂಡಿತ ದೇವರಿಗೆ ಅನ್ವಯಿಸಿ ಹೇಳಿರುವಲ್ಲಿ ೫ ತಲೆಮಾರು ಗುರುಗಳನ್ನು ಹೇಳಿದರೂ ವಿಜಯನಗರದ ಇಮ್ಮಡಿ ಹರಿಹರನ ಕಾಲಕ್ಕೆ ಬೀಳುತ್ತದೆ. 'ಶ್ರೀಮದ್ರಾಯ ರಾಜಗುರು ...' ಇದು ವಿಜಯನಗರಕಾಲದ ವಿಶೇಷ ಬಳಕೆಯ ಗುರುಗಳ ಸ್ಥಾನಗೌರವ ಬಿರುದಾಗಿದ್ದು ಚಾರುಕೀರ್ತಿಪಂಡಿತನನ್ನು ವಿಜಯನಗರ ಕಾಲದ ಉಲ್ಲೇಖಿತನಾಗಿ ಪರಿಗಣಿಸಬೇಕಾಗುತ್ತದೆ; ಹಾಗದರೆ 'ಬಲ್ಲಾಳರಾಯ ಜೀವರಕ್ಷಪಾಲಕ' ಎಂಬ ಬಿರುದು ಬಹುಶಃ ಹೊಯ್ಸಳ ಬಲ್ಲಾಳನ (ವೀರ ಬಲ್ಲಾಳ ಕ್ರಿ.ಶ. ೧೨೨೦?) ಪ್ರಾಣೋತ್ಕ್ರಮಣ ಸಮಯದ್ದಿ [೫೫] ಈ ಗುರುಪರಂಪರೆಯ ಹಿಂದಿನ ಗುರುಗಳೊಬ್ಬರು ವೈದ್ಯೋಪಚಾರಮಾಡಿ ಜೀವವುಳಿಸಿದ ಕಾರಣ ಬಂದಿರಬಹುದಾದ ಬಿರುದು, ಮುಂದಿನ ಪರಂಪರೆಗೆ ಅಂಟಿರಬಹುದು. ಹೀಗಾಗಿ ವಿಜಯನಗರಕಾಲದ ಗುರುಪರಂಪರೆಯ ವೈಶಿಷ್ಟ್ಯ ಹೇಳುವಲ್ಲಿ ಹೊಯ್ಸಳ ದೊರೆಯನ್ನು ಸ್ಮರಣೆಗೆ ತಂದಿರುವುದು; ಅಂಜನಗಿರಿಯ ಶಾಂತೀಶ್ವರಗೆ 'ಸಮಸ್ತ ಹಲರು, ಕಂನಡಿಗ ಹಲರು ನಾನಾದೇಸಿಯಹಲರು ಮಾಡಿದ ಧರ್ಮ' ಎಂದಿದೆ. 'ಹಲ' ಎಂದರೆ ಅಳತೆ[೫೬] ಬೇಸಾಯ ಮತ್ತು ತೂಕ[೫೭] ಎಂಬ ಅರ್ಥವಿರುವಲ್ಲಿ 'ಹಲರು' ಎಂಬ ಶಬ್ದ ವರ್ತಕ ವರ್ಗಕ್ಕೆ ಸಂಬಂಧಿಸುತ್ತದೆ. ನಾನಾದೇಸಿ (ನಾನಾದೇಶ) ಎಂಬ ವಾಣಿಜ್ಯಸಂಘವು ೧೪ನೇ ಶತಮಾನದಲ್ಲಿಯೂ ಪ್ರಚಾರವಿತ್ತು.[೫೮] ಕ್ರಿ.ಶ. ೯೯೯ರ ಹೆಗ್ಗಡದೇವನಕೋಟೆ ತಾ. ಶಾಸನಗಳಲ್ಲಿ 'ನಾನದೇಸಿ' ಎಂಬುದು ವರ್ತಕರಗುಂಪು ಎಂಬ ಅರ್ಥ ನೀಡಿದೆಯಷ್ಟೇ ಅಲ್ಲದೆ ಬಯಲ್ನಾಡು ರಾಜ್ಯ (ವೈನಾಡು)ವೂ ಉಕ್ತವಾಗಿದೆ.[೫೯] ಅಂದರೆ ಅಂಜನಗಿರಿ ಕೇವಲ ಧಾರ್ಮಿಕ ಕೇಂದ್ರವಲ್ಲದೆ ನಂಜರಾಯಪಟ್ಟಣದಂತೆ ವಾಣಿಜ್ಯಕೇಂದ್ರವೂ ಆಗಿತ್ತು ಎಂಬ ಸೂಚನೆ ದೊರಕುತ್ತದೆ. ಹಾಗು ಜೈನಧರ್ಮ ಪ್ರಭಾವದ ಸಂಕೇತವೂ ದೊರೆಯುತ್ತದೆ. ಈ ಅಂಜನಗಿರಿ ಬಸದಿ ಒಂದು ಚಚ್ಚೌಕಾರದ ಕಟ್ಟಡ. ಮಾಡು ಚಪ್ಪಟೆಯಾಗಿದ್ದು ಕಲ್ಲು ಚಪ್ಪಡಿಗಳ ಹೊದಿಕೆ ಹೊಂದಿದೆ. ಸ್ತಂಭಗಳಿರುವ ಮುಖಮಂಟಪವಿದೆ. ಒಳ ಅಂಕಣದಲ್ಲಿ ಜಿನಬಿಂಬದ ಉಬ್ಬುಶಿಲ್ಪವನ್ನು ಶಿರೋಭಾಗದಲ್ಲಿ ಹೊಂದಿರುವ ಕ್ರಿ.ಶ. ೧೫೪೪ರ ಶಾಸನವಿದೆ. (ಇಲ್ಲಿದ್ದ ತೀರ್ಥಂಕರ ಮೂರ್ತಿಗಳು ಮಡಿಕೇರಿ ಮ್ಯೂಸಿಯಂನಲ್ಲಿವೆ) ಜಗತಿಯ ಮೇಲೆ ಸಾಲಾಗಿ ಜಿನಬಿಂಬಳಿದ್ದುದರ ಸಂಕೇತವಾಗಿ ಕಟ್ಟೆ ಜಗತಿಯನ್ನು ಕಟ್ಟಿದೆ. ಬಸದಿಯ ಸುತ್ತ ಜಿನದೇವಕಾಡು ೧೬ನೇ ಶತಮಾನದಲ್ಲಿ ರೂಪುಗೊಂಡಂತಿದೆ. ಇಂದಿಗೂ ವಿಶಾಲಕಾಡು ಇದ್ದು ನಡುವೆ ಬಸದಿ ಇದೆ. ಅಹಾರದಾನವೂ ವಿಜಯನಗರ ಕಾಲದಿಂದಲೂ ಇಲ್ಲಿ ನಡೆದುಬಂದ ಪದ್ಧತಿ ಆಗಿದೆ.

ಶಾಸನದಿಂದ ಆ ಕಾಲದ ಗುಡಿ ಅಥವಾ ಜಿನ ದೇಹಾರ (ದೇಗುಲ) ಕಟ್ಟುತ್ತಿದ್ದ ಬಗ್ಗೆ ತಿಳಿಯುತ್ತದೆ. ಬಳಕೆಗಿದ್ದ ಹೊನ್ನು ಗದ್ಯಾಣದ ಕುರಿತು ತಿಳಿಯುತ್ತದೆ.

ಕ್ರಿ.ಶ. ೧೫೫೫ರ ನಲ್ಲುಕೋಟೆಯ ಭಿನ್ನಗೊಂಡ ಶಾಸನದಿಂದ ಚಂಗಾಳ್ವವಂಶದ ಶ್ರೀಮನ್ಮಹಾಮಂಡಲೇಶ್ವರ ವೀರವೀರದೇವರಸನ ಕೊಡಗಿನಾಳ್ವಿಕೆ ಇದ್ದ ಬಗ್ಗೆ ತಿಳಿಯುತ್ತದೆ. ಕ್ರಿ.ಶ. ೧೭೪೫ರ ನಂತರದ ಕೊಡಗು ಶ್ರೀರಂಗಪಟ್ಟಣದ ಸಂಪರ್ಕ ಹಳೆ ರಾಜಧಾನಿ ಪಾಲ್ವರೆಗೆ ಇತ್ತು ಎಂಬುದು ಇವೆರಡೂ ಸ್ಥಳಗಳ ನಡುವೆ ಇದ್ದ ನಲ್ಲುಕೋಟೆಯಲ್ಲಿ ಸದ್ಯ ಶಾಸನ ದೊರೆತಿರುವುದರಿಂದ, ವಿದಿತವಾಗುತ್ತದೆ. ಚಂಗಾಳ್ವ ವೀರವೀರದೇವರಸನ ವಿಜಯನಗರದ ಧೀನ ಮಹಾಮಂಡಲೇಶ್ವರತ್ವವೂ ತಿಳಿಯುತ್ತದೆ.

'ಕೊಡಗಿನ ಇತಿಹಾಸ' ಕೃತಿಯಲ್ಲಿ (ಪು. ೬೨) ಶ್ರೀಕಂಠರಾಜನ (ಕ್ರಿ.ಶ. ೧೫೪೪) ನಂತರದ ವಂಶಾವಳಿಯ ಚಿತ್ರ ಸ್ಪಷ್ಟವಾಗಿಲ್ಲ. ಎ.ಕ.ಸಂಪುಟ ೪ (ಹೊಸತು) ಪೀಠಿಕೆ ಪು. xciii ರಲ್ಲಿ 'ಶ್ರೀಕಂಠರಸನ ಮಗ ವೀರವೀರದೇವನ (ಪಿ.ಪ. ೧೧೪, ಕ್ರಿ.ಶ. ೧೫೬೮) ಕಾಲದ್ದಕ್ಕಿಂತ ಪಿ.ಪ. ೧೦೩ನೆಯ ಶಾಸನದ (ಕ್ರಿ.ಶ. ೧೫೬೫) ವೀರಚಿಕರಾಜವೊಡೆಯನ ಕಾಲವು ಮೂರುವರ್ಷ ಮಾತ್ರ ಹಿಂದಿನದಾದ ಕಾರಣ ಚಿಕ್ಕರಾಜುವೇ ಪ್ರಾಯಶಃ ವೀರವೀರದೇವನೆನ್ನಬಹುದು' ಎನ್ನಲಾಗಿದೆ. ಆದರೆ ನಂಜರಾಯಪಟ್ಟಣದ ಸಂಬಂಧರಲ್ಲಿ ಹೆಚ್ಚಾಗಿ ಕಾಣಬರುವುವು. 'ವೀರವೀರದೇವರಸು' ಆಗಿದ್ದಾನೆ. ಜೊತೆಗೆ ಕೊಡಗಿನ ನಲ್ಲುಕೋಟೆಗ್ರಾಮದಲ್ಲಿ ಲಭ್ಯವಾದ. ಹೊಸ ಶಾಸನವು[೬೦] ಕ್ರಿ.ಶ. ೧೫೫೫ರ "ಶ್ರೀ ಮನ್ಮಹಾಮಂಡಲೇಶ್ವರ ಚಂಗಳೇಶ ವೀರವೀರದೇವರಸ"ನನ್ನು ಉಕ್ತಮಾಡುತ್ತದೆ. ಶಾಸನದ ಲಭ್ಯಪಾಠವು ಹೀಗಿದೆ:

ಮುಂಬದಿ:	**ಹಿಂಬದಿ:**
ಶಾಲಿವಾಹನ ಶಕವರುಷ	ರ (ಗ್ರಾ) ಮವನು ಗದ್ದೆ (ಲ್ಲು) ಬೆದ್ದಲು
೧೪೭೭ನೆಯ ರಾಕ್ಷಸ	ಸುಂಕ ಸರವಾದಾಯವೆಲ್ಲವನೂ
ಸಂವತ್ಸರದ ಶ್ರಾವಣ ಸು ೫ ರಲ್ಲು	ಅನುಭವಿಸಿಕ್ಕೊಂಡಿರಿಯೆಂದು
ಶ್ರೀ ಮಂನ್ಮಹಾಮಂಡಲೇಶ್ವರ	ಸರ್ವಮಂನ್ಯವಾಗಿ ಕೊಟ್ಟರು
ಚ(ಂಗ)ಳೇಶ ವೀರವೀರ	ಯಿ ಧರ್ಮವ ನಡೆಸದವರು
ದೇವರಸ	ಕೌರವ (ದೆಳ)ನೆಯಾಂ ನರಕದಲ್ಲಿರುವರು

ಅಂದರೆ ಕ್ರಿ.ಶ. ೧೫೫೫ರ ಆಗಸ್ಟ್ ತಿಂಗಳಲ್ಲಿ ಚಂಗಾಳ್ವರ ವೀರವೀರದೇವರಸನು ಇದ್ದು ಗ್ರಾಮದಾನವನ್ನು ಬಹುಶಃ ವ್ಯಕ್ತಿಯು ಸಲ್ಲಿಸಿದ ಸೇವೆಗಾಗಿಯೋ, ಅಗ್ರಹಾರ ಕ್ಕಾಗಿಯೋ, ಮಠದ ಗುರುವಿಗೋ ಸುಂಕ ಸರ್ವಾದಾಯ ಸಹಿತ ಕೊಟ್ಟ ಸೂಚನೆ ಇದೆ; ಹಾಗೂ ಆ ಹೊತ್ತಿಗೆ ಇರುವ ಅವನ ಅಸ್ತಿತ್ವದಿಂದಾಗಿ ಕ್ರಿ.ಶ. ೧೫೬೫ರ ವೀರಚಿಕ್ಕರಾಜು ಒಡೆಯನಿಗಿಂತ ಭಿನ್ನವಾಗಿ ಶ್ರೀಕಂಠ ಅರಸನ ಹಿರಿಯಮಗನಾಗಿ ತೋರುತ್ತಾನೆ. ಕ್ರಿ.ಶ.

೧೫೬೮ರ ಸಂನ್ಯಾಸಿಪುರ ಶಾಸನದಲ್ಲಿ (ಪಿ.ಪ. ೧೧೪ - ಹೊಸತು ಎ.ಕ. ೪) ‘ಶ್ರೀ ಮನ್ಮಮಹಾಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ರಾಜಾಧಿರಾಜಪರಮೇಶ್ವರ ಶ್ರೀ ವೀರಪ್ರತಾಪ ನಂಜರಾಯಪಟ್ಟಣದ ಶ್ರೀಕಂಠದೇವ ಮಹಾ ಅರಸುಕುಮಾರರು ಶ್ರೀ ವೀರವೀರದೇವ ಮಹಾ ಅರಸು’ ಎಂದಿರುವುದಿದೆ. ವಿಜಯನಗರ ಪತನ ಪೂರ್ವದಲ್ಲಿ ಶ್ರೀಕಂಠ ಅರಸುವಿಗೆ ಅಥವಾ ವೀರವೀರದೇವನಿಗೆ ಇಂಥಾ ಬಿರುದಾವಳಿ ಸಾಧ್ಯವಿಲ್ಲದಿರುವ ಕಾರಣ, ವಿಜಯನಗರೋತ್ತರದಲ್ಲಿ ನಂಜರಾಯಪಟ್ಟಣದಲ್ಲಿ ಈ ಬಿರುದುಗಳ ಸಹಿತವಾಗಿ ವೀರವೀರದೇವನು ಆಳಿರುವ ಸಾಧ್ಯತೆಯನ್ನು ಪೋಷಿಸುವಂತಿದೆ. ಹೀಗಾಗಿ ಶ್ರೀಕಂಠರಸುವಿನ ೩ನೆಯ ಮಗ ಕ್ರಿ.ಶ. ೧೫೬೫ರ ಚಿಕರಾಜು ಒಡೆಯನಾಗಿದ್ದು ವೀರವೀರದೇವನ ಅಧೀನ ಮಾಂಡಲಿಕನಾಗಿ ಕೊಡಗಿನ ನಂಜರಾಯಪಟ್ಟಣದ ಅಧೀನ ಪ್ರಾಂತ್ಯದಲ್ಲಿ ಆಳುತ್ತಿದ್ದನೆಂಬ ಸೂಚನೆ ‘ಶ್ರೀ ಮನ್ಮಹಾಮಾಂಡಲಿಕ ಮಂಡಲೇಶ್ವರ’ ಎಂಬ ಅವನ ಬಿರುದಿನ ಸೂಚನೆಯಲ್ಲಿ ಸಿಗುತ್ತದೆ. ಹೀಗಾಗಿ ವಿಜಯನಗರಕಾಲದ ನಲ್ಲುಕೋಟೆಯ ಈ ಶಾಸನದಿಂದ ವೀರವೀರದೇವನ ಕಾಲ ಕ್ರಿ.ಶ. ೧೫೫೫ ರಿಂದಲೇ ಇದ್ದು ಕ್ರಿ.ಶ. ೧೫೬೮ರ ವರೆಗೂ ಆಳಿದನೆಂದಾಗುತ್ತದೆ; ಚೆಂಗಾಳ್ವ ವಂಶಾವಳಿಯಲ್ಲಿ ಹೊಸ ಸೇರ್ಪಡೆಯೊಂದಕ್ಕೆ ಈ ಶಾಸನ ನೆರವಾಗುತ್ತದೆ; ಕೊಡಗಿನಲ್ಲಿ ಚಂಗಾಳ್ವರ ಧಾನಧರ್ಮಾದಿಗಳ ವಿಜಯನಗರ ಕಾಲದ ಸಾಕ್ಷ್ಯ ನೀಡುತ್ತದೆ. ಚೆಂಗಾಳ್ವರ ಹಳೆಯ ಪ್ರಾಚೀನ ರಾಜಧಾನಿ ಪಾಲ್ಪರೆಯಿಂದ ತಿತಿಮಲೆ ಹೆಬ್ಬಾಲೆ ಕೋಟೆಬೆಟ್ಟ, ನಲ್ಲುಕೋಟೆ, ಚನ್ನಂಗಿ, ಚನ್ನನಕೋಟೆ ಕೋಡಂಗಿಬೆಟ್ಟ, ಕೊಡಗು ಶ್ರೀರಂಗಪಟ್ಟಣ - (ಹೊರರಾಜಧಾನಿ) ನಂಜರಾಯಪಟ್ಟಣದವರೆಗೂ ಇದ್ದ ವಿಜಯನಗರ ಕಾಲದ ಸಂಪರ್ಕವನ್ನು ಈ ಶಾಸನದ ನೆಲೆಯಿಂದಾಗಿ ಊಹಿಸಲನುಕೂಲವಾಗುತ್ತದೆ.

ಇನ್ನು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಕೊಡಗಿನ ವೀರನೊಬ್ಬ ಅವನ ಪರವಾಗಿ ಕಾಳಗಕ್ಕೆ ಹೋದ ಘಟನೆ ಉಕ್ತವಾಗಿದೆ. ನಂಜುಂಡಕವಿ ನಾಡಿನ ಜನ ಕೊಂಡಾಡುತ್ತಿದ್ದ ತನ್ನ ವೀರ ಚಿಕ್ಕಪ್ಪನಾದ ‘ವಿಜಯ’ನನ್ನು ಕುರಿತು ಕ್ರಿ.ಶ. ೧೫೪೦ರ ಸುಮಾರಿನಲ್ಲಿ ರಚಿಸಿದ ಸಾಂಗತ್ಯ ‘ಕುಮಾರರಾಮ ಚರಿತ್ರೆ’ಯಲ್ಲಿ[೯] ಕೊಡಗಿನ ಭಟರ ಶೌರ್ಯವನ್ನು ವರ್ಣಿಸುವಲ್ಲಿ ನಂಜರಾಜನ ಪ್ರತಿನಿಧಿಯಾಗಿ ಹೋದವರ ಶೌರ್ಯವನ್ನು ಗಮನಿಸಿಯೆ ‘ಕೊಂಗು ಕೊಡಗು ಮಲೆಯಾಳ ತಿಗುಳದೇಶಂಗಳ ಕೂರಾಳುಗಳ ...’ ಎಂದು ಹೇಳಿರುವಂತಿದೆ. ಸಂದರ್ಭವೆಂದರೆ ಕೃಷ್ಣದೇವರಾಯನು ಕ್ರಿ.ಶ. ೧೫೧೦ರಲ್ಲಿ ಉಮ್ಮತ್ತೂರು ಗಂಗರಾಜನ ಮೇಲೆ ಯುದ್ಧ ಸಾರಿದ. ನಂಜುಂಡನ ಚಿಕ್ಕಪ್ಪನಾದ ವಿಜಯನು, ಮಹಾಮಾಂಡಲೇಶ್ವರ ಕೊಡಗು ಶ್ರೀರಂಗಪಟ್ಟಣ ನಂಜರಾಯಪಟ್ಟಣದ ದೊರೆ ನಂಜರಾಜನ ಪ್ರತಿನಿಧಿಯಾಗಿ ವಿಜಯನಗರದ ಪರವಾಗಿ ಉಮ್ಮಾತ್ತೂರಿನ ಕಾಳಗಕ್ಕೆ ಹೋಗಿ, ರಾಯರಾವುತನಂತೆ ಕಾದು ಜಯಕ್ಕೆ ಕಾರಣನಾದ; ವೀರ ಸ್ವರ್ಗವೇರಿದ ಕೊಡುಗು ನಾಡಿಗೆ ಕೀರ್ತಿತಂದ. ಕೃಷ್ಣದೇವರಾಯ ಪೂರ್ವವಿಜಯಿಯಾಗಿ ಶಿವಸಮುದ್ರ ಹಾಗು (ಮಂಡ್ಯ)

ಶ್ರೀರಂಗಪಟ್ಟಣದ ಕೋಟೆಗಳನ್ನು ವಶಪಡಿಸಿಕೊಂಡ.[೬೨] (ಮಂಡ್ಯ) ಶ್ರೀರಂಗಪಟ್ಟಣದ ಹಾಗು ಮಲಬಾರಿನ ಗಡಿಪ್ರದೇಶದ ದೊರೆಯಾಗಿದ್ದ ಕುಮಾರ ವೀರಯ್ಯ ತನ್ನ ೩೦ ಮಕ್ಕಳೊಡನೆ ಕೃಷ್ಣದೇವರಾಯನಲ್ಲಿಗೆ ಬಂದು ಸೇನಾಧಿಪತ್ಯವನ್ನು ಬೇಡಿ ಪಡೆದು ಕ್ರಿ.ಶ. ೧೫೧೬ರ ರಾಯಚೂರು ಯುದ್ಧದಲ್ಲಿ ಪಾಲ್ಗೊಂಡ; ಇವನು ಈ ಶ್ರೀರಂಗಪಟ್ಟಣದ ಪಾಳೇಗಾರ, ಸಾಮಂತ ಚಿಕ್ಕ ಒಡೆಯ ಎಂದೂ ಕರೆಯಲ್ಪಡುತ್ತಿದ್ದು, ಇವನ ಮಗಳು ತಿರುಮಲದೇವಿ ಕೃಷ್ಣದೇವರಾಯನ ಮುಖ್ಯರಾಣಿಯರಲ್ಲೊಬ್ಬಳಾಗಿದ್ದಳು.[೬೩] ತಿರುಮಲದೇವಿ ಕ್ರಿ.ಶ. ೧೫೧೫ರ ಕೊಂಡವೀಡು ಕೋಟೆಯ ಮುತ್ತಿಗೆ ಸಮಯದಲ್ಲಿ ಕೃಷ್ಣದೇವರಾಯನೊಡನೆ ಅಲ್ಲಿದ್ದಳು.[೬೪] ಕ್ರಿ.ಶ. ೧೫೧೬ರ ಈ ಕುಮಾರ ವೀರಯ್ಯ ಅಥವಾ ಚಿಕ್ಕ ಒಡೆಯ ಮತ್ತು ಕ್ರಿ.ಶ. ೧೫೧೦ರಲ್ಲಿಯೇ ಉಮ್ಮತ್ತೂರು ಕಾಳಗದಲ್ಲಿ ವೀರಸ್ವರ್ಗವೇರಿದ 'ವಿಜಯ'ನಿಗೂ ಯಾವ ಸಂಬಂಧವೂ ಇಲ್ಲವಾಗಿ, ಕಾಲಸಾಮಂಜಸ್ಯ ಗಮನಿಸದೆ ಇಬ್ಬರೂ ಒಂದೇ ಎಂದು ತಳೆದಿದ್ದ ಅಭಿಪ್ರಾಯ[೬೫] ಮಾನ್ಯವಾದುದು.

ಇನ್ನು ಕ್ರಿ.ಶ. ೧೫೬೨ರಲ್ಲಿ ವಿಜಯನಗರದರಸ ಸದಾಶಿವರಾಯನ ಕಾಲದಲ್ಲಿ ಅವನ ಕಾರ್ಯಕರ್ತನಾಗಿದ್ದ ರಾಮರಾಜುವಿನ ಕುಮಾರ ಮಹಾಮಾಂಡಲೇಶ್ವರ ರಾಮರಾಜ ದೇವಯ್ಯ ಮಹಾಅರಸು ಕ್ರಿ.ಶ. ೩೧.೮.೧೫೫೯ರಲ್ಲಿ ನಂಜರಾಯಪಟ್ಟಣದ ವೀರರಾಜನ (ಕ್ರಿ.ಶ. ೧೫೫೯ - ೮೦) ಮಗಳನ್ನು ಮದುವೆಯಾದ. ವಿವಾಹವಾದುದಕ್ಕೆ ಕಾಣಿಕೆಯಾಗಿ ಪಲ್ಲಕ್ಕಿ ಉಂಬಳಿ ಎಂದು ಬಸವಾಪಟ್ಟಣ ಮತ್ತು ಕೊಣನೂರು ಗ್ರಾಮಗಳನ್ನು ರುದ್ರಗಣನಿಗೆ ನೀಡಿದ ವಿಷಯವು ಶಾಸನೋಕ್ತವಾಗಿದೆ.[೬೬] ಈ ಮೇಲಿನ ಅಂಶಗಳಿಂದ ಕೊಡಗು ಪ್ರದೇಶದ ಮಹಾಮಂಡಲೇಶ್ವರ, ಅಧೀನ ಮಾಂಡಲೇಶ್ವರರ ಅಧಿಕಾರದ ವ್ಯಾಪ್ತಿ, ಆಳುತ್ತಿದ್ದ ಪ್ರಾಂತಭಾಗ, ನೀಡಿದ ದಾನದತ್ತಿಗಳು ಸ್ವರೂಪ, ನೀಡಿದ್ದ ಸಾಹಿತ್ಯ ಪ್ರೋತ್ಸಾಹ, ಕವಿ ಆಶ್ರಯ, ಕೃತಿಗಳಲ್ಲಿ ಕೊಡಗಿನ ಭಟರ ಶೌರ್ಯ, ಕೊಡಗಿನ ಪರವಾಗಿ ವಿಜಯನಗರದ ರಸರಿಗೆ ಕಳುಹಿಸಿದ ಸೈನಿಕ ವೀರರ, ವಿಜಯನಗರಸರಲ್ಲಿ ಕಾರ್ಯಕರ್ತರು ಕೊಡಗಿನ ಅಳಿಯರಾದದ್ದು, ವಿವಾಹ ಸಮಯದ ಕಾಣಿಕೆ (ವಧುಕಾಣಿಕೆ!) ಕುರಿತೆಲ್ಲ ತಿಳಿಯುತ್ತದೆ.

ವಿಜಯನಗರ ಪತನಾನಂತರ ಆ ಅರಸರ ಹಿಡಿತ ದುರ್ಬಲವಾಯಿತು. ಕ್ರಿ.ಶ. ೧೬ನೇ ಶತಮಾನದ ಕೊನೆಗೆ ಪಿರಯರಾಜದೇವ ಸಿಂಹಪಟ್ಟಣ (ಸಿಂಗಪಟ್ಟಣ) ವೆಂದಿದ್ದ ಊರನ್ನು ತನ್ನ ಹೆಸರಿನಲ್ಲಿ ಪಿರಿಯಾಪಟ್ಟಣವೆಂದು ಹೊಸಪಟ್ಟಣ ಕಟ್ಟಿ ರಾಜಧಾನಿ ಮಾಡಿಕೊಂಡ. ಆದರೆ, ಕೊಡಗಿನ ನಂಜರಾಯಪಟ್ಟಣ ಹಳೆರಾಜಧಾನಿ ಎನಿಸಿದರೂ ಪ್ರಾಮುಖ್ಯ ಕಳೆದುಕೊಳ್ಳುತ್ತ ಬಂತು. ಕ್ರಿ.ಶ. ೧೬೦೭ರಲ್ಲಿ (ಮಂಡ್ಯ) ಶ್ರೀರಂಗಪಟ್ಟಣದಲ್ಲಿದ್ದ ಮಾಂಡಲೇಶ್ವರ ತಿರುಮಲರಾಜಯದೇವನು (ವಿಜಯನಗರದ ವೈಸರಾಯಿಯು) ಪಿರಿಯಾ ಪಟ್ಟಣ ತಾಲೂಕು ಮಲವಡಿಯನ್ನು ನಂಜರಾಯಪಟ್ಟಣದ ರುದ್ರಗಣೆನಿಗೆ ಅನ್ನದಾನಿ ಮಲ್ಲಿಕಾರ್ಜನದೇವರ ಸೇವೆಗೆ ನೀಡಿ ನಂಜರಾಯಪಟ್ಟಣದ ಚಂಗಾಳ್ವ ಸಂತತಿ ಇರುವ

ತನಕ ಆ ಸೇವೆ ಹಾಗು ಪಗದಿರೊಕ್ಕ ನಿಲ್ಲಬಾರದೆಂದು ಹೇಳಿರುವುದು ಶಾಸನೋಕ್ತವಾಗಿದೆ.[೬೭] ಅಂದರೆ ವಿಜಯನಗರದ ಮೇಲಿನ ನಿಷ್ಠೆಯನ್ನು ಈವರೆಗೆ ಪಾಲಿಸಿಕೊಂಡು ಬಂದ ಸಂಕೇತವಾಗಿದೆ. ವಿಜಯನಗರದ ರಾಜಕೀಯ ಇತಿಹಾಸಕ್ಕೆ ಅದು ಸೇರ್ಪಡೆಯೂ ಆಗಿದೆ. ನಂಜರಾಯಪಟ್ಟಣದ ರಾಜ್ಯಕ್ಕೆ ಮಳಲವಾಡಿ ಸೀಮೆ ಸೇರಿದೆ ಎಂಬ ಸ್ಥಿರ ಶಾಸನವನ್ನು ತಿರುಮಲರಾಜಯದೇವರು ರುದ್ರಗಣನಿಗೆ ನೀಡಿದ ವಿಷಯವೂ ಇದೆ.

ಒಟ್ಟಾರೆ ವಿಜಯನಗರಕಾಲದ ಕೊಡಗು ರಾಜಕೀಯವಾಗಿ ಮಹಾಮಂಡಲೇಶ್ವರ - ಮಾಂಡಲೇಶ್ವರ ವ್ಯವಸ್ಥೆಯನ್ನು ಅಮರನಾಯಕವರ್ಗದ ಮೂಲಕ ಬೆಳೆಸಿತು. ಆದರೆ ಹೆಚ್ಚಿನ ಸ್ವಾಯತ್ತತೆ ನೀಡಿದಂತೆ ಕಾಣುತ್ತದೆ. ವಿಜಯನಗರದ ಪರವಾಗಿ ಸೈನಿಕಸೇವೆಯನ್ನು ಕೊಡಗು ನೀಡಿತು. ಗ್ರಾಮಮಟ್ಟದಲ್ಲಿ ನ್ಯಾಯ ತೀರ್ಪುಗಳಿಗೆ, ಜಾತಿವ್ಯವಹಾರಗಳ ನ್ಯಾಯಗಳಿಗೆ ಗೌಡಿಕೆ, ಗೌಡ್ ಬೋವತನವಿತ್ತು. ಮಲಬಾರಿನ ನಾಯಕರು, ಚಂಗಾಳ್ವ ವಂಶಿಕರು ಕೊಡಗಿನ ಭಾಗಗಳಲ್ಲಿ ಆಳಿದರು. ವ್ಯಾಪರ ಹಾಗು ಗ್ರಾಮಸಂಪರ್ಕಗಳ ವ್ಯವಸ್ಥೆ ಇತ್ತು. ದೇಗುಲಗಳಿಗೆ ಅನ್ನದಾನಕ್ಕೆ ಅಕ್ಕಿ ಅರ್ಪಿಸುವ ಸಾಮಾನ್ಯ ಜನರೂಢಿಯಿತ್ತು. ಹಾಗು ಗ್ರಾಮ ಮತ್ತು ಭೂದಾನಗಳೂ ನಡೆಯುತ್ತಿದ್ದವು. ಜೈನಧರ್ಮಕ್ಕೆ ಜನ ಪ್ರೋತ್ಸಾಹವಿದ್ದಂತೆ, ರಾಜರ ದಾನದತ್ತಿಗಳಿದ್ದವು. ವೀರಶೈವ ಅರಸರೆನಿಸಿಯೂ ಜಿನಾಲಯಕ್ಕೆ ದಾನ ನೀಡಿ ಧರ್ಮಸಾಮರಸ್ಯ ತೋರಿದಂತೆ ಅಂದಿನ ಅರಸರು ಶಿವಾಲಯಗಳ ನಿರ್ವಹಣೆಯನ್ನು ನೇರ್ಪುಗೊಳಿಸಿದರು. ಕಳಂಜು ಹಾಗು ಹೊಂನ್ನುಗದ್ಯಾಣ ಇತ್ಯಾದಿ ನಾಣ್ಯಗಳ ಬಳಕೆ ಇತ್ತು. ಕೃಷಿದೃಷ್ಟಿಯಿಂದ ವಿವಿಧ ಬಗೆಯ ಗದ್ದೆಮಾದರಿಗಳಿದ್ದು ಅಕ್ಕಿ ಬೆಳೆ ವಿಪುಲವಾಗಿ ರಫ್ತಾಗುತ್ತಿದ್ದಂತಹ ಸೂಚನೆ ದೊರಕುತ್ತದೆ. ವೀರಶೈವ ಗುರುಗಳಿಗೂ ಗೌರವಾದರ ತೋರುವಲ್ಲಿ ವೀರಶೈವ ಮಠಗಳ ಅಸ್ತಿತ್ವವೂ ಕಾಣಬರುತ್ತದೆ. ಕೊಡಗಿನಲ್ಲಿಯ ವಿಜಯನಗರ ಕಾಲದ ವೀರಗಲ್ಲುಗಳು ಇಲ್ಲಿನ ಸೈನಿಕಸೇವೆ, ಶೌರ್ಯ ಪ್ರವೃತ್ತಿಯ ವಿಪುಲ ಪ್ರತೀಕಗಳಾಗಿ ಕಾಣಬರುತ್ತವೆ.

ಇಲ್ಲಿನ ದೇಗುಲಗಳ ವಾಸ್ತುಸ್ವರೂಪವೆಂದರೆ ವಿಜಯನಗರ ಕಾಲದ ಜಗತಿಯ ಮೇಲಿನ ನಿರಂಧಾರಶೈಲಿಯ ಪ್ರದಕ್ಷಿಣಾಪಥದ ಸುತ್ತಲ ಸ್ತಂಭಗಳ ನಡುವೆ ಏಕಗರ್ಭಗೃಹದ ದೇಗುಲಗಳಲ್ಲಿ ಕಾಣಬರುವುದಾಗಿದೆ. ಹುಲಿಬೇಟೆ ಶಿಲ್ಪಗಳು ಸ್ತಂಬ ಪಟ್ಟಿಕೆಗಳ ಮೇಲಿವೆ.

ಜನಜೀವನ ನೆಮ್ಮದಿಯ ಆಸರೆಯಲ್ಲಿದ್ದರೂ, ಕಾಳಗದ ಸಂದರ್ಭಗಳಿಗೇನೂ ಕೊರತೆ ಇರಲಿಲ್ಲ. ಇಲ್ಲಿನ ಬೇಟೆಗಾರಿಕೆ ಹಾಗು ಸೈನಿಕ ಸೇವೆಯ ಪರಂಪರೆ, ದಸರೆಯ ಆಚರಣೆ ವಿಜಯನಗರಕಾಲದ ಪ್ರಭಾವವೆನಿಸುತ್ತದೆ. ಮುಂದಿನ ಹಾಲೇರಿ ಅರಸರು ಇದನ್ನೆಲ್ಲ ಶಿಸ್ತುಬದ್ಧ ಚೌಕಟ್ಟಿನಲ್ಲಿ ಮುಂದುವರಿಸಿರುವುದನ್ನು ಕಾಣುವಲ್ಲಿ ವಿಜಯನಗರದ ಸಾಂಸ್ಕೃತಿಕ ಇತಿಹಾಸಕ್ಕೆ ವಾರಸುದಾರವಂತಿಕೆ ಇಲ್ಲಿನ ಜನಜೀವನದಲ್ಲಿದೆ ಎಂಬುದು ಗಮನಕ್ಕೆ ಬರುತ್ತದೆ. ಆದರೆ ಸ್ಥಳೀಯ ನೆಲಗಟ್ಟು ಆ ಸಾಂಸ್ಕೃತಿಕ ಚರ್ಯೆಗಳಿರುವುದು ಕಾಣಬರುತ್ತದೆ.

ಅಡಿಟಿಪ್ಪಣಿಗಳು

೧. ಎಫಿಗ್ರಾಫಿಯ ಕರ್ನಾಟಕ ಸಂ.೪ (ಹೊಸತು), (೧೯೭೫, ಪಿರಿಯಾಪಟ್ಟಣ ೧೨೨, ಮೈಸೂರು ವಿಶ್ವವಿದ್ಯಾಲಯ

೨. ಡಾ.ಕೆ.ಆರ್.ಗಣೇಶ್, (೧೯೯೬), ಆಂಧ್ರಪ್ರದೇಶದ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, ಪು. ೧೭೭ - ೭೮

೩. ಇತಿಹಾಸದರ್ಶನ ೧೨/೧೯೯೭, ಕ.ಇ. ಅಕಾಡೆಮಿ, ಪು. ೧೪೫

೪. ಎ.ಕೈ.ಸ. ೮ (ಹೊಸತು), ಅರಕಲಗೂಡು ೧೦೭

೫. ಎ.ಕ.ಸಂಪುಟ ೯ (ರೈಸ್ ಆವೃತ್ತಿ), (೧೯೦೫), ಬೆಂಗಳೂರು ಜಿಲ್ಲೆ, ಪು. ೧೯ ಮತ್ತು ಎ.ಕ. ಸಂಪುಟ ೪ (ರೈಸ್), ನಗರ ೭೬

೬. ಎ.ಕ.ಸಂಪುಟ (ರೈಸ್ ಆವೃತ್ತಿ), (೧೯೦೧), ಕಡೂರು ಜಿಲ್ಲೆ, ಕಡೂರು ೩೬

೭. ಎ.ಕ.ಸಂಪುಟ ೪ (ಹೊಸತು), (೧೯೭೫), ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕು, ೧೩೨ ಮತ್ತು ಪೀಠಿಕೆ ಪು. LXXii ('ಚಂಗಾಳ್ವ' ನಾಮರಾಜ - 'ನಾಗ' ಘನಾಘಮಾ ಮಹೀಪತಿ: - ರಂಗ - ಪರ್ಯ್ಯಣ - ನಂಜಮಹಾದೇವ)

೮. ಎಂ.ವಿ.ಕೃಷ್ಣರಾವ್, (೧೯೬೪), ಬೆಂಗಳೂರು ಕೆಂಪೇಗೌಡ, ಪು. ೧೩೩ - ೧೩೭

೯. ಕರ್ನಾಟಕ ಚರಿತ್ರೆ, (೧೯೯೭), ಪ್ರೊ.ಬಿ.ಷೇಕ್ ಅಲಿ (ಪ್ರ.ಸಂ), ಪ್ರೊ.ಕೆ.ಎಸ್.ಶಿವಣ್ಣ, (ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬೭

೧೦. ಎ.ಕ.ಸಂಪುಟ ೧ (ಹೊಸತು), (೧೯೭೨), ಕೊಡಗು ಜಿಲ್ಲೆ (ಸೋಮವಾರಪೇಟೆ ತಾಲೂಕು ೭೫), ಮೈಸೂರು ವಿಶ್ವವಿದ್ಯಾಲಯ

೧೧. ಎ.ಕ.ಸಂ.೮ (ಹೊಸತು), (೧೯೮೪), ಪಿ.ಪ.ತಾ ೪೪ (ರಾಮನಾಥಪುರ), ಮೈಸೂರು ವಿಶ್ವವಿದ್ಯಾಲಯ

೧೨. ಕೊಡಗು ಜಿಲ್ಲಾ ಗ್ಯಾಸೆಟಿಯರ್, (೧೯೯೨), ಸೂರ್ಯನಾಥ ಯು. ಕಾಮತ್ (ಮು.ಸಂ), ಪು.೪೦೦

೧೯. ಎ.ಕ.ಸಂಪುಟ ೧ (ಹೊಸತು), ಕೊಡಗು ಜಿಲ್ಲೆ ಅದೇ, ಸೋಮವಾರಪೇಟೆ ತಾಲೂಕು ೩೯ (ಹುಲುಕೋಡು)

೨೦. ಎ.ಕ.ಸಂಪುಟ ೧, ಅದೇ, ಸೋಮವಾರಪೇಟೆ ತಾಲೂಕು ೯೩ (ಸಿರಹ) ಕ್ರಿ.ಶ. ೧೧೭೫

೨೧. ಎ.ಕ.ಸಂಪುಟ ೮ (ಹೊಸತು), ಅರಕಲಗೂಡು ೧೦೭, ಹಾಸನಜಿಲ್ಲೆ, ಮೈಸೂರು ವಿಶ್ವವಿದ್ಯಾಲಯ

೨೨. ಎ.ಕ.ಸಂಪುಟ ೧ (ಹೊಸತು), ಅದೇ, ಮಡಿಕೇರಿ ತಾಲೂಕು ೨೦ (ಪಾಲೂರು)

೨೨. ಎ.ಕ.ಸಂಪುಟ ೧ (ಹೊಸತು), ಅದೇ, ಮಡಿಕೇರಿ ೨೦ (ಪಾಲೂರು), ಮಡಿಕೇರಿ ೨೧ (ಭಾಗಮಂಡಲ) ಕ್ರಿ.ಶ. ೧೩೭೧

೨೩. ಡಿ.ಎನ್.ಕೃಷ್ಣಯ್ಯ, ೧೯೭೪, ಕೊಡಗಿನ ಇತಿಹಾಸ, ಮೈಸೂರು ವಿಶ್ವವಿದ್ಯಾಲಯ, ಪು. ೫೪ (ಎ.ಕ.ಸಂ.೧೧ (ಹೊಸತು) ಚಿಕ್ಕಮಗಳೂರು ಜಿಲ್ಲೆ, ೧೯೯೮ ರಲ್ಲಿ ಮೂಡುಗೆರೆ ೮೭ನೇ ಶಾಸನ ಸನ್ನದು ಎಂದು ಸಂಪುಟದಿಂದ ಕೈಬಿಡಲಾಗಿದೆ)

೨೪. ಕರ್ನಾಟಕ ಚರಿತ್ರೆ, ಮಾಲೆ ೩, ೧೯೯೭, ಪ್ರೊ. ಬಿ.ಷೇಕ್ ಅಲಿ (ಪ್ರ.ಸಂ), ಪ್ರೊ.ಕೆ.ಎಸ್.ಶಿವಣ್ಣ, (ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೨ - ೨೩

೨೫. ಎ.ಕ.ಸಂ. ೮ (ಹೊಸತು), ಹಾಸನಜಿಲ್ಲೆ, ಅರಕಲಗೂಡು ೫೩, ಮೈಸೂರು ವಿಶ್ವವಿದ್ಯಾಲಯ, ೧೯೮೪

೨೬. ಡಾ.ಎಂ.ಎಂ. ಕಲಬುಗಿರ, (೧೯೯೧), ಐತಿಹಾಸಿಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು. ೧೧೨

೨೭. ಎ.ಕ.ಸಂ. ೧ (ಹೊಸತು), ಅದೇ, ಸೋಮವಾರಪೇಟೆ ತಾಲೂಕು ೯೨

೨೮. ಅದೇ, ಸೋಮವಾರಪೇಟೆ ತಾಲೂಕು ೫೮

೨೯. ಅದೇ, ಸೋಮವಾರಪೇಟೆ ತಾಲೂಕು ೭೫

೩೦. ಕನ್ನಡನಾಡಿನ ಚರಿತ್ರೆ (ಮೊದಲಭಾಗ), ೧೯೭೫, ಬಿ.ಎಂ. ಶ್ರೀಕಂಠಯ್ಯ (ಪ್ರ.ಸಂ), ಡಾ. ಬಿ.ಎ. ಸಾಲತ್ತೊರೆ, (ಸಂ), ಕನ್ನಡಸಾಹಿತ್ಯ ಪರಿಷತ್ತು, ಪು. ೭೦ ii, ಎ.ಕ.ಸಂ.೯ (ಹೊಸತು), ೧೯೯೦, ಬೇಲೂರು ೧೪೪, ೫೧, ೨೦, ಮತ್ತು S.N.Shivarudra Swammy, (೧೯೯೬), Vijayanagara Temples in Karnataka, Dr.of arch and Museums, Mysore, Pp. 22, 43

೩೧. ಎ.ಕ.ಸಂ. ೧, ಕೂರ್ಗ್ ಇನ್ಸ್‌ಕ್ರಿಪ್‌ಷನ್ಸ್ (ರೈಸ್ ಆವೃತ್ತಿ), ೧೯೧೪, ಮದ್ರಾಸ್, ಪು. ೨೦ - ೨೧

೩೨. ಕೂರ್ಗ್ ಇನ್ಸ್ ಕ್ರಿಪ್ ಷನ್ಸ್ (ರೈಸ್ ಆವೃತ್ತಿ), ಅದೇ, ಪು. ೨೦ - ೨೧

೩೩. ಡಾ. ಕೆ.ಆರ್.ಗಣೇಶ್, (೧೯೯೬), ಆಂಧ್ರಪ್ರದೇಶದ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, ಪು. ೧೭೭ - ೭೮

೩೪. ಡಾ. ಎಂ.ಜಿ.ಚಂದ್ರಕಾಂತ್ ಮತ್ತು ಎಂ.ಜಿ.ನಾಗರಾಜ್, 'ಕೊಡಗಿನ ನಾಗರಹೊಳೆಯ ಸಾಂಸ್ಕೃತಿಕ ಇತಿಹಾಸ ಮತ್ತು ಚಂಗಾಳ್ವರು, ಇತಿಹಾಸದರ್ಶನ ಸಂ. ೧೨/೧೯೯೭, ಪು. ೧೪೫ - ೪೬

೩೫. ಅಭಿನವಾಭಿದಾನಂ ಅಭಿನವ ಮಂಗರಾಜ ವಿರಚಿತಂ, ಎಮ್. ಮರಿಯಪ್ಪಭಟ್ಟ, (ಸಂ), ೨೩.೨.೧೯೫೨, ಮದರಾಸು, ಪು. IX

೩೬. i. ಜಯನೃಪಕಾವ್ಯ ಸಂಗ್ರಹ, ಹಂಪನಾಗರಾಜಯ್ಯ, (ಸಂ), ೧೯೬೭, ಪೀಠಿಕೆ, ಪು. Vi, Vii- X
   ii. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೬೦, ಮೈಸೂರು, ಪು. ೨೩೬
   iii. ದೇ.ಜವರೇಗೌಡ, ನಂಜುಂಡಕವಿ, ಸರಸಸಾಹಿತ್ಯ ಪ್ರಕಾಶನ, ಮೈಸೂರು, ೧೯೬೪, ಪು. ೨೦ರ ರೀತ್ಯಾ, ಮಂಗರಸನ ಮನೆತನಕ್ಕೂ ಚಂಗಾಳ್ವ ಮನೆತನಕ್ಕೂ ಕೊಳುಕೊಡೆ ಸಂಬಂಧವಿದ್ದಿರಲೂ ಬಹುದೆನ್ನಲಾಗಿದೆ.

೩೭. ಈ ಮಾಹಿತಿಯನ್ನು ಸ್ಥಳೀಯರಾದ ಹೊಸಪಟ್ಟಣದ ಶ್ರೀ ಬಿ.ಈ.ವೀರರಾಜು ಅವರು ತಿಳಿಸಿದರು.

೩೮. ಕೊಡಗು ಜಿಲ್ಲಾ ಗ್ಯಾಸೆಟಿಯರ್ (ಪರಿಷ್ಕೃತ), ಸೂರ್ಯನಾಥಕಾಮತ್ (ಪ್ರ.ಸಂ), ೧೯೯೨, ಬೆಂಗಳೂರು, ಪು. ೪೦೦

೩೯. ಅದೇ

೪೦. ಎ.ಕ.ಸಂ.೧ (ಹೊಸತು), ೧೯೭೨, ಅದೇ, ಸೋಮವಾರಪೇಟೆ ತಾಲೂಕು, ೮೮, ಪು. ೫೬

೪೧. ಬೆಂಗಳೂರು ಮತ್ತು ಕೊಡಗು ಜಿಲ್ಲೆಯ ಕೆಲವು ಅಪ್ರಕಟಿತ ಶಾಸನಗಳು' ಇತಿಹಾಸದರ್ಶನ ಸಂ. ೧೪/೧೯೯೯, ಪು. ೩೯

೪೨. ಎ.ಕ.ಸಂ.೧ (ಹೊಸತು), ಅದೇ, ಸೋಮವಾರಪೇಟೆ ೮೪

೪೩. ಕರ್ನಾಟಕ ಚರಿತ್ರೆ (ಚರಿತ್ರೆಮಾಲೆ ೩), ಕನ್ನಡ ವಿಶ್ವವಿದ್ಯಾಲಯ, ಅದೇ, ಪು. ೩೩

೪೪. ಎ.ಕ.ಸಂ.೧ (ಹೊಸತು), ಅದೇ, ಸೋಮವಾರಪೇಟೆ ೬೧ (ಚೌಡ್ಲು, ಕ್ರಿ.ಶ. ೧೨೯೭)

೪೫. ಎ.ಕ.ಸಂ.೪ (ಹೊಸತು), ಮೈಸೂರು ಜಿಲ್ಲೆ, ೧೯೭೫, ಅದೇ, ಪಿ.ಪ ೧೩೭ (ಹಿರೇಮಳಲಿ)

೪೬. ಎ.ಕ.ಸಂ.೨ (ಹೊಸತು), ಶ್ರವಣಬೆಳಗೊಳ ೧೯೭೩, ಪೀಠಿಕೆ, ಪು. LXii

೪೭. ಅದೇ, ದೊಡ್ಡಬೆಟ್ಟ ೩೨೯ (ಅಷ್ಟದಿಕ್ಪಾಲಕರ ಮಂಟಪ), ಕ್ರಿ.ಶ. ೧೫೯೯

೪೮. ಎ.ಕ.ಸಂ.೨ (ಹೊಸತು), ಶ್ರವಣಬೆಳಗೊಳ, ಅದೇ, ಪೀಠಿಕೆ ಪು. LXii

೪೯. ಎ.ಕ.ಸಂ.೪ (ಹೊಸತು), ಮೈಸೂರು ಜಿಲ್ಲೆ, ಅದೇ, ಪಿ.ಪ. ೨೨ (ಅಲ್ಪನಾಯಕನಹಳ್ಳಿ)

೫೦. ಅದೇ, ಪೀಠಿಕೆ, ಪು. XCiii

೫೧. ಪಿ.ವಿ. ಕೃಷ್ಣಮೂರ್ತಿ, 'ಚಂಗಾಳ್ವ ನಂಜುಂಡಡೊಡೆಯನ ಶಾಸನ,' ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಆರ್.ವಿ.ಕುಲಕರ್ಣಿ / ಲಕ್ಷ್ಮಣ್ ತೆಲಗಾವಿ (ಸಂ), ಸಂ. ೬೭, ಸಂ. ೨, ಡಿಸೆಂಬರ್ ೧೯೮೨, ಪು. ೧೦೨

೫೨. ಎ.ಕ.ಸಂ. ೪ (ಹೊಸತು) ಅದೇ, ಪೀಠಿಕೆ. ಪು. XCiii

೫೩. ದೇವಪ್ಪ ಕವಿ ವಿರಚಿತ ರಾಮವಿಜಯಕಾವ್ಯ, ೧೯೭೯, ಟಿ.ಕೇಶವಭಟ್ಟ, (ಸಂ), ಭಾರತೀಯ ಜ್ಞಾನಪೀಠ ಪ್ರಕಾಶನ (ಮೊದಲ ಆವೃತ್ತಿ), ಕಲ್ಕತ್ತ, ಪದ್ಯ ೭೦, ಪು. ೧೦ - ೧೧

೫೪. ಎ.ಕ.ಸಂ.೧ (ಹೊಸತು), ಅದೇ, ಸೋಮವಾರಪೇಟೆ ತಾಲೂಕು ೩೫

೫೫. ಅದೇ, ಸೋಮವಾರಪೇಟೆ ೧೯

೫೫. ಅ.ಎ.ಕ.ಸಂ.೫ (ರೈಸ್ ಆವೃತ್ತಿ) ಭಾಗ ೨, ಬೇಲೂರು ತಾಲೂಕು, ೧೧೨ನೇ ಶಾಸನದಲ್ಲಿ ಬರುವ ಕುವರಲಕ್ಷ್ಮನ ಕುರಿತಂತೆ '..... ತಂನ ಮನಃ ಪ್ರಿಯೆಯ ತಂನ ಪರಮಾಯುಷ್ಯೆ. ತನ್ನಾಳ್ದಗಾಯ್ತೆನಿಸಿದನೇಂ ..... ಇದು ಬಲ್ಲಾಳ ನೃಪಾಳಕಂಗೆ ಪರಿದುಂ ನಿತ್ಯತ್ವಮಂ ಮಾಳ್ಪುದಭ್ಯುದಯಕ್ಕಾಗರಮೆಂದು ಬಣ್ಣಿಸೆ ಜಗಂ ಭಾಸ್ವತ್ ಶಿಳಾಸ್ತಂಭ' ಎಂಬ ಸಾಲನ್ನು ಗಮನಿಸದರೆ, ವೀರಬಲ್ಲಾಳನು ತೀವ್ರ ರೋಗಪೀಡಿತನಾಗಿದ್ದ ಸಂದರ್ಭದಲ್ಲಿ ಕುವಲಕ್ಷ್ಮನು ತನ್ನ, ತನ್ನ ಸತಿಯ, ತನ್ನ ಸುಭಟರ ಪರಮಾಯುಷ್ಯವನ್ನು ಬಲ್ಲಾಳನ ಆಯುವೃದ್ಧಿಗೆ (ನಿತ್ಯತ್ವಮಂ) ಹಾರೈಸಿ ಅರ್ಪಿಸುವ ಸಂದರ್ಭವನ್ನು ಹೇಳುತ್ತಿರುವಲ್ಲಿ, ಈ ಚಾರುಕೀರ್ತಿ ಪಂಡಿತ ಗುರುವಿನ, ವೈದ್ಯೋಪಚಾರ, ಜೀವರಕ್ಷ ಪಾಲಕವಂತಿಕೆಯ ಪೂರ್ವ ಗುರುಪರಂಪರೆಯನ್ನು ಸಂವಾದಿಯಾಗಿ ಪರಿಶೀಲಿಸಬಹುದು.

೫೬. i. ಕನ್ನಡ ಕನ್ನಡ ನಿಘಂಟು, (೧೯೯೫), ಕನ್ನಡ ಸಾಹಿತ್ಯ ಪರಿಷತ್ತು, ಪು. ೮೮೪೬

೫೭. ii. ಎ.ಕ.ಸಂ.೭ (ಹೊಸತು) ಮಂಡ್ಯ ೫೬ (ಹೊಸಬೂದನೂರು, ಕ್ರಿ.ಶ. ೧೨೭೬), ಪು. ೨೩೮, ಮಳವಳ್ಳಿ ತಾಲೂಕು ೬೪ (ಮಾರೆಹಳ್ಳಿ, ಕ್ರಿ.ಶ. ೧೨೫೯ - ೬೦), ಪು. ೩೮೫, ಮೈಸೂರು ವಿಶ್ವವಿದ್ಯಾಲಯ, ೧೯೭೦

೫೮. ಎ.ಕ.ಸಂ. ೧೧ (ಹೊಸತು) ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲೂಕು ೨೭ (ಶೃಂಗೇರಿ, ಕ್ರಿ.ಶ. ೧೫೨೩), ಪು. ೨೮೫

೫೮. ಕನ್ನಡ ಕನ್ನಡ ನಿಘಂಟು (ಕಸಾಪ) ಸಂಪುಟ ೪ (೧೯೭೯), ಪು. ೪೪೮೮

೫೯. ಎ.ಕ.ಸಂ.೩ (ಹೊಸತು) ಹೆ.ಸೋ ೧೧೦ (ಮಳಲಿ), ಹೆ.ಕೋ. ೧೪೨ (ಮಗ್ಗೆ)

೬೦. ನಲ್ಲುಕೋಟೆ (ವೀರರಾಜೇಂದ್ರಪೇಟೆ ತಾ.) ಶ್ರೀ ಜಮ್ಮಡ ಎ.ಕರುಂಬಯ್ಯ ಅವರ ಎಸ್ಟೇಟಿನಲ್ಲಿ ಈ ಶಾಸನವು ಇರುವ ಬಗ್ಗೆ ೮.೪.೧೯೮೭ರ ಪ್ರಜಾವಾಣಿಯಲ್ಲಿ ಕೊಡಗಿನ ಆತ್ಮೀಯ ಸಂಶೋಧನ ಕೇಂದ್ರದವರು ಸುದ್ದಿ ನೀಡಿ 'ಚೆಂಗಾಳ್ವ ವೀರವೀರದೇವ' ಅರಸನಿದ್ದ ವಿದಿದ್ದರು. ಶಾಸನದ ಪಾಠ ಪ್ರಕಟಮಾಡಿರಲಿಲ್ಲ. ನಾನು ಈ ಶಾಸನದ ನಕಲು ತೆಗೆದು ಪಾಠವನ್ನು ಓದಿ ಸಂಪೂರ್ಣ ವಿವರವನ್ನು ೧.೧೨.೧೯೯೧ರ 'ಶಕ್ತಿ' ಪತ್ರಿಕೆ (ಮಡಿಕೇರಿ)ಯಲ್ಲಿ ಪ್ರಕಟಿಸಿದ್ದೇನೆ. ಶಾಸನದ ಮೇಲ್ಭಾಗ ಅರ್ಧಕ್ಕೆ

ಒಡೆದಿದ್ದು, ಉಳಿದ ಶಾಸನಶಿಲೆಯ ಮುಂಬದಿ, ಹಿಂಬದಿಯ ಭಾಗದಲ್ಲಿದ್ದ ಪಠ್ಯವನ್ನು ಇಲ್ಲಿ ನೀಡಿದೆ. ಈ ಶಾಸನ ಸ್ಥಳಾಂತರಗೊಂಡು ನಲ್ಲುಕೋಟೆಯಲ್ಲಿದ್ದರೂ ಪಾಲ್ಪರೆ, ಹಾಗು ಕೊಡಗು ಶ್ರೀರಂಗಪಟ್ಟಣ - ನಂಜರಾಯಪಟ್ಟಣ ನಡುವಣ ಚೆಂಗಾಳ್ವರ ಆಡಳಿತ ಪ್ರದೇಶದ ಸಂಪರ್ಕದ ಸಾಕ್ಷಿಯಾಗಿರುವಂತಿದೆ.

೬೧. ನಂಜುಂಡಕವಿ ವಿರಚಿತ ರಾಮನಾಥ ಚರಿತ ಪೂರ್ವಾರ್ಧ ಸಂ - ೨, (೧೯೫೫), ಎಚ್.ದೇವೀರಪ್ಪ (ಸಂ), ಮೈಸೂರು ವಿಶ್ವವಿದ್ಯಾಲಯ, ೧೧ನೇ ಸಂಧಿ, ಪದ್ಯ ೩ - ೪, ಪು. ೧೮೬

೬೨. Robert Sewell, (೧೯೮೦), A F orgotten Empire, asian educational Series, New Delhi, P. 130

೬೩. i. Ibid, Pp. A 122, 247, 236

ii. ಡಾ.ಸೂರ್ಯನಾಥಕಾಮತ್, 'ಪುಣ್ಯಕ್ಷೇತರ ಐತಿಹಾಸಿಕ ಕೇಂದ್ರ ಶ್ರೀರಂಗಪಟ್ಟಣ', ತರಂಗ (ವಾರಪತ್ರಿಕೆ), ಮೇ ೨೧, ೧೯೮೯, ಪು. ೨೦

೬೪. T.V.Mahalingam, (1975), Administration and Social life under vijayanagar, Part II, Social Life, university of Madras, P. 42

೬೫. ಶ್ರೀ ಫಜುಲ್ ಹಸನ್ ಅವರು ಬೆಂಗಳೂರು ಮಿಥಿಕ್ ಸೊಸೈಟಿಯಲ್ಲಿ ೧೯೮೮ ಜೂನ್‌ನಲ್ಲಿ 'ಕೃಷ್ಣದೇವರಾಯ ಕೊಡಗು ಶ್ರೀರಂಗಪಟ್ಟಣದ ಅಳಿಯನಿರಬೇಕು' ಎಂದು ತಮ್ಮ ಭಾಷಣದಲ್ಲಿ ತಿಳಿಸಿದ್ದು ೨೬.೬.೧೯೮೮ರ 'ಶಕ್ತಿ' ಪತ್ರಿಕೆ (ಮಡಿಕೇರಿ) ಯಲ್ಲಿ ಪ್ರತಿಕ್ರಿಯೆ ಬಂದಿತ್ತು. ಆ ಬಗೆಗೆ ೧೦.೭.೧೯೮೮ರ 'ಶಕ್ತಿ' ಪತ್ರಿಕೆಯಲ್ಲಿ ಈ ವಿವರವನ್ನು ನಾನು ನೀಡಿದ್ದೇನೆ.

೬೬. ಎ.ಕ.ಸಂ.೮ (ಹೊಸತು), ಹಾಸನಜಿಲ್ಲೆ, (ಅರಕಲಗೂಡು ಕ್ರಿ.ಶ. ೧೫೭೯)

೬೭. ಎ.ಕ.ಸಂ.೪ (ಹೊಸತು) ಅದೇ, ಪಿರಿಯಾಪಟ್ಟಣ ೫೬ (ಬೆಟ್ಟದಪುರ), ಎ.ಕ.ಸಂ. ೮ (ಹೊಸತು)

೬೮. ಅರಕಲಗೂಡು ೭೨ (ರಾಮನಾಥಪುರ - ಕ್ರಿ.ಶ. ೧೬೦೭)

❑❑

೪

ಸಾಮ್ರಾಜ್ಯದ ಅಧಿಕಾರಕ್ಕೆ ಸಾಳುವ ವಂಶದವರ ಮರುಪ್ರಯತ್ನ

* ಪ್ರೊ. ಬಿ.ರಾಜಶೇಖರಪ್ಪ

ವಿಜಯನಗರ ಸಾಮ್ರಾಜ್ಯವನ್ನು ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ಹೆಸರಿನ ನಾಲ್ಕು ಬೇರೆ ಬೇರೆಯ ರಾಜವಂಶಗಳು ಅನುಕ್ರಮವಾಗಿ ಹಾಗೂ ಸತತವಾಗಿ ಆಳಿದವೆನ್ನುವುದು ಈಗಾಗಲೇ ತಿಳಿದ ಸಂಗತಿ. ಇವುಗಳಲ್ಲಿ ಸಂಗಮ ವಂಶ ಕ್ರಿ.ಶ. ೧೩೩೬ ರಿಂದ ೧೪೮೫ರ ವರೆಗೆ ಸುಮಾರು ೧೫೦ ವರ್ಷ, ಸಾಳುವ ವಂಶ ಕ್ರಿ.ಶ. ೧೪೮೫ ರಿಂದ ೧೫೦೫ರ ವರೆಗೆ ಸುಮಾರು ೨೦ ವರ್ಷ, ತುಳುವ ವಂಶ ಕ್ರಿ.ಶ. ೧೫೦೫ ರಿಂದ ೧೫೬೫ ರವರೆಗೆ ಸುಮಾರು ೬೦ ವರ್ಷ ಹಾಗೂ ಅರವೀಡು ವಂಶ ಕ್ರಿ.ಶ. ೧೫೭೦ ರಿಂದ ೧೬೭೦ ರವರೆಗೆ ಸುಮಾರು ೧೦೦ ವರ್ಷ, ಹೀಗೆ ನಾಲ್ಕು ವಂಶಗಳು ಆಳಿರುವುದೂ, ಆ ನಾಲ್ಕು ವಂಶಗಳಲ್ಲಿ ಒಂದೊಂದು ಕ್ರಮವಾಗಿ ತಮ್ಮ ತಮ್ಮ ಆಳ್ವಿಕೆಯ ಅವಧಿ ಪೂರೈಸುತ್ತಿದ್ದಂತೆ, ಇನ್ನೊಂದು ವಂಶದ ಆಳ್ವಿಕೆಗೆ ಎಡೆಕೊಟ್ಟು ತೆರೆಗೆ ಸರಿದುಹೋಗಿರುವುದೂ ಇತಿಹಾಸದಲ್ಲಿ ವ್ಯಕ್ತವಾಗಿದೆ. ತಮ್ಮ ಅಧಿಕಾರ ಕಳೆದುಕೊಂಡು (ವಂಶದ)ವರು ಆಮೇಲೆ ತಮ್ಮ ಅದೃಷ್ಟ ಕಳೆದು ಹೋದದ್ದಕ್ಕೆ ತಹತಹಪಡುತ್ತ, ಮತ್ತೆ ಅವಕಾಶ ಸಿಕ್ಕರೆ ತಮ್ಮ (ವಂಶದ) ಆಳ್ವಿಕೆಯನ್ನು ಪ್ರತಿಷ್ಠಾಪಿಸುವ ಕನಸುಕಾಣುತ್ತ ಬರುವುದು ಆಶ್ಚರ್ಯದ ಸಂಗತಿಯೇನಲ್ಲ. ಇತಿಹಾಸದಲ್ಲಿ ಇದಕ್ಕೆ ಒಳ್ಳೆಯ ನಿದರ್ಶನಗಳೇ ಇವೆ.

ಬಾದಾಮಿಯಿಂದ ಆಳುತ್ತಿದ್ದ ಚಾಲುಕ್ಯ ವಂಶ ತನ್ನ ಆಳ್ವಿಕೆಯ ಎರಡು ಶತಮಾನ ಕಳೆಯುತ್ತಿದ್ದಂತೆ ಅಧಿಕಾರಚ್ಯುತವಾಗಿ ರಾಷ್ಟ್ರಕೂಟ ವಂಶಕ್ಕೆ ಗದ್ದುಗೆಯನ್ನು ಬಿಟ್ಟುಕೊಟ್ಟಿತು. ಆದರೆ, ಅದೇ ಚಾಲುಕ್ಯ ವಂಶ ಎರಡು ಶತಮಾನಗಳ ನಂತರ ಮತ್ತೆ ಅಧಿಕಾರ ಗ್ರಹಣಮಾಡಿ, ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದ್ದು ಪ್ರಸಿದ್ಧವಾದ ಸಂಗತಿ. ಚಾಲುಕ್ಯರನ್ನು ಸೋಲಿಸಿ ರಾಷ್ಟ್ರಕೂಟರು ಅಧಿಕಾರಕ್ಕೆ ಬಂದರಾದರೂ, ಅವರನ್ನು ಸರ್ವನಾಶ ಮಾಡಹೋಗದೆ, ಅಷ್ಟೇ ಅಲ್ಲ, ಆ ವಂಶದ ಜೊತೆಗೆ ವೈರವನ್ನೂ ಮುಂದುವರಿಸಿಕೊಂಡು ಹೋಗದೆ, ಆ ವಂಶದ ಕೆಲವರಿಗೆ ಪ್ರಾಂತಾಧಿಕಾರ ಮತ್ತಿತರ ಸ್ಥಾನಗಳನ್ನು ಕೊಟ್ಟು, ಉದಾರ ನೀತಿಯನ್ನೂ, ರಾಜಕಾರಣ ಚಾತುರ್ಯವನ್ನೂ ತೋರಿದರೆಂಬುದು ಈಗಾಗಲೇ ತಿಳಿದ ಸಂಗತಿ. ಹೀಗೆ ಸೋತ (ವಂಶದ)ವರನ್ನು ಅಧೀನರನ್ನಾಗಿ ನೇಮಿಸಿಕೊಂಡು ಆಳ್ವಿಕೆ ನಡೆಸಿದ ಇಂಥ ಉದಾಹರಣೆಗಳು ನಮಗೆ ಇತಿಹಾಸದಲ್ಲಿ ದೊರೆಯುತ್ತವೆ.

ತುಳುವ - ಸಾಳುವ ಸಂಬಂಧ

ವಿಜಯನಗರ ಇತಿಹಾಸದಲ್ಲೂ ಅಂಥ ಉದಾಹರಣೆಗಳಿವೆ. ಸಂಗಮ ವಂಶಾನಂತರ ಸಾಮ್ರಾಜ್ಯಾಧಿಕಾರ ಹಿಡಿದ ಸಾಳುವ ವಂಶ ಕೇವಲ ಇಪ್ಪತ್ತು ವರ್ಷಗಳ ಅಲ್ಪಾವಧಿಗೇ ತನ್ನ ಅಧಿಕಾರವನ್ನು ಕಳೆದುಕೊಂಡು ತುಳುವ ವಂಶಕ್ಕೆ ಗದ್ದುಗೆಯನ್ನು ಬಿಟ್ಟುಕೊಟ್ಟಿತು. ಅಧಿಕಾರದ ಸೂತ್ರ ಹಿಡಿದ ತುಳುವ ಮನೆತದವರು ಅಧಿಕಾರ ಕಳೆದುಕೊಂಡಿದ್ದ ಸಾಳುವ ಮನೆತನದವರನ್ನು ದೂರ ಇಡದೆ, ಅವರಿಗೆ ಸಚಿವ ಸ್ಥಾನ, ಪ್ರಾಂತಪಾಲಕ ಸ್ಥಾನ ಮುಂತಾದವನ್ನು ಕೊಟ್ಟು ತಮ್ಮಲ್ಲಿ ನಿಷ್ಠೆಯಿಂದಿರುವಂತೆ ಗೌರವದಿಂದ ನಡೆದುಕೊಂಡಿದ್ದರು. ಹೀಗಾಗಿ ಈ ಎರಡೂ ವಂಶಗಳ ನಡುವಿನ ಸಂಬಂಧ ಹಾಸುಹೊಕ್ಕಾಗಿ ಮುಂದುವರಿದುಕೊಂಡು ಬಂದಿತ್ತು.

ಹೀಗೆ ಅಧಿಕಾರ ಹಿಡಿದ ಒಂದು ಮನೆತನದವರು ಅಧಿಕಾರ ಕಳೆದುಕೊಂಡ ಇನ್ನೊಂದು ಮನೆತನದವರನ್ನು ಕಡೆಗಣಿಸದೆ ಗೌರವದಿಂದ ನಡೆಸಿಕೊಂಡದ್ದು, ಅದರಂತೆಯೇ ಆ ಇನ್ನೊಂದು ಮನೆತನದವರು ಆಳುವ ಮನೆತನದವರೊಂದಿಗೆ ಹೊಂದಿಕೊಂಡು ನಿಷ್ಠೆಯಿಂದ ನಡೆದುಕೊಂಡದ್ದು - ಈ ಎರಡಕ್ಕೂ ಉದಾಹರಣೆಗಳು ಚರಿತ್ರೆಯಲ್ಲಿ ಈಗಾಗಲೇ ಸುಪರಿಚಿತ ವಾಗಿದೆ. ತುಳುವ ವಂಶದ ವೀರನರಸಿಂಹ (ಕ್ರಿ.ಶ. ೧೪೮೫ - ೯೧) ಪ್ರಾಬಲ್ಯಕ್ಕೆ ಬರುವ ಮುನ್ನ ಸಾಮ್ರಾಜ್ಯಾಧಿಕಾರ ನಡೆಸುತ್ತಿದ್ದವರು ಸಾಳುವರಷ್ಟೆ. ತುಳುವರಿಂದ ಸಾಮ್ರಾಜ್ಯದ ಅಧಿಕಾರ ಕಳೆದುಕೊಂಡ ಮೇಲೆ ಸಾಳುವರು ಅವರಿಂದ ಮೂಲೆಗುಂಪೇನೂ ಆಗದೆ ಅಲ್ಲಲ್ಲಿ ಕೆಲವರಾದರೂ ಈ ಹಿಂದೆ ಹೇಳಿದಂತೆ ಸಚಿವ, ಪ್ರಾಂತ್ಯಪಾಲಕ ಮುಂತಾದ ಸ್ಥಾನ ಪ್ರಾಶಸ್ತ್ಯ ವನ್ನು ಪಡೆಯುವಷ್ಟು ಪ್ರಭುತ್ವದ ವಿಶ್ವಾಸವನ್ನು ಸಂಪಾದಿಸಿದ್ದರು. ಹಾಗೆಯೇ ಪ್ರಾಂತ್ಯ ಪಾಲಕರಾಗುವಷ್ಟು ಮನ್ನಣೆ ಪಡೆದ ಸಾಳುವ ಪ್ರಮುಖರಲ್ಲಿ ನರಸಿಂಗರಾಯನು ಒಬ್ಬ ಅವನು ಪ್ರಾಯಶಃ ಅಚ್ಯುತರಾಯನ ಕಾಲ (೧೫೨೯ - ೪೨)ದಲ್ಲಿ ಅಥವಾ ಸದಾಶಿವರಾಯನ

(೧೫೪೨ - ೭೨) ಕಾಲದಲ್ಲಿ ಪ್ರಾಂತ್ಯ ಪಾಲಕ ಸ್ಥಾನವನ್ನು ಪಡೆದಿದ್ದನೆಂದು ಕಾಣುತ್ತದೆ. ಬಹುದೊಡ್ಡ ಸಾಮ್ರಾಜ್ಯವನ್ನು ಕೇವಲ ಇಪ್ಪತ್ತು ವರ್ಷಗಳ ಅತ್ಯಲ್ಪ ಕಾಲ ಆಳಿ ಆ ಅಧಿಕಾರವನ್ನು ಕಳೆದುಕೊಂಡಿದ್ದ ಸಾಳುವ ವಂಶದವರು ಮತ್ತೊಮ್ಮೆ ತಮಗೆ ಸಾಮ್ರಾಜ್ಯದ ಅಧಿಕಾರ ದಕ್ಕೀತೆ ಎಂದು ಹಂಬಲಿಸುತ್ತಿದ್ದರೆ ಅಥವಾ ಹಳಹಳಿಸುತ್ತಿದ್ದರೆ ಆಶ್ಚರ್ಯವೇನಿಲ್ಲ. ಆ ವಂಶದಲ್ಲಿ ಕೆಲವರಾದರೂ ತಮ್ಮ ಸ್ಥಾನದ ಅನುಕೂಲಗಳ ಕಾರಣದಿಂದ ಬಲಸಂಗ್ರಹಣೆ ಮಾಡಿಕೊಂಡು, ಸಾಮ್ರಾಜ್ಯದ ಅಧಿಕಾರವನ್ನು ಮತ್ತೊಮ್ಮೆ ಕೈಗೆ ತೆಗೆದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದವರಿರಬೇಕು. ಅಂಥವರ ಒಬ್ಬ ಪ್ರತಿನಿಧಿಯೇನೋ ಎನ್ನುವಂತೆ ಮಹತ್ವಾಕಾಂಕ್ಷಿಯೊಬ್ಬ ಪ್ರಯತ್ನ ನಡೆಸಿದ್ದಂತೆ ಕಾಣುತ್ತದೆ. ಚಿತ್ರದುರ್ಗ ನಾಯಕರ ವಂಶಸ್ಥರಲ್ಲಿರುವ ದಾಖಲೆಯೊಂದು ಅಂಥ ವಿಷಯದ ಮೇಲೆ ಬೆಳಕು ಚೆಲ್ಲುವಂತಿದೆ.

ದುರ್ಗದ ನಾಯಕರ ಅಪ್ರಕಟಿತ ದಾಖಲೆ

ಕ್ರಿ.ಶ.ಸು. ೧೯ನೆಯ ಶತಮಾನದ ಮಧ್ಯಭಾಗದಲ್ಲಿ, ಪ್ರಾಯಶಃ ಅದಕ್ಕೂ ಹಿಂದಿನ ಕಾಲದಲ್ಲೇ, ಬರೆದಿಟ್ಟುಕೊಂಡ ಒಂದ ಮಾತೃಕೆಯಿಂದ ಪ್ರತಿಮಾಡಿಕೊಂಡಿರುವ, ಚಿತ್ರದುರ್ಗ ನಾಯಕರ ಚರಿತ್ರೆಗೆ ಸಂಬಂಧಿಸಿದ ಈ ಅಪರೂಪದ ದಾಖಲೆಯ ಆರಂಭದ ಎಂಟು ಪುಟಗಳು ಮಾತ್ರ ಈಗ ಇದ್ದು, ಆ ಮುಂದಿನ ಪುಟಗಳು ಲಭ್ಯವಾಗಿರುವುದಿಲ್ಲ. ತಿಮ್ಮಣ್ಣನಾಯಕನಿಂದ ಪ್ರಾರಂಭವಾದ ಚಿತ್ರದುರ್ಗ ನಾಯಕರ ಆಳ್ವಿಕೆಯ ಆರಂಭಕಾಲದ ವಿವರಗಳು ಪ್ರಸ್ತುತ ಲಭ್ಯವಿರುವ ಪುಟಗಳಲ್ಲಿ ಬಂದಿದ್ದು, ಮೇಲೆ ಹೇಳಿದ ಅಂಶಗಳ ಬಗ್ಗೆ ಬೆಳಕು ಚೆಲ್ಲುವಂತಿವೆ. ಚಿತ್ರದುರ್ಗ ನಾಯಕರ ಚರಿತ್ರೆಯನ್ನು ಹೇಳುವ ಈವರೆಗೆ ದೊರೆತಿರುವ ಯಾವ ಹಸ್ತಪ್ರತಿಗಳಲ್ಲೂ, ದಾಖಲೆಗಳಲ್ಲೂ ಕಾಣಬರದಿದ್ದ ಕುತೂಹಲಕರ ಹೊಸ ವಿವರಗಳನ್ನು ಈ ದಾಖಲೆ ನೀಡುತ್ತದೆ. ಚಿತ್ರದುರ್ಗ ಪಾಳೆಯಪಟ್ಟಿನ ಆರಂಭದ ಕಾಲದ ವಿವರಗಳನ್ನು ಕೊಡುತ್ತಲೇ, ಕಾಲಗರ್ಭದೊಳಗೆ ಮುಚ್ಚಿಹೋಗಿರುವ ವಿಜಯನಗರ ಸಾಮ್ರಾಜ್ಯದ ರಾಜಕೀಯದ ಕೆಲವು ಅಜ್ಞಾತ ವಿದ್ಯಮಾನಗಳ ವಿವರಗಳನ್ನು ಹೇಳುತ್ತದೆ. ಆ ವಿವರಗಳು ಚಿತ್ರದುರ್ಗ ಹೇಗೋ ಹಾಗೆ ವಿಜಯನಗರದ ಅಜ್ಞಾತ ಚರಿತ್ರೆಯ ಮೇಲೆ ಬೆಳಕು ಚೆಲ್ಲುವಂತಹ ವಿವರಗಳಾಗಿವೆ. ಆ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಹೀಗೆ ನೋಡಬಹುದು.

ಮೇಲೆ ಹೇಳಿದ ಸಾಳುವ ನರಸಿಂಗರಾಯ ವಿಜಯನಗರ ಸಾಮ್ರಾಜ್ಯದ ಪ್ರಾಯಶ: ಸಾಕಷ್ಟು ದೊಡ್ಡದಾದ ಒಂದು ಪ್ರದೇಶಕ್ಕೆ ಅಧಿಪತಿಯಾಗಿದ್ದನು. ಅದೇ ಕಾಲದಲ್ಲಿ ವಾಲ್ಮೀಕಿ ಕುಲದ ಕಾಮಗೇತಿ ಎಂಬ ಬೆಡಗಿಗೆ ಸೇರಿದ ತಿಮ್ಮಣ್ಣ ನಾಯಕನು ಚಿತ್ರದುರ್ಗ ಪ್ರಾಂತ್ಯವನ್ನು ಆಳುತ್ತಿದ್ದನು. ಸಾಳುವ ನರಸಿಂಗರಾಯನು ಈ ಚಿತ್ರದುರ್ಗ ಪ್ರಾಂತ್ಯಕ್ಕೂ ತಾನೇ ಅಧಿಪತಿಯಾಗಬೇಕು ಎಂಬ ದುರಾಸೆಯಿಂದ, ಚಿತ್ರದುರ್ಗವನ್ನು ಆಳುತ್ತಿದ್ದ ತಿಮ್ಮಣ್ಣನಾಯಕನಿಗೆ ಅತ್ಯಂತ ವಿನಯದಲ್ಲಿ, "ನಾವು ನಮ್ಮ ನಮ್ಮ ರಾಜ್ಯಗಳನ್ನು ಏಕವಾಗಿಸಿಕೊಳ್ಳೋಣ, ಉಭಯರೂ ಸಮಭಾಗವಾಗಿ ಎರಡೂ ಕಡೆಯಲ್ಲಿ ಸೈನ್ಯವನ್ನು

ಇಟ್ಟುಕೊಳ್ಳೋಣ. ಏಕವಾಗಿಸಿದ ರಾಜ್ಯವನ್ನು ಇಬ್ಬರೂ ಕೂಡಿ ಆಳೋಣ" ಎಂದು ನಿಯೋಗಿಗಳ ಮೂಲಕ ಕಾಗದ ಬರೆಯಿಸಿ ಕಳಿಸಿಕೊಟ್ಟನು. (ಅದಕ್ಕೆ ಪ್ರಾಯಶಃ ತಿಮ್ಮಣ್ಣ ನಾಯಕನು ಒಪ್ಪಿ ಆಮೇಲೆ ಉಭಯರ ಆಡಳಿತ ಕೇಂದ್ರಗಳಲ್ಲಿ ಉಭಯರ ಸೈನ್ಯಗಳೂ ಇರುವಂತಾಯಿತೆಂದು ಕಾಣುತ್ತದೆ). ಚಿತ್ರದುರ್ಗದಲ್ಲಿ ಸಾಳುವ ನರಸಿಂಗರಾಯನ ಸೈನ್ಯವನ್ನು ಅಲೀಖಾನ್ ಎಂಬುವನು ನೋಡಿಕೊಳ್ಳುತ್ತಿದ್ದನು. ಹೀಗೆ ಒಂದೇ ಆಗಿಸಿದ ಪ್ರದೇಶವನ್ನು ಎರಡೂ ಕಡೆಯವರು, ತಮ್ಮ ತಮ್ಮ ಅಧಿಕಾರಕ್ಕೆ ಸೇರಿದ ಪ್ರದೇಶವೆಂಬಂತೆ ಸ್ವಾಧೀನದಲ್ಲಿ ಟ್ಟುಕೊಂಡಿದ್ದರು. ಆ ಅಲೀಖಾನನು ವಿಜಯನಗರಕ್ಕೆ ಆಗಾಗ ಹೋಗಿಬರುತ್ತ ದುರ್ಗದಲ್ಲೇ ಇರುತ್ತಿದ್ದನು. ಹೀಗೆ ಇರುತ್ತಿದ್ದರೆ ಈ ಪ್ರದೇಶ ಪೂರ್ಣವಾಗಿ ನಮ್ಮ ಸ್ವಾಧೀನಕ್ಕೆ ಬರುವುದಿಲ್ಲವೆಂದು ಅವನು ಸಾಳುವ ನರಸಿಂಗರಾಯನಿಗೆ ಬಿನ್ನವತ್ತಳೆಯನ್ನು ಬರೆದು ಕೊಂಡು (ಮತ್ತಷ್ಟು) ಭಾರೀಪ್ರಮಾಣದ ಸೈನ್ಯವನ್ನು ಕರೆಸಿಕೊಂಡು ದುರ್ಗದಲ್ಲಿಟ್ಟು ಕೊಂಡನು. ಅಲ್ಲಿಗೆ (ಸರಿಯಾದ ಸಂದರ್ಭ ಅಥವಾ ಅವಕಾಶ ಸಿಕ್ಕ ಕೂಡಲೆ, ಚಿತ್ರದುರ್ಗ ವನ್ನು ತಮ್ಮ ಕೈವಶ ಮಾಡಿಕೊಳ್ಳಬೇಕೆಂಬ) ಅವರ ಹಿಕಮತ್ತು ಪೂರ್ತಿಯಾದಂತಾಯಿತು.

ಹೀಗೆ ಇರುತ್ತಿರುವಾಗ ಕಲ್ಲುಬರಿಗೆಯು ನರಸಿಂಗರಾಯನ ಸ್ವಾಧೀನದಿಂದ ತಪ್ಪಿಹೋಯಿತು. ಆಗವನು ಭಾರೀ ಪ್ರಮಾಣದ ಸೈನ್ಯ ತೆಗೆದುಕೊಂಡು ಬರಬೇಕೆಂದು ಅಲೀಖಾನ್ ಮತ್ತು ತಿಮ್ಮಣ್ಣನಾಯಕರಿಗೆ ಪತ್ರಕಳಿಸಿದನು. ಚಿತ್ರದುರ್ಗದ ಅರಸು ಮಕ್ಕಳನ್ನು ಮುರಿಯಬೇಕೆಂದು ಬಗೆದು ಅಲೀಖಾನನು ತಾನು ಕಲ್ಲುಬುರಿಗಿಗೆ ಬರಲಾಗುವುದಿಲ್ಲವೆಂದು ಬಿನ್ನವತ್ತಳೆ ಬರೆಸಿ ಕಳಿಸಿದನು. ಆದರೆ ತಿಮ್ಮಣ್ಣನಾಯಕನು ಮಾತ್ರ ದುರ್ಗದಲ್ಲಿ ಅರಸು ಮಕ್ಕಳಾದ ಓಬಣ್ಣ, ರಾಣ್ಯದ ಓಬಣ್ಣ, ಗುದಿಬಿ (ಗುಲಿಪಿ) ನಾಯಕ ಇತರ ಕೆಲವು ಮಂದಿಯನ್ನೂ ಇಟ್ಟು, ಅಣ್ಣಗಾರ ಓಬಣ್ಣನನ್ನು ಕರೆದುಕೊಂಡು ಎರಡು ಸಾವಿರ ಸೈನ್ಯವನ್ನು ತೆಗೆದುಕೊಂಡು ಕಲ್ಲುಬರಿಗೆಗೆ ಹೊರಟು, ನೀರ್ತಡಿಗೆ ಹೋಗಿ (ತಮ್ಮ ಮನೆ ದೇವರಾದ ಶ್ರೀರಂಗಧಾಮನಿಗೆ ಹರಿಸೇವೆ ಮಾಡಿ, ಕಲ್ಲುಬರಿಗೆಗೆ ಹೋಗಿ ಸಾಳುವ ನರಸಿಂಹರಾಯನನ್ನು ಕಂಡನು. ಆ ಕೋಟೆಯನ್ನು ಲಗ್ಗೆ ಹತ್ತುತ್ತೇವೆ ಅಪ್ಪಣೆಕೊಡಿ ಎಂದು ಕೇಳಿ ಅವನೂ ಅವನ ಮಂದಿಯೂ, ಅಣ್ಣಗಾರ ಓಬಣ್ಣನು ಕೋಟೆಗೆ ಲಗ್ಗೆ ಹತ್ತಿದರು. ಸೂರ್ಯೋದಯದ ಕಾಲಕ್ಕೆ ಕೋಟೆ ಅವರ ಕೈವಶವಾಯಿತು. ಕಲ್ಲುಬುರಿಗೆ ಹೀಗೆ ಸ್ವಾಧೀನವಾದ ಮೇಲೆ ನರಸಿಂಗರಾಯನು ತಿಮ್ಮಣ್ಣನಾಯಕ ಮತ್ತು ಅಣ್ಣಗಾರ ಓಬಣ್ಣನಾಯಕ, ಇವರನ್ನೂ ಎರಡೂ ಕಡೆಯ ಫೌಜನ್ನೂ (ದಂಡು - ಸೈನ್ಯ) ಕರೆದುಕೊಂಡು ವಿಜಯನಗರಕ್ಕೆ ಬಂದನು. ಆಗ ಮಹಾರಾಜನು (ಸಂತೋಷಪಟ್ಟು) ಈ ನಾಯಕರನ್ನು ಮೂರು ತಿಂಗಳಕಾಲ ತಮ್ಮಲ್ಲಿಟ್ಟುಕೊಂಡು, ಅವರಿಗೆ ೧. ಚಿನ್ನದ ಮುಲಾಮಿನ ದೊಡ್ಡ ಶಂಕಚಕ್ರ, ೨. ಅಂದಳದ ಮೊಸಳೆ ಬಾಯಿ ಒಂದು ಜೊತೆ, ೩. ಒಂದು ಫಿರಂಗಿ, ೪. ಒಂದು ಸತ್ತಿಗೆ, ೫. ಒಂದು ಚಿನ್ನದ ಹಸ್ತ, ೬. ಒಂದು ಹಗಲು ದೀವಟಿಗೆ ಈ

ಉಡುಗೊರೆಗಳನ್ನೂ 'ಹಗಲು ಕಗ್ಗೊಲೆ ಮಾನ್ಯ' ಎಂಬ ಬಿರುದನ್ನೂ ಅದನ್ನು ಹೊಗಳಿಸಿಕೊಳ್ಳಲು ಭಟ್ಟರನ್ನೂ ಕೊಟ್ಟು ದುರ್ಗಕ್ಕೆ ಕಳಿಸಿಕೊಟ್ಟನು. ಈ ರೀತಿ ಅವರು ಜಯಶಾಲಿಗಳಾಗಿ ಜಯರೇಖೆ ಪಡೆದು ಬಂದರು.

ಹೀಗೆ ಸ್ವಲ್ಪಕಾಲ ಕಳೆಯಿತು. ಇತ್ತ ಅಲೀಖಾನನು ನರಸಿಂಗರಾಯನಿಗೆ ಒಳಗಿಂದೊಳಗೇ ಪಿತೂರಿಯಿಂದ 'ಈ ಪ್ರದೇಶ ನಮ್ಮ ಸ್ವಾಧೀನಕ್ಕೆ ಬರುವಹಾಗೆ ಕಾಣುತ್ತಿಲ್ಲ. ಇವನನ್ನು ಮುಗಿಸಬೇಕು' ಎಂದು ಕಾಗದ ಬರೆದನು. ಆಗ ನರಸಿಂಗರಾಯನು ನಯೋಕ್ತಿಯಿಂದ ಕಾಗದ ಬರೆದು ತಿಮ್ಮಣ್ಣನಾಯಕನನ್ನು ವಿಜಯನಗರಕ್ಕೆ ಕರೆಯಿಸಿಕೊಂಡನು. ಆಗ ತಿಮ್ಮಣ್ಣನಾಯಕನ ಸಂಗಡ ಅಣ್ಣಗಾರ ಓಬಣ್ಣ, ದಾದೆನಾಯಕ, ಇನ್ನೂ ಕೆಲವು ಮಂದಿ ಸಹ ಹೋದರು. ಅಲ್ಲಿ ತಿಮ್ಮಣ್ಣನಾಯಕನನ್ನು ಇದ್ದಕ್ಕಿದ್ದಂತೆ ಸೆರೆಯಲ್ಲಿಡಲಾಯಿತು. ಅಣ್ಣಗಾರ ಓಬಣ್ಣ, ದಾದೆನಾಯಕರನ್ನು ನಿರ್ಬಂಧದಲ್ಲಿ (?) ಇರಿಸಲಾಯಿತು. ಆಗ ತಿಮ್ಮಣ್ಣನಾಯಕ ಅವರನ್ನು ತನ್ನಲ್ಲಿಗೆ ಕರೆಸಿಕೊಂಡು, 'ಇವರು ನನ್ನನ್ನು ಬಿಡುವುದಿಲ್ಲ. ನೀವು ದುರ್ಗಕ್ಕೆ ಹೋಗಿ' ಎಂದು ಹೇಳಿ ರಸಸಿದ್ಧರು ಎಂಬ ಯೋಗಿ ಪುರುಷರು ಹಿಂದೆ ತನಗೆ ಅನುಗ್ರಹಿಸಿದ್ದ ದಶಕಟ್ಟಿನ ವಿಭೂತಿ, ದಟ್ಟಿ, ಕೈಲಂಬು ಸಹ ಕೊಟ್ಟು 'ನೀವು ಹೋಗಿ' ಎಂದು ಅಪ್ಪಣೆ ಕೊಟ್ಟನು. ಅದರಂತೆ ಅವರು ನರಸಿಂಗರಾಯನಿಗೆ ಕಾಣಿಸಿಕೊಳ್ಳದೆ ದುರ್ಗಕ್ಕೆ ಬಂದು ಸೇರಿದರು. ತಿಮ್ಮಣ್ಣನಾಯಕನು ಅಲ್ಲಿ ದೈವಾಧೀನನಾದನು. (ಅವನಿಗೆ ಅಲ್ಲೇ ಅಂತ್ಯಸಂಸ್ಕಾರವೂ ಆಯಿತು). ಅವನ ಬಳಿ ಇದ್ದ ಜಿಂಕಲ ಓಬಯ್ಯ ಎಂಬುವನು ಅಸ್ಥಿ ತೆಗೆದುಕೊಂಡು ಬಂದನು. ಮತ್ತಿ ಗ್ರಾಮದಲ್ಲಿ ತಿಮ್ಮಣ್ಣನಾಯಕನಿಗೆ ಗುಡ್ಡೇಕಲ್ಲನ್ನು (ಸಮಾಧಿಯನ್ನು) ಮಾಡಲಾಯಿತು.

ನರಸಿಂಗರಾಯನಿಗೆ ಕಾಣಿಸಿಕೊಳ್ಳದೆ ವಿಜಯನಗರದಿಂದ ಹೊರಟ ಅಣ್ಣಗಾರ ಓಬಣ್ಣ ಮತ್ತು ದಾದೆನಾಯಕರು ಚಿತ್ರದುರ್ಗದ ಕಡೆ ಬರುತ್ತ, ಮಧ್ಯೆ ಒಂದೆಡೆ ಬಳಗಾನೂರು ಎಂಬ ಗ್ರಾಮಕ್ಕೆ ಬಂದರು. ಅವರು ಆ ಗ್ರಾಮದ ಗೌಡ ಗಿರಿಯಣ್ಣ ಎಂಬುವನ ಮನೆಯಲ್ಲಿ ತಂಗಿದರು. ಅವನು ಇವರನ್ನು ತುಂಬ ಪರಾಂಬರಿಕೆ ಮಾಡಿ, ಉಪಚರಿಸಿ, ತನ್ನ ಕಡೆಯ ಕೆಲವು ಜನರನ್ನು ಜೊತೆಗೆ ಕೊಟ್ಟು ದುರ್ಗಕ್ಕೆ ಕಳಿಸಿಕೊಟ್ಟನು. ಅವರು ಬಂದು ದುರ್ಗವನ್ನು ಸೇರಿಕೊಂಡರು. ಮುಂದೆ ಆ ಗೌಡ ಗಿರಿಯಣ್ಣನಿಗೆ (ಅವನು ತೋರಿದ ಪ್ರೀತಿ ಮತ್ತು ಬೆಂಬಲಕ್ಕಾಗಿ) ಚಿತ್ರದುರ್ಗದ ಬಳಿಯ ರೊಟ್ಟಿಹಳ್ಳಿ ಎಂಬ ಗ್ರಾಮವನ್ನು ೩೦೦೦ ವರಹಕ್ಕೆ ಪಡೆದು ಅದನ್ನು ಉಂಬಳಿಯಾಗಿ ಅವನ ಗೌಡಿಕೆಗೆ ನೀಡಲಾಯಿತು. ಹಾಗೆಯೇ ದೊಡ್ಡಣ್ಣನಾಯಕನಿಗೆ ಉಚ್ಚಂಗಿದುರ್ಗದ ನಾಯಕತನವನ್ನು ಪಾಲಿಸಲಾಯಿತು. ಕೆಲಕಾಲಾನಂತರ, ಈ ದೊಡ್ಡಣ್ಣನೂ ದೈವಾಧೀನನಾಗಲಾಗಿ ಆತನ ಗುಡ್ಡೇಕಲ್ಲನ್ನು (ಸಮಾಧಿಯನ್ನು) ಗುಂಟನೂರಲ್ಲಿ ಮಾಡಲಾಯಿತು.

ತದನಂತರದಲ್ಲಿ ಅಲೀಖಾನನ ಪ್ರಸ್ತಾಪ ಕಾಣಿಸುವುದಿಲ್ಲ. ತಿಮ್ಮಣ್ಣನಾಯಕನ ಜೊತೆಗೆ ಹೋಗಿದ್ದವರು ಅವನನ್ನು ವಾಪಸು ಕರೆಸಿಕೊಳ್ಳಲು ಆಗಲೇ ಹೇಳಿಬಂದಿದ್ದರೋ ಏನೋ, ತಿಳಿಯದು. ಇಷ್ಟೆಲ್ಲ ವಿದ್ಯಮಾನಗಳು ನಡೆಯುತ್ತಿರುವಾಗ ಕಾಮಗೇತಿ ರಾಮರಾಯನು ವಿಜಯನರದಲ್ಲಿರಲಿಲ್ಲ. (ಅವನು ವಿಜಯನಗರಕ್ಕೆ ಮರಳಿದ ಮೇಲೆ ನಡೆದದ್ದೆಲ್ಲವು ತಿಳಿದುಬಂತು). ಓಬಣ್ಣನಾಯಕನಿಗೆ ದುರ್ಗದ ನಾಯಕತನವನ್ನು ನೀಡಲಾಯಿತು. ಈ ಕಾಮಗೇತಿ ರಾಮರಾಯನು ಸ್ವರ್ಗಸ್ಥನಾದ ಮೇಲೆ ಓಬಣ್ಣನಾಯಕನಿಗೆ ಅರಸುತನವಾಯಿತು. ಇದೇ ಓಬಣ್ಣನಾಯಕನಿಗೆ ರಸಸಿದ್ಧರು ಮದಕೇರಿನಾಯಕ ಎಂಬ ಹೆಸರನ್ನು ಕೊಟ್ಟಿದ್ದರು.

ಮೇಲೆ ತಿಳಿಸಿದಂತೆ ಅಪೂರ್ಣವಾಗಿ ಉಪಲಬ್ಧವಾಗಿರುವ ಆ ದಾಖಲೆಯಲ್ಲಿ ಇಷ್ಟು ವಿವರ ಬರುತ್ತದೆ. ಈ ದಾಖಲೆಯು ಇನ್ನೊಂದು ಮಾತೃಕೆಯಿಂದ ಪ್ರತಿಮಾಡಿಕೊಂಡದ್ದೆಂದೂ, ಆ ಪ್ರತಿಗೆ ಮೂಲವಾದ ಮಾತೃಕೆಯಲ್ಲಿ ಕೆಲವೆಡೆ ಬರಹ ಸ್ಪಷ್ಟವಾಗುತ್ತಿಲ್ಲವೆಂದೂ ಪ್ರತಿಕಾರನು ಅಲ್ಲಲ್ಲಿ ಬರೆದಿರುವುದುಂಟು. ಈ ಪ್ರತಿಯ ಮೂಲ ಮಾತೃಕೆಯೇನಾದರೂ ಮುಂದೊಂದು ಕಾಲಕ್ಕೆ ಲಭ್ಯವಾದರೆ, ಈಗ ಅಲ್ಲಲ್ಲಿ ಸಂಭವಿಸಿರುವ ಬರಹದ ಅಸ್ಪಷ್ಟತೆಯ ಸಮಸ್ಯೆ ಪರಿಹಾರವಾಗುವುದಲ್ಲದೆ ಇನ್ನೂ ಹೆಚ್ಚಿನ ಕೆಲವು ಸಂಗತಿಗಳು ಸಹ ಲಭ್ಯವಾಗಬಹುದು.

ಕಾಮಗೇತಿ ರಾಮರಾಯ

ದಾಖಲೆಯಲ್ಲಿ ಬಂದಿರುವ ಒಂದು ಅಂಶವನ್ನು ಕುರಿತು ಇಲ್ಲಿ ಮೊದಲಿಗೆ ಹೇಳಬೇಕಾದ ಮಾತೊಂದಿದೆ. ಅದೆಂದರೆ, ವಿಜಯನಗರ ಸಾಮ್ರಾಜ್ಯದ ದೊರೆಗಳೆಂದು ತಮ್ಮನ್ನು ಕರೆದುಕೊಂಡು ಆಳಿದ ವಂಶಗಳಲ್ಲಿ ನಾಲ್ಕನೆಯದು ಅರವೀಡು ವಂಶವಷ್ಟೆ. ಆ ವಂಶದ ರಾಮರಾಜಯ್ಯ (ಕೃಷ್ಣದೇವರಾಯನ ಮಗಳ ಗಂಡನಾದದ್ದರಿಂದ) 'ಅಳಿಯ ರಾಮರಾಯ' ಎಂದೇ ಹೆಚ್ಚು ಪರಿಚಿತನಾಗಿದ್ದಾನೆ. ಅವರ ಮನೆತನವನ್ನು ಕುರಿತು ಬರೆಯುವಾಗೆಲ್ಲ ಅರವೀಡು ಮನೆತನ ಎಂದೇ ಬರೆಯುತ್ತ ಬರಲಾಗಿದೆಯಷ್ಟೆ. ಈ ರಾಮರಾಯನನ್ನು ಮೇಲೆ ತಿಳಿಸಿದ ದಾಖಲೆ 'ಕಾಮಗೇತಿ ರಾಮರಾಯ' ಎಂದು, ಇದುವರೆಗೂ ತಿಳಿದು ಬಂದಿರದ ಹೊಸ ರೀತಿಯಲ್ಲಿ ಕರೆದಿದೆ. ಹಾಗೆ ಕರೆಯುವ ಮೂಲಕ ಅದು ಈ ರಾಮರಾಯ, ಕಾಮಗೇತಿ ವಂಶದವರೆಂದೇ ಪ್ರಸಿದ್ಧರಾಗಿರುವ ಚಿತ್ರದುರ್ಗದ ನಾಯಕರ ಸಗೋತ್ರ ಬಂಧುಗಳೆಂಬುದನ್ನು ಸೂಚಿಸುವಂತಿದೆ. ಇದು ನಿಜವಾದರೆ, ಇತಿಹಾಸಕ್ಕೆ ಈವರೆಗೆ ಎರವಾಗಿದ್ದ ಬಹುಮುಖ್ಯ ಸಂಗತಿಯೊಂದು ಈಗ ನಮ್ಮೆಲ್ಲರ ಗಮನವನ್ನು ಸೆಳೆಯುತ್ತದೆ. ಆದರೆ ರಾಮರಾಜಯ್ಯನ ಪ್ರಸ್ತಾಪವಿರುವ ಶಾಸನಗಳಲ್ಲಿ, ಅವನ ವಂಶದಲ್ಲಿ ಮುಂದೆ ಅರಸರೆನಿಸಿಕೊಂಡವರ ಶಾಸನಗಳಲ್ಲಿ ಮತ್ತು ದುರ್ಗದ ನಾಯಕರ ಚರಿತ್ರೆಯನ್ನು ಇತರ ಪ್ರಕಾರಾಂತದ ಹಸ್ತಪ್ರತಿಗಳಲ್ಲಿ ಈ ಅಂಶ ಏಕೆ ಸೂಚಿತವಾಗಿಲ್ಲ ಎಂಬ ಪ್ರಶ್ನೆಯು ನಮ್ಮೆದುರು ನಿಲ್ಲುತ್ತದೆ.

ಸಾಳುವ ನರಸಿಂಗರಾಯನ ಮಹತ್ವಾಕಾಂಕ್ಷೆ

ಮೇಲಿನ ದಾಖಲೆಯ ವಿವರಗಳನ್ನು ನೋಡಿದರೆ, ಸಾಳುವ ನರಸಿಂಗರಾಯ ತನ್ನ ರಾಜ್ಯದ ಆಳ್ವಿಕೆಯ ಅಧಿಕಾರಕ್ಕೆ ತೃಪ್ತನಾಗದೆ, ಚಿತ್ರದುರ್ಗ ಪ್ರಾಂತದ ಮೇಲೂ ಕಣ್ಣುಹಾಕಿ ಅದನ್ನು ನಿಧಾನವಾಗಿ ತನ್ನದನ್ನಾಗಿ ಮಾಡಿಕೊಳ್ಳಲು ಪ್ರಾರಂಭಿಕ ಹಂತದ ಎಲ್ಲ ಬಗೆಯ ಸನ್ನಾಹವನ್ನೂ ಮಾಡಿದನೆಂದೂ ಅವನ ಆಸೆ ಕೈಗೂಡಿಸಲು ಅಲೀಖಾನ್ ನಂತಹ ಸಹಾಯಕರನ್ನು ಇಟ್ಟುಕೊಂಡಿದ್ದನೆಂದು ಅಂತಹ ಸಹಾಯಕರು ಅವನ ಹಿತಾಸಕ್ತಿಯ ಪರವಾಗಿ ಹೇಗೆ ಕೆಲಸ ಮಾಡುತ್ತ ಬಂದಿದ್ದರೆಂದೂ ವ್ಯಕ್ತವಾಗುತ್ತದೆ. ಹೀಗಾಗಿ ಸಾಳುವ ನರಸಿಂಗರಾಯನ ಚಲನವಲನಗಳು ಅವನೊಬ್ಬ ರಾಜಕೀಯ ಮಹತ್ವಾಕಾಂಕ್ಷಿಯಾಗಿದ್ದನೆಂಬುದನ್ನು ವ್ಯಕ್ತಪಡಿಸುತ್ತವೆ. ಸದಾಶಿವರಾಯನು ದೊರೆಯಾದ ಕಾಲದಿಂದಲೂ ಸಾಮ್ರಾಜ್ಯದ ಅಧಿಕಾರದ ಮೇಲೆ ರಾಮರಾಜಯ್ಯ ಮತ್ತು ಅವನ ಸೋದರ ತಿರುಮಲರಾಜಯ್ಯ ಇವರ ಮೇಲೆ ಕಣ್ಣು ಇದ್ದೇ ಇತ್ತು ಎಂಬುದು ಇತಿಹಾಸದಿಂದ ಈಗಾಗಲೇ ನಮಗೆ ಸುವ್ಯಕ್ತ. ಪ್ರಸ್ತುತ ದಾಖಲೆಯ ಘಟನೆಗಳ ವೇಳೆಗೆ, ಸಾಮ್ರಾಜ್ಯದ ಅಧಿಕಾರದತ್ತ ಕಣ್ಣು ನೆಟ್ಟಿದ್ದವರಲ್ಲಿ, ಅರವೀಡು ವಂಶದವರಂತೆಯೆ ಸಾಳುವ ವಂಶದವರೂ ಇದ್ದರು; ಹಾಗಾಗಿ ಆ ವಿಷಯದಲ್ಲಿ ಈಗ ಸ್ಪರ್ಧೆ ಇದ್ದದ್ದು ಆಂತರಿಕವಾಗಿ ತುಳುವರಲ್ಲಲ್ಲ, ಅವರೊಟ್ಟಿಗೆ ರಾಜಕೀಯ ಜೀವನದಲ್ಲಿ ಹಾಸುಹೊಕ್ಕಾಗಿದ್ದ ಸಾಳುವ ಮತ್ತು ಅರವೀಡು ಮನೆತನದವರಲ್ಲಿ ಎಂಬುದು ಈಗ ತಿಳಿದುಬರುವಂತಾಗಿದೆ.

ಕಲ್ಲುಬುರಿಗೆಯನ್ನು ಮರಳಿ ವಶಪಡಿಸಿಕೊಳ್ಳಬೇಕಾದ ಉತ್ಕಟ ರಾಜಕೀಯ ಪರಿಸ್ಥಿತಿಯಲ್ಲಿ ತಿಮ್ಮಣ್ಣನಾಯಕ ತ್ವರಿತವಾಗಿ ಮತ್ತು ಪ್ರಾಮಾಣಿಕವಾಗಿ ಪಾಲ್ಗೊಂಡರೆ, ಅಲೀಖಾನ್ ಸೈನ್ಯ ತೆಗೆದುಕೊಂಡು ಕಲ್ಲುಬುರಿಗೆಗೆ ಹೋಗಬೇಕಾಗಿದ್ದರೂ ಹೋಗದೆ, ಚಿತ್ರದುರ್ಗದಲ್ಲಿಯೆ ನಿಂತದ್ದಕ್ಕೆ, ಪ್ರಾಯ: ತಿಮ್ಮಣ್ಣನಾಯಕನಿಗೆ ಕಲ್ಲುಬುರಿಗೆಯ ಸಂಘರ್ಷದಲ್ಲಿ ಏನಾದರೂ ಅವಗಡ (ಸೆರೆ, ಜಖಂ ಅಥವಾ ಸಾವು) ಉಂಟಾದರೆ ತಾನು ಕೂಡಲೇ ಚಿತ್ರದುರ್ಗದ ಮೇಲೆ ಹಿಡಿತ ಸಾಧಿಸಿ, ಅದನ್ನು ಸಾಳುವ ನರಸಿಂಹರಾಯನಿಗೆ ಒಪ್ಪಿಸಬೇಕೆಂಬ ಹಂಚಿಕೆ ಕಾರಣವಿದ್ದಿರಬೇಕು. ಇಂಥದೊಂದು ಹಂಚಿಕೆ ಸಾಳುವ ನರಸಿಂಗರಾಯನಿಗೆ ಮತ್ತು ಅಲೀಖಾನ್‌ಗೆ ಇರಬಹುದೆಂದು ಶಂಕೆ ತಿಮ್ಮಣ್ಣನಾಯಕನಿಗೆ ಇರಲಿಲ್ಲವೆ? ಒಂದು ವೇಳೆ ಅವನಿಗೆ ಅಂಥ ಶಂಕೆ ಇದ್ದರೂ, ತನಗೇನೂ ಮಾಡಲು ಅವರು ಶಕ್ತರಾಗರು ಎಂಬ ಅತಿಯಾದ ಆತ್ಮವಿಶ್ವಾಸವೇನಾದರೂ ಇತ್ತೆ? ಇದಾವುದರ ಬಗ್ಗೆಯೂ ದಾಖಲೆ ಸೂಚನೆಯನ್ನು ಕೊಡುವುದಿಲ್ಲ. ಅಂತೂ ಅವರ ಹಂಚಿಕೆಯೇನೂ ನನಸಾಗಲಿಲ್ಲ. ಬದಲಿಗೆ ತಿಮ್ಮಣ್ಣನಾಯಕ ಕಲ್ಲುಬುರಿಗೆಯನ್ನು ವಶಪಡಿಸಿಕೊಂಡದ್ದೇ ಅಲ್ಲದೆ, ವಿಜಯನಗರದ ಚಕ್ರವರ್ತಿಯ ಪ್ರೀತಿಗೂ ಪಾತ್ರನಾದದ್ದು ಸಾಳುವ ನರಸಿಂಗರಾಯ ಹಾಗೂ ಅವನ ಬಂಟ ಅಲೀಖಾನ್‌ರಿಗೆ ಬಿಸಿತುಪ್ಪದಂತಾಗಿರಬೇಕು. ಹೀಗಾಗಿ ಸಾಳುವ

ನರಸಿಂಗರಾಯನಿಗೆ ಸಾಮ್ರಾಜ್ಯದ ಅಧಿಕಾರವನ್ನು ಮರಳಿ ತನ್ನ ಕೈಗೆ ತೆಗೆದುಕೊಂಡರೆ ಅದು ಮರಳಿ ತನ್ನ ವಂಶಕ್ಕೆ ದೊರಕಿದಂತಾಗುತ್ತದೆಂಬ ದೂರಾಕಾಂಕ್ಷೆ ಇದ್ದಿರುವ ಸಾಧ್ಯತೆ ಇದೆ.

ಅಲೀಖಾನ್

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಅಮೃತಾಪುರ (ಹೋಬಳಿ ಅದೇ) ಗ್ರಾಮದ (ಅಮೃತೇಶ್ವರ ದೇವಸ್ಥಾನದ ದಕ್ಷಿಣದ ಕಡೆ ಒಂದು ಕಲ್ಲಿನಲ್ಲಿ) ಕ್ರಿ.ಶ. ೧೫೪೬ - ೪೭ರ, ಕನ್ನಡದ ಒಂದು ಚಿಕ್ಕ ಶಾಸನದಲ್ಲಿ (ಎಕ ೬, ತರೀಕೆರೆ ೪೪) ಗ್ರಾಮದ ಭೂಮಿಗೆ ಸಂಬಂಧಿಸಿದಂತೆ (ಹಕ್ಕಿಗೆ ಸಂಬಂಧಿಸಿದ?) ಏನೋ ಒಂದು ವ್ಯಾಜ್ಯ ನಡೆದಾಗ, ಭೂಮಿ ಪರಾಕ್ರಮಿತವಾಗಿದ್ದಾಗ ಅಲೀಖಾನ್ ಸಾಹೇಬರು ಬಂದು ಅದನ್ನು ಬಿಡಿಸಿಕೊಟ್ಟರೆಂದೂ, ಸ್ಥಳೀಕರಾದ ಗೌಡ ಸೇನಬೋವರು ಸಹ ಬಂದು ನಾಲ್ಕೂದಿಕ್ಕಿಗೆ ಕಲ್ಲುನೆಟ್ಟು ಚಕ್ಕುಬಂಧಿಯನ್ನು ಕ್ರಮಗೊಳಿಸಿದರೆಂದೂ ದಾಖಲಿಸಲಾಗಿದೆ. ಈ ಅಲೀಖಾನ್ ಎಲ್ಲಿಯವನು? ಯಾರು? ಅವನು ಭೂಮಿ ಬಿಡಿಸಿಕೊಟ್ಟು ಚಕ್ಕುಬಂದಿ ಕ್ರಮಗೊಳಿಸಿದ್ದು ಯಾವ ಗ್ರಾಮದಲ್ಲಿ? - ಈ ವಿವರಗಳನ್ನು ಶಾಸನದಲ್ಲಿ ಕ್ರಮವಾಗಿ ನಮೂದಿಸಿಲ್ಲ. ಈ ವ್ಯಾಜ್ಯ ಬಹುಶ: ಅಮೃತಾಪುರ ಗ್ರಾಮಕ್ಕೆ ಸಂಬಂಧಿಸಿದ್ದು ಇರಬಹುದು. ಗ್ರಾಮ ಭೂಮಿಗಳಿಗೆ ಸಂಬಂಧಿಸಿದ ಇಂಥ ಮಹತ್ವದ ವ್ಯಾಜ್ಯತೀರ್ಮಾನ ಮಾಡಲಿಕ್ಕೆ ಪ್ರಜೆಗಳು ಅರಸರಿಗೆ ಮನವಿಯೇನಾದರೂ ಮಾಡಿಕೊಂಡಿದ್ದು, ಅದರ ತೀರ್ಮಾನಮಾಡಲು ಪ್ರಭುತ್ವದ ಪ್ರತಿನಿಧಿಯಾಗಿ ಬಂದಿದ್ದವನು ಈ ಅಲೀಖಾನ್ ಎಂದು ತಿಳಿಯುವುದಾದರೆ, ತಿಮ್ಮಣ್ಣನಾಯಕನಿಗೆ ಸಮಕಾಲೀನನಾಗಿ ಪ್ರಭುತ್ವದ ವಲಯದಲ್ಲಿ ಪ್ರಭಾವಶಾಲಿಯಾಗಿದ್ದಂತೆ ಮೇಲ್ಕಂಡ ದಾಖಲೆಯಲ್ಲಿ ನಿರೂಪಿತನಾಗಿರುವ ಅಲೀನಾನ್ ನೇ ಬಹುಶಃ ಇವನಾಗಿರಬಹುದೇ? ಎನ್ನಿಸುತ್ತದೆ.

ಕೃತ್ರಿಮದ ಘಟನೆಗಳ ಅವಧಿ

ಕ್ರಿ.ಶ. ೧೫೪೪ ರಷ್ಟು ಹೊತ್ತಿಗೆ ರಾಮರಾಜಯ್ಯ ಮತ್ತು ತಿರುಮಲರಾಜಯ್ಯ ಅವರಿಂದ ತಿಮ್ಮಣ್ಣನಾಯಕನು ದುರ್ಗದ ನಾಯಕನಾಗಿ ನೇಮಕವಾಗಿದ್ದನೆಂಬ ಸಂಗತಿ ನಮ್ಮ ಹೊಸ ಶಾಸನಗಳ ಅನ್ವೇಷಣೆಯಲ್ಲಿ ದೊರೆತ, ಚಿತ್ರದುರ್ಗ ತಾಲ್ಲೂಕಿನ ಹಿರೇಗುಂಟನೂರು ಮತ್ತು ಹುಲ್ಲೂರು ಗ್ರಾಮಗಳ ಎರಡು ಶಾಸನಗಳಿಂದ ಸ್ಪಷ್ಟವಾಗಿದೆ. ಹಾಗೆಯೇ ಬಿ.ಎಲ್.ರೈಸ್ ಅವರು ಪ್ರಕಟಿಸಿರುವ ಕ್ರಿ.ಶ. ೧೫೫೭ರ ಒಂದು ಶಾಸನದಿಂದ (ಎಕ ೧೧, ಹಿರಿಯೂರು ೭) ತಿಮ್ಮಣ್ಣನಾಯಕನಿಗೆ ಪ್ರಾಪ್ತವಾದ ಒಂದು 'ಅವಾಂತ್ರ' (ಅನಿಷ್ಟ) ಪರಿಹಾರಕ್ಕಾಗಿ, ಅವನ ಅಭಿಮಾನಿಗಳು ಆಪ್ತರೂ ಸೇರಿ ಯಾವುದೋ ಒಂದು ಶಾಂತಿಕ್ರಿಯಾಚರಣೆ ಮಾಡಿದಂತೆ ತಿಳಿದುಬರುತ್ತದೆ. ಆ 'ಅವಾಂತ್ರ' ಬಹುಶಃ ತಿಮ್ಮಣ್ಣನಾಯಕನು ವಿಜಯನಗರದಲ್ಲಿ ಸೆರೆಯಾದ ಘಟನೆಯಾಗಿರಬೇಕು ಎನ್ನಿಸುತ್ತದೆ. ಇದು ಸರಿಯಾದರೆ, ಈ ಮೇಲಿನ ದಾಖಲೆಯಲ್ಲಿ ಪ್ರಸ್ತಾಪಿತವಾಗಿರುವ ಘಟನಾವಳಿಗಳೆಲ್ಲ ಕ್ರಿ.ಶ. ೧೫೪೪ ಮತ್ತು ೧೫೫೭ರ ಮಧ್ಯದಲ್ಲಿ ನಡೆದಿರಬಹುದು.

ಅಳಿಯ ರಾಮರಾಯ

ಸಾಳುವ ನರಸಿಂಗರಾಯ ಸಾಮ್ರಾಜ್ಯದ ಅಧಿಕಾರವನ್ನು ನಿಧಾನವಾಗಿ ತನ್ನ ಕೈಗೆ ತೆಗೆದುಕೊಳ್ಳುವ ಕಾರ್ಯಾಚರಣೆಯಲ್ಲಿ ಹೆಜ್ಜೆಯಿರಿಸಿರಬೇಕು ಎಂದು ತಿಳಿಯಬಹುದಾದರೂ, ಆ ಕಾರ್ಯಚರಣೆಯ ಅಂಗವಾಗಿ, ತಿಮ್ಮಣ್ಣನಾಯಕನನ್ನು ಅವನು ಏಕೆ ಗುರಿಯಾಗಿಸಿಕೊಂಡ ಎಂಬ ಪ್ರಶ್ನೆಯನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಹಾಗೆ ನೋಡಿದರೆ ಅವನ ಮಹತ್ವಾಕಾಂಕ್ಷೆಗೆ ಪ್ರಮುಖ ಎದುರಾಳಿ ತಿಮ್ಮಣ್ಣನಾಯಕನಲ್ಲ, ರಾಮರಾಯ (ಮತ್ತು ಅವನ ಗುಂಪು). ಏಕೆಂದರೆ, ಆ ವೇಳೆಗಾಗಲೇ ನಡೆದಿದ್ದ ವಿದ್ಯಮಾನಗಳು ರಾಮರಾಯ ಆಗಿನ ಸಂದರ್ಭದಲ್ಲಿ ಸಿಂಹಾಸನಕ್ಕೆ ಎಷ್ಟು ಹತ್ತಿರದಲ್ಲಿದ್ದ ಮತ್ತು ಪ್ರಭಾವಶಾಲಿಯಾಗಿದ್ದ ಎಂಬುದನ್ನು ಶ್ರುತಪಡಿಸುವಂತಿವೆ.

ಕೃಷ್ಣದೇವರಾಯನ (ಕ್ರಿ.ಶ. ೧೫೦೯ - ೧೫೨೯) ಮೊದಲನೆಯ ಮಗ ತಿರುಮಲ ಶತ್ರುಗಳ ಸಂಚಿನಿಂದ ಕೊಲೆಯಾದಾಗ, ಅವನ ಇನ್ನೊಬ್ಬ ಮಗ ರಾಮಚಂದ್ರ ಆಗಿನ್ನು ಕೇವಲ ಒಂದೊವರೆ ವರ್ಷದ ಶಿಶು. ಹಾಗಾಗಿ ಕೃಷ್ಣದೇವರಾಯ ಮರಣಿಸುವ ಮುನ್ನ ತನ್ನ ಮಲಸೋದರನಾದ ಅಚ್ಯುತರಾಯ ತನ್ನ ಉತ್ತರಾಧಿಕಾರಿ ಎಂದು ಸೂಚಿಸಿದ್ದನು. ಈಗ ರಾಮರಾಯ ಶಿಶು ರಾಮಚಂದ್ರನೇ ಉತ್ತರಾಧಿಕಾರಿಯೆಂದೂ ತಾನು ಅವನ ಪಾಲಕನೆಂದೂ ಘೋಷಿಸಿದನು. ಕೆಲವರು ಅವನನ್ನು ಬೆಂಬಲಿಸಿದರು. ಆಗ ಅಚ್ಯುತರಾಯನೇ ಉತ್ತರಾಧಿಕಾರಿ ಎಂದು ಅವನ ಹಕ್ಕನ್ನು ಎತ್ತಿಹಿಡಿದವನು ಅವನ ದಂಡನಾಯಕ ಮತ್ತು ಮಂತ್ರಿಯಾಗಿದ್ದ ಚೆಲ್ಲಪ್ಪ. ಇವನನ್ನು ಸಾಳುವ ವೀರನರಸಿಂಹ, ನರಸಿಂಹರಾಯ ಎಂದೂ ಕರೆಯಲಾಗಿದೆ. ಅಚ್ಯುತರಾಯ ಆಗಿನ್ನೂ ಚಂದ್ರಗಿರಿಯಲ್ಲಿದ್ದನು; ಇತ್ತ ರಾಮರಾಯ ವಿಜಯನಗರವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಯತ್ನಿಸಿದನು. ಆದರೆ ಅವನ ಆ ಪ್ರಯತ್ನ ಸಾಳುವ ನರಸಿಂಹರಾಜನಿಂದ ವಿಫಲಗೊಳಿಸಲ್ಪಟ್ಟಿತು. ಮುಂದಿನ ರಾಜಕೀಯ ಚದುರಂಗದಾಟದಲ್ಲಿ ಅಚ್ಯುತರಾಯ ರಾಮರಾಯ ಒಂದುಗೂಡಿದರು. ಅಚ್ಯುತರಾಯ ಘರ್ಷಣೆಗೆ ಎಡೆಕೊಡದೆ ಶಾಂತಿಯನ್ನು ಕಾಪಾಡಿಕೊಂಡು ಹೋಗಲು ರಾಮರಾಯನನ್ನು ರಾಜ್ಯಾಡಳಿತದಲ್ಲಿ ಸೇರ್ಪಡೆಮಾಡಿಕೊಂಡನು. ಇದರಿಂದ ದಿಗ್ಭ್ರಮೆಗೊಂಡ ಸಾಳುವ ನರಸಿಂಹರಾಜ ವಿಜಯನಗರದಿಂದ ಪಲಾಯನಮಾಡಿ, ದಕ್ಷಿಣದಲ್ಲಿದ್ದ ಉಮ್ಮತ್ತೂರಿನ ರಾಜನಲ್ಲಿಗೆ ಹೋಗಿ ಅವನೊಂದಿಗೆ ಇದ್ದನು. ಆಗ ಅಚ್ಯುತರಾಯನ ಬೆಂಬಲಿಗರು ಅವನನ್ನು ಬೆನ್ನಟ್ಟಲು, ಅವನು ತಿರುವನಂತಪುರಕ್ಕೆ ಓಡಿಹೋದನು. ಬೆನ್ನಟ್ಟಿದ ಪಡೆ ಸಾಲಾಗಿ ಉಮ್ಮತ್ತೂರು, ತೆಂಕಾಶಿ, ತಿರುವನಂತಪುರವನ್ನು ಜಯಿಸಿ, ಅಲ್ಲೆ ಸಾಳುವ ನರಸಿಂಹರಾಜನನ್ನು ಸೆರೆಹಿಡಿದು ವಿಜಯನಗರಕ್ಕೆ ತಂದಿತು. ಅಲ್ಲಿಗೆ ಅವನ ಆಟ ಮುಗಿದು ಪ್ರಭುತ್ವದೊಂದಿಗಿನ ಘರ್ಷಣೆಗಳು ಕೊನೆಗಂಡವು. ಇಂಥ ಘಟನೆಗಳೆಲ್ಲ ನಡೆದು ರಾಮರಾಯ ಎಂತಹ ಸತ್ವಶಾಲಿ ಎಂಬುದು ಆಗಲೇ ಸಿದ್ಧವಾಗಿತ್ತು. ಆಗಿನ ಸನ್ನಿವೇಶದಲ್ಲಿ

ಮತ್ತು ಮುಂದೆ ಸದಾಶಿವರಾಯನು ದೊರೆಯಾದ ಕಾಲದಲ್ಲೂ ರಾಮರಾಯ ಮನಸ್ಸು ಮಾಡಿದ್ದ ತಾನೇ ಸಿಂಹಾಸನವನ್ನೇರಬಹುದಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಅವನು ರಾಜನಾಗದೆ ರಾಜನಿರ್ಮಾಪಕನಾಗಿ ಉಳಿದು, ರಾಜನಿಗಿಂತ ರಾಜನಿರ್ಮಾಪಕರು ಶಕ್ತಿಶಾಲಿಗಳು ಎಂಬ ಮಾತಿಗೆ ಉದಾಹರಣೆಯಾಗಿದ್ದನು.

ಸಾಳುವ ನರಸಿಂಗರಾಯ

ಇಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸಿ ಮುಂದೆಹೋಗುವುದು ಸೂಕ್ತವೆನಿಸುತ್ತದೆ. ಅದೆಂದರೆ, ಮೇಲೆ ವಿವರಿಸಿದ ಅಚ್ಯುತರಾಯನ ಸಂಬಂಧದಲ್ಲಿ ಬರುವ ಸಾಳುವ ನರಸಿಂಹರಾಜ ಮತ್ತು ಮೇಲೆ ತಿಳಿಸಿದ ದುರ್ಗದ ನಾಯಕರ ದಾಖಲೆಯಲ್ಲಿ ಬರುವ ಸಾಳುವ ನರಸಿಂಗರಾಯ ಒಬ್ಬರೇ? ಬೇರೆಬೇರೆಯೆ? ಎಂಬುದರ ಪ್ರಸ್ತಾಪ. ವಿಜಯನಗರಚರಿತ್ರೆಯಲ್ಲಿ ಸಾಳುವ ನರಸಿಂಹ ಎಂಬ ಹೆಸರು ಮೇಲಿಂದ ಮೇಲೆ ಕಾಣುವ ಹೆಸರಾಗಿದ್ದು ಕೆಲವು ಸಲ ಗೊಂದಲವಾಗುವಂತಿರುವುದು ಸಹಜವೇ. ಈ ಹೆಸರಿನ ವ್ಯಕ್ತಿಗಳು ಏಕಕಾಲದಲ್ಲಿಯೆ ಹಲವರು ಇರುತ್ತಿದ್ದರೆಂಬುದನ್ನು ಇಲ್ಲಿ ಗಮನಿಸಬೇಕು. ಮೇಲೆ ಪ್ರಸ್ತಾಪಿಸಿದ ಈ ಹೆಸರಿನ ವ್ಯಕ್ತಿಗಳು ಬೇರೆ ಬೇರೆಯೆ ಎಂದು ಕಾಣುತ್ತದೆ. ಇಲ್ಲಿ ಮೊದಲನೆಯ ಸಾಳುವ ನರಸಿಂಹರಾಜನು ರಾಮರಾಯ ಮತ್ತು ಅಚ್ಯುತರಾಯರೊಂದಿಗೆ ಅಷ್ಟೊಂದು ವೈರವನ್ನು ಪ್ರಕಟಿಸಿ, ಕಡೆಗೆ ಸೆರೆಯಾಳಾದ ಮೇಲೆ ಮತ್ತೆ ಅವನನ್ನು ವಿಶಾಲಪ್ರದೇಶವೊಂದರ ಪಾಲಕ ಅಧಿಕಾರವನ್ನು ಅವನಿಗೆ ಕೊಟ್ಟಿರುವ ಸಂಭವ ಕಾಣುವುದಿಲ್ಲ. ಅಲ್ಲದೆ, ತಿಮ್ಮಣ್ಣನಾಯಕನು ದುರ್ಗದ ನಾಯಕನಾಗಿ ನೇಮಿಸಲ್ಪಟ್ಟಿದ್ದು ಅಚ್ಯುತರಾಯನ (ಕ್ರಿ.ಶ. ೧೫೨೯ - ೪೨) ಕಾಲದಲ್ಲಲ್ಲ, ಸದಾಶಿವರಾಯನ ಕಾಲದಲ್ಲಿ (ಕ್ರಿ.ಶ. ೧೫೪೨ - ೭೨). ಹೀಗಾಗಿ ಮೊದಲಿಗೆ ಬರುವ ಸಾಳುವ ನರಸಿಂಹರಾಜ, ತಿಮ್ಮಣ್ಣನಾಯಕನೊಂದಿಗೆ ಸಂಪರ್ಕಹೊಂದಿದ ಸಾಳುವ ನರಸಿಂಗರಾಯನಲ್ಲ, ಅವರು ಬೇರೆ ಬೇರೆ ಎಂಬ ಅಂಶ ವ್ಯಕ್ತವಾಗುತ್ತದೆ.

ತಿಮ್ಮಣ್ಣನಾಯಕನನ್ನು ಮುರಿಯಲು ಯತ್ನಿಸಿದ್ದು ಏಕೆ ?

ಸಾಳುವ ನರಸಿಂಗರಾಯ ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವ ಮಾರ್ಗದ ಮೊದಲ ಹಂತದಲ್ಲಿ ತಿಮ್ಮಣ್ಣನಾಯಕನನ್ನು ಏಕೆ ಗುರಿಯಾಗಿರಿಸಿಕೊಂಡನೆಂಬುದು ಈಗ ಸ್ಫುಟವಾಗಬಹುದು. ತಿಮ್ಮಣ್ಣನಾಯಕ ಸ್ವತಃ ಧೀರ, ಪೌರುಷವಂತ ಆಗಿದ್ದುದಲ್ಲದೆ, ವಿಜಯನಗರದ ಚಕ್ರವರ್ತಿಯ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡಿದ್ದವನು, ಪ್ರಸ್ತುತ ದಾಖಲೆ ಸೂಚಿಸುವಂತೆ ಕಾಮಗೇತಿ ವಂಶಕ್ಕೆ ಸೇರಿದ್ದು ರಾಮರಾಯನಿಗೆ ಪ್ರಾಯ:ಸಗೋತ್ರ ಬಂಧುವಾಗಿದ್ದವನು ಮತ್ತು ಅವನ ಅಭಯಾನುಗ್ರಹವನ್ನು ಹೊಂದಿ ಪ್ರಭಾವಶಾಲಿಯೂ ಆಗಿದ್ದವನು. ರಾಮರಾಯನಿಗೆ ಅವನ ಸೋದರರೂ ಸಮರ್ಥರೂ ಆದ ತಿರುಮಲರಾಜಯ್ಯ, ಎರದಿಮ್ಮ ರಾಜಯ್ಯ ಅಹೋಬಳರಾಜಯ್ಯ ಇವರುಗಳಂತೆ ಅಖಂಡ ಬೆಂಬಲಿಗನೂ ಆಗಿದ್ದನು. ಅಷ್ಟೆಲ್ಲ ಹಿನ್ನೆಲೆಯಿದ್ದ ರಾಮರಾಜಯ್ಯನು, ಮುಂದೆ ತನಗೆ ಎದುರಾಳಿ

ಯಾಗುವುದು ನಿಶ್ಚಿತವಿದ್ದುದರಿಂದ, ಅವನನ್ನು ನಿವಾರಿಸುವುದು ಸಾಳುವ ನರಸಿಂಗರಾಯನಿಗೆ ಅವಶ್ಯಕವಿತ್ತಾದರೂ, ಸುಲಭವಾದ ಸಂಗತಿಯಾಗಿರಲಿಲ್ಲ. ಆದ್ದರಿಂದ ನಿಧಾನವಾಗಿ ರಾಮರಾಯನ ಬೆಂಗಲಿಗರನ್ನು ಅಂಥ ಮುಖ್ಯರಲ್ಲಿ ಒಬ್ಬನಾಗಿದ್ದ ತಿಮ್ಮಣ್ಣನಾಯಕರನ್ನು ತೊಡೆದುಹಾಕಿದರೆ, ಆ ಮೂಲಕ ರಾಮರಾಯನನ್ನೂ ಅವನ ಗುಂಪನ್ನೂ ಅಧೀರರನ್ನಾಗಿ ಮಾಡಬಹುದೆಂದೂ, ತನ್ನ ಬಲ ಸಾಮಾನ್ಯವಾದುದಲ್ಲವೆಂಬ ಭಾವನೆಯನ್ನು ಇತರ ಪ್ರಾಂತಪಾಲಕರ ಹಾಗೂ ರಾಮರಾಯನಿಗೆ ನಿಷ್ಠರಾದವರ ಮನಸ್ಸಿನಲ್ಲಿ ಅಚ್ಚೊತ್ತಿಸ ಬಹುದೆಂದೂ, ಅದರಿಂದ ಸಿಂಹಾಸನದತ್ತಲಿನ ತನ್ನ ನಡಿಗೆ ನಿರ್ವಿಘ್ನವಾಗುವುದೆಂದೂ ಅವನ ಎಣಿಕೆಯಿದ್ದಿರಬೇಕು. ಬಹಿರಂಗ ಬಲದಿಂದ ಸಾಧ್ಯವಾಗದ್ದನ್ನು ಪ್ರಚ್ಛನ್ನ ಕೃತಿಮದಿಂದಲಾದರೂ ಸಾಧಿಸಬೇಕೆಂದು ಸಾಳುವ ನರಸಿಂಗರಾಯ ಎಣಿಕೆಹಾಕಿಯೆ, ಪೌರುಷದಿಂದ ಮಣಿಸಲಾಗದ ತಿಮ್ಮಣ್ಣನಾಯಕರನ್ನು ರಾಜಪ್ರೀತಿಯಿಂದ ದೂರಮಾಡಿ ಭೇದಿಸಲು ನಯೋಕ್ತಿಯಿಂದ ವಿಜಯನಗರಕ್ಕೆ ಬರಮಾಡಿಕೊಂಡು, ಅವನನ್ನು ಸೆರೆಗೆ ತಳ್ಳಿ ಸಾಯುವಂತೆ ಮಾಡಿದನು. ಇದನ್ನೆಲ್ಲ ಅವನು ಮಾಡಿದ್ದು ರಾಮರಾಯನು ವಿಜಯನಗರದಲ್ಲಿ ಇಲ್ಲದಿದ್ದ ಅವಕಾಶವನ್ನು ಉಪಯೋಗಿಸಿಕೊಂಡು ಎಂಬುದನ್ನು ಇಲ್ಲಿ ಗಮನಿಸಬೇಕು. ತಿಮ್ಮಣ್ಣನಾಯಕನನ್ನು ಹೀಗೆ ಮುಗಿಸಿದರೂ ನರಸಿಂಗರಾಯನ ಆಕಾಂಕ್ಷೆಯೇನೂ ಈಡೇರಲಿಲ್ಲ. ಹಾಗೆ ಈಡೇರಿದ್ದರೆ ಮೊದಲ ಹಂತವಾಗಿ ದುರ್ಗ ಅವನ ಕೈವಶವಾಗಬೇಕಾಗಿತ್ತು; ತಿಮ್ಮಣ್ಣನಾಯಕನ ಸಾವಿನಿಂದ ಅವನ ವಂಶಜರು ದುರ್ಗದ ಇತರರು ವಿಚಲಿತರಾಗಬೇಕಾಗಿತ್ತು. ಆದರೆ ಅದಾವುದೂ ಆಗಲಿಲ್ಲ. ತಿಮ್ಮಣ್ಣನಾಯಕನ ಉತ್ತರಾಧಿಕಾರಿಗೆ ದುರ್ಗದ ನಾಯಕತನದ ಅಧಿಕಾರ ಮುಂದುವರಿಸಲ್ಪಟ್ಟಿತು. ತಿಮ್ಮಣ್ಣನಾಯಕನ ಸೆರೆ ಮತ್ತು ಸಾವು ಇವುಗಳಲ್ಲಿ ಸಾಳುವ ನರಸಿಂಗರಾಯನ ಕೈವಾಡ ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿಯಾದರೂ ರಾಮರಾಯನ ಗ್ರಹಿಕೆಗೆ ಬಂದಿರಬೇಕು. ಅವನು ವಿಜಯನಗರಕ್ಕೆ ವಾಪಾಸಾದ ಮೇಲೆ ತಿಮ್ಮಣ್ಣನಾಯಕನ ಉತ್ತರಾಧಿಕಾರಿಯಾಗಿದ್ದ ಓಬಣ್ಣನಾಯಕನಿಗೇ ದುರ್ಗದ ನಾಯಕತನವನ್ನು ಮುಂದುವರಿಸಿದ್ದು ಅದನ್ನು ಸೂಚಿಸುವುದಲ್ಲದೆ, ಸಾಳುವ ನರಸಿಂಗರಾಯನ ವಿರುದ್ಧ ಅವನು ತನ್ನದೇ ಒಂದು ಗುಂಪನ್ನು ಬಲಪಡಿಸಿಕೊಂಡ ಎಂಬುದನ್ನು ಅದು ಸೂಚಿಸುವಂತಿದೆ.

ಪರಿಸಮಾಪ್ತಿ

ಈ ಮಧ್ಯೆ ದುರ್ಗದಲ್ಲಿದ್ದ ಅಲೀಖಾನ್ ನನ್ನು ವಿಜಯನಗರಕ್ಕೆ ವಾಪಾಸು ಕರೆಸಿಕೊಳ್ಳಲಾಯಿತೆಂದು ಕಾಣುತ್ತದೆ. ಅದು ಕೂಡಾ ರಾಜಕೀಯ ಒತ್ತಡ ಅಥವಾ ಬಿಕ್ಕಟ್ಟಿನ ಪರಿಣಾಮವೇ ಇದ್ದಿರಬಹುದು. ದುರ್ಗಕ್ಕೆ ಸಂಬಂಧಿಸಿದಂತೆ ಮುಂದೆ ಸಾಳುವ ನರಸಿಂಗರಾಯ ಮತ್ತು ಅವನ ಬಂಟ ಅಲೀಖಾನ್‌ರ ಯಾವುದೇ ಪ್ರಸ್ತಾಪ ಬರದಿರುವುದಕ್ಕೆ ನರಸಿಂಗರಾಯ ತನ್ನ ರಾಜಕೀಯ ಮಹತ್ವಾಕಾಂಕ್ಷೆಯಿಂದ ಪ್ರಾಯಶಃ ಹಿಂದೆ ಸರಿದದ್ದು

ಕಾರಣವಿರಬಹುದು. ಕಡೆಗೆ ಸಿಂಹಾಸನದ ಅಧಿಕಾರಕ್ಕೆ ಹತ್ತಿರವಾಗುವಲ್ಲಿ ರಾಮರಾಯ ಮತ್ತು ಅವನ ಸಹೋದರರ ಕೈಮೇಲಾಗಿ ಸಾಳುವ ನರಸಿಂಗಾಯ ಮತ್ತು ಅವನ ಗುಂಪು ಹಾಗೇ ಹಿಂಜರಿದು, ಕ್ರಮೇಣ ತೆರೆಮರೆಗೆ ಸರಿದುಹೋದಂತೆ ಕಾಣುತ್ತದೆ. ಈ ಮೇಲಾಟದಲ್ಲಿ ನರಸಿಂಗರಾಯನ ಪ್ರಯತ್ನವೇನಾದರೂ ಯಶಸ್ವಿಯಾಗಿದ್ದರೆ, ಸಾಳುವ ವಂಶ ವಿಜಯನಗರ ಸಾಮ್ರಾಜ್ಯದ ಅಧಿಕಾರವನ್ನು ಮತ್ತೊಮ್ಮೆ ಕೈಗೆ ತೆಗೆದುಕೊಳ್ಳುವುದು ಸಾಧ್ಯವಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಹೀಗೆ ಸಾಮ್ರಾಜ್ಯಾಧಿಕಾರದ ವಿಷಯದಲ್ಲಿ ಸಾಳುವ ಮತ್ತು ಕಾಮಗೇತಿ ಮನೆತನದವರ ನಡುವೆ ಶೀತಲ ಸಂಘರ್ಷ ಇದ್ದುದು ಮತ್ತು ಅದರಲ್ಲಿ ಕಡೆಗೆ ಕಾಮಗೇತಿ ವಂಶದವರ ಕೈಮೇಲಾದದ್ದು ವಿಜಯನಗರ ಇತಿಹಾಸದ ಒಂದು ಅಜ್ಞಾತ ಪುಟ ಎಂದು ಹೇಳಬಹುದು.

ಪರಾಮರ್ಶನ ಸಾಮಗ್ರಿ

೧. The History of the Vijayanagar Empire, Vol, ೧ & ೨, By M.H.RamaSharma, Ed. by M.H.Gopal, Popular Prakashan, Bombay, ೧೯೮೦

೨. ಮರೆತು ಹೋದ ಮಹಾಸಾಮ್ರಾಜ್ಯ, ವಿಜಯನಗರ - ರಾಬರ್ಟ್ ಸಿವೆಲ್, (ಅನು), ಡಾ. ಸದಾನಂದ ಕನವಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨

೩. ಮರೆಯಲಾಗದ ಮಹಾಸಾಮ್ರಾಜ್ಯ, ಬಿ.ಸೂರ್ಯನಾರಾಯಣರಾವ್, (ಅನು), ಬಾಲಸುಬ್ರಹ್ಮಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೪. ಕರ್ನಾಟಕದ ಪರಂಪರೆ - ಸಂಪುಟ ೨, ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ರಾಜ್ಯ ಸರ್ಕಾರ, ಬೆಂಗಳೂರು, ೧೯೭೦

೫. ಕರ್ನಾಟಕ - ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೬. ಕರ್ನಾಟಕದ ಇತಿಹಾಸ, ಡಾ. ಬಾ.ರಾ.ಗೋಪಾಲ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬

೭. ಕರ್ನಾಟಕದ ಚರಿತ್ರೆ - ಸಂಪುಟ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೮. ಎಪಿಗ್ರಾಫಿಯ ಕರ್ನಾಟಕ, ಸಂಪುಟ ೬, (ಸಂ), ಬಿ.ಎಲ್.ರೈಸ್, ಬೆಂಗಳೂರು, ೧೯೦೧

೯. ಎಪಿಗ್ರಾಫಿಯ ಕರ್ನಾಟಕ, ಸಂಪುಟ ೧೧, (ಸಂ), ಬಿ.ಎಲ್.ರೈಸ್, ಬೆಂಗಳೂರು, ೧೯೦೩

೧೦. ದಕ್ಷಿಣ ಕರ್ನಾಟಕದ ಅರಸುಮನೆತನಗಳು, (ಸಂ), ಡಾ. ವಸು ಎಂ.ವಿ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೧. ಇತಿಹಾಸ ಕಥನ, ಪ್ರೊ. ಬಿ.ರಾಜಶೇಖರಪ್ಪ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೧೨. ದುರ್ಗಶೋಧನ, ಬಿ.ರಾಜಶೇಖರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧

(ಈ ಲೇಖನವನ್ನು ಬರೆಯುವಲ್ಲಿ ಚಿತ್ರದುರ್ಗದ ಕಾಮಗೇತಿ ರಾಜವಂಶಸ್ಥರಾದ ಚಳ್ಳಕೆರೆಯ ಸಿ.ಪಿ. ಗೋಪಾಲಸ್ವಾಮಿನಾಯಕ್, ಪಿ.ಆರ್.ವೀರಭದ್ರನಾಯಕ, ಸಿ.ಪಿ.ರಾಜಣ್ಣ ಮತ್ತು ಅದೇ ವಂಶದ ಇನ್ನೊಂದು ಶಾಖೆಗೆ ಸೇರಿದ ಹೊಳಲ್ಕೆರೆ ತಾಲ್ಲೂಕು ಅರೆಹಳ್ಳಿಹಟ್ಟಿಯ ಬಿ.ಎಸ್.ಶ್ರೀನಿವಾಸನಾಯಕ್ ಅವರಲ್ಲಿರುವ ಕಾಗದದ ಅಪ್ರಕಟಿತ ಚಾರಿತ್ರಿಕ ದಾಖಲೆಗಳನ್ನೂ ಬಳಸಿಕೊಂಡಿದ್ದೇನೆ. ಇವರೆಲ್ಲರ

ಅಮೂಲ್ಯ ನೆರವನ್ನೂ ಜಾನಪದ ಸಂಶೋಧಕ ಮಿತ್ರರಾದ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ ಪ್ರೀತಿಪೂರ್ಣ ಸಹಕಾರವನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ.

ದಿ. ೨೬, ೨೭ ಡಿಸೆಂಬರ್ ೨೦೦೧ ರಂದು, ಹಂಪಿಯಲ್ಲಿ ಜರುಗಿದ 'ವಿಜಯನಗರ ವಿಚಾರ ಸಂಕಿರಣ'ಕ್ಕೆ ನನ್ನನ್ನು ಆಹ್ವಾನಿಸಿ, ಈ ಸಂಪ್ರಬಂಧವನ್ನು ಸಾದರಪಡಿಸಲು ಅವಕಾಶಮಾಡಿಕೊಟ್ಟ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ನಿರ್ದೇಶಕರಾಗಿದ್ದ ಪ್ರೊ.ಎಂ.ವಿ.ಕೃಷ್ಣಪ್ಪನವರು ಮತ್ತು ಅವರ ಸಿಬ್ಬಂದಿಗೆ ನನ್ನ ಹಾರ್ದಿಕ ಕೃತಜ್ಞತೆಗಳು)

❑❑

೫

ಬುಕ್ಕರಾಯನ ಚರಿತ್ರೆ ಎಂಬ ಹಂಡೆ ಪಾಳೆಗಾರರ ವಂಶಾವಳಿ

* ಡಾ. ಕೆ.ರವೀಂದ್ರನಾಥ

ಕನ್ನಡ ದಾಖಲು ಸಾಹಿತ್ಯಕ್ಕೆ ಸೇರುವ ಮತ್ತೊಂದು ಪ್ರಕಾರ ವಂಶಾವಳಿಗಳು. ಶಾಸನ, ಕಡತ, ನಿರೂಪ, ಬಿನ್ನವತ್ತಳೆ, ಕೈಫಿಯತ್ತು, ಬಖೈರು, ನಾಮೆ ಹಾಗೂ ದಿನಚರಿಗಳಂತೆ ಇವು ಕೂಡ ಮಹತ್ವದ ಆಕರಗಳು. ಕನ್ನಡದಲ್ಲಿ ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ (ಕ್ರಿ.ಶ. ೧೫೭೮ - ೧೬೧೭), ಬುಕ್ಕರಾಯನ ಚರಿತ್ರೆ ಹೆಸರಿನ ಹಂಡೆ ಪಾಳೆಗಾರರ ವಂಶಾವಳಿ (ಕ್ರಿ.ಶ. ೧೮೧೧) ಗಳು ಪ್ರಮುಖವಾಗಿವೆ. ನನ್ನ ಗಮನಕ್ಕೆ ಬಂದಂತೆ ಅ.ಮಾ. ರಾಮನುಜೈಯ್ಯಂಗಾರರು ೧೯೩೩ರಲ್ಲಿ ಚಿಕ್ಕದೇವರಾಜ ವಂಶಾವಳಿಯನ್ನು ಸಂಪಾದಿಸಿದ್ದಾರೆ. ಬುಕ್ಕರಾಯನ ಚರಿತ್ರೆಯನ್ನು ಡಾ. ಎಸ್.ಸಿ.ಪಾಟೀಲರು ಸಂಪಾದಿಸಿದ್ದಾರೆ. ಅವರು ಹಂಡೆ ಅರಸುಮನೆತನದ ವಂಶಾವಳಿ ಎಂದಿದ್ದಾರೆ. ಆದರೆ ಅರಸುಮನೆತನ ಎನ್ನುವುದಕ್ಕಿಂತ ಪಾಳೆಯಗಾರರು ಎಂಬ ಹೆಸರು ಹೆಚ್ಚು ಸೂಕ್ತವೆನಿಸುತ್ತದೆ. ಈಗಾಗಲೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಿದ್ದ ಚಿಕ್ಕದೇವರಾಜ ವಂಶಾವಳಿ ಮೈಸೂರಿನ ಒಡೆಯ ಚಿಕ್ಕದೇವ ರಾಜನ ಇತಿಹಾಸದ ಜೊತೆಗೆ ಮತತತ್ವ ವಿಚಾರವನ್ನು ನಿರೂಪಿಸುತ್ತದೆ. ಆದರೆ ಬುಕ್ಕರಾಯನ ಚರಿತ್ರೆಯ ನಿಜವಾದ ವಸ್ತು ಏನೆಂಬುದನ್ನು ಪ್ರಾಯಶಃ ವಿದ್ವಾಂಸರು ಗಮನಿಸಿದಂತಿಲ್ಲ. ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ನಂ. ಕೆ.ಎ. ೧೨೭ ಸಂಖ್ಯೆಯಲ್ಲಿ

ಸಂರಕ್ಷಿಸಿರುವ ಈ ಕೃತಿಯನ್ನು ಕ್ರಿ.ಶ. ೧೮೧೧ರಲ್ಲಿ ರಚಿಸಲಾಗಿದೆ. ಇದರ ಕರ್ತೃನಾಮ ತಿಳಿದುಬರುವುದಿಲ್ಲ. ೧೩"x೮.೧" ಅಳತೆಯ ದೊಡ್ಡ ಕಾಗದದಲ್ಲಿ ಬರೆದ ೨೯ ಪುಟ ವ್ಯಾಪ್ತಿಯ ಮೋಡಿಯಲ್ಲಿ ಬರೆದ ಗದ್ಯಪ್ರಕಾರ. ಈ ಹಸ್ತಪ್ರತಿಯ ಸ್ವರೂಪವನ್ನು ಸೂಚೀ ಸಂಪುಟ ೩ರಲ್ಲಿ ಪರಿಚಯಿಸಿರುವ ಸಂಪಾದಕರಾದ ಎಚ್. ದೇವಿರಪ್ಪ ಹಾಗೂ ಬಿ.ಎಸ್.ಸಣ್ಣಯ್ಯ ನವರು ಇದರ ವಸ್ತು ಪಾಳೆಗಾರ ಬುಕ್ಕರಾಯನ ಕಥೆಯೆಂದು ತಪ್ಪಾಗಿ ದಾಖಲಿಸಿದ್ದಾರೆ. ಆದರೆ, ವಂಶಾವಳಿಯ ಪ್ರಾರಂಭದ ಒಂದೆರಡು ಮಾತುಗಳು ವಿಜಯನಗರದರಸರ ಉಲ್ಲೇಖವನ್ನು ಬಿಟ್ಟರೆ ಇಡೀ ದಾಖಲೆ ಹಂಡೆ ಪಾಳೆಗಾರರ ವಂಶಾವಳಿಯನ್ನು ನಿರೂಪಿಸುತ್ತಾ ಹೋಗುತ್ತದೆ. ಕೊನೆಗೆ "ವಂಶಾವಳಿ ಸಂಪೂರ್ಣ" ಎಂದು ಉಲ್ಲೇಖಿಸಿದೆ.

ವಂಶಾವಳಿ ಅರ್ಥ

ಕುಲ, ಸಂತತಿ, ಪೀಳಿಗೆ, ಸಂತಾನ, ವಂಶಾನುಕ್ರಮ ಎಂಬಿತ್ಯಾದಿ ಅರ್ಥವನ್ನು ಹೊಂದಿರುವ ವಂಶ, ವಂಶಜ ಎಂಬ ಪದಕ್ಕೆ ವಳಿ ಎಂಬ ಅಖ್ಯಾತ ಪ್ರತ್ಯೇಯ ಸೇರಿಕೊಂಡು ವಂಶಾವಳಿ ಎಂಬ ರೂಪ ಪಡೆದಿದೆ. ಒಂದು ಸಂತತಿಯ ಮೂಲಪುರುಷನಿಂದ ಆರಂಭಿಸಿ ಆತನ ತಂದೆ, ತಾಯಿ, ಹೆಂಡತಿ, ಮಕ್ಕಳು ಹಾಗೂ ಅವರ ಸಾಧನೆಗಳನ್ನೆಲ್ಲಾ ವಿವರವಾಗಿ ನಿರ್ದೇಶಿಸುವುದಕ್ಕೆ ವಂಶಾವಳಿ ಎನ್ನುತ್ತೇವೆ. ಇದಕ್ಕೆ ಪ್ರಾಚೀನ ಕೃತಿಗಳಲ್ಲಿ ನಿದರ್ಶನಗಳಿವೆ.

> "ಆತನಿಂದ ವ್ಯವಚ್ಛಿನ್ನಮಾಗಿ ಬಂದ ವಂಶ ಸೂರ್ಯವಂಶಮೆಂಬುದಾಯ್ತು"
>
> (ಪಂಪಭಾರತ ೧ - ೬೦ ವಚನ)

> "ಇಂತಿ ಮೂವರಂ ಬಂದ ವಂಶಾವಳಿಯುಮಂ ನಿಜಾವಳಿಯುಮನೊಳ್ಳಿತ್ತಾಗಿ ಪೇಳ್ದೀ ನಿನ್ನ ಚೆನ್ನಭಾಷಿತಮದೊಳ್ಳಿತ್ತಾದುದು
>
> (ಗದಾಯುದ್ಧ ೨ - ೮ ವಚನ)

ಎಂಬ ಹೇಳಿಕೆಗಳು ಆದಿಯಿಂದ ಕೊನೆಯವರೆಗೆ ಒಂದು ಮನೆತನದ ವಂಶಸ್ಥರನ್ನು ಸಂತತೀ ಬಳಿವಿಡಿದು ವಿವರಿಸಿಕೊಂಡು ಬರುವುದೇ ವಂಶಾವಳಿಗಳೆಂಬ ಅರ್ಥ ಹೊರಡುತ್ತದೆ. ಹೀಗಾಗಿ ಪ್ರಾಚೀನ ಕಾಲದಲ್ಲಿ ರಾಜರು, ಸಾಮಂತರು, ಪ್ರಮುಖ ವ್ಯಕ್ತಿಗಳನ್ನು ಕುರಿತಾಗಿ ವಂಶಾವಳಿಗಳು ಹುಟ್ಟಿಕೊಳ್ಳುತ್ತಿದ್ದವು. ಚರಿತ್ರೆಯಲ್ಲಿ ಒಂದು ರಾಜಮನೆತನದ ವಂಶವೃಕ್ಷವನ್ನು ವಿವರಿಸುತ್ತಾ ಹೋಗುವುದನ್ನು ಕಾಣುತ್ತೇವೆ. ಪ್ರಾಯಶಃ ಮೊದಮೊದಲಿಗೆ ತಾಮ್ರಪಟ, ತಾಳೆಗರಿಗಳಂತಹ ಬಹು ಪ್ರಾಚೀನ ಬರವಣಿಗೆ ಸಾಧನಗಳಲ್ಲಿ ಬರೆದ ಈ ವಂಶಾವಳಿಗಳು ಇತ್ತೀಚಿಗೆ ಕೋರಿ ಕಾಗದದಲ್ಲಿ ರಚನೆಯಾದಂತಿವೆ. ಈಗಲೂ ಗ್ರಾಮದ ಆಯಗಾರರ, ಗಣ್ಯರ ಮನೆಬಾಗಿಲಿಗೆ ಬಂದು ಮನೆತನದ ವಿವರವನ್ನು (ವಂಶಾವಳಿಯನ್ನು), ಗುರುಪರಂಪರೆಯನ್ನು ವಿವರಿಸುತ್ತಲಿರುವ ಹೆಳವರಲ್ಲಿ[?] ತಾಮ್ರದ, ಕಂಚಿನ ಪತ್ರಗಳಿರು ವುದನ್ನು ಗಮನಿಸುತ್ತೇವೆ. ಇತ್ತೀಚಿಗೆ ಖಾತೆ - ಕೀರ್ದಿ ಪುಸ್ತಕಗಳನ್ನು ಹಿಡಿದುಕೊಂಡು ಬರುತ್ತಾರೆ. ಹೀಗಾಗಿ ಪ್ರಾಚೀನ ಚಂಪೂ ಕಾವ್ಯಗಳಾದಿಯಾಗಿ ಐತಿಹಾಸಿಕವೆನ್ನಬಹುದಾದ

ಕೃತಿಗಳಲ್ಲಿ, ಶಾಸನಗಳಲ್ಲಿ, ಕಥಾನಾಯಕರ, ದಾನ ನೀಡಿದವರ ವಂಶಾವಳಿಯನ್ನು ಸಂಕ್ಷಿಪ್ತವಾಗಿ ವಿವರಿಸಿದಂತೆ ಇಡಿಯಾಗಿ ವಂಶಾವಳಿಯನ್ನೇ ಉಲ್ಲೇಖಿಸುವ ಗದ್ಯಪ್ರಕಾರದ ವಂಶಾವಳಿಗಳು ಹುಟ್ಟಿದ್ದು ೧೭-೧೩ನೆಯ ಶತಮಾನದಿಂದೀಚೆಗೆ ಎಂದು ಊಹಿಸಬಹುದು. ಇವು ಚರಿತ್ರೆಯ ದಾಖಲೆಗಳಾಗಿ ಮಹತ್ವ ಪಡೆದವು. ಪ್ರಸ್ತುತ ಬುಕ್ಕರಾಯನ ಚರಿತ್ರೆ ಹಂಡೆಪಾಳೆಗಾರರ ವಂಶಾವಳಿಯಾಗಿದೆ.

ಹಂಡೆ ಪಾಳೆಗಾರರು

ಹಂಡೆ ಪಾಳೆಗಾರರನ್ನು ಕುರಿತು ಕ್ರಿ.ಶ. ೧೫೩೭ರ ಸಿರಿಗೇರಿ (ಬಳ್ಳಾರಿ ತಾಲೂಕು), ಕ್ರಿ.ಶ. ೧೫೪೭ರ ಎಸ್.ಮಣೂರು, ಕ್ರಿ.ಶ. ೧೫೪೯ರ ಮುದ್ದಾಪುರ (ಹೊಸಪೇಟೆ ತಾಲೂಕು), ಕ್ರಿ.ಶ. ೧೬೦೩ರ ಅರಳಿಹಳ್ಳಿ, ಕ್ರಿ.ಶ. ೧೬೬೨ರ ಚಿಕ್ಕಮಲಕಪ್ಪನಾಯಕನ ಶಾಸನ, ಕ್ರಿ.ಶ. ೧೬ನೇ ಶತಮಾನದ ಡಿ.ಕರೂರು (ಶಿರುಗುಪ್ಪ ತಾಲೂಕು) ಶಿಲಾಶಾಸನಗಳಲ್ಲದೆ, ಕ್ರಿ.ಶ. ೧೭೨೬ ಹಾಗೂ ಕ್ರಿ.ಶ. ೧೭೭೩ರ ಕೊಟ್ಟೂರುಸ್ವಾಮಿಮಠದ ಸನ್ನದುಗಳು ಹಾಗೂ ಕ್ರಿ.ಶ. ೧೭೪೬ರ ಹಂಡೆ ರಾಮಪ್ಪನಾಯಕನ ತಾಮ್ರಶಾಸನಗಳಲ್ಲಿ ಇವರ ಉಲ್ಲೇಖಗಳಿವೆ. ಹಾಗೆಯೇ ಅಹೋಬಲನ ವಿರೂಪಾಕ್ಷ ವಸಂತೋತ್ಸವ (ಸಂಸ್ಕೃತ), ತರುಳ ಚರಪತಿಯ ಗಂಗೆಗೌರಿ ಸಂವಾದ, ಪುಲ್ಲಕವಿಯ ಶ್ರೀಶೈಲ ಪಂಡಿತಾರಾಧ್ಯ ಚರಿತೆ (ತೆಲುಗು), ಸಿಂಪಿ ಆಂಜನೇಯಲು ವಿರಚಿತ ಕರಿಬಸವ ಸ್ವಾಮಿ ಕಾವ್ಯ (ತೆಲುಗು), ಸಿ.ಪಿ.ಬ್ರೌನ್‌ರವರ ವಾರ್ಸ್ ಆಫ್ ದಿ ರಾಜಾಸ್ (Wars of the Rajas) ಮುಂತಾದ ಸಾಹಿತ್ಯ ಕೃತಿಗಳಲ್ಲದೆ, ಕುರುಗೋಡು, ಬಳ್ಳಾರಿ, ಅನಂತಪುರ ಕೈಫಿಯತ್ತುಗಳಲ್ಲಿ ಇವರ ಉಲ್ಲೇಖಗಳಿವೆ. ಇವೆಲ್ಲವುಗಳ ಜೊತೆಗೆ ಬುಕ್ಕರಾಯನ ಚರಿತ್ರೆ ಎಂಬ ಹೆಸರಿನಲ್ಲಿ ಅಖಂಡವಾಗಿ ಇವರ ವಂಶಾವಳಿ ಸೃಷ್ಟಿಯಾಗಿದೆ. ಈ ಎಲ್ಲ ಆಕರಗಳನ್ನು ಬಳಸಿಕೊಂಡು ಇವರ ಆಳ್ವಿಕೆಯ ವಿವರ ಹಾಗೂ ವಂಶಾವಳಿಯನ್ನು ಡಾ.ಸಿ.ನಾಗಭೂಷಣ[೨] ಹಾಗೂ ಡಾ.ಎಸ್.ಸಿ.ಪಾಟೀಲರು[೩] ಗುರುತಿಸಿದ್ದಾರೆ. ಇವರ ಮೂಲ, ಬಳ್ಳಾರಿ ಭಾಗಕ್ಕೆ ಇವರು ಆಗಮಿಸಿದ ಕಾರಣ ಕುರಿತಾಗಿ ಭಿನ್ನಾಭಿಪ್ರಾಯಗಳು ವಿದ್ವಾಂಸರಲ್ಲಿ ಇವೆಯಾದರೂ, ವಂಶಾವಳಿಯ ಪ್ರಕಾರ ಇವರ ಮೂಲ ಸೊನ್ನಲಾಪುರ (ಸೊಲ್ಲಾಪುರ?) ಅಲ್ಲಿಯ ಸಿದ್ಧರಾಮೇಶ್ವರ ಇವರ ಕುಲದೈವ, ಇಷ್ಟದೈವ. ಜಾತಿಯಲ್ಲಿ ಶಿವಭಕ್ತರು, ಲಿಂಗವಂತರು. ಈ ವಂಶದ ಮೂಲ ಪುರುಷ ಹಂಡೆಹನುಮಪ್ಪನಾಯಕ. ಅಳಿಯರಾಮರಾಯ ಮತ್ತು ತಿರುಮಲರಾಯರ ಕಾಲದಲ್ಲಿ ಬೊಕ್ಕಸದ ಗೊಲ್ಲಕೆಲಸದ ತಿಮ್ಮಯ್ಯನೆಂಬುವವನು ಅರಸರನ್ನು ಸೆರೆಯೊಳಗಿಟ್ಟು ತಾನೇ ವಿಜಯನಗರ ಸಾಮ್ರಾಜ್ಯದ ಅಧಿಪತಿಯಾಗಬೇಕೆಂದು ಆಸೆಪಟ್ಟು ಸಹಾಯಕ್ಕಾಗಿ ಬಿಜಾಪುರದ ಸುಲ್ತಾನರನ್ನು ಕರೆಸಿಕೊಳ್ಳುತ್ತಾನೆ. ಇತ್ತ ರಾಮರಾಯ, ತಿರುಮಲರಾಯರು ತಮಗೆ ಸಹಾಯ ಮಾಡಬೇಕೆಂದು ಶೂರನಾಗಿದ್ದ ಸೊನ್ನಲಾಪುರದ ಹಂಡೆ ಹನುಮಪ್ಪ ನಾಯಕನನ್ನು ಕರೆಸಿಕೊಂಡು, "ತಂಮ ಬಳಿಯಲ್ಲಿದ್ದ ಈ ಸೈಂನ್ಯ ಯೀ ಯರಡನ್ನು ಮೂರು

ಭಾಗಗಳ ಮಾಡಿ ಸೋನಲಾಪುರ ಹಂಡೆ ಹನುಮಪ್ಪ ನಾಯ್ಕನ ಕರೆಕಳುಹಿಸಿ ನೀನು ಬಹು ಶೂರನು ನಿನಗೆ ಕೆಲವು ಸೈಂನ್ಯವನ್ನು ಕೊಡುತ್ತೇನೆ. ನಿಂನ ಬಳಿಯಲ್ಲಿದ್ದ ಸೈಂನ್ಯವನ್ನು ಸಂನಾಹಮಾಡಿಕೊಂಡು ನಿಜಾಮಷಹಾ ಮೇಲೆ ಹೋಗಿ ಯುದ್ಧವ ನಡೆಸಿ ಜಯಿಸಿ ಬಂದರ್ರೆ ನಿನ್ನ ಮನಸ್ಸಿನ ಪ್ರಕಾರ ಕೊಡಲಾದೀತು. ಯೆಂದು ಹೇಳಿ ಕೆಲವು ಸೈಂನ್ಯವನ್ನು ಕೊಟ್ಟುಕಳುಹಿಸಿದರು..... ಯೀ ಹಂಡೆ ಹನುಮಪ್ಪನಾಯಕನು ಯುದ್ಧವನ್ನು ಮಾಡಿ ನಿಜಾಂಷಹಾನ ಹಿಡಿದುಕೊಂಡು ಬಂದು ರಾಮರಾಯ ತಿರುಮಲರಿಗೆ ಕಾಣಿಕೆಕೊಟ್ಟನು. ಅದರ ಮೇಲೆ ಅವರಿಗೆ ಬಹಳ ದಯೆ ಬಂದು ಮೆಚ್ಚಿ ನಿಂನ್ನ ಮನಸ್ಸಿನೊಳಗೆ ಯೇನು ಯಿದೆಯೊ ಕೇಳೆಂದು ಹಂಡೆ ಹನುಮಪ್ಪ ನಾಯ್ಕನಿಗೆ ಅಪ್ಪಣೆ ಕೊಡಲಾಗಿ, ತಾವು ದಯಮಾಡಿ ಯೇನು ಕೊಟ್ಟರೂ ಸಕಲ ಬಹುಮಾನಗಳು ಕೊಟ್ಟ ಹಾಗೆಂದು ಬಿನ್ನಹಮಾಡಿಕೊಂಡನು. ಆಗಲು ಮೂಡಲು ದೆಸೆಯಲ್ಲಿ ಯಿದ್ದ ನಂದೇಲ ಗ್ರಾಮ ೧, ಬುಕ್ಕರಾಯ ಸಮುದ್ರ ೧, ಧರ್ಮಾವರ ೧, ಕಣುಕಲ್ಲು (ಕಣೇಕಲ್ಲು?) ೧, ಪಡುವಲು ಯಿರುವ ಬಳ್ಳಾರಿ ೧, ಕುರುಗೋಡು ೧ ಈ ಗ್ರಾಮಗಳನ್ನು ಬಿರುದುಗಳಾಗಿ ಕೊಡಲಾಗಿ ಯೀ ಹಂಡೆ ಹನುಮಪ್ಪ ನಾಯ್ಕನು ರಾಮರಾಯನ ಬಳಿಯಿಂದ ಅಪ್ಪಣೆ ತೆಗೆದುಕೊಂಡು ಶಾಲಿವಾಹನ ಶಕವರ್ಷ ೧೪೯೧ (ಕ್ರಿ.ಶ. ೧೫೬೯) ನೆಯ ಶುಕ್ಲನಾಮ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ನಂದ್ಯಾಲಗೆ ಬಂದು ಮುಟ್ಟಿದನು. ಆ ತಾಲೂಕು ವಿಚಾರಿಸಿಕೊಂಡು ಅಲ್ಲಿಯಿಂದ ಬುಕ್ಕರಾಯ ಸಮುದ್ರಕ್ಕೆ ಬಂದು ಅಲ್ಲಿನ ತಟಾಕನ್ನು ನೋಡಿ ದೊಡ್ಡಕೆರೆಯೆಂದು ತಿಳಿದುಕೊಂಡು ಯೀ ಗ್ರಾಮದೊಳಗಿನ ಕೋಟೆಯ ಮುಂದೆ ರಾಜಗೃಹವ ಕಟ್ಟಿಸಿ, ಸುತ್ತ ಹಿಂದೆ ಕೋಟೆ ನಿರ್ಮಾಣ ಮಾಡಿಕೊಂಡು ಎರಡು ರಾಜ್ಯವನ್ನು ವಿಚಾರಿಸುತ್ತಾ ಯಿದ್ದು ಶಾಲಿವಾಹನ ಶಕವರುಷ ೧೫೦೫ (ಕ್ರಿ.ಶ. ೧೫೮೫) ನೆಯ ಚಿತ್ರಭಾನು ಸಂವತ್ಸರದೊಳಗೆ ಮೃತಿಹೊಂದಿದನು ಎಂಬ ಉಲ್ಲೇಖದಿಂದ ವಿಜಯನಗರ ಅರಸರ ಸಹಾಯಕ್ಕೆ ಸೊಲ್ಲಾಪುರದಿಂದ ಬಂದ ಹಂಡೆ ಹನುಮಪ್ಪ ನಾಯಕ ಬಳ್ಳಾರಿ, ಆಂಧ್ರದ ಕೆಲವು ಭಾಗಗಳನ್ನು ಕಾಣಿಕೆಯಾಗಿ ಪಡೆದು ಇಲ್ಲಿಯೇ ಮೃತನಾದನು. ನಂತರದಲ್ಲಿ ಈತನ ಮಗ ಇಮ್ಮಡಿ ಹಂಪನಾಯಕನಾದಿಯಾಗಿ ಇಡೀ ವಂಶಪರಂಪರೆಯೇ ಇಲ್ಲಿ ಆಳ್ವಿಕೆ ಮಾಡಿ ಇತಿಹಾಸ ನಿರ್ಮಿಸಿದ್ದನ್ನು ಈ ವಂಶಾವಳಿ ತಿಳಿಸುತ್ತದೆ.

ಹಂಡೆ : ಜಾತಿ ಸೂಚಕವೇ - ಸ್ಥಳವಾಚಿಯೇ

ಇಲ್ಲಿಯವರೆಗೆ ಹಂಡೆ ಎಂಬುದನ್ನು ಕುರುಬ ಜನಾಂಗದ ಒಂದು ಪಂಗಡವೆಂದು ಜಾತಿಸೂಚಕವಾಗಿ ಗಮನಿಸಿರುವುದನ್ನು ಕಾಣುತ್ತೇವೆ. ಹಂಡೆಕುರುಬ, ಹಂಡ್ಕುರುಬ ಎಂಬಿತ್ಯಾದಿ ಪದಗಳು ಬಳಕೆಯಲ್ಲಿವೆ. ಬಳ್ಳಾರಿ ಪಾಳೆಗಾರರನ್ನು ಹಂಡೆ ಮನೆತನದವರೆಂದು ಕರೆಯುತ್ತಾರೆ. ಆದರೆ ಹಂಡೆಯೆಂಬುದು ಸ್ಥಳವಾಚಿಯಾಗಿರಬಾರದೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸ್ಥಳ ಸೂಚಕ ಹಾಗೂ ಜಾತಿ ಸೂಚಕ ಉಲ್ಲೇಖಗಳಿರುವುದು ನಮ್ಮಲ್ಲಿ

ಅನೇಕ ಪದಗಳು ಬಳಕೆಯಲ್ಲಿವೆ. ಉದಾಹರಣೆಗೆ ಉಡುಪಿ ಬ್ರಾಹ್ಮಣರು, ಬಳ್ಳಾರಿ ಶೆಟ್ಟರು, ಆಂಧ್ರ ರೆಡ್ಡಿ ಇತ್ಯಾದಿ. ಇಲ್ಲೆಲ್ಲ ಪೂರ್ವಪದ ಸ್ಥಳವಾಚಿಯಾಗಿ ಉತ್ತರಪದ ಜಾತಿ ಇಲ್ಲವೇ ಜನಾಂಗವಾಚಿಯಾಗಿ ಬಳಕೆಗೊಂಡಿರುವುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಹಂಡೆ ಪಾಳೆಗಾರರು ಎನ್ನುವಲ್ಲಿ ಪಾಳೆಗಾರರ ಮೂಲ ಸ್ಥಳ ಹಂಡೆಯಾಗಿರಬೇಕೆಂದು ಊಹಿಸಲು ಸಾಧ್ಯವಿದೆ. ಹೀಗಾಗಿ ಬಿಜಾಪುರ, ಮುತ್ತಿಗೆ ಭಾಗದವರಾದ ಈ ಪಾಳೆಗಾರರ ಹಂಡೆ, ಹಂಡೆಯ ಎಂಬ ಮೂಲ ಸ್ಥಳವನ್ನು ಶೋಧಿಸುವುದು ಅಗತ್ಯವಾಗಿದೆ. ಪ್ರಸ್ತುತ ವಂಶಾವಳಿಯ ಪ್ರಕಾರ ಹಂಡೆ ಪಾಳೆಗಾರರ ವ್ಯಕ್ತಿತ್ವ ಆಚಾರ, ವಿಚಾರ, ಗಳಲ್ಲದೆ ಜನಜನಿತವಾಗಿದ್ದ ಕೆಲವು ಸಂಗತಿಗಳಿಗೂ ಇಲ್ಲಿ ಇಂಬು ದೊರೆತಿರುವುದನ್ನು ನೋಡಬಹುದಾಗಿದೆ.

ಐತಿಹ್ಯೀಕೃತ ವಿಷಯ

ಜನಪದರ ಪುರಾಣಗಳಾದ ಐತಿಹ್ಯಗಳು ವಂಶಾವಳಿಯಲ್ಲಿ ಸ್ಥಾನ ಪಡೆದಿವೆ. ನಾಡಿನಲ್ಲಿ ಜನಜನಿತವಾಗಿದ್ದ ಕೆರೆಗೆಹಾರ ಕೊಡುವ ಪದ್ಧತಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಬುಕ್ಕರಾಯನ ಪ್ರಧಾನಿ ಚಿಕ್ಕಪ್ಪ ಒಡೆಯರು ಕ್ರಿ.ಶ. ೧೩೬೪ರಲ್ಲಿ ನಂದ್ಯಾಲ ತಾಲೂಕು ದೇವರಗುಡ್ಡದಿಂದ ಹುಟ್ಟಿ ಬರುತ್ತಿದ್ದ ಪಾಂಡುನದಿಗೆ ತಟಾಕು ನಿರ್ಮಿಸಿ ಅದರ ಒಂದು ತೂಬಿನ ಬಳಿ ಬುಕ್ಕರಾಯ ಸಮುದ್ರವೆಂಬ ಗ್ರಾಮವನ್ನು ಕಟ್ಟಿಸಿದನು. ಬುಕ್ಕರಾಯ ಸಮುದ್ರದ ನೀರು ಹೆಚ್ಚಾಗಿ ಹರಿಯುತ್ತಿರುವಾಗ ಅಲ್ಲಿ ಆಯಗಾರರು, ಪುರಜನರು ಎಲ್ಲರೂ ನೆರೆದಿದ್ದರು ಆಗ "......ವಂದು ಸ್ತ್ರೀಗೆ ಆವೇಶವು ಬಂದು ನಾನು ಗಂಗಾಭವಾನಿಯು ನನಗೆ ಆಹಾರವು ನರಬಲಿಕೊಟ್ಟರೆ ಯಿಲ್ಲಿ ನಿಲ್ಲುತಿದ್ದೇನೆ ಯಿಲ್ಲದಿದ್ದರೆ ನಾನು ನಿಲ್ಲೆನೆಂದು ಹೇಳಿದಳು. ಆಮೇಗೆ ಅಲ್ಲಿ ಯಿದ್ದ ಗ್ರಾಮಸ್ಥರು, ದೊಡ್ಡಮನುಷ್ಯರು, ಬಲಿನಿಮಿತ್ತ್ಯವಾಗಿ ಯೋಚನೆ ಮಾಡುತ್ತಾ ಯಿದ್ದಷ್ಟರೊಳಗೆ ಬುಕ್ಕರಾಯ ಸಮುದ್ರದಲ್ಲಿದ್ದ ಬಸಿರೆಡ್ಡಿಗೆ ಅಂತ್ಯದ ಯೇಳನೆ ಸೊಸೆ ಯೀಡ್ಮೆರದ ಮುದುಕವ್ವಯೆಂಬ ಹುಡುಗಿಯಂನ್ನಾ ಗಂಗಾದೇವಿ ಹಿಡಿದು ನೀನು ಬಲಿಬರಬೇಕೆಂದು ಹೇಳಿದಳು. ಅವಳು ಅದೇ ಪ್ರಕಾರ ಬಲಿಸಿದ್ಧವಾಗಿ ಅರಿಷಿಣ ಕುಂಕುಮ ಹಚ್ಚಿಕೊಂಡು ವಂದು ಮಡಿಸೀರೆ ಕಟ್ಟಿಕೊಂಡು ನಿಂಬೆ ಹಂಣುಗಳ ಕೈಯ್ಯೊಳಗೆ ಹಿಡಿದುಕೊಂಡು ಮನೆ ಹೊರಟು ಯೇರಿ ಮೇಲಕ್ಕೆ ಬಂದು ಮಾವನಾದ ಬಸಿರೆಡ್ಡಿ ಕಾಲಿಗೆ ಸಾಷ್ಟಾಂಗವೆರಗಿ, ವೂರಿನ ಜನರಿಗೆಲ್ಲ ನಮಸ್ಕಾರ ಮಾಡಿ, ನನಗೆ ಗಂಗಾ ಭವಾನಿ ಅಪ್ಪಣೆ ಆಯಿತು. ನಾನು ಬಲಿಯಾಗಿ ಹೋಗುತ್ತೇನೆಂದು ಹೇಳಿ ರಾಯಭಾಗದ ತೂಬಿಗೆ ಮೂವತ್ತು ಪಾದಗಳು ಮೇಲೆ ತೂತು ಬಿದ್ದು ಆ ತೂತಿನೊಳಗೆ ಯೇರಿ ಕೊರದು ಯಿದ್ದದ್ದು. ಆ ಬಿರಿದ ದ್ವಾರದಿಂದ ಯೀಕೆ ವಳಹೋಗಿ ನಿಂತಿದ್ದರಿಂದ ಆ ಯೇರಿ ಮೇಲೆ ಮಂಣುಕಲ್ಲು ಹಾಕಿದರು. ಆದದ್ದರಿಂದ ಆಮೇಗೆ ಯೇರಿ ನಿಂತಿತು! ಆ ಮರುದಿವಸ ಯೀ ಬಲಿಯಾಗಿ ಹೋದ ಮುದುಕವ್ವ ಆ ಗ್ರಾಮದೊಳಗೆ ಸ್ತ್ರೀಜನಗಳ ಮೇಲೆ ಆವೇಶ ಬಂದು ಶಿಲಾ ರೂಪವಾಗಿ ತನ್ನ ಪ್ರತಿಮೆಯನ್ನು ಮಾಡಿ ಗಿಡದ ಕೆಳಗಿಟ್ಟು ಪೂಜಿಸಿರೆಂದು ಹೇಳಿದುದರಿಂದ

ಆ ಪ್ರಕಾರವೇ ಯಿಟ್ಟು ಯಂಗ್ಯೂ ಪೂಜಿಸುತ್ತಾ ಇರುತ್ತಾರೆ. ಆದರೆ ದೇವಾಲಯವಿಲ್ಲಾ. ಆ ತೂಬಿನ ಬಳಿ ತೂತು ಮುಚ್ಚಿದ ಸ್ಥಳದಲ್ಲಿ ಮುದುಕವ್ವಾ ಯಂದು ಕರೆದ್ರೆ ವೋ ಯಂತ್ತಾ ಯಿದ್ದಳು. ಹೀಗೆ ಯಿರುವಾಗ್ಯೆ ವಂದು ದಿವಸ ರಾತ್ರಿ ಹುಲ್ಲಿಗೆ ಹೋಗುವವರು ಅದೇ ಪ್ರಕಾರ ಕರೆದರೆ ವೋ ಯಂದಳು ಅದು ಕೇಳಿ ನಕ್ಕರು. ಯಿಂನು ನಿನ್ನ ಸೊಲ್ಲು ಅಡಗಲಿಲ್ಲವೆ ಯಂದು ಅವರು ಕೂಗಿ ಹೇಳಿದ್ದರಿಂದ ಆ ದಿನದಿಂದ ವೋಯನ್ನುವದಿಲ್ಲಾ. ಆ ಮುದುಕ್ಕವ್ವಗೆ ಮೊದಲಿಂದ ಯಿನ್ನೂ ಪೂಜೆ ನಡೆಯುತ್ತಾಯಿದೆ!"[೪] ಎಂಬುದಾಗಿ ವಂಶಾವಳಿ ವಿವರಿಸುತ್ತದೆ. ಇನ್ನು ಅದೆಷ್ಟೋ ಐತಿಹ್ಯಗಳು ಇದರಲ್ಲಿ ನುಸುಳಿಕೊಂಡಿವೆ.

ಪಾಳೆಗಾರರ ವ್ಯಕ್ತಿತ್ವ

ಹಂಡೆ ಬಲದ ಹನುಮಪ್ಪ ನಾಯಕನಿಂದ ಪ್ರಾರಂಭವಾಗುವ ವಂಶಾವಳಿಯಲ್ಲಿ ಕೆಲ ಜನ ಪಾಳೆಗಾರರು ಶಿವಭಕ್ತರಾಗಿ, ವಿಷಯಲಂಪಟರಾಗಿ, ರಾಜಕೀಯ ಚತುರರಾಗಿ, ಸಾಮಾಜಿಕ ಕಾರ್ಯಕರ್ತರಾಗಿ ಹೆಸರು ಮಾಡಿದ್ದಾರೆ.

ಶ್ರೀರಂಗರಾಯರ ಕಾಲದಲ್ಲಿದ್ದ ಮಲಕಪ್ಪನಾಯಕ ಮುಸ್ಲಿಂರೊಂದಿಗೆ ಹೋರಾಡಿ ವಿಜಯನಗರವನ್ನು ಸಂರಕ್ಷಿಸಿದನು. ಪ್ರಬಲರಾಗಿದ್ದ ಮುಸ್ಲಿಂರು ಎರಡನೆಯ ಬಾರಿಗೆ ವಿಜಯನಗರವನ್ನು ಮುತ್ತಿಗೆ ಹಾಕಿ ತಮ್ಮ ವಶ ಮಾಡಿಕೊಂಡರು. ಇದನ್ನು ನೋಡಿದ ಮಲಕಪ್ಪನಾಯಕ ಇನ್ನೇನು ಅವರೊಂದಿಗೆ ಸೆಣಸಾಡುತ್ತ ರಾಜ್ಯಕಾರ್ಯ ಮಾಡುವುದು ಉಚಿತವಲ್ಲವೆಂದು ಭಾವಿಸಿ ಅವರ ಚಾಕರಿ ಮಾಡುತ್ತ ಸ್ನೇಹದಿಂದ ವರ್ತಿಸಿದನು. ಹೀಗಾಗಿ ಯಲಮಂಚಿನಾಡಿಗೆ ಸಲ್ಲುವ ಬುಕ್ಕಪಟ್ಟಣ, ಅನಂತಸಾಗರ ಇವುಗಳಿಗೆ ಸೇರುವ ಉಪಗ್ರಾಮ ಗಳನ್ನು ಹಾಗೂ 'ವಜೀರ' ಎಂಬ ಬಿರುದನ್ನು ಬಾದುಷಾಹರಿಂದ ಪಡೆದುಕೊಂಡನು.

ವಂಶಾವಳಿಯ ಪ್ರಕಾರ ಇವರು ಜಾತಿಯೊಳು ಶಿವಭಕ್ತರು, ಲಿಂಗವಂತರು, ಇವರ ಕುಲದೈವ ಇಷ್ಟದೈವ ಬಿಜಾಪುರ ಸೀಮೆಯ ಸೊನ್ನಲಾಪುರದ ಸಿದ್ಧರಾಮೇಶ್ವರ. ಹೀಗಾಗಿ ಮಲಕಪ್ಪ ನಾಯಕನಂತೂ ಅತ್ಯಂತ ನಿಷ್ಠೆಯ ಶಿವಭಕ್ತನಿದ್ದಂತೆ ತೋರುತ್ತದೆ. ತರುಳ ಚರಪತಿ ವಿರಚಿತ ಗಂಗೆಗೌರಿ ಸಂವದ ಕೃತಿಯಲ್ಲಿ ಶಿವನು ಗಂಗೆಯನ್ನು ಮದುವೆಯಾಗಿ ಬರುತ್ತಿರುವ ಸುದ್ಧಿ ಕೇಳಿದ ಗೌರಿ "ಹಂಡೆ ಮಲಕನೊಡೆಯ ಕೇಳು ಎಲೆ ತಂಗಿ! ಆತ ಉಂಡ ಮನೆಗೆ ಎರಡು ಬಗೆಯನೆಲೆ ತಂಗಿ!" ಎಂಬ ಉದ್ಗಾರದ ಮಾತುಗಳಲ್ಲಿ ಈತನ ಏಕಪತ್ನಿ ನಿಷ್ಠೆ ಜೊತೆಗೆ ನಿಷ್ಠೆಯುಳ್ಳ ಶಿವಭಕ್ತನೆಂಬುದು ತಿಳಿದುಬರುತ್ತದೆ. ಪ್ರಾಯಶ: ಶಿವಭಕ್ತನಾದ ಈತನ ಆಶ್ರಯದಲ್ಲಿ ಶಿವಸ್ತುತಿ ಪರವಾದ ಈ ಕೃತಿ ರಚನೆಯಾಗಿರಬೇಕು.

ಬಾದುಷಾಹರಿಂದ ಈತ 'ವಜೀರ' ಎಂಬ ಬಿರುದನ್ನು ಪಡೆದನು. ವಜೀರ ಎಂಬುದಕ್ಕೆ ಪ್ರಧಾನಮಂತ್ರಿ, ಅಮಾತ್ಯ, ದಿವಾನ ಎಂಬ ಅರ್ಥಗಳು ಹೊರಡುತ್ತವೆ. ಪ್ರಾಚೀನ ಶಾಸನ, ಕಾವ್ಯಗಳಲ್ಲಿ ಈ ಪದದ ಬಳಕೆಯಿದ್ದು ಕುದುರೆದಳದ ಮುಖ್ಯಸ್ಥ ಎಂಬುದಾಗಿ ತಿಳಿದು ಬರುತ್ತದೆ.

ಒತ್ತಿಗೆ ಸೇರಿ ಮೈದಡವಿದ ಸಹಣೆಗೆ
ಹತ್ತು ಸಾವಿರ ಟೆಂಕೆಯನು
ಇತ್ತಪೆವೆಂದು ವಜೀರಮಲ್ಲುಕರು ನೋ
ವುತ್ತ ಮನದೊಳೆಯ್ದುವರು
(ಕುಮಾರ ರಾಮ ಸಾಂಗತ್ಯ ೯ - ೬೦)

ದಿಟ್ಟಿಸುತ ತುರಗದ ವಜೀರರು ಅಷ್ಟದಿಕ್ಕಿಲಿ ಕವಿದ ಬಲವನು
ಕುಟ್ಟಿದರು ಅರಿಭಟರ ಸಿರವರಿದಿಟ್ಟರವನಿಯಲಿ
(ಶರಣ ಲೀಲಾಮೃತ ೫೧೧)

ಬಹುಶಃ ಬಾದುಷಾಹರಿಂದ ಕೆಲ ಪ್ರದೇಶಗಳನ್ನು ಸ್ವತಂತ್ರವಾಗಿ ಆಳ್ವಿಕೆ ಮಾಡಿಕೊಂಡಿದ್ದ ಮಲಕಪ್ಪನಾಯಕ ಅವರ ಸೇನಾ ಪರಿವಾರದಲ್ಲಿ ಕುದುರೆ ಸವಾರರ ಮುಖ್ಯಸ್ಥನಾಗಿ ಬಡ್ತಿಹೊಂದಿರಬೇಕೆಂದು ಊಹಿಸಬಹುದಾಗಿದೆ.

ಪಾಳೆಗಾರರ ಮನೆತನದಲ್ಲಿ ಸಿದ್ದಪ್ಪನಾಯಕ ವಿಷಯಲಂಪಟನಾಗಿದ್ದನು. ವಂಶಾವಳಿಯಲ್ಲಿ "ಯೀ ಸಿದ್ದಪ್ಪನಾಯಕನು ನಿಷಾ ಕುಡಿಯುವವನು ಕಾಮೊದ್ರೇಕಿಯಾಗಿ ಗ್ರಾಮದೊಳಗೆ ಇದ್ದ ಸಂಸಾರಿಗಳೊಡನೆ ಎಲ್ಲಿ ಚೆಲುವೆ ಸ್ತ್ರೀಯರು ಯಿರುತ್ತಾರೊ ಅವರನ್ನು ಬಲತ್ಕಾರದಿಂದ ಕರೆಸಿ ಕೆಡಿಸುತ್ತಾಯಿದ್ದನು" ಎಂದು ವರ್ಣಿಸುತ್ತದೆ. ಇದರಿಂದ ಬೇಸರ ಪಟ್ಟುಕೊಂಡ ಕೆಲವರು ಮನೆ - ಮಠ ಬಿಟ್ಟು ವಲಸೆಹೋದರು. ರೆಡ್ಡಿ, ಗೌಡರು ಶಾನುಭೋಗರು, ಕಿಲ್ಲೆದಾರು ಮುಂತಾದವರು ಸಂಸ್ಥಾನ ಇವನಿಂದ ಹಾಳಾಗುತ್ತದೆಂಬ ಕಾರಣದಿಂದ ಮುದ್ದುಮಲ್ಲಪ್ಪನವರಲ್ಲಿದ್ದ ಪ್ರಸನ್ನಪ್ಪನಾಯಕನ ಮಗ ರಾಮಪ್ಪನಾಯಕನನ್ನು ಕರೆದುಕೊಂಡು ಬಂದು ರಾಜ್ಯಭಾರ ಮಾಡಲು ಬಿನ್ನವಿಸಿಕೊಳ್ಳುತ್ತಾರೆ. ಸಿದ್ದಪ್ಪನಾಯಕನಿಗೂ ರಾಮಪ್ಪನಾಯಕನಿಗೂ ಯುದ್ಧವಾಗಿ ಸಿದ್ದಪ್ಪನಾಯಕನನ್ನು ರಾಮಪ್ಪನಾಯಕ ಕರಕೊಂಡು ಬಂದು ಕೋಟೆಯೊಳಗೆ ಜೋಕೆ ಮಾಡುತ್ತಾನೆ. ರೋಷದಿಂದ್ದ ಸಿದ್ದಪ್ಪನಾಯಕ ಅನ್ನನೀರುಬಿಟ್ಟು ಸತ್ತುಹೋಗುತ್ತಾನೆ.

ಈತನ ದೊಡ್ಡಪ್ಪ ಪ್ರಸನ್ನಪ್ಪನಾಯಕನು ಕೂಡ ತಾಡಿಮರಿ ಪ್ರದೇಶದಿಂದ ಅನಂತಪುರಕ್ಕೆ ಬಂದ ವಸಂತವ್ವನೆಂಬ ವೈಶ್ಯೆಯನ್ನು ಮೋಹಿಸುತ್ತಾನೆ; ಆಕೆಯೊಂದಿಗೆ ಬುಕ್ಕರಾಯ ಸಮುದ್ರಕ್ಕೆ ಬಂದು ನೆಲೆಸುತ್ತಾನೆ. ವಂಶಾವಳಿಯಲ್ಲಿ "ಮೈಕಷ್ಟ ಮಾಡಿಕೊಂಡಿದ್ದ ವಸಂತವ್ವ ಲಚ್ಚವ್ವ ಎಂಬ ಸ್ತ್ರೀಯರಲ್ಲಿ" ಎಂಬ ಉಲ್ಲೇಖವಿದ್ದು ಇದು ಮೈಯನ್ನು ಮಾರಿಕೊಂಡು ಜೀವಿಸುತ್ತಿದ್ದ ಸೂಳೆಗಾರಿಕೆ ವೃತ್ತಿಯನ್ನು ತಿಳಿಸುತ್ತದೆ. ಪ್ರಸನ್ನಪ್ಪನಾಯಕ ನೀನು ಯಾರೆಂದು ವಸಂತವ್ವನನ್ನು ಕೇಳಿದಾಗ "ಭೋಗಸ್ತ್ರೀಯೆಂದು ತನ್ನ ವೃತ್ತಾಂತವು ಯಾವತ್ತೂ ಸಿದ್ಧವಾಗಿ ಹೇಳಿದ್ದರಿಂದ" ಎಂಬ ವಂಶಾವಳಿಯಲ್ಲಿಯ ಮುಂದಿನ ಮಾತು ಮೈಕಷ್ಟವೆಂಬುದಕ್ಕೆ

ವೈಶ್ಯಾವಾಟಿಕೆಯೆಂಬ ನಿಜ ಅರ್ಥ ಹೊರಡುತ್ತದೆ. ಮುಂದೆ ಪ್ರಸನ್ನಪ್ಪನಾಯಕ ಈಕೆಯಿಂದಲೇ ಕುತ್ತಿಗೆ ಕೊಯ್ಯಿಸಿಕೊಂಡು ಮರಣಹೊಂದುತ್ತಾನೆ.

ಹೀಗೆ ಈ ಪಾಳೆಗಾಗರರಲ್ಲದೆ ಇವರ ಪರಿಸರದಲ್ಲಿ ಕೆಲಸ ಮಾಡುತ್ತಿದ್ದ ಕುಲಕರ್ಣಿಗಳು, ವಕೀಲರು, ಅಮಲದಾರರು, ಪೌಜುದಾರರು ಸಹ ಕಪಟಿಗಳು, ನಯವಂಚಕರು ಆಗಿರುವುದು ತಿಳಿದುಬರುತ್ತದೆ. ಉದಾಹರಣೆಗೆ ಪೌಜುದಾರರಾದ ಸರದಾರ ಖಾನ್, ಅಲ್ಲಿಖಾನ್, ವಕೀಲ ರಾಮಾಜಿಯವರಂತಹ ವ್ಯಕ್ತಿಗಳ ವ್ಯಕ್ತಿತ್ವವನ್ನು ನೇರವಾಗಿ ದಾಖಲಿಸಿದೆ.

ಸಾಮಾಜಿಕ ಕಾರ್ಯಗಳು

ಹಂಡೆ ಪಾಳೆಗಾರರ ಸಾಮಾಜಿಕ ಕಾರ್ಯಗಳು ವೈವಿಧ್ಯಮಯವಾಗಿವೆ. ವಿಶೇಷವಾಗಿ ವಂಶಾವಳಿಯಲ್ಲಿ ಕೆರೆ ದುರಸ್ತಿಮಾಡುವ ಉಲ್ಲೇಖ ಬಹಳ ಕಡೆ ಬಂದಿರುವುದನ್ನು ಕಾಣಬಹುದು. ವಂಶಾವಳಿಯು ಪ್ರಾರಂಭವಾಗುವುದೇ ಬುಕ್ಕರಾಯನ ಪ್ರಧಾನಿ ಚಿಕ್ಕಪ್ಪವೊಡೆಯ ಪಾಂಡುನದಿಗೆ ತಟಾಕು ಕಟ್ಟಿಸುವುದರಿಂದ. ಹಾಗೆಯೇ ಮಲಕಪ್ಪನಾಯಕ ಹಂಡೆ ಅನಂತಪುರದಲ್ಲಿ ನೆಲೆಸಿ ಅಲ್ಲಿಯ ಕೆರೆಗೆ ನಿರ್ಮಿಸಿದ್ದ ಮೊದಲಿನ ತೂಬು ತೆಗೆದು ಸ್ಥಳಾಂತರಿಸಿ ಕೆರೆಯೇರಿ ಕಟ್ಟಿಸಿದನು.

ಪ್ರಸನ್ನಪ್ಪನಾಯಕನ ಆಳ್ವಿಕೆ ಕಾಲದಲ್ಲಿ ಅನಂತಪುರದಲ್ಲಿಯ ಕೆರೆಯ ಉಲ್ಲೇಖವನ್ನು ವಂಶಾವಳಿ ಸುದೀರ್ಘವಾಗಿ ವಿವರಿಸುತ್ತದೆ. ಯಾವುದೊ ಕೆಲಸಕ್ಕೆ ಕಡಪದ ನಾವಬರ ಹತ್ತಿರ ಹೋಗುವ ಸಮಯದಲ್ಲಿ ಪ್ರಸನ್ನನಾಯಕ ಸಿರಿಯಪ್ಪ ಬಣಜಿಗನನ್ನು ಕರೆಸಿ "ರಾಜ್ಯದ ಮೇಲೆ ವಂದು ಕಂಣು, ಕೆರೆಮ್ಯಾಲೆ ವಂದು ಕಂಣು ಯಿರಿಸು. ಯೀ ಕರೆತುಂಬಿ ಯಿದ್ದದ್ದರಿಂದ ಪ್ರತ್ಯೇಕ ಕಾಲುವೆ ಅಗಿದು ನೀರು ಕೆರೆಯೊಳಗೆ ಕೆರೆ ನೆಲಕ್ಕೆ ಯಿಟ್ಟು ಬತ್ತದ (ಅಹಗೆ) ಹೊಸಲ (ಹೋದಸಲ) ಗೋದುವೆ (ಉದಿ) ಮ್ಯಾಲೆ ಹಾಕಿಶಿದೆವು. ಆದ್ದರಿಂದ ೨ ಫಲಕ್ಕೆ ಬಂದರೆ ಜಾಗ್ರತೆಯಾಗಿ ಇರಬೇಕಾದ್ದೆಂದು ಅಪ್ಪಣೆ ಕೊಟ್ಟು" ಹೋದನು. ಆತ ಹೋದನಂತರ ಅಕಾಲಮಳೆ ಸುರಿದು ಕೆರೆತುಂಬಿ ಮೂಡಲ ಹಾಗೂ ಪಡುವಲ ದಿಕ್ಕಿನ ತೂಬುಗಳೆರಡೂ ಕಿತ್ತುಹೋದವು. ಅಲ್ಲಿಯ ಒಕ್ಕಲಿಗರು, ಶಾನುಭೋಗರು ಸಮಸ್ತ ಪ್ರಜೆಗಳನ್ನು ಕರೆಸಿ ರಾತ್ರಿ ಹಗಲು ತೂಬಿನ ತೂತುಗಳಿಗೆ ಕಲ್ಲು, ಮಣ್ಣು, ಹುಲ್ಲು ಹಾಕಿ ಬಿಗಿಗೊಳಿಸಿದರು.

"ಹಂಡೆ ಹಿರೇ ರಾಮಪ್ಪನಾಯಕನು ಬಳ್ಳಾರಿಯ ಅಮ್ಮವ್ವನ ಮಠದಲ್ಲಿ ದಾಸೋಹ ನಡೆಸುವುದಕ್ಕಾಗಿ ಕ್ರಿ.ಶ. ೧೭೨೬ರಲ್ಲಿ ಕೊಟ್ಟೂರುಸ್ವಾಮಿಗೆ ಭೂದಾನ ನೀಡಿದ್ದಾನೆ. ಈತನೆ ತನ್ನ ಹಿರಿಯರಿಗೆ ಸುಕೃತವಾಗಲೆಂದು ತೊಲಮಾಮಿಡಿ, ಸಂಗನಕಲ್ಲು ಮತ್ತು ಚಾಗನೂರು ಗ್ರಾಮಗಳನ್ನು ಶ್ರೀಮಠಕ್ಕೆ ದಾನ ಮಾಡುತ್ತಾನೆ. ಈತನ ಹೆಂಡತಿ ನೀಲಮ್ಮನವರು ಬಳ್ಳಾರಿಯ ಮಹಾಂತ ಸ್ವಾಮಿಗಳಿಗೆ ಉಳೇನೂರು ಗ್ರಾಮವನ್ನು ಹಿರಿಯರಿಗೆ ಸುಕೃತವಾಗಲೆಂಬ ಭಾವನೆಯಿಂದ ದತ್ತಿ ಬಿಡುತ್ತಾಳೆ".[೫]

ಆಚಾರ - ವಿಚಾರಗಳು

ಕೆರೆಗೆ ಹಾರ ಕೊಡುವ ಪದ್ಧತಿ, ಗೋಕರ್ಣ ತೀರ್ಥಯಾತ್ರೆಯಿಂದ ಬ್ರಹ್ಮಹತ್ಯೆ ಪಾಪನಿವಾರಣೆಯಂತಹ ಆಚರಣೆಗಳನ್ನು ತಮ್ಮ ಬದುಕಿನಲ್ಲಿ ಪಾಳೆಗಾರರು ಅನುಸರಿಸಿಕೊಂಡು ಬಂದಿದ್ದರು. ಇವರ ಮರ್ಯಾದೆಗಳನ್ನು ವಂಶಾವಳಿ ಹೀಗೆ ತಿಳಿಸುತ್ತದೆ. "ಯಿವರು ಜಾತಿಯೊಳಗೆ ಶಿವಭಕ್ತರು, ಲಿಂಗವಂತರು, ಯಿವರಿಗೆ ಕುಲದೈವ ಯಿಷ್ಟದೈವವು ವಿಜಾಪುರದ ಸೀಮೆಯೊಳಗೆ ಯಿದ್ಧ ಸೊಂನಾಲಪುರ ಸಿದ್ಧರಾಮೇಶ್ವರನಾಗಲಿ ಯಿತರ ದೇವತೆಗಳನ್ನು ಶಿವಪೂಜೆ ಮಾಡದೆ ಆಗಲಿ ಗಂಗಾಪಾನ ಸಹಮಾಡುವದು ಯಿಲ್ಲಾ. ಮಧುರ ಆಹಾರಗಳೇ ಹೊರ್ತು ಮಧ್ಯ ಮಾಂಸಾದಿಗಳ ಬಕ್ಷಣೆ ಮಾಡರು, ಮೈನೆರೆದ ಹುಡಿಗಿಯರನ್ನು ಮದುವೆ ಮಾಡಿಕೊಳ್ಳರು. ವಂಬತ್ತು ವರುಷದೊಳಗಾಗಿ ಹೆಂಣುಗಳು ಯಿದ್ದರೆ ಪ್ರಸ್ತಮಾಡಿಕೊಳ್ಳುವದೂ, ಕಾಲ ಪ್ರಮಾಣದಿಂದ ಗಂಡ ಸತ್ತರೆ ತಾಳಿ ಕೂಡಾವಳಿ ಮಾಡುವ ಸಾಂಪ್ರದಾಯವಿಲ್ಲಾ ಸತ್ತರೆ ಸಮಾಧಿ ವಿನಹ ದಹನ ಮಾಡರು"[೬] ಈ ಮೇಲಿನ ಅಂಶಗಳಿಂದ ಇವರು ಬಾಲ್ಯವಿವಾಹಕ್ಕೆ ಮಾನ್ಯತೆ ಕೊಟ್ಟಂತಿದೆ. ಹೀಗಾಗಿ ಸಿದ್ಧರಾಮಪ್ಪನೆಂಬ ಕೊನೆಯ ಪಾಳೆಗಾರ ಗುತ್ತಿ ತಾಲೂಕು ಕಾಗಲ್ಲು ಗ್ರಾಮದ ಜಗ್ಗಲ ಸಂಕ್ರಪ್ಪನ ಮಗಳಾದ ಐದು ವರುಷಗಳ ವಯಸ್ಸಿನ ಲಿಂಗವ್ವನನ್ನು, ವಸಂತರಾಯನು ಸಂಕನಾಳು ಗ್ರಾಮದ ನಂಬಿಗೌಡನ ಮಗಳು ಒಂಭತ್ತು ವರುಷದ ಕಲ್ಯಾಣಮ್ಮ ಹಾಗೂ ನಿಂಬಕಲ್ಲು ಗ್ರಾಮದ ಕರಿಕೊಟ್ಟುರಪ್ಪನ ಮಗಳು ಒಂಭತ್ತು ವರುಷದ ವೀರಮ್ಮನನ್ನು ಮದುವೆಯಾದ ಉಲ್ಲೇಖಗಳನ್ನು ಕಾಣಬಹುದಾಗಿದೆ. ಹಾಗೆಯೇ ಉಡುಕಿ ಮದುವೆಗೆ ಆಸ್ಪದ ನೀಡದಿರುವುದು, ಸಮಾಧಿಕ್ರಿಯೆ ಹೊರತಾಗಿ ಹೆಣಗಳನ್ನು ದಹನ ಮಾಡುವ ಪದ್ಧತಿಗಳು ಇವರಲಿಲ್ಲದಿರುವುದು ಇವರ ಕಟ್ಟುನಿಟ್ಟಿನ ಆಚರಣೆಗಳಾಗಿವೆ.

ಪಾಳೆಗಾರರ ಕೊನೆಯ ದಿನಗಳು

ಸಹಜ, ಅಸಹಜ ಸಾವುಗಳಿಗೆ ಒಳಗಾದ ಪಾಳೆಗಾರರಿಗೆ ಕೊನೆಯದಿನಗಳಂತೂ ದುರ್ದೆಸೆಯಿಂದ ಕೂಡಿದ್ದವು. ಶ್ರೀರಂಗಪಟ್ಟಣದ ಸುಭೇದಾರರಿಂದ ಬಳ್ಳಾರಿ ಮುತ್ತಿಗೆ, ಶ್ರೀರಂಗಪಟ್ಟಣಕ್ಕೆ ಇಂಗ್ಲೀಷ್‌ರ ಮುತ್ತಿಗೆ, ಹೈದರಾಲಿ - ಟಿಪ್ಪುಸುಲ್ತಾನರ ಆಕ್ರಮಣಗಳಿಂದ, ಕಂಪನಿ ಸರಕಾರ ಅನುಷ್ಠಾನಗಳಿಂದ ಇವರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಜೀವನಕ್ಕೆ ಬಲವಾದ ಹೊಡೆತ ಬಿದ್ದಂತೆ ತೋರುತ್ತದೆ. "ಟಿಪ್ಪುಸುಲ್ತಾನರು ಯಿನ್ನು ಸಂಸ್ಥಾನಿಕರ ಜನವಿದ್ದಾರೆಯೇ ಯೆಂದು ಕೇಳಲಾಗಿ ಸಿದ್ಧರಾಮಪ್ಪನಾಯಕರವರ ಮಕ್ಕಳು ಯಿಬ್ಬರು ಮೊಮ್ಮಕ್ಕಳು ಯಿಬ್ಬರು ಕೆಲವರು ಅಮ್ಮನವರು ಅಳಿಯನ ಮಕ್ಕಳು ಯೀ ಮುಂತಾದವರು ಯಿದ್ದರೆಂದು ಯೀ ಕಿಲ್ಲೆದಾರ ಮೀರಕಾಶಿಂ ಹೇಳಿದುದು. ಯಲ್ಲ ವರ್ತಮಾನವು ಕೇಳಿ ಟಿಪ್ಪುಸುಲ್ತಾನರು ನೀನು ಅನಂತಪುರಕ್ಕೆ ಹೋಗುತ್ತಲೇ ಹಿರಿಯವರಾಗಿರುವ ಮಕ್ಕಳನ್ನು, ಅಳಿಯನ ಮಕ್ಕಳನ್ನು ಗಲ್ಲಿಗೆ ತೂಗ್ಹಾಕಿ ಮಿಕ್ಕಜನರನ್ನು ಹಜೂರು ಇಲಾಖೆ ಶ್ರೀರಂಗ

ಪಟ್ಟನಕ್ಕೆ ಕಳುಹಿಸೆಂದು ಹುಕುಂ ಆದದ್ದರಿಂದ ಯೀ ಮೀರುಡಾಶಿಂ ಅಪ್ಪಣೆ ತೆಗೆದುಕೊಂಡು ಬಂದು ಅನಂತಪುರಕ್ಕೆ ಟಿಪ್ಪುಸುಲ್ತಾನ ಕೊಟ್ಟ ಹುಕುಂ ಮೇರೆ ಸಿದ್ಧರಾಮಪ್ಪನಾಯಕರ ಮಕ್ಕಳು ಹನುಮಪ್ಪ ಬಸಪ್ಪ ಅಳಿಯನಾದ ಪ್ರಭುವಯ್ಯ ಬುಕ್ಕರಾಯ ಸಮುದ್ರಕ್ಕೆ ಹೋಗುವ ಮಾರ್ಗಕ್ಕೆ ಪಡುವಲು ಕಾಶಿವಿಶ್ವೇಶ್ವರನ ತೋಪಿನೊಳಗೆ ಪ್ರಥಮಗಿಡದಲ್ಲಿ ಗಲ್ಲಿಗೆ ಹಾಕಿಸಿದನು. ಯಿನ್ನು ಅವರ ಸಂಬಧಿತರಾದ ಜನಗಳು ಕಾಂತಪ್ಪದಳವಾಯಿ, ಹಲ್ ಶರಣಪ್ಪ, ಚಿಕ್ಕಸುಬ್ಬುರಾಯಪ್ಪ ಮೂವರನ್ನು ನೀಲಮ್ಮನ ತೋಪಿನೊಳಗೆ ವಂದು ಮಾವಿನ ಗಿಡಕ್ಕೆ ಗಲ್ಲಿಗೆ ಹಾಕಿದನು. ಮಕ್ಕಳಾದ ಯಿಬ್ಬರನ್ನು ಯಿನ್ನು ಅವರ ಸಂಬಂಧವಾದ ಜನರನ್ನು ಅಮಂನವರನ್ನು ಸಹ ಪಹರೆ ಕೊಟ್ಟು ಶ್ರೀರಂಗಪಟ್ಟಣಕ್ಕೆ ಕಳುಹಿಸಿದ್ದರಿಂದ ಇಲ್ಲಿನ ಅರಮನೆ ಹಾಳಾಯಿತು.[೭] ಅತ್ತ ಶ್ರೀರಂಗಪಟ್ಟಣದಲ್ಲಿ ಇದ್ದ ಸಿದ್ಧಪ್ಪನಾಯಕನಿಗೆ ತಿಂಗಳು ಒಂದಕ್ಕೆ ಕಂಠಿರಾಯ ಹೊನ್ನುಗಳ ಗೊತ್ತು ಮಾಡಿ ಅರವತ್ತು ಪ್ರಕಾರ ಸಂಬಳ ನಿರ್ಣಯ ಮಾಡಿ ಎರಡು ಸಾವಿರ ಕಾಮಾಟಿ ಜನರ ಕೈಯಿಂದ ಕೆಲಸ ನಡೆಸೆಂದು ಅಜ್ಞೆ ನೀಡಿದರು. ಕೆಲದಿನಗಳಾದ ಮೇಲೆ ಅಲ್ಲಿಂದ ಬಂದು ಸಿದ್ಧರಾಮಪ್ಪ ಪುರದೊಳಗೆ ಮರಣಹೊಂದಿದನು. ಕೊನೆಯವನಾದ ವಸಂತರಾಯನು ಮೃತನಾದನು. ಸಿದ್ಧರಾಮಪ್ಪನಾಯಕನ ಎರಡನೆ ಹೆಂಡತಿ ಪೊನ್ನಮ್ಮ ಇವರ ಮಗ ಚಿಕ್ಕರಾಮಪ್ಪನಾಯಕ ಈತನ ಹೆಂಡತಿ ಚನ್ನಮ್ಮ ಮುಂತಾದವರು ಕ್ರಿ.ಶ. ೧೮೧೧ರಲ್ಲಿ ಕುರುಗೋಡಿನಲ್ಲಿ ಸಾಮಾನ್ಯರಂತೆ ಜೀವನ ನೆಡೆಸಿ ಗತಿಸಿಹೋದದ್ದು ತಿಳಿದುಬರುತ್ತದೆ.

ವಂಶಾವಳಿಯ ಮಹತ್ವ

ಭಾಷೆ, ಇತಿಹಾಸ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ತುಂಬಾ ಮಹತ್ವದ ಸಂಗತಿಗಳನ್ನು ಇವು ತಿಳಿಸುತ್ತವೆ. ಬಿಡದಿಮನೆ, ಕಂಡಿಗೆ ಪೈಕ (ತೆರಿಗೆ), ಮಾಫಿ (ಸೂಚ), ಹುಕುಂ (ಆದೇಶ) ಮೈಕಷ್ಟ (ಸೂಳೆಗಾರಿಕೆ), ಹರದಾರಿ, ಇರಾದೆ (ಇಚ್ಛೆ), ಕೂಡಾವಳಿ (ಉಡುಕಿ), ಲಗ್ಗೆ (ಮುತ್ತಿಗೆ) ಇತ್ಯಾದಿ ಪದಗಳು ಭಾಷಿಕ ಅಧ್ಯಯನಕ್ಕೆ ಆಕರವಾದಂತೆ. ಕಂಪನಿ ಸರಕಾರದ ಆಗಮನ, ದಿವಾನ ಪೂರ್ಣಯ್ಯನವರ ಆಡಳಿತ ವೈಖರಿ, ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕ, ಇಂಗ್ಲೀಷ್ ಅಧಿಕಾರಿ ಕರ್ನಲ್ ಮಂನ್ರೂಲ್ ಸಾಹೇಬರ ಲೆಕ್ಕಪತ್ರ ವಿಚಾರಣಾ ವಿವರ, ಉಂಬಳಿ ಹಾಕಿಕೊಡುವ ಪದ್ಧತಿ ಅಲ್ಲದೆ ಪಾಳೆಗಾರರ ನಿಜವಾದ ವ್ಯಕ್ತಿತ್ವ ಇವೆಲ್ಲವನ್ನು ವಂಶಾವಳಿ ತಿಳಿಸುವುದರಿಂದ ಇದಕ್ಕೆ ಚಾರಿತ್ರಿಕ ಮಹತ್ವವಿದೆ.

ಅಡಿಟಿಪ್ಪಣಿಗಳು

೧. ಹೆಳವರುಯೆಂದರೆ: ಮೊದಲಿನಿಂದ ಕೊನೆಯತನಕ ಕಪಾಟಕಟ್ಟಿದ ಕುದುರೆಯಂತೆ ಒಂದು ಮನೆತನದ ಕಥೆಯನ್ನು ವಾಚಿಸುವುದರ ಮೂಲಕ ಗ್ರಾಮದ ಇತಿಹಾಸವನ್ನು ಸಂರಕ್ಷಿಸಿಕೊಂಡು ಬಂದ ವೃತ್ತಿಗಾಯಕರೆನ್ನಬಹುದು.

೨. ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ; ಡಾ. ಸಿ.ನಾಗಭೂಷಣ, ಪುಟ ೧೮೨, ೧೯೪

೩. ಬುಕ್ಕರಾಯ್ಯನ ಚರಿತ್ರೆ; ಸಂ: ಡಾ. ಎಸ್.ಸಿ. ಪಾಟೀಲ, ಶ್ರೀ ಸಿದ್ಧರಾಮೇಶ್ವರ ಪ್ರಕಾಶನ, ವಿಜಾಪುರ, ೨೦೦೨

೪. ಬುಕ್ಕರಾಯನ ಚರಿತ್ರೆ; ಸಂ: ಡಾ. ಎಸ್.ಸಿ. ಪಾಟೀಲ, ಪುಟ ೧-೨

೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಪುಟ ೧೪೨-೧೪೪

೬. ಬುಕ್ಕರಾಯನ ಚರಿತ್ರೆ; ಸಂ: ಡಾ. ಎಸ್.ಸಿ.ಪಾಟೀಲ, ಪುಟ ೭೪-೭೫

೭. ಬುಕ್ಕರಾಯನ ಚರಿತ್ರೆ; ಸಂ: ಡಾ. ಎಸ್.ಸಿ.ಪಾಟೀಲ, ಪುಟ ೬೧

❑❑

೬

ವಿಜಯನಗರ ಮತ್ತು ಕುಮಾರರಾಮ

* ಡಾ.ಸಿ.ಮಹದೇವ

ಕ್ರಿ.ಶ. ಹದಿನಾಲ್ಕನೆಯ ಶತಮಾನ ಕರ್ನಾಟಕದ ಚರಿತ್ರೆಯಲ್ಲಿ ಬಹಳ ಮಹತ್ವದ ಕಾಲ. ದಕ್ಷಿಣ ಭಾರತದ ಪ್ರಬಲ ರಾಜಕೀಯ ಶಕ್ತಿಗಳಾದ ವಾರಂಗಲ್ಲಿನ ಕಾಕತೀಯರು, ದೇವಗಿರಿಯ ಸೇವುಣರು ಮತ್ತು ದ್ವಾರಸಮುದ್ರದ ಹೊಯ್ಸಳರು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಈ ಮೂರು ರಾಜ್ಯಗಳ ನಡುವೆ ತುಂಗಭದ್ರಾ ಪರಿಸರದಲ್ಲಿದ್ದ ಕುಮ್ಮಟ ರಾಜ್ಯವು ಸಹ ದೆಹಲಿ ಸೈನ್ಯದ ದಾಳಿಗೆ ತುತ್ತಾಯಿತು.[೧] ಚರಿತ್ರೆಕಾರರು ಇದನ್ನು (Buffer State) ಪಡೆರಾಜ್ಯವೆಂದು ಕರೆದಿದ್ದಾರೆ.[೨] ಕುಮ್ಮಟದ ಅವನತಿಯೊಂದಿಗೆ ವಿಜಯನಗರ ಅಸ್ತಿತ್ವಕ್ಕೆ ಬಂದಿತು. ಉತ್ತರದಲ್ಲಿ ಕೃಷ್ಣಾನದಿಯಾಚೆಗೆ ಬಹುಮನಿ ರಾಜ್ಯ ಸ್ಥಾಪನೆಗೊಂಡಿತು. ಹೀಗಾಗಿ ಹದಿನಾಲ್ಕನೆಯ ಶತಮಾನದಲ್ಲಿ ಕೇವಲ ಕರ್ನಾಟಕವಲ್ಲದೆ ಇಡೀ ದಕ್ಷಿಣ ಭಾರತದಲ್ಲಿ ಹೊಸ ರಾಜಕೀಯ ಗಾಳಿ ಬೀಸತೊಡಗಿತು. ಯುದ್ಧ, ಕಲೆ ಮತ್ತು ಸಾಹಿತ್ಯ, ಧರ್ಮ, ಸಂಸ್ಕೃತಿ ಮುಂತಾದ ಹಲವು ಕ್ಷೇತ್ರಗಳಲ್ಲಿ ವ್ಯಾಪಕವಾದ ಬದಲಾವಣೆಗಳುಂಟಾದವು.

ಪ್ರಸ್ತುತ ಲೇಖನದ ಪ್ರವೇಶಕ್ಕೆ ಮೊದಲು ಕುಮ್ಮಟ ಮತ್ತು ವಿಜಯನಗರಗಳ ಸಂಬಂಧಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಪರಿಚಯಿಸುವುದು ಸೂಕ್ತವೆನಿಸುತ್ತದೆ.

ವಿಜಯನಗರ ಸ್ಥಾಪನೆಗೂ ಮೊದಲು ಹಂಪೆ - ಆನೆಗೊಂದಿ ಪರಿಸರದಲ್ಲಿದ್ದ ಕುಮ್ಮಟದಿಂದ ಮುಮ್ಮಡಿ ಸಿಂಗೆಯನಾಯಕ ಮತ್ತು ಆತನ ಮಗ ಕಂಪಿಲದೇವ ರಾಜ್ಯವಾಳಿದರು.

ಇವರ ರಾಜ್ಯ ಇಂದಿನ ಧಾರವಾಡ, ಹಾವೇರಿ, ಗದಗ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಪ್ರದೇಶಗಳನ್ನು ಒಳಗೊಂಡಿತ್ತು.[೩] ಇವರು ಮೊದಲಿಗೆ ಹೊಯ್ಸಳರ ಪರವಿದ್ದು, ನಂತರ ಸೇವುಣರ ಪಕ್ಷವಹಿಸಿದರು.[೪] ಹೊಯ್ಸಳರು ಇವರ ವಿರುದ್ಧ ಅನೇಕ ಯುದ್ಧಗಳನ್ನು ಮಾಡಿದರು. ಆದರೆ ಈ ಯುದ್ಧಗಳಿಂದ ಹೊಯ್ಸಳರಿಗೆ ಯಾವುದೇ ಲಾಭವಾಗಲಿಲ್ಲ.[೫] ವಿಜಯನಗರ ಸ್ಥಾಪಕರಾದ ಹರಿಹರ ಮತ್ತು ಬುಕ್ಕರು ಕಂಪಿಲದೇವನಲ್ಲಿ ಜವಾಬ್ದಾರಿಯುತವಾದ ಹುದ್ದೆಗಳಲ್ಲಿದ್ದರೆಂದು ಕುಮಾರರಾಮನ ಸಾಂಗತ್ಯಗಳು ತಿಳಿಸುತ್ತವೆ.[೬] ಇವರನ್ನು ಕಂಪಿಲನ ಬಂಧುಗಳೆಂದು ಗುರುತಿಸುವ ಪ್ರಯತ್ನ ಮಾಡಲಾಗಿದೆ.[೭] ಇವರು ಕಂಪಿಲದೇವನ ಬಳಿ ಸೇವೆಯಲ್ಲಿದ್ದು, ದೆಹಲಿ ಸುಲ್ತಾನರ ಸೈನ್ಯ ದಾಳಿಯ ಸಂದರ್ಭದಲ್ಲಿ ಆನೆಗೊಂದಿಯಿಂದ ಪರಾರಿಯಾಗಿ, ನಂತರ ಹೊಯ್ಸಳರ ಮೂರನೆಯ ಬಲ್ಲಾಳನಲ್ಲಿ ಸೇವೆಗೆ ಸೇರಿದರೆನ್ನಲಾಗಿದೆ.[೮] ಕುಮ್ಮಟದ ಪತನಾನಂತರ ಕಂಪಿಲನ ಬಂಧುಗಳನ್ನು ದೆಹಲಿಗೆ ಒಯ್ಯಲಾಯಿತೆಂದು, ನಂತರ ಸುಲ್ತಾನನು ಅವರನ್ನು ಕುಮ್ಮಟ ರಾಜ್ಯವನ್ನು ಪಾಲಿಸಲು ವಾಪಸ್ ಕಳುಹಿಸಿದನೆಂದು ಇಬ್ನಬತೂತ ಮತ್ತು ಬರನಿ ತಿಳಿಸುತ್ತಾರೆ.[೯]

ತೆಲುಗು ಮೂಲದ ಪ್ರಕಾರ ಹರಿಹರ ಮತ್ತು ಬುಕ್ಕರು ವಾರಂಗಲ್ಲಿನ ಕಾಕತೀಯ ಪ್ರತಾಪರುದ್ರನ ಬಳಿ ಅಧಿಕಾರಿಗಳಾಗಿದ್ದರು. ಅದು ಪತನವಾದ ನಂತರ ಕಂಪಿಲನಲ್ಲಿ ಸೇವೆಗೆ ಸೇರಿದರು. ಅದೂ ಸಹ ದೆಹಲಿಸೈನ್ಯದ ಆಕ್ರಮಣಕ್ಕೆ ತುತ್ತಾಯಿತು. ಅವರನ್ನು ಬಂಧಿಸಿ ದೆಹಲಿಗೆ ಒಯ್ಯಲಾಯಿತು. ಅಲ್ಲಿ ಕೆಲವು ಕಾಲ ಸುಲ್ತಾನನ ಸೇವೆಯಲ್ಲಿದ್ದರು. ಅವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಲಾಯಿತು. ನಂತರ ಸುಲ್ತಾನನು ಅವರನ್ನು ಕಂಪಿಲಿ ಆನೆಗೊಂದಿ ಪ್ರಾಂತ್ಯಕ್ಕೆ ಅಧಿಕಾರಿಗಳನ್ನಾಗಿ ನೇಮಿಸಿ ಕಳುಹಿಸಿದನು. ಹೀಗೆ ದಕ್ಷಿಣಕ್ಕೆ ಬಂದ ಹರಿಹರ ಮತ್ತು ಬುಕ್ಕರು ದೆಹಲಿ ಸುಲ್ತಾನನ ಸಂಬಂಧವನ್ನು ಕಡಿದುಕೊಂಡು, ಸ್ವತಂತ್ರವಾದ ರಾಜ್ಯವೊಂದನ್ನು ಸ್ಥಾಪಿಸಿದರು. ಅದೇ ವಿಜಯನಗರ ಎನ್ನಲಾಗಿದೆ.[೧೦] ಚರಿತ್ರೆಕಾರರಾದ ಜಿ.ಎಸ್.ದೀಕ್ಷಿತ್ ಅವರು, ಮುಸ್ಲಿಮ್ ದಾಳಿಗಳಿಂದ ಪತನಗೊಂಡ ರಾಜ್ಯಗಳ ಅಧಿಕಾರಿಗಳು ಕುಮ್ಮಟ ಮತ್ತು ದ್ವಾರಸಮುದ್ರದಲ್ಲಿ ಆಶ್ರಯ ಪಡೆದಿದ್ದರು ಎಂದು ತಿಳಿಸುತ್ತಾರೆ.[೧೧] ಹರಿಹರನು ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಬಲ್ಲಾಳನ ಸೇವೆಯಲ್ಲಿದ್ದ ಬಲ್ಲಪ್ಪ ದಣ್ಣಾಯಕ ಮತ್ತು ಪುಲ್ಲಖಂಡ ಸಿದ್ಧರಾಜರಿಗೆ (ಈ ಮೊದಲು ವಾರಂಗಲ್ಲಿನಲ್ಲಿ ಇದ್ದನು) ಮದುವೆ ಮಾಡಿಕೊಟ್ಟಿದ್ದನು.[೧೨] ಕುಮಾರರಾಮನ ಸಾಂಗತ್ಯಗಳಲ್ಲಿ ಭಾವಸಂಗಮನ ಉಲ್ಲೇಖವಿದೆ. ಇವನು ಕಂಪಿಲನ ಅಳಿಯ ಹಾಗು ಕುಮಾರರಾಮನ ಭಾವ. ಅಂದರೆ ಮಾರವ್ವೆಯ ಗಂಡ.[೧೩] ಎಡತೊರೆಯ ಒಂದನೆಯ ಬುಕ್ಕರಾಯನ ಶಾಸನವು ಪಂಪಾಪುರದ ಪರಿಸರದಲ್ಲಿದ್ದ ಭಾವಸಂಗಮನನ್ನು ಉಲ್ಲೇಖಿಸುತ್ತದೆ.[೧೪] ಕೈಫಿಯತ್ತೊಂದರಲ್ಲಿ ಕಂಪಿಲನಿಗೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದ ರಾಜರಲ್ಲಿ ಕುರುಗೋಡು ಸಂಗಮನು ಒಬ್ಬನಾಗಿದ್ದನೆಂದು

ತಿಳಿದುಬರುತ್ತದೆ.[೧೪] ಕುರುಗೋಡು ಹಂಪೆಯ ಪರಿಸರಲ್ಲಿರುವ ಪ್ರಮುಖ ಚಾರಿತ್ರಿಕ ಸ್ಥಳ. ಇಲ್ಲಿ ಸಂಗಮೇಶ್ವರ ದೇವಾಲಯವಿದೆ. ಹೀಗೆ ಸಾಂಗತ್ಯ, ಶಾಸನ ಮತ್ತು ಕೈಫಿಯತ್ತುಗಳ ಉಲ್ಲೇಖಗಳು ಒಂದೇ ಆಗಿವೆ. ಇದರಿಂದ ಸಂಗಮಮನೆತನದ ಸಂಗಮನು ಕುರುಗೋಡು ಪ್ರದೇಶವನ್ನಾಳುತ್ತಿದ್ದು, ಕಂಪಿಲನ ಅಳಿಯನಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಈ ಸಂಗಮನೇ ಹರಿಹರ ಮತ್ತು ಬುಕ್ಕರ ತಂದೆ. ಸಂಗಮನು ಕನ್ನಡಿಗನಾಗಿದ್ದು, ಕುರುಗೋಡು ಅವನ ಮೂಲ ನೆಲೆಯಾಗಿತ್ತು.[೧೫]

ಕ್ರಿ.ಶ. ೧೩೨೭ರಲ್ಲಿ ದೆಹಲಿಯ ಮಹಮದ್ ಬಿನ್ ತುಘಲಕನ ಸೈನ್ಯ ಕುಮ್ಮಟದ ಮೇಲೆ ದಾಳಿಮಾಡಿತು.[೧೬] ಈ ದಾಳಿಯಲ್ಲಿ ಕಂಪಿಲದೇವ ಹಾಗೂ ಅವನ ಮಗನಾದ ರಾಮನಾಥ ಮರಣ ಹೊಂದಿದರು.[೧೭] ಕುಮ್ಮಟರಾಜ್ಯ ದೆಹಲಿ ಸುಲ್ತಾನನ ವಶವಾಯಿತು.[೧೮] ಈ ವೇಳೆಗಾಗಲೇ ಮುಸ್ಲಿಮ್ ದಾಳಿಯಿಂದ ಸಂಕಷ್ಟಕ್ಕೊಳಗಾಗಿದ್ದ ಮೂರನೆಯ ಬಲ್ಲಾಳನಿಗೆ ಅಪಾಯದ ಮುನ್ಸೂಚನೆ ಇತ್ತು. ಕುಮ್ಮಟದ ಪತನದ ನಂತರ ಹರಿಹರ ಮತ್ತು ಸಹೋದರರು ಆನೆಗೊಂದಿಯಿಂದ ಈ ಭಾಗದ ಆಡಳಿತವನ್ನು ನಿರ್ವಹಿಸಿದರು. ಮೇಲಾಗಿ ಇವರು ಸ್ಥಳೀಯರಾಗಿದ್ದು, ಸಹಜವಾಗಿಯೇ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದ್ದರು. ಅಲ್ಲದೆ ಇವರು ಕಂಪಿಲನ ಬಂಧುಗಳಾಗಿದ್ದ ಕಾರಣ ಜನರ ಬೆಂಬಲವನ್ನು ಪಡೆದಿದ್ದರು. ಸ್ಥಳೀಯವಾಗಿ ಜನಪ್ರಿಯರಾಗಿದ್ದ ಈ ಸಹೋದರರ ಬಗ್ಗೆ ಮೂರನೆಯ ಬಲ್ಲಾಳ ವಿಶೇಷ ಪ್ರೀತಿಯನ್ನು ತೋರಿಸಿದನು. ತನ್ನ ಮಹಾಮಂಡಲೇಶ್ವರರನ್ನಾಗಿ ಮಾಡಿಕೊಂಡನು. ಉತ್ತರದ ಕಡೆಯ ದಾಳಿಗಳನ್ನು ತಡೆಯಲು ಅವರಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಿ ಪ್ರೋತ್ಸಾಹಿಸಿದನು. ಹಂಪೆಯಲ್ಲಿ ತಾನು ನಿರ್ಮಿಸಿದ ಹೊಸ ಪಟ್ಟಣದಲ್ಲಿ ನೆಲೆಗೊಳ್ಳುವಂತೆ ಮಾಡಿದನು.[೧೯] ಕ್ರಿ.ಶ. ೧೩೪೬ರ ವೇಳೆಗೆ ಹೊಯ್ಸಳರ ಆಳ್ವಿಕೆ ಕೊನೆಗೊಂಡು, ಹರಿಹರ ಮತ್ತು ಸಹೋದರರು ಸ್ವತಂತ್ರವಾಗಿ ಆಳ್ವಿಕೆಯನ್ನು ಆರಂಭಿಸಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು.[೨೦] ಈ ಮೇಲಿನ ವಿವರಗಳಿಂದ ಕುಮ್ಮಟ ಮತ್ತು ವಿಜಯನಗರ ಸ್ಥಾಪಕರ ಸಂಬಂಧಗಳು ವ್ಯಕ್ತವಾಗುತ್ತವೆ. ಹೀಗೆ ಕುಮ್ಮಟ ರಾಜ್ಯದ ಸಮಾಧಿಯ ಮೇಲೆ ವಿಜಯನಗರ ರಾಜ್ಯವನ್ನು ಸ್ಥಾಪಿಸಲಾಯಿತು.[೨೧]

ವಿಜಯನಗರವು ಜನಮನದಲ್ಲಿ ಪ್ರೀತಿ ಮತ್ತು ಗೌರವವನ್ನು ಕ್ಷಿಪ್ರವಾಗಿ ಗಳಿಸಿಕೊಳ್ಳಲು ಅನೇಕ ಅಂಶಗಳು ಕಾರಣವಾಗಿವೆ. ಅವುಗಳಲ್ಲಿ ಕುಮ್ಮಟದ ಪತನದ ಬಗೆಗಿದ್ದ ಅನುಕಂಪವೂ ಒಂದು. ಅಂದರೆ ಕಂಪಿಲ ಮತ್ತು ಮಗ ರಾಮನಾಥ ಶೌರ್ಯದಿಂದ ಹೋರಾಡಿ ಪ್ರಾಣತ್ಯಾಗಮಾಡಿದ್ದರು. ರಾಮನಾಥ ತನ್ನ ಶೌರ್ಯ ಸಾಹಸಗಳಿಗೆ ಹೆಸರಾಗಿದ್ದು, ಸದ್ಗುಣಗಳ ಗಣಿಯಾಗಿದ್ದನು. ಈತನನ್ನು ಕುರಿತಂತೆ ಐತಿಹ್ಯ, ಕಥೆ ಮತ್ತು ಕಾವ್ಯಗಳು ವಿಜಯನಗರ ಕಾಲದಲ್ಲಿ ವ್ಯಾಪಕವಾಗಿ ರಚನೆಗೊಂಡವು. ಶಾಸನಗಳು ರಾಮನಾಥ ಎಂದು ಕರೆದರೆ, ಜನಪದರಲ್ಲಿ ಕುಮಾರರಾಮನೆಂದೆ ಪ್ರಸಿದ್ಧನಾದನು. ಈತನನ್ನು ಕುರಿತ ಕಾವ್ಯಗಳು ಕುಮಾರರಾಮನ ಸಾಂಗತ್ಯಗಳೆಂದು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತವಾಗಿವೆ.

ಕರ್ನಾಟಕದ ಯಾವೊಬ್ಬ ಚಾರಿತ್ರಿಕ ವ್ಯಕ್ತಿಯನ್ನು ಕುರಿತಂತೆ ಈ ಸಂಖ್ಯೆಯಲ್ಲಿ ಸಾಂಗತ್ಯ ಕೃತಿಗಳು ರಚನೆಯಾಗಲಿಲ್ಲವೆಂದು ಹೇಳಬಹುದು. ಕುಮಾರರಾಮ ಅಥವ ರಾಮನಾಥನ ತ್ಯಾಗ, ಆದರ್ಶ, ಸದ್ಗುಣಗಳು ಎಲ್ಲ ಕಾಲಕ್ಕೂ ಮೌಲಿಕವಾಗಿವೆ. ಕುಮಾರರಾಮನಿಗೆ, ಸಾಹಿತ್ಯರಚನೆಗೂ ಮೊದಲೇ ದೇವಾಲಯಗಳನ್ನು ನಿರ್ಮಿಸಿ, ಅವನ ಶಿಲ್ಪಗಳನ್ನು ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಈ ರೀತಿ ವಿಜಯನಗರ ಕಾಲದಲ್ಲಿ ಕುಮಾರರಾಮನು ಆರಾಧನೆಗೊಳಪಟ್ಟದ್ದು ಹಾಗು ಆ ಸಂಬಂಧವಾಗಿ ರಚನೆಗೊಂಡ ಸ್ಮಾರಕಗಳು ಮತ್ತು ಸಾಹಿತ್ಯ ಕೃತಿಗಳ ರಚನೆಯ ಹಿಂದಿರುವ ಸಮಕಾಲೀನ ಉದ್ದೇಶ ಮತ್ತು ಮಹತ್ವವನ್ನು ಅರಿಯುವ ಪ್ರಯತ್ನವೇ ಪ್ರಸ್ತುತ ಲೇಖನದ ಮುಖ್ಯ ಆಶಯವಾಗಿದೆ.

ಕ್ರಿ.ಶ. ೧೩೨೭ರಲ್ಲಿ ಕುಮ್ಮಟವು ಪತನವಾದ ನಂತರ ಮೊದಲಬಾರಿಗೆ, ಹಾವೇರಿ ತಾಲ್ಲೂಕಿನ ಸಂಗೂರಿನಲ್ಲಿರುವ ಒಂದನೆಯ ದೇವರಾಯನ ಕಾಲದ ಕ್ರಿ.ಶ. ೧೪೦೭ರ ಶಾಸನವು, ಮಾದರಸ ಎಂಬುವನು ಕುಮಾರ ರಾಮನಾಥ ದೇವರ ಪ್ರತಿಷ್ಠೆ ಮಾಡಿಸಿದನೆಮದು ತಿಳಿಸುತ್ತದೆ.[೨೨] ಈ ಮಾದರಸನು, ಸೇನಾಧಿಪತಿ ಸಂಗಮನ ಮಗ ಹಾಗು ಕಂಪಿಲರಾಯನಲ್ಲಿ ಬಾಹತ್ತರ ನಿಯೋಗಾಧಿಪತಿಯಾಗಿದ್ದ ಬೈಚವೆಗ್ಗಡೆಯ ಮೊಮ್ಮಗನಾಗಿದ್ದನು. ಅಂದರೆ ಬೈಚವೆಗ್ಗಡೆಯು ಹಿಂದಿನ ಕುಮ್ಮಟ ರಾಜ್ಯದಲ್ಲಿ ಸೇವೆಯಲ್ಲಿದ್ದನು. ಅವನ ಮಗ ಸಂಗಮ ಮತ್ತು ಮೊಮ್ಮಗ ಮಾದರಸರು ವಿಜಯನಗರದ ಸೇವೆಯಲ್ಲಿದ್ದರೆಂಬುದು ಗಮನಾರ್ಹವಾಗಿದೆ. ಕುಮ್ಮಟ ರಾಜ್ಯದ ಅಧಿಕಾರಿಗಳ ಮಕ್ಕಳು ಮತ್ತು ಮೊಮ್ಮಕ್ಕಳು ವಿಜಯನಗರ ಕಾಲದಲ್ಲಿ ಅಧಿಕಾರಿಗಳಾಗಿ ಮುಂದುವರೆದರೆಂಬುದಕ್ಕೆ ಇದೊಂದು ಉದಾಹರಣೆ. ಕುಮಾರರಾಮನಾಥನು ತೀರಿಕೊಂಡ ಎಂಭತ್ತು ವರ್ಷಗಳ ನಂತರ, ಅವನ ಶಿಲ್ಪವನ್ನು ಪ್ರತಿಷ್ಠಾಪಿಸಿರುವುದು ಗಮನಾರ್ಹ. ಇದು ಕುಮ್ಮಟ ರಾಜ್ಯದ ಬಗೆಗಿದ್ದ ಗೌರವವನ್ನು ಸೂಚಿಸುತ್ತದೆ. ಈ ಶಾಸನಕಲ್ಲಿನಲ್ಲಿರುವ ಕುಮಾರರಾಮ ಅಥವ ರಾಮನಾಥನ ಶಿಲ್ಪ ಸುಂದರವಾಗಿದೆ. ರಾಮನಾಥನನ್ನು ಕುರಿತ ಸಂಗತಿಗಳು ಇನ್ನೂ ಹಸಿಹಸಿಯಾಗಿಯೇ ಜನಸಾಮಾನ್ಯರಲ್ಲಿ ಉಳಿದಿದ್ದವು ಎಂಬುದನ್ನು ಈ ಮೇಲಿನ ಧರ್ಮಕಾರ್ಯವು ಪ್ರಸ್ತುತ ಪಡಿಸುತ್ತದೆ. ಇದನ್ನು ಇಡೀ ಸಮಾಜವು ಮಾನ್ಯಮಾಡಿದೆ. ಈ ಮೂಲಕ ರಾಮನಾಥನು ಬದುಕಿದ್ದಾಗಲೆ ಜನರ ಗೌರವಾದರಗಳಿಗೆ ಪಾತ್ರನಾಗಿದ್ದು, ದೈವಾಂಶ ಸಂಭೂತನೆನಿಸಿದ್ದನು ಎಂದು ತಿಳಿದುಬರುವುದು. ಆದರೂ ಸಮಕಾಲೀನ ಯಾವುದೇ ಶಾಸನ ಇವನನ್ನು ಪ್ರಸ್ತಾಪಿಸು ವುದಿಲ್ಲ. ಕುಮ್ಮಟದ ವೀರಗಲ್ಲೊಂದು, ಸುಲ್ತಾನನ ಸೈನ್ಯದೊಡನೆ ಹೋರಾಡಿ ಸತ್ತ ರಾಮ ಎಂಬುವವನ್ನು ಉಲ್ಲೇಖಿಸುತ್ತದೆ. ಇವನೇ ರಾಮನಾಥ ಎಂಬುದರ ಬಗ್ಗೆ ಸ್ಪಷ್ಟವಿಲ್ಲ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಮಾಳಗೊಂಡನ ಕೊಪ್ಪ (ಬಳ್ಳಿಗಾವೆ ಮತ್ತು ತಾಳಗುಂದದ ನಡುವೆ) ಗ್ರಾಮದ ಪಶ್ಚಿಮಭಾಗದಲ್ಲಿ ಒಂದಂಕಣದ ಕುಮಾರರಾಮನ ದೇವಾಲಯವಿದೆ. ಇಲ್ಲಿ ದೊರೆತ ಹೊಸ ಶಾಸನವು, ಕಂಪಿಲದೇವನ ಕುಮಾರ ರಾಮನಾಥ ಒಡೆಯರಿಗೆ ತಾಳಗುಂದದ ಒಳಗಣ ಕೊಪ್ಪದ ಕೆಂಚಗಲುಡನ ಮಗ ಮಾಳಗಲುಡನು

ಕಲುಲಕಟ್ಟೆಯ ಕೆಳಗಣ ಗದ್ದೆಯನ್ನು ದೇವರ ಸೇವೆಗೆ ಬಿಟ್ಟನು ಎಂದಿದೆ.[೨೪] ಶಾಸನದ ಮೇಲ್ಭಾಗದಲ್ಲಿ, ಕುದುರೆಯ ಮೇಲೆ ಕುಳಿತು ಈಟಿ ಹಿಡಿದಿರುವ ರಾಮನಾಥನ ಉಬ್ಬುಶಿಲ್ಪವಿದೆ. ಕುದುರೆಯ ಹಿಂಭಾಗದಲ್ಲಿ ವ್ಯಕ್ತಿಯೊಬ್ಬನಿಂತು ರಾಮನಾಥನಿಗೆ ಛತ್ರಿ ಹಿಡಿದಿದ್ದಾನೆ. ಈ ರೀತಿ ಶಾಸನಸ್ತ ಶಿಲ್ಪಗಳು ತೀರ ವಿರಳ ಎನ್ನಲಾಗಿದೆ. ಕುಮಾರರಾಮನ ಶಿಲ್ಪಗಳು ಹೆಚ್ಚಾಗಿ ಅರೆ ಮಲೆನ್ನಾಡು ಪ್ರದೇಶಗಳಲ್ಲಿವೆ. ಬಹುಶಃ ಕುಮ್ಮಟವು ಪತನವಾದ ನಂತರ ಅಧಿಕಾರಿಗಳು, ಮತ್ತಿತರರು ಪ್ರಾಣರಕ್ಷಣೆ ಹಾಗು ಇನ್ನಿತರ ಕಾರಣಗಳಿಂದ ಅರೆ ಮಲೆನಾಡು ಪ್ರದೇಶಗಳಿಗೆ ಪಲಾಯನ ಮಾಡಿರಬಹುದು. ಅಂದರೆ ಇಂದಿನ ಹಾವೇರಿ, ಉತ್ತರಕನ್ನಡ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಯ ಭಾಗಗಳಾಗಿವೆ. ಈ ಭಾಗಗಳಲ್ಲಿ ನೆಲೆಸಿರುವ ದೀವರು ಅಥವ ಈಡಿಗರು ಕುಮಾರರಾಮನನ್ನು ಆರಾಧಿಸುತ್ತಾರೆ. ದೀವರು ಎಂಬ ಪದ ಧೀರರು ಎಂಬುದರಿಂದ ಬಂದಿದೆ ಎನ್ನಲಾಗಿದೆ. ಧೀರ ಎಂಬ ಪದ ಹೆಚ್ಚಾಗಿ ಸೈನಿಕರಿಗೆ ಅನ್ವಯಿಸುತ್ತದೆ. ಹಾಗಾದಲ್ಲಿ ಈ ದೀವರು ಅಥವಾ ಧೀರರು ಕುಮ್ಮಟ ಪ್ರದೇಶದವರೇ ಆಗುತ್ತಾರೆ. ಹೀಗೆ ಪಲಾಯನಮಾಡಿದ ಜನರು ತಮ್ಮ ಅರಸನಾದ ಕುಮಾರರಾಮನಾಥನನ್ನು ದೈವಾಂಶಸಂಭೂತನೆಂದು ನಂಬಿ, ಅವನ ಪ್ರತಿಮೆಗಳನ್ನು ಸ್ಥಾಪಿಸಿ ಪೂಜಿಸುವುದರ ಮೂಲಕ ತಮ್ಮ ಗತವಲಸೆಗಳ ಕುರುಹನ್ನು ಉಳಿಸಿಕೊಂಡಿದ್ದಾರೆ. ಬಹುಶಃ ಈ ಜನರು ಹೆಚ್ಚಾಗಿ ಸೈನಿಕರೇ ಆಗಿರಬೇಕು.

ತೀರ್ಥಹಳ್ಳಿ ತಾಲ್ಲೂಕಿನ ಕೊಕ್ಕೊಡು ಸ್ಥಳದ ಕ್ರಿ.ಶ. ೧೪೩೨ರ ಶಾಸನೋಕ್ತ ವೀರಗಲ್ಲೊಂದು ವಿಜಯನಗರದ ಎರಡನೆಯ ದೇವರಾಯನ ಕಾಲಕ್ಕೆ ಸೇರಿದೆ. ಇದರಲ್ಲಿ ವೀರನೊಬ್ಬನ ಶೌರ್ಯದ ವರ್ಣನೆಗಾಗಿ ಕುಮಾರ ರಾಮನಾಥನನ್ನು ಉದಾಹರಿಸಲಾಗಿದೆ.[೨೫] ಇದರಿಂದ, ವಿಜಯನಗರ ಕಾಲದಲ್ಲಿ ಕುಮಾರರಾಮನ ಶೌರ್ಯ ಸಾಹಸಗಳ ವರ್ಣನೆ ಜೀವಂತವಿದ್ದು, ಯುದ್ಧದಲ್ಲಿ ಹೋರಾಡುವ ವೀರರಿಗೆ ಸ್ಫೂರ್ತಿಯಾಗಿದ್ದನು ಎಂಬುದು ಈ ಮೇಲಿನ ಶಾಸನದಿಂದ ಗ್ರಹಿಸಬಹುದು. ಇದು ಆ ಕಾಲದ ಸಮಾಜದ ನಂಬಿಕೆಯೂ ಸಹ ಆಗಿತ್ತು.

ಸೊಂಡೂರು ತಾಲ್ಲೂಕಿನ ರಾಮಘಡದ ಕ್ರಿ.ಶ. ೧೫೨೮ರ ಶಾಸನ ಕೃಷ್ಣದೇವರಾಯನ ಕಾಲದ್ದು. ಶಾಸನವು, ಘುಮ್ಮಡಿಸಿಂಗನ ಮೊಮ್ಮಗನೂ, ಕಂಪಿಲರಾಯ ಮತ್ತು ಹರಿಹರ ದೇವಿಯರ ಮಗನೂ ಆದ ಹೊಸಮಲೆದುರ್ಗದ ರಾಮನಾಥ ಒಡೆಯ ಹಾಗು ವೀರರು ಯುದ್ಧದಲ್ಲಿ ಮಡಿದ ಸ್ಮರಣಾರ್ಥವಾಗಿ ಗೋಪಾಯಿ ಮತ್ತು ಅವಳ ತಮ್ಮನಾದ ರಾಮಣನು ಹೊಸಮಲೆಯಲ್ಲಿ ರಾಮನಾಥದೇವರ ದೇವಾಲಯವನ್ನು ನಿರ್ಮಿಸಿ, ಪೂಜಾಸಾಮಾಗ್ರಿಗಳನ್ನು ನೀಡಿದರೆಂದು ತಿಳಿಸುತ್ತದೆ.[೨೬] ಇದರಿಂದ ಪೂರ್ವಕಾಲದಲ್ಲಿ ಆಗಿಹೋದ ವೀರನೊಬ್ಬನ ಶೌರ್ಯ ಸಾಹಸಗಳಿಗೆ ವಿಜಯನಗರ ಕಾಲದಲ್ಲಿ ದೊರೆತ ಸಾಮಾಜಿಕ ಪುರಸ್ಕಾರವನ್ನು ಮನಗಾಣಬಹುದು. ಈ ಮೂಲಕ ಆ ಕಾಲದ ಸೈನಿಕರಿಗೆ ಆತ್ಮಸ್ಥೈರ್ಯ ಹೆಚ್ಚುತ್ತಿತ್ತು. ಆದರೂ ಪ್ರಬಲ ಐತಿಹ್ಯವಾಗಿದ್ದ ಕುಮಾರರಾಮನಾಥನಿಗೆ ವಿಜಯನಗರದ

ಅರಸರು ಯಾವುದೇ ಗುಡಿಗುಂಡಾರಗಳನ್ನು ಕಟ್ಟದಿರುವುದು ಆಶ್ಚರ್ಯದ ಸಂಗತಿ. ಬಹುಶ: ಅವರಿಗೆ ತಮ್ಮ ಪೂರ್ವದಲ್ಲಿ ಆಗಿಹೋದ ಸಣ್ಣರಾಜ್ಯವೊಂದರ ರಾಜರನ್ನು ಆರಾಧಿಸುವುದರಿಂದ ತಮ್ಮ ಘನತೆಗೆ ಎಲ್ಲಿ ಕುಂದುಬರಬಹುದೆಂಬ ಮನಸ್ಥಿತಿಯು ಕಾರಣವಿರಬಹುದು. ಅಲ್ಲದೆ ಸ್ವತಂತ್ರ ರಾಜ್ಯವೊಂದು ತನ್ನ ಗುರುತಿಗಾಗಿ ತನ್ನನ್ನೆ ಮೂಲಶಕ್ತಿಯಾಗಿ ಕಂಡುಕೊಳ್ಳುವ ಪ್ರಯತ್ನ ಮಾಡುತ್ತದೆಯೇ ಹೊರತು ಮತ್ತೊಂದು ರಾಜ್ಯಶಕ್ತಿಯಿಂದ ತಾನು ಪ್ರಭಾವಿತನಾದನೆಂದು ಹೇಳಿಕೊಳ್ಳುವ ಸಾಧ್ಯತೆಗಳು ಕಡಿಮೆ ಎಂದು ಹೇಳಬಹುದು. ವಿಜಯನಗರದ ಅರಸರು ಗತಿಸಿಹೋದ ಕುಮ್ಮಟದ ಅರಸರನ್ನು ಎಲ್ಲಿಯೂ ಸ್ಮರಿಸುವುದಿಲ್ಲ ಹಾಗು ಅವರಿಗಾಗಿ ಯಾವುದೇ ಸ್ಮಾರಕಗಳನ್ನು ಸಹ ನಿರ್ಮಿಸಲಿಲ್ಲ. ಕುಮ್ಮಟದುರ್ಗದಲ್ಲಿರುವ ರಾಮಸ್ವಾಮಿ ದೇವಾಲಯದಲ್ಲಿ ಸಾಲಾಗಿ ಇಟ್ಟಿರುವ ಹನ್ನೆರಡು ಕಲ್ಲುಗುಂಡುಗಳಿವೆ. ಇವು ಕುಮಾರರಾಮ ಮತ್ತು ಇತರರ ಶಿರಗಳೆಂದು ಹೇಳಲಾಗಿದೆ. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಇಲ್ಲಿ ಬೈಚಪ್ಪ ಮತ್ತು ಕಾಟಪ್ಪ ಅವರುಗಳ ಹೆಸರಿನಲ್ಲೂ ದೇವಾಲಯಗಳಿವೆ.[೨೭] ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ದೊಡ್ಡಪಾಲನಹಳ್ಳಿಯಲ್ಲಿ ಕುಮಾರರಾಮನ ಗುಡಿ ಇದೆ. ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ.[೨೮]

ಈ ಮೇಲಿನ ವಿವರಗಳಿಂದ ವಿಜಯನಗರ ಕಾಲದಲ್ಲಿ ಕುಮಾರರಾಮನಿಗಾಗಿ ನಿರ್ಮಾಣಗೊಂಡ ಸ್ಮಾರಕಗಳ ಬಗೆಗೆ ತಿಳಿಯಲಾಯಿತು. ಇದರ ಮುಂದಿನ ಹೆಜ್ಜೆಯಾಗಿ ಸಾಹಿತ್ಯ ಕೃತಿಗಳು ರಚನೆಗೊಂಡವು. ವಿಜಯನಗರ ಸ್ಥಾಪನೆಗೆ ಮುಂಚೆ ಬದುಕಿಬಾಳಿದ ಕುಮಾರರಾಮ ಅಥವಾ ರಾಮನಾಥನ ಸಾಹಸ ಸೌಶೀಲ್ಯಗಳನ್ನು ನಮ್ಮ ಚರಿತ್ರೆಕಾರರು ಗಮನಿಸಲಿಲ್ಲ. ಆದರೂ ಅವನ ಹೆಸರನ್ನು ಹಚ್ಚಹಸಿರಾಗಿ ಉಳಿಸಿದ ಕೀರ್ತಿ ಕನ್ನಡದ ಕವಿಗಳಿಗೆ ಸಲ್ಲುತ್ತದೆ ಎಂದು ಅಭಿಪ್ರಾಯಪಡಲಾಗಿದೆ.[೨೯] ಆದರೆ ಇತ್ತೀಚಿನ ದಿನಗಳಲ್ಲಿ ಕುಮಾರರಾಮನನ್ನು ಕುರಿತಂತೆ ಶಾಸನಗಳು, ಶಿಲ್ಪಗಳು ಅಲ್ಲಲ್ಲಿ ಶೋಧನೆಗೊಳ್ಳುತ್ತಿವೆ. ಇವು ಸಾಹಿತ್ಯ ಕೃತಿಗಳಲ್ಲಿನ ಕೆಲವು ಘಟನಾವಳಿಗಳನ್ನು ಸಮರ್ಥಿಸಿವೆ. ಹೀಗೆ ಹೆಚ್ಚು ಹೆಚ್ಚು ಆಧಾರಗಳು ದೊರಕುತ್ತಿರುವುದರ ಹಿನ್ನೆಲೆಯಲ್ಲಿ ಚರಿತ್ರೆಕಾರರು ಕುಮಾರರಾಮನನ್ನು ಕುರಿತ ಅಧ್ಯಯನಗಳಲ್ಲಿ ತೊಡಗಿದ್ದಾರೆ. ಸಮಕಾಲೀನವಲ್ಲದ ಸಾಹಿತ್ಯಾಧಾರಗಳನ್ನಷ್ಟೆ ಇಟ್ಟುಕೊಂಡು ಚರಿತ್ರೆ ರಚಿಸುವುದು ಸೂಕ್ತವಲ್ಲ.

ದೆಹಲಿ ಸುಲ್ತಾನನೊಡನೆ ರಾಜಿಮಾಡಿಕೊಳ್ಳದೆ ತನ್ನ ಪ್ರಾಣವನ್ನೆ ಅರ್ಪಿಸಿದ ರಾಮನಾಥನು ತನ್ನ ಶೌರ್ಯ, ಪರಾಕ್ರಮ ಮತ್ತು ಆದರ್ಶ ಗುಣಗಳಿಂದಾಗಿ ಜನತೆಯ ಪಾಲಿಗೆ ದೈವಾಂಶ ಸಂಭೂತನಾಗಿ ಗೋಚರಿಸಿದ. ಇದು ಅವನ ಆರಾಧನೆಗೆ ದಾರಿ ಮಾಡಿಕೊಟ್ಟಿತು. ಹೀಗೆ ಜನಮನ್ನಣೆಯನ್ನು ಗಳಿಸಿದ ಈ ಜಾತಿವೀರನನ್ನು ಮೆಚ್ಚಿಕೊಂಡ ಕನ್ನಡದ ಕವಿಗಳಾದ ನಂಜುಂಡ, ಪಾಂಚಾಳಗಂಗ, ಮಹಲಿಂಗಸ್ವಾಮಿ ಹಾಗು ನಾಗಸಂಗಯ್ಯರು ನಾಲ್ಕು ಸಾಹಿತ್ಯ ಕೃತಿಗಳನ್ನು ರಚಿಸಿದರು.[೩೦] ಇವೆಲ್ಲವೂ ಸಾಂಗತ್ಯರೂಪದಲ್ಲಿದ್ದು, ಸುಲಭವಾದ ಮತ್ತು ಹುರಿದುಂಬಿಸುವ ಶೈಲಿಯಲ್ಲಿ ಬರೆಯಲ್ಪಟ್ಟಿವೆ. ಇತ್ತೀಚೆಗೆ ಹೊಸ

ಕುಮಾರರಾಮನ ಕಾವ್ಯವನ್ನು ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ.[೩೧] ನಂಜುಂಡ ಕವಿ ರಚಿಸಿದ 'ರಾಮನಾಥ ಚರಿತೆ'ಯು ಕುಮಾರರಾಮನನ್ನು ಕುರಿತ ಮೊದಲ ಗ್ರಂಥ. ಈ ಕವಿಯ ಕಾಲ ಕ್ರಿ.ಶ. ೧೫೨೫ ಎನ್ನಲಾಗಿದೆ.[೩೨] ಪಾಂಚಾಳಗಂಗನು ಚೆನ್ನರಾಮನ ಸಾಂಗತ್ಯವನ್ನು ಬರೆದನು. ಹಂಪೆಯ ಚರಪತಿ ಮಹಲಿಂಗಸ್ವಾಮಿಯು ಬಾಲರಾಮನ ಸಾಂಗತ್ಯವನ್ನ ರಚಿಸಿದನು. ಪರನಾರಿಯರಿಗೆ ಸಹೋದರನೆಂಬಂತ ಕತೆಯನ್ನು ನಾಗಸಂಗಯ್ಯನು ಸಾಂಗತ್ಯರೂಪದಲ್ಲಿ ರಚಿಸಿದ್ದಾನೆ. ಹೀಗೆ ಕಂಪಿಲ ಮತ್ತು ಕುಮಾರರಾಮರ ಸಾಹಸಕಾರ್ಯಗಳನ್ನು ಕುರಿತು ನಾಲ್ಕು ಜನ ಕವಿಗಳು ಕನ್ನಡದಲ್ಲಿ ನಾಲ್ಕು ಗ್ರಂಥಗಳನ್ನು ರಚಿಸಿರುವುದು ವಿಷಯದ ಮಹತ್ವವನ್ನು ಎತ್ತಿತೋರಿಸುತ್ತದೆ.

ಈ ಎಲ್ಲ ಸಾಂಗತ್ಯಗಳಲ್ಲಿ ಕುಮಾರರಾಮನನ್ನು ಬೇಡ ಕುಲದವನೆಂದು ಚಿತ್ರಿಸಲಾಗಿದೆ. ಚಿತ್ರದುರ್ಗದ ಪಾಳೆಯಗಾರರ ಪೂರ್ವಿಕರು ಕುಮಾರರಾಮನ ಕುಲಸ್ಥರಾಗಿದ್ದು, ಅಲ್ಲಿ ಸೇವೆ ಸಲ್ಲಿಸುತ್ತಿದ್ದರಂತೆ. ಹಾಗೂ ಗುಡಿಕೋಟೆ, ಹರಪನಹಳ್ಳಿ ಮತ್ತು ತರಿಕೆರಿ ಪಾಳೆಯ ಗಾರರು ಕುಮಾರರಾಮನ ವಂಶೀಯರು ಎನ್ನಲಾಗಿದೆ.[೩೩] ಈ ಸಾಂಗತ್ಯಗಳಲ್ಲಿ ಮೊದಲನೆಯ ದಾದ ರಾಮನಾಥ ಚರಿತೆಯು ವಿಜಯನಗರ ಕಾಲದಲ್ಲಿ ಬರೆದಿದ್ದು, ಇದು ಹೆಚ್ಚು ಚಾರಿತ್ರಿಕ ಅಂಶಗಳನ್ನು ಒಳಗೊಂಡಿದೆ. ಉಳಿದವು ವಿಜಯನಗರೋತ್ತರ ಕಾಲದಲ್ಲಿ ಅಂದರೆ ಪಾಳೆಯಗಾರರ ಕಾಲದಲ್ಲಿ ರಚನೆಯಾಗಿವೆ. ವಿಜಯನಗರ ಮತ್ತು ಉತ್ತರ ಕಾಲದಲ್ಲಿ ಬೇಡ ಸೈನಿಕ ಪಡೆಯನ್ನು ಬೆಳೆಸಲು ಹಾಗೂ ಹುರಿದುಂಬಿಸಲು ಕುಮಾರರಾಮನನ್ನು ಬೇಡ ಕುಲದವನೆಂದು ಚಿತ್ರಿಸುವ ಕೆಲಸ ನಡೆದಂತೆ ಕಂಡುಬರುತ್ತದೆ. ಏಕೆಂದರೆ ಈ ಮೊದಲೆ ತಿಳಿಸಿದಂತೆ ಸಾಂಗತ್ಯಗಳು ಹುರಿದುಂಬಿಸುವ ಶೈಲಿಯಲ್ಲಿ ಬರೆಯಲ್ಪಟ್ಟಿವೆ.[೩೪] ಈ ಸಾಹಿತ್ಯಕೃತಿಗಳ ರಚನೆಯ ಸಂದರ್ಭದಲ್ಲಿ ವಿಜಯನಗರವು ಬಹುಮನಿ ರಾಜ್ಯಗಳೊಂದಿಗೆ ನಿರಂತರವಾಗಿ ಯುದ್ಧಗಳಲ್ಲಿ ತೊಡಗಿತ್ತು. ವಿಜಯನಗರ ಸೈನ್ಯದಲ್ಲಿ ಅಸಂಖ್ಯಾತ ಬೇಡ ಪಾಳೆಯಪಟ್ಟುಗಳು ಸೇರಿದ್ದವು. ಬಹುಶಃ ಅವರಲ್ಲಿ ಯುದ್ಧೋತ್ಸಾಹವನ್ನು ತುಂಬಲು, ಈ ಹಿಂದೆ ಮುಸ್ಲಿಮ್ ಸೈನ್ಯದೊಂದಿಗೆ ವೀರಾವೇಶದಿಂದ ಹೋರಾಡಿ ಪ್ರಾಣತ್ಯಾಗ ಮಾಡಿ, ದೈವಾಂಶಸಂಭೂತನೆನಿಸಿಕೊಂಡ ಕುಮಾರರಾಮನನ್ನು ಕುರಿತಂತೆ ಕಾವ್ಯರಚನೆಯನ್ನು ಮಾಡಿರಬಹುದು. ಇದು ಪುಣ್ಯಕಥೆ ಎನ್ನುವುದರ ಮೂಲಕ ಜನಸಾಮಾನ್ಯರಲ್ಲಿ ಹೆಚ್ಚು ಪ್ರಚಾರವಾಯಿತು. ನಂತರದ ಶತಮಾನಗಳಲ್ಲಿ ರಚನೆಗೊಂಡ ಸಾಂಗತ್ಯಗಳಲ್ಲಿ ಕುಮಾರರಾಮನು ಬೇಡ ಕುಲದವನು ಎಂದು ಪ್ರಯತ್ನ ಪೂರ್ವಕವಾಗಿ ಚಿತ್ರಿಸಿರುವುದನ್ನು ಗ್ರಹಿಸಬಹುದು. ಉದಾಹರಣೆಗೆ ಬಾಲಕುಮಾರರಾಮನ ಸಾಂಗತ್ಯದಲ್ಲಿ ತಾಯಿ ಹರಿಯಾಲದೇವಿಯು ತನ್ನ ಮಗನ ಮುಖವನ್ನು ನೋಡಿ ಕುಲಕ್ಕೆಲ್ಲ ದೇವರಾಗೆಂದು ಪೂಜಿಸಿದಳು. ಕಂಪಿಲರಾಯನು ರಾಮನೆಂಬ ಹೆಸರಿನಿಂದ ಬೇಡರ ಕುಲದಿಂದ ಪೂಜಿಸಿಕೊಳ್ಳಲೆಂದೂ, ಬೇಡರು ನಿನ್ನ ಜಾತ್ರೆ ನಡೆಸಲಿ ಎಂದು ನುಡಿದನು ಎಂದಿದೆ.[೩೫] ಅಂದರೆ ಕುಮಾರರಾಮನು ಬೇಡ ಕುಲದವನು ಎನ್ನುವ ಮೂಲಕ ಅನೇಕ ಬೇಡ

ಪಾಳೆಯಪಟ್ಟುಗಳಿಗೆ ಪ್ರಾಚೀನ ಹಾಗು ಶ್ರೇಷ್ಠವಂಶಮೂಲವನ್ನು ದೊರಕಿಸಿಕೊಡುವ ಉದ್ದೇಶವಿರಬಹುದು.

ಕುರುಬರು, ಬೇಡರು, ಬೆಸ್ತರು, ದೀವರು, ಉಪ್ಪಾರರು ಮೊದಲಾದ ಶ್ರಮಿಕ ಜನಕುಲಗಳ ನಡುವೆ ಕುಮಾರರಾಮನ ಆರಾಧನೆ ಇಂದಿಗೂ ಜೀವಂತವಾಗಿದೆ.[೩೬] (ಈ ಸಂಬಂಧವಾಗಿ ಕನ್ನಡ ವಿಶ್ವವಿದ್ಯಾಲಯವು 'ಕರ್ನಾಟಕದಲ್ಲಿ ಕುಮಾರರಾಮನ ಪಂಥ' ಎಂಬ ಯೋಜನೆಯೊಂದನ್ನು ಪೂರ್ಣಗೊಳಿಸಿದೆ.[೩೭] ಅದು ಪ್ರಕಟಗೊಂಡಲ್ಲಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಒಂದು ಮಹತ್ವದ ಕೃತಿ ಸೇರ್ಪಡೆಯಾದಂತಾಗುವುದು. ಈ ಯೋಜನೆಯ ಅಂಗವಾಗಿ ಡಾ.ಪುರುಷೋತ್ತಮ ಬಿಳಿಮಲೆಯವರು ಬರೆದಿರುವ "ಕುಮಾರರಾಮ" ಭಾಗವನ್ನು ಮಂಟಪಮಾಲೆಯಲ್ಲಿ ವಿಶ್ವವಿದ್ಯಾಲಯವು ಪ್ರಕಟಿಸಿದೆ.[೩೮]) ಕುಮ್ಮಟದ ರಾಮಸ್ವಾಮಿ ದೇವಾಲಯದಲ್ಲಿ ಸುಣಗಾರರು ಪೂಜೆಮಾಡುತ್ತಾರೆ. ಅಂದರೆ ಬೆಸ್ತರು. ಹಿಂದೆ ಬೇಡರು ಪೂಜಾರಿಗಳಾಗಿದ್ದರಂತೆ. ಜಾತ್ರೆಗೆ ಬರುವ ಕುರುಬರು ಬೇಡರು, ಬೆಸ್ತರು, ಉಪ್ಪಾರರು ಮೊದಲಾದ ಶ್ರಮಿಕ ಜನಕುಲಗಳಿಗೆ ಇಲ್ಲಿರುವ ರಾಮಸ್ವಾಮಿಯೇ ಮನೆದೇವರು ಹಾಗು ಕುಲದೇವರಾಗಿದ್ದಾನೆ.[೩೯] ಕುಮ್ಮಟದ ಸಮೀಪದಲ್ಲಿರುವ ಬೂದಿಗುಂಪು ಗ್ರಾಮದ ಕೆಲವರು, ಕುಮ್ಮಟದ ರಾಮಸ್ವಾಮಿ ಕುರುಬರ ದೇವರಾಗಿದ್ದು, ಕುರುಬರೇ ಹೆಚ್ಚಾಗಿ ನಡೆದುಕೊಳ್ಳುತ್ತಾರೆ ಎಂದು ತಿಳಿಸುತ್ತಾರೆ. ಸಮೀಪದ ಇಂದರಗಿಯ ನಾಯಕರು, ರಾಮಸ್ವಾಮಿಯು ನಾಯಕ ಕುಲದವನು ಎನ್ನುತ್ತಾನೆ.[೪೦] ಜಾತ್ರೆಯ ಸಂದರ್ಭದಲ್ಲಿ ದೇವರಿಗೆ ಮೇಕೆಯನ್ನು ಕಡಿಯುವವರು ಕುರುಬ ಜನಾಂಗದವರು. ಮಲೆನಾಡಿನ ದೀವರು (ಈಡಿಗರು) ಕುಮಾರರಾಮನನ್ನು ಆರಾಧಿಸುತ್ತಾರೆ. ಇವರು ಬೇಟೆ ಮತ್ತು ಇತರ ವೃತ್ತಿಗಳನ್ನು ಮಾಡುತ್ತಾರೆ. ಹೀಗೆ ಅನೇಕ ಜನಜಾತಿಗಳು ಕುಮಾರರಾಮನನ್ನು ನಂಬಿ ಆಚರಣೆಯಲ್ಲಿ ತೊಡಗಿವೆ. ಕುಮಾರರಾಮನು ವೀರರಿಗೆ, ಶೌರ್ಯ ಸಾಹಸಗಳಿಗೆ ಆರಾಧ್ಯದೈವವಾಗಿದ್ದನು. ಸಾಂಗತ್ಯಗಳು ತಿಳಿಸುವಂತೆ ಬೇಡರಿಗಷ್ಟೇ ದೇವರಾಗಿರಲಿಲ್ಲ. ಈಟಿ ಹಿಡಿದು ಕುದುರೆಯ ಮೇಲೆ ಕುಳಿತ ಕುಮಾರರಾಮನು ಸಹಜವಾಗಿ ಶೌರ್ಯದ ಪ್ರತೀಕವಾಗಿದ್ದನು.

ಗತಿಸಿಹೋದ ಕುಮ್ಮಟ ರಾಜ್ಯದ ತ್ಯಾಗ, ಬಲಿದಾನಗಳು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಸಾರ್ಥಕಗೊಂಡವು. ಈ ಸಾರ್ಥಕತೆಯ ಸಾಕಾರಕ್ಕಾಗಿ ಪ್ರಭುತ್ವಕ್ಕಿಂತ ಜನಸಾಮಾನ್ಯರೇ ಸ್ಪಂದಿಸಿದರು. ವಿಜಯನಗರ ಮತ್ತು ನಂತರದ ಕಾಲದಲ್ಲಿ ಸೈನಿಕರನ್ನು ಹುರಿದುಂಬಿಸಲು ಕುಮಾರರಾಮನನ್ನು ವೈಭವೀಕರಿಸಿ ಆರಾಧನೆ ಕ್ರಿಯೆಗೆ ಒಳಪಡಿಸಲಾಯಿತು. ಹಾಗೂ ಅನೇಕ ಪಾಳೆಯಪಟ್ಟುಗಳು ತಮ್ಮ ವಂಶಮೂಲವನ್ನು ಪ್ರಾಚೀನಗೊಳಿಸಲು ಕುಮಾರರಾಮನನ್ನು ಬೇಡ ಕುಲದವನೆಂದು ಸಾಂಗತ್ಯ ಕೃತಿಗಳಲ್ಲಿ ಬಿಂಬಿಸುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಜ್ಞೆಯಿಂದಲೋ ಅಥವ ಅಪ್ರಜ್ಞೆಯಿಂದಲೋ ಕುಮಾರರಾಮನನ್ನು ಕುರಿತ ಸಾಹಿತ್ಯ ಕೃತಿಗಳು, ಆಗಿನ ಯುದ್ಧರಾಜಕಾರಣದಲ್ಲಿ ಪ್ರಭಾವ ಬೀರಿವೆ. ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ದೇಸಾಯಿ ಪಿ.ಬಿ. ಮತ್ತು ಇತರರು, ೧೯೮೧, ಎ ಹಿಸ್ಟರಿ ಆಫ್ ಕರ್ನಾಟಕ, ಧಾರವಾಡ, ಪು. ೨೮೭

೨. ಅದೇ, ಪು. ೩೧೭

೩. ಅದೇ

೪. ಅದೇ, ಪು. ೨೪೪

೫. ಎಚ್ಚೆಸ್ಕೆ, (ಸಂ), ೧೯೮೫, ಅವಲೋಕನ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪು. ೭೧

೬. ವರದರಾಜರಾವ್ ಜಿ. ೧೯೬೬, ಕುಮಾರರಾಮನ ಸಾಂಗತ್ಯಗಳು

೭. ಮಹದೇವ ಸಿ. ೨೦೦೧, ಕರ್ನಾಟಕ ಪುರಾತತ್ವ ಶೋಧ, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ, ಪು. ೮೨ - ೮೩

೮. ಬರ್ಟನ್ ಸ್ಟೀನ್, ೧೯೯೩, ದಿ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ ವಿಜಯನಗರ, ಫೌಂಡೇಷನ್ ಬುಕ್ಸ್, ನ್ಯೂಡೆಲ್ಲಿ, ಪು. ೧೯

೯. ವಸುಂಧರ ಫಿಲಿಯೋಜಾ, ೧೯೮೦, ವಿಜಯನಗರ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೪, ದೇವರಾಜ್ ಡಿ.ವಿ. ಮತ್ತು ಸಿ.ಎಸ್.ಪಾಟೀಲ್, (ಸಂ), ೧೯೯೧, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೮೭ - ೮೮, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ಪು. ೧೮೧ - ೮೪

೧೦. ಶಿವಣ್ಣ ಕೆ.ಎಸ್. ೧೯೯೭, ಕರ್ನಾಟಕ ಚರಿತ್ರೆ ಸಂಪುಟ - ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೩

೧೧. ದಿಕ್ಷಿತ್ ಜಿ.ಎಸ್. ೧೯೯೬, ಕೀ ನೋಟ್ ಅಡ್ರೆಸ್, ಹಂಪಿ ವಿಜಯನಗರ ಚರಿತ್ರೆ ವಿಚಾರಗೋಷ್ಠಿ, ಫೆಬ್ರವರಿ ೧೯೯೬, ಹಂಪಿ, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಪು. ೬

೧೨. ಅದೇ

೧೩. ವರದರಾಜುರಾವ್ ಜಿ. ೧೯೬೩, ಕುಮ್ಮಟಕೇಸರಿ, ಉಷಾ ಸಾಹಿತ್ಯಮಾಲೆ, ಮೈಸೂರು, ಪು. ೮೭

೧೪. ಎಪಿಗ್ರಾಫಿಯಾ ಕರ್ನಾಟಕ, IV, ಎಡತೊರೆ ೪೬

೧೫. ಕಲಬುರ್ಗಿ ಎಂ.ಎಂ. ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೪೬೬

೧೬. ಮಹದೇವ ಸಿ. ಪೂರ್ವೋಕ್ತ, ಪು. ೮೬ - ೯೦, ಇತಿಹಾಸ ದರ್ಶನ, ೨೦೦೧, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೨೦೬

೧೭. ಮಜುಂದಾರ್ ಆರ್ .ಸಿ. ೧೯೬೦, ದಿ ಡೆಲ್ಲಿ ಸುಲ್ತಾನೆಟ್, ಪು. ೬೧ - ೬೨

೧೮. ದೇವರಾಜ್ ಡಿ.ವಿ. ಮತ್ತು ಸಿ.ಎಸ್.ಪಾಟೀಲ್, ಪೂರ್ವೋಕ್ತ, ಪು. ೧೮೧ - ೮೪

೧೯. ಮಜುಂದಾರ್ ಆರ್.ಸಿ. ಪೂರ್ವೋಕ್ತ

೨೦. ಎಚ್ಚೆಸ್ಕೆ, (ಸಂ), ಪೂರ್ವೋಕ್ತ

೨೧. ಶಿವಣ್ಣ ಕೆ.ಎಸ್. ೧೯೯೭, ಪೂರ್ವೋಕ್ತ, ಪು. ೧೫

೨೨. ಬರ್ಟನ್ ಸ್ಟೀನ್, ಪೂರ್ವೋಕ್ತ, ಪು. ೧೮

೨೩. ಎಪಿಗ್ರಾಫಿಯಾ ಇಂಡಿಕ, XXIII, ನಂ. ೨೮, ಪು. ೧೮೨ - ೮೫

೨೪. ಭೋಜರಾಜ ಪಾಟೀಲ, ೧೯೯೮, ಕುಮಾರರಾಮನನ್ನು ಕುರಿತ ಐತಿಹಾಸಿಕ ಮಹತ್ವದ ಒಂದು ಹೊಸ ಶಾಸನ, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೩೨

೨೫. ಎಪಿಗ್ರಾಫಿಯಾ ಕರ್ನಾಟಕ, VIII, ತೀರ್ಥಹಳ್ಳಿ, ೨೩

೨೬. ಆನ್ಯೂಯಿಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಾಫಿ, ೧೯೪೩ - ೪೪, ನಂ.ಬಿ. ೭೬, ದೇವರಾಜ್ ಡಿ.ವಿ. ಮತ್ತು ಪಾಟೀಲ್ ಸಿ.ಎಸ್. (ಸಂ), ಪೂರ್ವೋಕ್ತ, ಪು. ೧೯೧, ಬಳ್ಳಾರಿ ಜಿಲ್ಲೆ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಸುರೇಶ್ ಕೆ.ಎಂ. ಮತ್ತು ಇತರರು, ೨೦೦೧, ಕರ್ನಾಟಕ ದೇವಾಲಯಕೋಶ, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ಲಕ್ಷ್ಮಣ್ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ್, (ಸಂ), ೧೯೯೫, ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ಹು.ಶ್ರೀ.ಜೋಯಿಸರ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ಪು. ೧೦೨

೨೯. ಲಕ್ಷ್ಮಣ್ ತೆಲಗಾವಿ, (ಸಂ), ೧೯೮೭, ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ಪು. ೧೫೫

೩೦. ಅದೇ, ಪು. ೧೫೬

೩೧. ಕಲಬುರ್ಗಿ ಎಂ.ಎಂ. (ಸಂ), ಹೊಸಕುಮಾರರಾಮನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ಲಕ್ಷ್ಮಣ್ ತೆಲಗಾವಿ, (ಸಂ), ೧೯೮೭, ಪೂರ್ವೋಕ್ತ, ಪು. ೧೫೬

೩೩. ಅದೇ, ಪು. ೧೦೩

೩೪. ಲಕ್ಷ್ಮಣ್ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ್, (ಸಂ), ೧೯೯೫, ಪೂರ್ವೋಕ್ತ, ಪು. ೯೬

೩೫. ಅದೇ, ಪು. ೧೧೯

೩೬. ಹಿರೇಮಠ ಎಸ್.ಎಸ್. ೨೦೦೦, ಕೊಪ್ಪಳ ಜಿಲ್ಲೆಯ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೧೭

೩೭. ಕರ್ನಾಟಕದಲ್ಲಿ ಕುಮಾರರಾಮನ ಪಂಥ, ೧೯೯೬, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೮. ಪುರುಷೋತ್ತಮ ಬಿಳಿಮಲೆ, ೧೯೯೯, ಕುಮಾರರಾಮ ಮತ್ತು ಕುಮ್ಮಟದುರ್ಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೯. ಹಿರೇಮಠ ಎಸ್.ಎಸ್. ಪೂರ್ವೋಕ್ತ, ಪು. ೨೦

೪೦. ಅದೇ, ಪು. ೨೧

❑❑

೭

ವಿಜಯನಗರಕಾಲದ ರಾಯಭಾರತ್ವ

* ಡಾ.ಎಸ್.ವೈ.ಸೋಮಶೇಖರ್

ರಾಜ್ಯಾಡಳಿತದ ಅಂಗಗಳಲ್ಲಿ ರಾಯಭಾರತ್ವವೂ ಒಂದು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಯಭಾರತ್ವವನ್ನು 'ನಯ' (Diplamacy) ಎಂದು ಕರೆದಿರುವನು. ಅವನು ಹೇಳುವಂತೆ 'ನಯಜ್ಞ' ಪೃಥಿವೀಂ ಜಯತಿ ಎಂದರೆ 'ನಯ'ವನ್ನು ಅರಿತವನು ಲೋಕವನ್ನು ಜಯಿಸುತ್ತಾನೆ ಎಂಬುದಾಗಿದೆ.[೧] ನಯವು ರಾಯಭಾರತ್ವದ ರಾಜಕೀಯ ಪರಿಭಾಷೆಯೂ ಆಗಿದೆ. 'ನಯ'ದ ಅಧಿಕಾರಿಯನ್ನೇ ನಂತರದ ಕಾಲಗಳಲ್ಲಿ ಸಂಧಿ ವಿಗ್ರಾಹಿ, ಧೂತ, ಗೂಢಚಾರ, ರಾಯಭಾರಿ ಮುಂತಾಗಿ ಕರೆಯಲಾಗಿದೆ. ಅರಸನ ಮಂತ್ರಿ ಮಂಡಲದಲ್ಲಿ ಈ ಸಂಧಿ ವಿಗ್ರಹ ಅಥವಾ ರಾಯಭಾರಿಯು ಒಬ್ಬ ಪ್ರಮುಖ ಅಧಿಕಾರಿಯಾಗಿದ್ದನು. ಅರಸ ತನ್ನ ಆಡಳಿತದ ಉದ್ದೇಶಗಳು ಸಫಲಗೊಳ್ಳಲು ಉಪಯೋಗಿಸವ ತಂತ್ರಗಳಲ್ಲಿ ಚತುರೋಪಾಯಗಳು ಮುಖ್ಯವಾಗಿವೆ. ಅವುಗಳೆಂದರೆ ಸಾಮ, ದಾನ, ಭೇದ ಮತ್ತು ದಂಡಗಳು. ಇವುಗಳಲ್ಲಿ ಮೊದಲಿಗೆ ಮೂರು ಉಪಾಯಗಳು ರಾಯಭಾರತ್ವಕ್ಕೆ ಸಂಬಂಧಿಸಿವೆ. ಅರಸ ಹೊರ ರಾಜ್ಯಗಳೊಂದಿಗೆ ಸಂಬಂಧಗಳನ್ನು ಕುದುರಿಸಲು, ಶತ್ರುವಿನೊಂದಿಗೆ ಶಾಂತಿ, ಸಂಧಾನ ಮತ್ತು ಯುದ್ಧಗಳನ್ನು ಕೈಗೊಳ್ಳುವಲ್ಲಿ ರಾಯಭಾರಿಯ ಪಾತ್ರ ಅತ್ಯಂತ ಮಹತ್ವದ್ದು. ರಾಯಭಾರತ್ವವು ರಾಜ್ಯಾಡಳಿತದ ಪ್ರಮುಖ ಅಸ್ತ್ರವೂ ಹೌದು. ಯಾವುದೇ ರಾಜ್ಯದೊಂದಿಗೆ ಯುದ್ಧಮಾಡುವ ಇಲ್ಲವೆ ತಡೆಯುವ ಶಕ್ತಿ ರಾಯಭಾರತ್ವಕ್ಕಿದೆ. ಕೆಲವೊಮ್ಮೆ ಈ ಅಧಿಕಾರವನ್ನು ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಂಡು ಯುದ್ಧಕ್ಕೆ ನಾಂದಿ ಹಾಡಿದ ಉದಾಹರಣೆಗಳೂ ಇವೆ.

ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವ, ಶಾಂತಿ - ಸಂಧಾನ ನಡೆಸಿ ಯುದ್ಧಗಳನ್ನು ನಿಯಂತ್ರಿಸುವ ಸಾಮರ್ಥ್ಯ ರಾಯಭಾರಿಗಿದೆ. ಈ ಪದವಿಗೆ ವಿಶೇಷ ಗೌರವವನ್ನು ರಾಜ್ಯ ಹಾಗೂ ಹೊರ ರಾಜ್ಯಗಳಲ್ಲೂ ನೀಡಲಾಗುತ್ತಿತ್ತು. ಆದುದರಿಂದ ಈ ಹುದ್ದೆಗೆ ನೇಮಕ ವಾಗುವ ವ್ಯಕ್ತಿಗಳು ಕೆಲವು ಮುಖ್ಯ ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ರಾಯಭಾರಿಯು ಬಹು ಮೇಧಾವಿ, ವಿದ್ವಾಂಸ, ಚತುರನೂ ಆಗಿರಬೇಕು. ಅಲ್ಲದೆ ತನಗೆ ಒಪ್ಪಿಸಿದ ಕಾರ್ಯಗಳನ್ನು ಪರಿಪೂರ್ಣವಾಗಿ ಮುಗಿಸಲು ಪ್ರಾಣದ ಹಂಗನ್ನು ತೊರೆಯಲು ಸಿದ್ಧನಾಗಿರ ಬೇಕಿತ್ತು. ಇವೆಲ್ಲದರ ಹೊರತಾಗಿ ಅಗತ್ಯವಾದರೆ ಹಿಂಸೆ, ಹತ್ಯೆಗಳಂತಹ ಕಾರ್ಯಗಳಿಗೂ ಮುಂದಾಗಬೇಕಿದ್ದು, ಸದಾಕಾಲ ಅವನು ಜಾಗರೂಕನಾಗಿ ಇರಬೇಕಾಗಿದ್ದಿತು. ರಾಯಭಾರಿಯ ಅರ್ಹತೆಗಳನ್ನು ಕುರಿತು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಸೂಕ್ತಿ ಸುಧಾರ್ಣವ ದಲ್ಲಿ ಈ ಬಗೆಗೆ

> ಚದುರಂ ಭಾವುಕನ್ ಇಂಗಿತಜ್ಞನ್ ಅರಿವುಳ್ಳ ದೇಶಭಾಷಾನ್ವಿತಂ
> ಪದವಾಕ್ಯಾರ್ಥವಿವಕ್ಷಿತಂ ಬಹುಕಳಾ ಸಂಪನ್ನನ್ ಆಸ್ಥಾನ ಸಮ್ಮದ
> ವಾಗ್ವೇತ್ತನ್ ಎಂದಿದೆ.[೨]

ಅಂದರೆ ಅನೇಕ ದೇಶ, ಭಾಷೆ, ಲಿಪಿಗಳನ್ನು ಬಲ್ಲವನಾಗಿರಬೇಕು. ಅಲ್ಲದೆ ಯೋಗ್ಯನೂ, ಸ್ಪಷ್ಟವಾಗಿ ಓದುವ ಮತ್ತು ಬರೆಯುವವನೂ ಆಗಿರಬೇಕು ಎಂಬುದಾಗಿದೆ. ಶಾಸನವೊಂದರಲ್ಲಿ ರಾಯಭಾರಿಯ ಅರ್ಹತೆಯನ್ನು ಕುರಿತು, "ಶಸ್ತ್ರ ಶಾಸ್ತ್ರ ಸಾಹಿತ್ಯಕಳಾ ಜ್ಞಾನನಿಧಿ"[೩] ಎಂದಿದೆ. ಶಸ್ತ್ರವಿದ್ಯೆಯಲ್ಲಿ ನಿಪುಣನೂ, ಶಾಸ್ತ್ರಗಳಲ್ಲಿ ಪರಿಣತನೂ, ಸಾಹಿತ್ಯದಲ್ಲಿ ವಾಗ್ಮಿಯೂ, ವಿದ್ವಾಂಸನೂ ಆಗಿರಬೇಕೆಂದು ಈ ವಾಕ್ಯದ ತಾತ್ಪರ್ಯ. ರಾಯಭಾರಿಗೆ ತಿಳಿದಿರಬೇಕಾದ ವಿಷಯಗಳು: ಶತ್ರು ರಾಜ್ಯದ ಎಲ್ಲೆ, ಕೋಟೆ - ಕೊತ್ತಲ: ಕಾಲ್ದಳ, ಅಶ್ವದಳ, ಗಜದಳ, ಫಿರಂಗಿ ದಳಗಳು: ಸೈನ್ಯದ ಗಣತಿ ರಾಜರ ವಸತಿ ನೆಲೆ, ಆಹಾರ ವಿತರಣೆ, ರಾಜ್ಯದ ಆದಾಯ, ಧಾರ್ಮಿಕ ಒಡಂಬಡಿಕೆಗಳು; ರಾಜ್ಯದ ಲೆಕ್ಕಪತ್ರ, ಕಂದಾಯಗಳು, ಶತ್ರುಗಳಿಗೆ ಇರುವ ವೈರಿಗಳು. ಹೀಗೆ ಎಲ್ಲ ಬಗೆಯ ವಿವರಗಳ ಅರಿವು ರಾಯಭಾರಿ ಹೊಂದುವುದು ಅವಶ್ಯವಾಗಿದ್ದಿತು. ಇವುಗಳಲ್ಲದೆ ಶುದ್ಧ ನಡತೆ, ಪರಸ್ಪರ ಸಹಕಾರ ಹಾಗೂ ಧೈರ್ಯ-ಸ್ಥೈರ್ಯಗಳನ್ನು ಹೊಂದಿರಬೇಕೆಂಬುದು ಪ್ರಾಚೀನ ಗ್ರಂಥ ಗಳಿಂದಲೂ ತಿಳಿದುಬರುವ ಅಂಶ. ಒಟ್ಟಿನಲ್ಲಿ ರಾಯಭಾರಿಗಳು ಪಂಡಿತರು, ಜ್ಞಾನಿಗಳು, ಚತುರರೂ ಹಾಗೂ ವಿವೇಚನಾಶಕ್ತಿ ಉಳ್ಳವರೂ ಆಗಿರಬೇಕು.

ರಾಯಭಾರತ್ವಕ್ಕೆ ಸಂಬಂಧಿಸಿದ ಮತ್ತೊಂದು ಶಾಖೆಯೆಂದರೆ ಗೂಢಚಾರರದು. ಗೂಢಚಾರರು ಪ್ರಾಚೀನ ಕಾಲದಿಂದಲೂ ರಾಜ್ಯಾಡಳಿತದಲ್ಲಿ ರಾಯಭಾರಿಗಳಂತೆಯೇ ಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದು. ಇವರು ರಾಯಭಾರಿ ಹುದ್ದೆಗೆ ಬೇಕಾದ ಅರ್ಹತೆಗಳನ್ನು ಹೊಂದಿರುತ್ತಿದ್ದರು. ಇವರನ್ನು 'ಅರಸನ ಚಲಿಸುವ ಕಣ್ಣುಗಳಿದ್ದಂತೆ'

ಎಂದು ಬಣ್ಣಿಸಲಾಗಿದೆ. ಇವರು ರಾಜ್ಯದ ಒಳ ಹಾಗೂ ಹೊರಗೆ ನಡೆಯುವ ಎಲ್ಲ ಬಗೆಯ ವ್ಯವಹಾರ, ವಿದ್ಯಮಾನಗಳು: ಚಲನ ವಲನಗಳನ್ನು ತಿಳಿದು ಗುಪ್ತವಾಗಿ ರಾಜನಿಗೆ ತಲುಪಿಸುವವರಾಗಿದ್ದರು. ಸಮಯ - ಸಂದರ್ಭಗಳಿಗೆ ಅನುಸಾರವಾಗಿ ಎಲ್ಲ ರೀತಿಯ ತಂತ್ರಗಳನ್ನು ಬಳಸಿ ವಿವಿಧ ರೀತಿಯ ಉಡುಪುಗಳನ್ನು ಧರಿಸಿ ವಿಷಯಗಳನ್ನು ಸಂಗ್ರಹಿಸುವುದು ಇವರ ಕರ್ತವ್ಯವಾಗಿದ್ದಿತು.

ಪ್ರಾಚೀನ ಕಾಲದಂತೆ ವಿಜಯನಗರ ಕಾಲದಲ್ಲಿ ರಾಯಭಾರತ್ವಕ್ಕೆ ವಿಶೇಷ ಮನ್ನಣೆ ನೀಡಲಾಗಿತ್ತು. ವಿಜಯನಗರ ಅರಸರು ಆರಂಭ ಕಾಲದಿಂದ ಸಾಮ್ರಾಜ್ಯದ ಅವನತಿಯ ವರೆಗೂ ವಿವಿಧ ರಾಜ್ಯಗಳೊಂದಿಗೆ ಸಂಬಂಧಗಳನ್ನು ಇಟ್ಟುಕೊಂಡಿದ್ದರು. ಈ ಸಂಬಂಧಗಳಿಗೆ ಸೇತುವೆಯಾಗಿ ಕಾರ್ಯನಿರ್ವಹಿಸಲು ರಾಯಭಾರಿಗಳನ್ನು ನೇಮಿಸಿದ್ದುದು ವಿವಿಧ ಆಕರಗಳಿಂದ ತಿಳಿದುಬರುತ್ತದೆ.

ರಾಮನಾಥ ಚರಿತದಲ್ಲಿ ನಂಜುಂಡ ಕವಿ ರಾಯರ ಆಸ್ಥಾನದಲ್ಲಿ ರಾಯಭಾರಿಗಳಿದ್ದು ದನ್ನು ಅನೇಕ ಪದ್ಯಗಳಲ್ಲಿ ಹೇಳಿದ್ದಾನೆ. ಅವನು ಒಂದೆಡೆ ಹೇಳುವಂತೆ,

ದೆಸೆದೆಸೆಯವನಿಪರಟ್ಟಿದು ಪಾಯನ
ವಿಸರವ ನೃಪ ಮಂತ್ರಿಗಳಿಗೆ
ಒಸೆದೊಪ್ಪುವ ರಾಯಭಾರಿಗಳಿಂ ಬಾಗಿ
ತಿಸೆದಿಹುದಾ ನರಪತಿಯ[೪]

ವಿಜಯನಗರ ಕಾಲದ ಪೂರ್ವದಲ್ಲೂ ರಾಯಭಾರಿಗಳು ಇರುವುದನ್ನು ದೃಢಪಡಿಸುವು ದಲ್ಲದೆ ಅವರ ಕಾರ್ಯವೈಖರಿಯನ್ನು ಬಿಂಬಿಸಿದೆ.

ವಿಜಯನಗರ ಅರಸರು ರಾಯಭಾರಿಗಳನ್ನು ಗೌರವದಿಂದ ಕಂಡು, ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡಿದ್ದರು. ಈ ಕಾಲದಲ್ಲಿ ವಿಜಯನಗರವು ಹೊರ ರಾಜ್ಯ, ದೇಶಗಳಿಗೆ ತನ್ನ ಆಸ್ಥಾನದಿಂದ ರಾಯಭಾರಿಗಳನ್ನು ಕಳುಹಿಸುವ, ಅಂತೆಯೇ ಹೊರಗಿನಿಂದಲೂ ಅವರನ್ನು ಆಮಂತ್ರಿಸಿರುವುದು ಕಂಡುಬರುತ್ತದೆ. ವಿಜಯನಗರ ಆರಂಭದ ಅರಸರಲ್ಲೊಬ್ಬನಾದ ಒಂದನೇ ಬುಕ್ಕರಾಯ ಕ್ರಿ.ಶ.೧೩೭೪ರಲ್ಲಿ ತನ್ನ ರಾಯಭಾರ ತಂಡವನ್ನು ಚೀನಾ ದೇಶದ ಮಿಂಗ್ ದೊರೆ ತೈತ್ಸು (Taitsu)ವಿನ ಆಸ್ಥಾನಕ್ಕೆ ಕಳುಹಿಸಿದ್ದುದು ತಿಳಿದು ಬರುತ್ತದೆ.[೫] ಇದರಿಂದ ವಿಜಯನಗರವು ಚೀನಾದೇಶನೊಂದಿಗೆ ಇಟ್ಟುಕೊಂಡಿದ್ದ ಸಂಬಂಧದ ಅರಿವಾಗುತ್ತದೆ. ಇದು ವಿಜಯನಗರದಿಂದ ಹೊರ ರಾಜ್ಯಗಳಿಗೆ ಹೋದ ವಿವರವಾದರೆ, ಹೊರದೇಶ - ರಾಜ್ಯಗಳಿಂದ ವಿಜಯನಗರಕ್ಕೆ ಅನೇಕ ರಾಯಭಾರಿ ತಂಡಗಳು ಭೇಟಿ ನೀಡಿದ್ದುದನ್ನೂ ಕಾಣಬಹುದು. ಪ್ರಸಿದ್ಧ ಪ್ರವಾಸಿಯಾದ ಅಬ್ದುಲ್ ರಜಾಕ್ ಪರ್ಶಿಯಾದ ಷಾರುಖ್‌ನ ರಾಯಭಾರಿಯಾಗಿ ಎರಡನೆಯ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದನು. ದೇವರಾಯ ಇವನನ್ನು ಬಹಳ ಗೌರವಯುತವಾಗಿ ಕಂಡುದನ್ನು ಸ್ವತಃ

ರಜಾಕ್‌ನೇ ಹೇಳಿಕೊಂಡಿರುವನು. ಅವನು ಹೇಳುವಂತೆ, “ನಾನು ನನ್ನ ಪರಿವಾರವೂ ವಿಜಯನಗರವನ್ನು ಮುಟ್ಟಿದೆವು. ನಮ್ಮನ್ನು ಎದುರುಗೊಳ್ಳಲು ರಾಜನು ದೊಡ್ಡ ಪರಿವಾರವನ್ನೇ ಕಳುಹಿಸಿದ್ದನು. ಅಲ್ಲದೆ ಇಳಿದುಕೊಳ್ಳಲು ನಮಗೆ ಚೆಂದದ ಮನೆಯೊಂದನ್ನು ಏರ್ಪಡಿಸಿದ್ದನು.[೬] ಆಸ್ಥಾನಕ್ಕೆ ಭೇಟಿ ನೀಡಿದ ರಾಯಭಾರಿಗಳ ತಂಡವನ್ನು ದೇವರಾಯ ಕಂಡ ಬಗೆಯಿದು. “ರಾಜನ ಮುಂದೆ ನನ್ನನ್ನು ಕರೆದುಕೊಂಡು ಹೋಗಲು ನಾನು ತಲೆಬಗ್ಗಿಸಿ ಮೂರು ಸಲ ನಮಸ್ಕಾರ ಮಾಡಿದೆ. ರಾಜನು ನನ್ನನ್ನು ಪ್ರೀತಿಯಿಂದ ಸ್ವಾಗತಿಸಿ ತನಗೆ ಬಹು ಸಮೀಪದಲ್ಲಿದ್ದ ಪೀಠದಲ್ಲಿ ಕುಳಿತುಕೊಳ್ಳುವಂತೆ ಅಪ್ಪಣೆ ನೀಡಿದನು. ನಾನು ನನ್ನ ರಾಜನಿಂದ ತಂದ ಪತ್ರವನ್ನು ಅವನ ಕೈಗೆ ಕೊಟ್ಟಾಗ ರಾಜ ಅದನ್ನು ದುಭಾಷಿಗೆ ಕೊಟ್ಟು ದೊಡ್ಡ ರಾಜನೊಬ್ಬ ನಮ್ಮ ಬಳಿಗೆ ರಾಯಭಾರಿಯನ್ನು ಕಳುಹಿಸಿರುವುದು ನಮ್ಮ ಮನಸ್ಸಿಗೆ ನಿಜವಾಗಿಯೂ ಸಂತೋಷವಾಗಿದೆ”[೭] ಎಂದು ಅವರನ್ನು ಪ್ರೀತಿಯಿಂದ ಸ್ವಾಗತಿಸಿದುದನ್ನು ಕಾಣುತ್ತೇವೆ. ಕೃಷ್ಣದೇವರಾಯನು ಕೂಡ ರಾಯಭಾರಿಗಳನ್ನು ಗೌರವದಿಂದ ಕಂಡಿದ್ದನು. ಪೋರ್ಚುಗೀಸ್ ರಾಯಭಾರಿ ಕ್ರಿಸ್ಟಾಂವ್-ದ-ಫಿಗ್ಯೆರೆಡೋ ಕೃಷ್ಣದೇವರಾಯನ ಆಸ್ಥಾನಕ್ಕೆ ೧೫೨೦ರಲ್ಲಿ ಭೇಟಿ ನೀಡಿದ್ದನು. ಇವನ ಜೊತೆಯಲ್ಲಿ ಪ್ರವಾಸಿ ಡೋಮಿಂಗೋ ಪಾಯೇಸ್ ಕೂಡ ಬಂದಿದ್ದನು. ಇವರನ್ನು ರಾಜ ಆಸ್ಥಾನದಲ್ಲಿ ಕಂಡ ಬಗೆಯನ್ನು ಪಾಯೇಸ್, “ರಾಯನು ಫಿಗ್ಯೆರೆಡೋವನ್ನು ಬಹಳ ಗೌರವದಿಂದ ಸ್ವಾಗತಿಸಿದನು. ಅವನ ಜೊತೆಗೆ ಇದ್ದ ನಮ್ಮನ್ನು ರಾಜ ಆತ್ಮೀಯರಂತೆ ಕಂಡನು.” ಎಂದಿರುವನು.[೮] ರಾಯಭಾರಿಗಳನ್ನು ಗೌರವದಿಂದ ಕಾಣುವುದು ಪದ್ಧತಿಯಾಗಿತ್ತು. ಈ ಪದ್ಧತಿಯಲ್ಲಿ ರಾಯಭಾರಿಗಳು ತಾವು ತಂದ ಕಾಣಿಕೆಗಳನ್ನು ನೀಡಿ ಸತ್ಕರಿಸುವ ಹಾಗೂ ಅರಸರಿಂದ ತಾವು ಸತ್ಕಾರ ಪಡೆಯುತ್ತಿದ್ದುದನ್ನು ಪ್ರವಾಸಿಗರ ವರದಿಗಳಿಂದಲೂ ಅರಿಯಬಹುದು. ರಜಾಕ್ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದಾಗ ತನ್ನ ರಾಜನಿಂದ ತಂದ ಪತ್ರ ಮತ್ತು ಕಾಣಿಕೆಗಳನ್ನು ನೀಡಿದ್ದನು. ಅಂತೆಯೇ ಇದಕ್ಕೆ ಪ್ರತ್ಯುತ್ತರವಾಗಿ ದೇವರಾಯ “ಹರಿವಾಣದಲ್ಲಿ ಎರಡು ಕಟ್ಟು ವೀಳೆಯದೆಲೆ, ಐದುನೂರು ಫನಂ ನಾಣ್ಯಗಳುಳ್ಳ ಚೀಲ ಮತ್ತು ಇಪ್ಪತ್ತು ಮಿತ್ ಕಾಲ್ ತೂಕದಷ್ಟು ಕರ್ಪೂರವನ್ನಿಟ್ಟು ಸಾಮಾನ್ಯನಾದ ನನ್ನನ್ನು ಸತ್ಕರಿಸಿದನು” ಎಂದು ರಜಾಕ್ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾನೆ.[೯] ಈ ಪದ್ಧತಿಯನ್ನು ಕೃಷ್ಣದೇವರಾಯ ಕೂಡ ಮುಂದುವರಿಸಿಕೊಂಡು ಬಂದಿದ್ದನು. ಅಂದು ಭೇಟಿ ನೀಡಿದ ಫಿಗ್ಯೆರೆಡೋಗೆ “ರಾಜನು ನಮ್ಮ ನಾಯಕ (ಫಿಗ್ಯೆರೆಡೋ)ನಿಗೆ ಕಿಂಕಾಪಿನ ಅಂಗಿಯನ್ನು ತಾನು ಧರಿಸಿದ್ದಂತಹ ತಲೆಯುರೆಯನ್ನೂ ಕೊಟ್ಟು ಸತ್ಕರಿಸಿ ಬೀಳ್ಕೊಟ್ಟನು. ಪ್ರತಿಯೊಬ್ಬ ಪೋರ್ಚುಗೀಸನಿಗೂ ಸುಂದರ ಚಿತ್ರಗಳಿದ್ದ ಮಗುಟಗಳನ್ನು ಕೊಟ್ಟನು” ಎನ್ನಲಾಗಿದೆ.[೧೦] ಈ ವಸ್ತುಗಳನ್ನು ಅರಸ ಏಕೆ ನೀಡಿದನೆಂದು ಹೇಳುತ್ತಾ ಪಾಯೇಸ್ “ರಾಜನು ಹೀಗೆ ಮಾಡಿದ್ದು (ಗೌರವಿಸಿದ್ದು) ಇಲ್ಲಿಯ ಪದ್ಧತಿಗನುಸಾರವಾಗಿದೆಯಲ್ಲದೆ ಮೈತ್ರಿ ಹಾಗೂ ಪ್ರೀತಿಗೋಸ್ಕರವಾಗಿ” ಎಂದು ವಾಸ್ತವತೆಯನ್ನು ಬಿಂಬಿಸುತ್ತಾನೆ. ಈ ಮುನ್ನ ಫಿಗ್ಯೆರೆಡೋ ಕ್ಯಾಪ್ಟನ್ ಮೇಜರ್‌ನಿಂದ

ತಂದಿದ್ದ ಪತ್ರದ ಜೊತೆಗೆ ಕಾಣಿಕೆಗಳನ್ನು ಕೃಷ್ಣದೇವರಾಯನಿಗೆ ಅರ್ಪಿಸಿದ್ದನು. ಇದು ಎರಡೂ ಕಡೆಯ ರಾಜ್ಯಗಳು ಅನುಸರಿಸುವ ಸಾಮಾನ್ಯ ಪದ್ಧತಿಯಾಗಿದ್ದಿತು.

ರಾಯಭಾರಿಗಳನ್ನು ಸತ್ಕರಿಸುವುದರ ಜೊತೆಗೆ ಅವರಿಗೆ ಉತ್ತಮ ವಸತಿ ಹಾಗೂ ಊಟದ ಸೌಲಭ್ಯಗಳನ್ನು ಒದಗಿಸುತ್ತಿದ್ದುದು ಆಯಾಯ ಅರಸರ ಕರ್ತವ್ಯವೂ ಆಗಿದ್ದಿತು. ಪರ್ಶಿಯಾದ ರಾಯಭಾರಿ ರಜಾಕನಿಗೆ ಉಳಿದುಕೊಳ್ಳಲು ಚಂದದ ಮನೆಯನ್ನು ನೀಡಿದ್ದುದಲ್ಲದೆ ಅವನಿಗೆ "ಗ್ರಾಸಕ್ಕಾಗಿ ಪ್ರತಿನಿತ್ಯ ಎರಡು ಕುರಿ, ನಾಲ್ಕು ಜೊತೆ ಕೋಳಿ, ಐದುಮಣ ಅಕ್ಕಿ, ಒಂದು ಮಣಬೆಣ್ಣೆ, ಒಂದು ಮಣ ಸಕ್ಕರೆ, ಎರಡು ಚಿನ್ನದ ವರಾಹಗಳನ್ನು ಕೊಡುತ್ತಿದ್ದರು.[೧೯] ಪೋರ್ಚುಗೀಸ್ ರಾಯಭಾರಿ ಫಿಗ್ಯೆರೆಡೋವಿಗೂ ಭತ್ಯಕ್ಕೆ ರಾಜನ ಅಪ್ಪಣೆಯಂತೆ ಕುರಿ, ಕೋಳಿ, ಬೆಣ್ಣೆ, ತುಪ್ಪ, ಜೇನುತುಪ್ಪ ಮತ್ತು ಇತರ ತಿಂಡಿ - ತಿನಿಸುಗಳನ್ನು ಸರಬರಾಜು ಮಾಡಲಾಗಿತ್ತು. ಅಲ್ಲದೆ ಇವರನ್ನು ದಳವಾಯಿಗಳು, ಶ್ರೀಮಂತರು ರಾಜನ ಪರವಾಗಿ ಆಗಾಗ ಬಂದು ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದದನ್ನು ಕಾಣಬಹುದು.[೨೦]

ವಿಜಯನಗರದಲ್ಲಿ ಈ ಮೇಲಿನ ದೇಶಗಳ ರಾಯಭಾರರಲ್ಲದೆ ನೆರೆಯ ಬಹುಮನಿ ಹಾಗೂ ನಂತರದ ಷಾಹಿ ಸುಲ್ತಾನರ ರಾಯಭಾರಿಗಳು ಇದ್ದರು. ಬುಸಾತಿನೆ ಸಲಾತೀನದಲ್ಲಿ ಹೇಳಿದಂತೆ, "ಐದು ಬಾದಶಹರ ಐವರು ರಾಯಭಾರಿಗಳು ರಾಮರಾಜನ ಆಸ್ಥಾನದಲ್ಲಿ ಯಾವಾಗಲೂ ಇರುತ್ತಿದ್ದರು. ಮೊದಲು ರಾಮರಾಜನು ಅವರೊಂದಿಗೆ ಸಖ್ಯವನ್ನಿಟ್ಟುಕೊಂಡಿದ್ದು ಗೌರವದಿಂದ ಕಾಣುತ್ತಿದ್ದನು. ಏಕಾಂತದಲ್ಲಿ ಮಾತನಾಡುತ್ತಿದ್ದನು. ಅವರೊಂದಿಗೆ ಸಂತೋಷದಿಂದ ಕಾಣುತ್ತಿದ್ದನು" ಎಂದಿದೆ.[೨೧] ಆದರೆ ಕಾಲಾನಂತರ ಷಾಹಿ ರಾಜ್ಯಗಳನ್ನು ರಾಮರಾಯ ತಿರಸ್ಕಾರದಿಂದ ಕಂಡುದುದು ಯುದ್ಧಗಳಿಂದ ಮಾತ್ರವಲ್ಲದೆ ಅವನು ರಾಯಭಾರಿಗಳನ್ನು ನೋಡಿಕೊಂಡ ಬಗೆಯಿಂದಲೂ ತಿಳಿಯಬಹುದಾಗಿದೆ. ಆರಂಭದಲ್ಲಿ ಗೌರವದಿಂದ ಕಾಣುತ್ತಿದ್ದ ರಾಮರಾಯ ಆನಂತರ, "ಆ ನಡತೆಯನ್ನು ಒಟ್ಟಾರೆಯಾಗಿ ಬಿಟ್ಟು ಯಾವಾಗಾದರೊಮ್ಮೆ ರಾಯಭಾರಿಗಳಿಗೆ ಆಸ್ಥಾನದಲ್ಲಿ ಬರಲು ಅವಕಾಶ ಮಾಡಿಕೊಡುತ್ತಿದ್ದನು. ಅವರೊಂದಿಗೆ ಸಿಟ್ಟಿನಿಂದ, ದ್ವೇಷದಿಂದ ಮಾತನಾಡುತ್ತಿದ್ದನು. ನಿತ್ಯದ - ಪರಿಪಾಠವನ್ನು ಬಿಟ್ಟು ಸಾಕಷ್ಟು ಸಮಯ ಅವರು ನಿಲ್ಲುವಂತೆ ಮಾಡಿ ಆನಂತರ ಕುಳಿತುಕೊಳ್ಳಲು ಅನುಮತಿ ನೀಡುತ್ತಿದ್ದನು. ನಿಯೋಗ ಹೊರಟರೆ ನಿಯೋಗದ ಮುಂದೆ ನಡೆಯಲು ರಾಯಭಾರಿಗಳು ಬಂದರೆ ಅವರಿಗೆ ಮುಂದಿರಲು ಬೇಗ ಅನುಮತಿ ಕೊಡುತ್ತಿರಲಿಲ್ಲ." ಇದು ರಾಯಭಾರಿಗಳನ್ನು ರಾಮರಾಯ ಕಂಡ ಬಗೆಯಾದರೆ ಈ ಮೂಲಕ ಷಾಹಿ ರಾಜ್ಯಗಳೊಂದಿಗೆ ವಿಜಯನಗರ ಹೊಂದಿದ್ದ ಸಂಬಂಧವೂ ಸ್ಪಷ್ಟವಾಗುತ್ತದೆ. ಕೃಷ್ಣದೇವರಾಯ ೧೫೨೦ರಲ್ಲಿ ಆದಿಲ್ ಖಾನನನ್ನು ಸೋಲಿಸಿ ರಾಯಚೂರು ಹಾಗೂ ಮುದಗಲ್ಲುಗಳನ್ನು ವಶಪಡಿಸಿಕೊಂಡ ವಿಚಾರ ತಿಳಿದ ಉಳಿದ ಷಾಹಿ ಸುಲ್ತಾನರು ಆತಂಕಗೊಂಡು ತಮ್ಮ ಮೇಲೆ ಯುದ್ಧವನ್ನು ಸಾರಬಹುದೆಂದು ತಿಳಿದು ಎಲ್ಲರೂ ಸೇರಿ ರಾಯಭಾರಿಗಳನ್ನು ಕೃಷ್ಣದೇವರಾಯನಲ್ಲಿಗೆ ಕಳುಹಿಸಲು ಒಪ್ಪುತ್ತಾರೆ. ಸುಲ್ತಾನರು

ಕೃಷ್ಣದೇವರಾಯನಿಗೆ ರಾಯಭಾರಿಗಳ ಮೂಲಕ ಕಳುಹಿಸಿದ ಪತ್ರದ ವಿವರವನ್ನು ನ್ಯೂನಿಜ್ ನೀಡುತ್ತಾನೆ. ಪತ್ರದಲ್ಲಿ "ರಾಜನು ಯಾದುಲ್‌ಖಾನನನ್ನು ಸೋಲಿಸಿದುದೇ ಸಾಕೆಂತಲೂ, ಮುಂದುವರಿಯಬಾರದೆಂತಲೂ, ಯಾದಲ್‌ಖಾನನಿಂದ ಪಡೆದುದನ್ನು ಅವನಿಗೆ ಹಿಂದಿರುಗಿ ಕೊಡಬೇಕೆಂತಲೂ ಹಾಗೆ ಮಾಡಿದರೆ ತಾವೆಲ್ಲ ರಾಜನು ಹೇಳಿದಂತೆ ಕೇಳುವರೆಂತಲೂ, ಹಾಗೆ ಮಾಡದೆ ಹೋದರೆ ಅನಿವಾರ್ಯವಾಗಿ ತಾವು ಯಾದುಲ್‌ಖಾನನ್ನು ಸೇರಿಕೊಂಡು ಯುದ್ಧ ಮಾಡಿ ಅವನದನ್ನೆಲ್ಲ ಹಿಂದಿರುಗಿ ಪಡೆಯಬೇಕಾಗುತ್ತದೆ" ಎಂಬುದಾಗಿ ಹೇಳಲಾಗಿತ್ತು.[೧೪] ಈ ಪತ್ರಕ್ಕೆ ಪ್ರತ್ಯುತ್ತರವಾಗಿ ಕೃಷ್ಣದೇವರಾಯ ಜವಾಬು ಬರೆಸಿ ಅದನ್ನು ತಂದ ರಾಯಭಾರಿಗಳ ಮೂಲಕ ಕಳುಹಿಸುತ್ತಾನೆ. ಆದರೆ ಪತ್ರ ತಂದ ರಾಯಭಾರಿಗಳಿಗೆ ಎಂದಿನಂತೆ ಗೌರವದಿಂದ ಕಾಣುತ್ತಾನೆ. ಯಾವುದೇ ತೊಂದರೆಯನ್ನು ಅವರಿಗೆ ನೀಡುವುದಿಲ್ಲ. ರಾಯನಿಗೆ ಬೆದರಿಕೆಯ ಪತ್ರವನ್ನು ರಾಯಭಾರಿಗಳು ತಂದಿದ್ದರೂ ಅವರನ್ನು ಗೌರವದಿಂದ ಕಾಣುವುದರ ಜೊತೆಗೆ ಸೂಕ್ತ ಬಹುಮಾನಗಳನ್ನು ನೀಡಿ ಕಳುಹಿಸಿಕೊಟ್ಟ ನೆಂದೂ ಹೇಳಲಾಗಿದೆ.[೧೫] ಆದಿಲ್‌ಖಾನನು ತಾನು ರಾಯಚೂರು ಯುದ್ಧದಲ್ಲಿ ಸಂಪೂರ್ಣ ಸೋಲನ್ನು ಅನುಭವಿಸಿದ್ದರೂ ವಿಜಯನಗರದೊಂದಿಗೆ ಸಂಬಂಧವಿರಿಸಿಕೊಳ್ಳಲು ರಾಯಭಾರಿಗಳನ್ನು ಸೇತುವೆಯಾಗಿ ಉಪಯೋಗಿಸಿಕೊಂಡಿದ್ದನು. ಅವನು ಕಳುಹಿಸಿದ ರಾಯಭಾರಿಯ ಹೆಸರನ್ನು ನ್ಯೂನಿಜ್ 'ಮತುಕೊಟಾಂ' ಎಂದು ಕರೆದಿರುವನು.[೧೬] ಆದರೆ ಈ ರಾಯಭಾರಿ ತನ್ನನ್ನು ಕಾಣಲು ಬಂದಾಗ ಕೃಷ್ಣದೇವರಾಯ ಒಂದು ತಿಂಗಳ ಕಾಲ ಅನುಮತಿ ನೀಡಲಿಲ. ಅನಂತರ ಅವಕಾಶ ನೀಡಿದ್ದನು. ವಿಜಯನಗರ ಕಾಲದಲ್ಲಿ ಅರಸರು ರಾಯಭಾರಿಗಳನ್ನು ಗೌರವದಿಂದ ಕಾಣುತ್ತಿದ್ದುದು ಸಾಮಾನ್ಯ ಪದ್ಧತಿಯಾದರೆ, ಕೆಲವೊಮ್ಮೆ ತಿರಸ್ಕಾರದಿಂದ ಕಂಡ ಉದಾಹರಣೆಗಳೂ ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ.

ರಾಯಭಾರಿಗಳ ಪಾತ್ರ

ವಿಜಯನಗರ ಕಾಲದಲ್ಲಿ ರಾಯಭಾರಿಗಳು ಮಹತ್ವದ ಪಾತ್ರ ನಿರ್ವಹಿಸಿದ್ದರು. ಬಹುಮನಿ ಸುಲ್ತಾನರು ಮತ್ತು ವಿಜಯನಗರದ ಮಧ್ಯೆ ಅನೇಕ ಭಾರಿ ಸಂಧಾನ, ಒಪ್ಪಂದಗಳ ಮೂಲಕ ಯುದ್ಧಗಳನ್ನು ತಡೆದು ಶಾಂತಿಯನ್ನು ಸ್ಥಾಪಿಸುವಲ್ಲಿ ರಾಯಭಾರಿಗಳು ತಮ್ಮ ಕಾರ್ಯವೈಖರಿಯನ್ನು ತೋರ್ಪಡಿಸಿದ್ದಾರೆ.

ಒಂದನೆಯ ಬುಕ್ಕರಾಯ ಮಹಮ್ಮದಶಹನ ವಿರುದ್ಧ ಕೈಗೊಂಡ ಯುದ್ಧದ ಬಳಿಕ ಮುಸ್ಲಿಮರ ಹತ್ಯೆ ನಡೆಯಿತೆಂದೂ, ಇದಕ್ಕೆ ಪ್ರತಿಯಾಗಿ ಮಹಮ್ಮದನು ೧೩೬೬ರಲ್ಲಿ ನರಹತ್ಯೆಗೆ ಮುಂದಾಗಿ ಅದನ್ನು ಎಷ್ಟು ಕಟ್ಟುನಿಟ್ಟಿನಿಂದ ಪಾಲಿಸಿದನೆಂದರೆ ಬಸುರಿ ಹೆಂಗಸರು ಮತ್ತು ಮೊಲೆ ಕುಡಿಯುವ ಕೂಸುಗಳು ಸಹ ಖಡ್ಗದಿಂದ ಪಾರಾಗಲಿಲ್ಲವೆನ್ನಲಾಗಿದೆ.[೧೭] ಈ ಘೋರಹತ್ಯೆಯ ಸಮಯದಲ್ಲಿ ಬಹುಮನಿ ರಾಯಭಾರಿಗಳು ಶಾಂತಿ - ಸಂಧಾನಗಳಿಗೆ ಮುಂದಾಗುತ್ತಾರೆ. ಮಹಮ್ಮದ್ ಶಹನಿಗೆ ಅವರು ನಿವೇದಿಸಿದ ಬಗೆಯಿದು: ಅಮಾಯಕರು

ಅದರಲ್ಲೂ ಅಸಹಾಯಕ ಸ್ತ್ರೀಯರು ಮತ್ತು ಮಕ್ಕಳು ತಪ್ಪಿತಸ್ಥರಿಂದಾಗಿ ಕಷ್ಟ ಅನುಬವಿಸಬೇಕೆಂದು ಯಾವ ಧರ್ಮವೂ ಹೇಳುವುದಿಲ್ಲವೆನ್ನುತ್ತಾರೆ. ಅಲ್ಲದೆ ಎರಡೂ ರಾಜ್ಯಗಳು ನೆರೆಹೊರೆಯವರಾದುದರಿಂದ ಪರಸ್ಪರ ಸಂಬಂಧಗಳನ್ನು ಕಡೆಗೊಳಿಸುವ ಅನಾವಶ್ಯಕ ಕಾರ್ಯವನ್ನು ತಪ್ಪಿಸುವುದು ನಿಜಕ್ಕೂ ಒಳ್ಳೆಯದೆಂದು ಸುಲ್ತಾನನಿಗೆ ಆಗ್ರಹಪಡಿಸಿದರು.[೧೮] ರಾಯಭಾರಿಗಳ ಈ ಮಾತುಗಳಿಂದ ಪ್ರಭಾವಿತನಾದ ಸುಲ್ತಾನ" ಇನ್ನು ಮುಂದೆ ವಿಜಯದ ನಂತರ ಒಬ್ಬ ಶತ್ರುವನ್ನೂ ಕೊಲ್ಲುವುದಿಲ್ಲವೆಂದೂ, ತನ್ನ ಉತ್ತರಾಧಿಕಾರಿಗಳನ್ನು ಅದೇ ಕರುಣೆ ಆಚರಿಸುವಂತೆ ಬದ್ಧರನ್ನಾಗಿಸುವುದಾಗಿಯೂ ಪ್ರತಿಜ್ಞೆಗೈದ.[೧೯] ಇದರಿಂದ ರಾಯಭಾರಿಗಳು ಘೋರ ಹತ್ಯೆಗಳನ್ನು ತಡೆಯುವಲ್ಲಿ ಯಶಸ್ವಿಯಾದುದು ಹಾಗೂ ರಾಯಭಾರಿಗಳ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಿದ್ದುದು ಸ್ಪಷ್ಟವಾಗುತ್ತದೆ. ರಾಮರಾಯನು ಕೈಗೊಂಡ ಅಹಮ್ಮದನಗರ ಯುದ್ಧದಲ್ಲಿ ಸೋಲುಂಟಾಗುವುದನ್ನು ಅರಿತ ಹುಸೇನ್ ನಿಜಾಂಶಹನು ತನ್ನ ರಾಯಭಾರಿಗಳಾದ ಕಾಸಿಂಬೇಗ್ ಮತ್ತು ಮೌಲಾನಾ ಇನಾಯಿತುಲ್ಲಾ ಅವರನ್ನು ರಾಮರಾಯನಲ್ಲಿಗೆ ಕಳುಹಿಸುತ್ತಾನೆ. ಆಗ ರಾಯಭಾರಿಗಳು ಎರಡು ರಾಜ್ಯಗಳ ಮಧ್ಯ ಒಡಂಬಡಿಕೆಗೆ ಯತ್ನಿಸಿ ರಾಮರಾಯನನ್ನು ಒಪ್ಪಂದಕ್ಕೆ ಸಮ್ಮತಿಸುವಂತೆ ಮಾಡಿದರು. ರಾಮರಾಯ ಕೆಲವು ಷರತ್ತುಗಳ ಮೂಲಕ ಒಪ್ಪಂದ ಮಾಡಿಕೊಂಡು ನಿಜಾಂಶಹನೊಂದಿಗೆ ನಡೆಯುತ್ತಿದ್ದ ಯುದ್ಧವನ್ನು ನಿಲ್ಲಿಸಿದ್ದನು.[೨೦] ಇಲ್ಲಿ ಕೂಡ ಯುದ್ಧವನ್ನು ತಡೆಯುವಲ್ಲಿ ರಾಯಭಾರಿಗಳು ಯಶಸ್ವಿಯಾಗಿದ್ದಾರೆ.

ರಾಮರಾಯ ಷಾಹಿ ಸುಲ್ತಾನರ ರಾಜಕೀಯದ ಒಳಜಗಳಗಳಲ್ಲಿ ನೇರವಾಗಿ ಭಾಗವಹಿಸಿ ಚಾಣಾಕ್ಷತನದಿಂದ ಅವರೊಂದಿಗೆ ತನ್ನದೇ ಆದ ವಿದೇಶ ನೀತಿ ರೂಪಿಸಿದ್ದನು. ಸುಲ್ತಾನರಲ್ಲಿ ಸದಾಕಾಲ ಒಬ್ಬನ ಮೇಲೆ ಮತ್ತೊಬ್ಬನನ್ನು ಎತ್ತಿಕಟ್ಟಿ ಅವರನ್ನು ಪರಸ್ಪರ ಸಂಘರ್ಷಗಳಲ್ಲಿ ತೊಡಗುವಂತೆ ಮಾಡಿ ಲಾಭ ಪಡೆಯುತ್ತಿದ್ದನು. ಅಲ್ಲದೆ ಷಾಹಿ ಸುಲ್ತಾನರು ವಿಜಯನಗರದ ಸೈನಿಕ ಸಹಾಯ ಯಾಚಿಸುವಂತೆ ಕಾರ್ಯತಂತ್ರ ರೂಪಿಸಿದ್ದನು. ಷಾಹಿ ಸುಲ್ತಾನರು ರಾಯಭಾರಿಗಳ ಮೂಲಕ ರಾಮರಾಯನಿಗೆ ವಿಜಯನಗರ ಸೇನೆಯ ಸಹಾಯವನ್ನು ಕೇಳುವುದು ಸಾಮಾನ್ಯವಾಗಿದ್ದಿತು. ಒಮ್ಮೆ ಅಹಮ್ಮದ ನಗರಕ್ಕೆ ಕುಮ್ಮಕ್ಕು ನೀಡಿದರೆ ಇನ್ನೊಮ್ಮೆ ಬಿಜಾಪುರಕ್ಕೂ, ಮತ್ತೊಮ್ಮೆ ಗೋಲ್ಕೊಂಡಕ್ಕೂ ಹೀಗೆ ಒಬ್ಬರ ನಂತರ ಒಬ್ಬರಿಗೆ ಮತ್ತು ಯಾರಿಗೂ ಶಾಶ್ವತ ಸಹಾಯ ನೀಡದಂತಹ ಕ್ರಮ ಅನುಸರಿಸಿದ್ದನು. ಈ ಸಮಯದಲ್ಲಿ ಬುಸಾತಿನೆ ಸಲಾತೀನದಲ್ಲಿ ಹೇಳುವಂತೆ ರಾಯಭಾರಿಗಳನ್ನು ಹೀನಾಯವಾಗಿ ಕಂಡ ರೀತಿ ಹಾಗೂ ತಾನು ಷಾಹಿ ರಾಜ್ಯಗಳ ಮೇಲೆ ಸಾಧಿಸಿದ್ದ ಹಿಡಿತಗಳನ್ನು ಸುಲ್ತಾನರು ಅರ್ಥಮಾಡಿಕೊಳ್ಳಲೆತ್ನಿಸಿದರು. ವಿಜಯನಗರದ ನಿಜವಾದ ಧೋರಣೆಯನ್ನು ಅರಿತ ಅವರು ತಾತ್ಕಾಲಿಕವಾಗಿಯಾದರೂ ಒಂದಾಗಬೇಕೆಂದುಕೊಂಡರು. ಅಂತೆಯೇ ವೈವಾಹಿಕ ಸಂಬಂಧಗಳನ್ನು ಒಬ್ಬರ ನಡುವೆ ಒಬ್ಬರು ಬೆಸೆಯುವಲ್ಲಿ ಯಶಸ್ವಿಯಾದರು. ಕೊನೆಗೆ

ಎಲ್ಲರೂ ಒಟ್ಟಾಗಿ ೧೫೬೫ರ ರಕ್ಕಸಗಿ - ತಂಗಡಗಿ ಯುದ್ಧದಲ್ಲಿ ಭಾಗವಹಿಸಿ ತಮ್ಮ ಪ್ರಾಣದ ಹಂಗನ್ನು ತೊರೆದು ಹೋರಾಡಿ ಜಯ ಸಂಪಾದಿಸಿದುದನ್ನು ಕಾಣಬಹುದು.

ರಾಯಭಾರಿಗಳಂತೆ ವಿಜಯನಗರದಲ್ಲಿ ಬೇಹುಗಾರಿಕಾ ಪಡೆಯೂ ಇತ್ತು. ರಾಯಭಾರಿಗಳು ರಾಜ್ಯಗಳ ಮಧ್ಯ ಶಾಂತಿ-ಸಂಧಾನದ ಮಾತುಕತೆಗಳನ್ನು ನಡೆಸುವವರಾದರೆ, ಬೇಹುಗಾರ ಅಥವಾ ಗೂಢಚಾರರು ರಾಜ್ಯದ ಒಳಗೆ ಹಾಗೂ ಹೊರಗೆ ನಡೆಯುತ್ತಿದ್ದ ವಿದ್ಯಮಾನಗಳನ್ನು ರಾಜನಿಗೆ ಒದಗಿಸುವವರಾಗಿದ್ದರು. ಆದುದರಿಂದ ಇವರನ್ನು 'ರಾಜನ ಚಲಿಸುವ ಕಣ್ಣುಗಳಿದ್ದಂತೆ' ಎಂದು ಬಣ್ಣಿಸಲಾಗಿದೆ. ಕೃಷ್ಣದೇವರಾಯನ ದಿನಚರಿಯಲ್ಲಿ ಬೇಹುಗಾರರ ತಂಡವಿದ್ದುದನ್ನು ಹೇಳಲಾಗಿದೆ. ರಾಯ ತಾನು ಅಧಿಕಾರಕ್ಕೆ ಬಂದ ಕೆಲವೇ ಸಮಯದಲ್ಲಿ ಅವನು ಮಾಡಿದ ಕೆಲಸವೆಂದರೆ ರಾಜ್ಯದ ಅಮರನಾಯಕರು, ಸಾಮಂತರು ಹಾಗೂ ಷಾಹಿ ಸುಲ್ತಾನರ ಪ್ರದೇಶಗಳಲ್ಲಿ ಸಂಚರಿಸಿ ಸುದ್ಧಿಗಳನ್ನು ತಿಳಿದುಕೊಳ್ಳಲು ಅನೇಕ ಜನ ಬೇಹುಗಾರರನ್ನು ನೇಮಕ ಮಾಡಿದ್ದುದು. ದಿನಚರಿಯಲ್ಲಿ ಹೇಳುವಂತೆ "ಅಂತರಂಗ ಬಹಿರಂಗ ವಾರ್ತೆಗಳನ್ನು ತಿಳಿದು ಬರುವ ಹಾಗೆ ಗೋಲಕೊಂಡೆ, ಆಮದಾನಗರ, ಬೆಡಂದುಕೋಟೆ, ರಾಜಮಹೇಂದ್ರ, ಯಿಕ್ಕೇರಿ, ಆನಗರ?, ಚನ್ನಪಟ್ಟಣ, ಶ್ರೀರಂಗಪಟ್ಟಣ, ಉಮ್ಮತ್ತೂರು, ಶಿವನಸಮುದ್ರ, ಪೆನುಗೊಂಡೆ, ಮೊರಸನಾಡು, ತಿಗುಳಾಣ್ಯ, ಚೋಳದೇಶ, ಮಲೆಯಾಳ, ಕೊಚ್ಚಿ, ಕೇರಳ, ತಿರುಪತಿ, ಗಂಡಿಕೋಟೆ, ಗುತ್ತಿ, ನಂದ್ಯಾಲ, ರಾಯಚೂರು, ಮುದಗಲ್ಲು ಮೊದಲಾದ ಸ್ಥಳಗಳಿಗೆ ಬೇಹಿನವರ ನೇಮಕ ಮಾಡಿ ಕಳುಹಿಸಿದನೆಂದು ಹೇಳಿದೆ.[೨೧] ಇದರಿಂದ ವಿಜಯನಗರ ಕಾಲದಲ್ಲಿ ಬೇಹುಗಾರರ ದೊಡ್ಡ ಪಡೆ ಇದ್ದುದು ಧೃಡಪಡುತ್ತದೆ. ಇದೇ ಆಕರವು ತಿಳಿಸುವಂತೆ ಗಜಪತಿ ರಾಜ್ಯಕ್ಕೆ ಬೇಹುಗಾರನನ್ನಾಗಿ ಹನುಮಂತಯ್ಯ ಎಂಬುವವನನ್ನು ಕೃಷ್ಣದೇವರಾಯ ನೇಮಿಸಿದ್ದನು.[೨೨] ಈ ಬೇಹುಗಾರ ಅಥವಾ ಗೂಢಚಾರರು ನಿರ್ವಹಿಸಬೇಕಾದ ಕಾರ್ಯವೈಖರಿಯನ್ನು ಕುರಿತು ಜೀವಂಧರ ಚರಿತೆಯಲ್ಲಿ,

ಪೌರಜನರಿಷ್ಟವನು ನಿಜಪರಿವರಸನ್ನುತ ಸಚಿವರಂತ
ಸ್ಸಾರವನು ಪರಿಜನರ ಗುಜುಗುಜಿನ ಪ್ರವರ್ತನೆಯ
ಅರಯಿದು ಬಂದರುಹಿ ನೀವೆನಲು[೨೩] ಎಂದಿದೆ.

ಇಲ್ಲಿ ಅರಸನೊಬ್ಬ ಗೂಢಚಾರರಿಗೆ ಅವರು ಮಾಡಬೇಕಾದ ಕೆಲಸ ಅರುಹುತ್ತಿರುವುದನ್ನು ಕಾಣಬಹುದು. ಈ ರೀತಿ ಬೇಹುಗಾರರನ್ನು ನೇಮಿಸಿ ರಾಜ್ಯದ ಒಳ ಹಾಗೂ ಹೊರ ರಾಜ್ಯಗಳ ಆಗುಹೋಗುಗಳು, ವಿದ್ಯಮಾನಗಳು, ಅರಸ ಅಥವಾ ಆಡಳಿತದ ಬಗೆಗಿನ ಜನರ ಅಭಿಪ್ರಾಯಗಳನ್ನು ಅರಸರು ಅವರಿಂದ ಪಡೆಯುತ್ತಿದ್ದರು. ಆ ಮೂಲಕ ಅರಸನು ರಾಜ್ಯದ ಆಡಳಿತದಲ್ಲಿ ನಿಯಂತ್ರಣ ಸಾಧಿಸುತ್ತಿದ್ದರು. ಒಟ್ಟಿನಲ್ಲಿ ರಾಯಭಾರಿಗಳು ರಾಜ್ಯ - ರಾಜ್ಯಗಳ ನಡುವೆ ಸಂಬಂಧ ಬೆಸೆಯುವ ಸೇತುವೆಗಳಾದರೆ, ಬೇಹುಗಾರರು ರಾಜ್ಯದ

ಒಳ - ಹೊರಗಿನ ವಿದ್ಯಮಾನಗಳನ್ನು ಅರಿತು ಗುಪ್ತವಾಗಿ ಅರಸನಿಗೆ ತಿಳಿಸಿ ಆಡಳಿತಯಂತ್ರದ ಚಾಲನೆಗೆ ಸಹಾಯಕರಾಗಿ ಪಾತ್ರ ನಿರ್ವಹಿಸುತ್ತಿದ್ದುದನ್ನು ಕಾಣಬಹುದು.

ಟಿಪ್ಪಣಿಗಳು

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೫೨
೨. ಸೂಕ್ತಿಸುಧಾರ್ಣವಂ, ಪು. ೩೬೧, ೩೭೩
೩. SII, Vol ix- i, P. 158
೪. ರಾಮನಾಥ ಚರಿತ, ಸಂ, ೨, ೫-೨
೫. Indian Antiquary, Vol- XLV, P. 140, South Indian polity, P. 308
೬. ಪ್ರವಾಸಿ ಕಂಡ ಇಂಡಿಯಾ, ಸಂ, ೨, ರಜಾಕ್, ಪು. ೧೫೪
೭. ಅದೇ, ಪು. ೧೬೧
೮. ಅದೇ, ಪಾಯೇಸ್, ಪು. ೩೬೫
೯. ಅದೇ, ರಜಾಕ್, ಪು. ೧೬೧
೧೦. ಅದೇ, ಪಾಯೇಸ್, ಪು. ೩೬೬
೧೧. ಅದೇ, ರಜಾಕ್, ಪು. ೧೬೧
೧೨. ಅದೇ, ಪಾಯೇಸ್, ಪು. ೩೬೬
೧೩. ಬುಸಾತಿನೆ ಸಲಾತೀನ, ಪು. ೭೬-೭೭
೧೪. ಪ್ರ. ಕಂ. ಇಂ, ಸಂ, ೨, ನ್ಯೂನಿಜ್, ಪು. ೪೦೪
೧೫. ಅದೇ
೧೬. ಅದೇ, ಪು. ೪೦೫
೧೭. ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ ಪು. ೩೭-೩೮
೧೮. ಅದೇ, ಪು. ೩೯
೨೦. ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ - ಮುಸ್ಲಿಂ ಬಾಂಧವ್ಯ, ಪು. ೩೪
೨೧. ಶ್ರೀಕೃಷ್ಣದೇವರಾಯನ ದಿನಚರಿ, ಪು. ೧೦
೨೨. ಅದೇ, ಪು. ೩೧
೨೩. ಜೀವಂಧರ ಚರಿತೆ, ೫-೪೮

❑❑

೮

ವಿಜಯನಗರ ಕಾಲದ ಲಕ್ಷ್ಮೇಶ್ವರದ ಎರಡು ಜಯಪತ್ರ ಶಾಸನಗಳು

* ಡಾ.ಶ್ರೀನಿವಾಸ ವಿ.ಪಾಡಿಗಾರ

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನಲ್ಲಿರುವ ಲಕ್ಷ್ಮೇಶ್ವರ - ಪ್ರಾಚೀನ ಪುಲಿಗೆರೆ / ಹುಲಿಗೆರೆ / ವ್ಯಾಘ್ರಪುರ - ಕ್ರಿ.ಶ. ೧೧ನೆಯ ಶತಮಾನದವರೆಗೂ ಜೈನರ ಪ್ರತಿಷ್ಠೆಯ ಕೇಂದ್ರವಾಗಿ ಮೆರೆದ ಸ್ಥಳ.[೧] ಇಲ್ಲಿ ಇಮ್ಮಡಿ ಪುಲಕೇಶಿಯ ಕಾಲದಿಂದಲೂ ಅನೇಕ ಬಸದಿಗಳು ತಲೆಯೆತ್ತಿ ಉಛ್ರಾಯಸ್ಥಿತಿಯಲ್ಲಿದ್ದವು. ಬಾದಾಮಿಯ ಚಾಲುಕ್ಯರು, ಗಂಗರು ಮತ್ತು ಪ್ರಾದೇಶಿಕ ಅರಸರ ಪ್ರೋತ್ಸಾಹದಡಿಯಲ್ಲಿ ಜೈನಬಸದಿಗಳು ಅಭಿವೃದ್ಧಿಸಿದವು. ಶೈವಮತೀಯರು ಅಸ್ತಿತ್ವದಲ್ಲಿದ್ದರೂ ಅವರ ಪ್ರಾಬಲ್ಯ ಜೈನರಷ್ಟಿರಲಿಲ್ಲ. ಹರಿಹರನ "ಆದಯ್ಯನ ರಗಳೆ"ಯಲ್ಲಿ ವಚಜಕಾರ ಆದಯ್ಯನನ್ನು ಕಂಡ ಶೈವ ಮುನಿಗಳು "ಎಲೆ ಮಗನೆ, ಮುಂದರಿಯದೆ ಬಂದೀವೂರಂ ನಿನ್ನೆ ಪೊಕ್ಕುನ್ನತಿಕೆಗೆಟ್ಟು ಬಸದಿಗಳು ಬತ್ತಲೆಯ ಬೊಂಬೆಗಳಂ ಕಂಡು ಬೆಗಡುಗೊಂಡು ಬೇವಿನ ವನವಂ ಪೊಕ್ಕಂತೆ ಪೊಲೆಗೇರಿಯಂ ಸಾರ್ದಂತೆ ದೆಸೆಗೆಟ್ಟೊಂದು ಪವಾಸಂ ಪತ್ತಿ ನಡೆಯುಡುಗಿ ವ್ಯಾಘ್ರಪುರಮಂ ಪೊಕ್ಕು ವಾಘ್ರಮುಖಮಂ ಪೊಕ್ಕಂತತಿಭೀತಿಯಿಂ ಪೊರಮಟ್ಟು ಮೆಲ್ಲಮೆಲ್ಲನೆ ತಟಾಕದೇರಿಯ ಮೇಲೆ ಬರುತ್ತಂ ಭಸ್ಮಾವಲೀಲಲಾಟನಾಗಿರ್ದ ನಿನ್ನಂ ಕಂಡೆವಿನ್ನೆಲ್ಲಿಗಂ ಪೋಗಲಾರೆವ್ ..." ಎಂದು ಹಲುಬುವನು[೨] ಈ ಸ್ಥಿತಿಯ ಸೂಚನೆಯೇ ಆಗಿದೆ.

೧೧ನೇ ಶತಮಾನದಲ್ಲಿ ಪರಿಸ್ಥಿತಿ ಬದಲಾಗತೊಡಗಿತು. ಶೈವರ ಚಟುವಟಿಕೆ ಹೆಚ್ಚಿದ್ದಲ್ಲದೆ ಜೈನರಿಗೆ ಆಘಾತ ಮಾಡುವ ಮಟ್ಟ ತಲುಪಿತು. ಸುರಹೊನ್ನೆಯ ಬಸದಿಯಲ್ಲಿ ನಡೆದ ಆದಯ್ಯನ ಪವಾಡ ಜೈನರ ಮೇಲೆ ಶೈವರ ಆಕ್ರಮಣಕಾರಿ ವ್ಯವಹಾರದ ಒಂದು ಪ್ರಮುಖ ಸಂಕೇತವಾಯಿತು. ಆ ಬಸದಿಯಲ್ಲಿದ್ದ ತೀರ್ಥಂಕರನ ವಿಗ್ರಹ ಭಗ್ನಗೊಂಡ ಸ್ವಯಂಭೂ ಸೋಮನಾಥನ (ವೃಷಭಾರೂಢ ಉಮಾಸಹಿತ ಶಿವನ) ವಿಗ್ರಹ ಮೂಡಿ ಕೊಂಡಿತು. ಹರಿಹರನ ಪುರಾವೆಯನ್ನು ನಂಬಬಹುದಾದರೆ ಬಸದಿಯನ್ನು ಶಿವದೇಗುಲವಾಗಿ ಪರಿವರ್ತಿಸಿದ್ದರಿಂದ ರಕ್ತಪಾತವೂ ಆಯಿತು.[೩]

ಅಂದಿನಿಂದ ಜೈನರ ಬಲ ಕುಗ್ಗುತ್ತ ಸಾಗಿತು. ವಿಜಯನಗರ ಕಾಲದ ಎರಡು ಜಯಪತ್ರ ಶಾಸನಗಳು ಜೈನರ ಸ್ಥಿತಿಗತಿಯಲ್ಲಿ ಉಂಟಾದ ಅವಸಾನಾತ್ಮಕ ಬದಲಾವಣೆಗೆ ಪುರಾವೆ ಒದಗಿಸುತ್ತವೆ. ಇವುಗಳಲ್ಲಿ ಮೊದಲನೆಯದು ಜೈನರಿಗೆ ನೀಡಿದ ಜಯಪತ್ರವಾಗಿದ್ದು, ವಿಜಯನಗರ ಅರಸು ಮೊದಲನೆಯ ದೇವರಾಯನ ಆಳ್ವಿಕೆಯಲ್ಲಿ ಹೊರಟದ್ದು. ಕಾಲ ಕ್ರಿ.ಶ. ೧೪೧೨. ಇದನ್ನು ಶಂಖಬಸದಿಯ ಅಗ್ರಮಂಟಪದ ಕಂಬದ ಮುಖಗಳಲ್ಲಿ ಬರೆದಿದೆ. ಸೋಮನಾಥ ದೇವಾಲಯ ಹಾಗೂ ಶಂಖ ಬಸದಿಯ ಆಚಾರ್ಯರ ನಡುವೆ ಭೂವಿವಾದ ವುಂಟಾದನ್ನು ಇದು ದಾಖಲಿಸುತ್ತದೆ.

ಹುಲಿಗೆರೆಯ ಶಂಖಬಸ್ತಿಯ ಹೇಮದೇವಾಚಾರ್ಯರು ಮತ್ತು ಸೋಮನಾಥ ದೇವರ ಸ್ಥಾನಾಚಾರ್ಯ ಶಿವರಾಮಯ್ಯಗಳ ನಡುವೆ ತಮ್ಮ ತಮ್ಮ ದೇವಸ್ಥಾನಗಳ ಭೂಮಿಯ ಬಗ್ಗೆ ವಿವಾದವುಂಟಾಯಿತು. ಅವರಿಬ್ಬರೂ ಮಹಾಪ್ರಧಾನ ನಾಗಣ್ಣದಂಡನಾಯಕರಿಗೆ ವಿವಾದ ಬಗೆಹರಿಸಲು ಭಿನ್ನಹಮಾಡಿದರು. ಅರಮನೆಯ ಪುರೋಹಿತ ಸಂಗಮದೇವರು ಅರಮನೆಯ ವಿದ್ವಾನರುಗಳನ್ನು ಕೂಡಿಕೊಂಡು ಇತ್ತಂಡದ ಶಾಸನಗಳನ್ನು ಓದಿಸಿ ವಿವಾದದ ಭೂಮಿಯನ್ನು ದಾಖಲೆಗಳ ಪ್ರಕಾರ ಪರಿಶೀಲಿಸಿದರು. ಶಂಖಬಸ್ತಿಗೆ ಸಲ್ಲುವ ಭೂಮಿಯ ವಲಯದಲ್ಲಿ ಶಿವರಾಮಯ್ಯಗಳ ಭೂಮಿಯು ಹೊಕ್ಕಿಲ್ಲವೆಂದು ಕಂಡುಬಂದಿತು. ಎಷ್ಟು ಕಾಲದಿಂದ ಶಿವರಾಮಯ್ಯಗಳು ವ್ಯಾಜ್ಯಮಾಡುತ್ತಿದ್ದಾರೆಂದು ಹೇಮದೇವಾಚಾರ್ಯರನ್ನು ಕರೆದು ಕೇಳಲಾಗಿ ಆಣೆಮೀರಿ ಬಲುವೆಯಿಂದ ವಿವಾದಾತ್ಮಕ ಭೂಮಿಯಲ್ಲಿ ಶಿವರಾಮಯ್ಯಗಳು ವ್ಯವಸಾಯ ಮಾಡಿಸುತ್ತಿದ್ದಾರೆಂದೂ, ಆಣೆಯಿಡುವದನ್ನು ಮತ್ತು ಶಿವರಾಮಯ್ಯಗಳು ಆಣೆಮೀರಿ ಅಲ್ಲಿ ವ್ಯವಸಾಯ ಮಾಡಿಸಿದಾಗ ಅವರಿಂದ ಕಾಡಿಬೇಡಿ ಸಿಕ್ಕಷ್ಟು ಬೆಳೆಯನ್ನು ತಾನು ಪಡೆದುಕೊಳ್ಳುತ್ತಿರುವದನ್ನೂ, ಶಿವರಾಮಯ್ಯಗಳು ಅಲ್ಲಿ ವ್ಯವಸಾಯ ಮಾಡಿಸುವದಕ್ಕೆ ಕಾಲಕಾಲವೂ ತಾನು ವಿರೋಧಿಸುತ್ತಿರುವುದನ್ನೂ ಹುಲಿಗೆರೆಯ ನಾಗಗೌಡ ಹಾಗೂ ಸಮಸ್ತ ಗೌಡುಪ್ರಜೆಗಳು ಬಲ್ಲರೆಂದೂ ಹೇಮದೇವಾಚಾರ್ಯರು ಹೇಳಿದರು. ವಿದ್ವಾನುಗಳು ಶಿವರಾಮಯ್ಯಗಳ ಅಣ್ಣ ಗಂಗಣಯ್ಯಗಳನ್ನು ಮತ್ತು ಹೇಮದೇವಾಚಾರ್ಯರನ್ನು ಕರೆದು ಶಿವರಾಮಯ್ಯಗಳು ಹರಿಹರರಾಯರ ಕಾಲದಿಂದಲೂ ಇಂದು ಪರ್ಯಂತವಾಗಿ ಅವಿರೋಧವಾಗಿ ಆ ವಿವಾದತ್ಮಕ ಮೂರು ಕೈ ಭೂಮಿಯನ್ನು

ಭೋಗಿಸುತ್ತಿದ್ದಾರೆಂದು ಹುಲಿಗೆರೆಯ ನಾಗಗೌಡ ಮುಂತಾದ ಗೌಡುಪ್ರಜೆಗಳು ಹೇಳಿದರೆ ಹೇಮದೇವಾಚಾರ್ಯರು ಆ ಮೂರು ಕೈಯನ್ನು ಶಿವರಾಮಯ್ಯಗಳಿಗೆ ಬಿಡುವರೆಂದೂ, ಒಂದುವೇಳೆ ಹೇಮದೇವಾಚಾರ್ಯರು ವಿರೋಧಿಸುತ್ತಿದ್ದಾಗ್ಯೂ ಆಕ್ರಮಣಪೂರ್ವಕ ಶಿವರಾಮಯ್ಯಗಳು ಭೋಗಿಸುತ್ತಿದ್ದಾರೆಂದು ಆ ಗೌಡುಪ್ರಜೆಗಳು ಹೇಳಿದರೆ ಆ ಭೂಮಿ ಹೇಮದೇವಾಚಾರ್ಯರಿಗೆ ಸಲ್ಲುವದೆಂದೂ, ಆ ಪ್ರಕಾರ ನಾಗಗೌಡ ಮುಂತಾದ ಗೌಡುಪ್ರಜೆಗಳು ಹೇಳಿದಂತೆ ಎರಡು ತಂಡದವರೂ ತಿದ್ದಿಕೊಳ್ಳುವೆವೆಂದು ದಂಡನಾಯಕರ ಆಣೆಭಾರದ ಓಲೆಯನ್ನು ಬರೆದುಕೊಡಬೇಕೆಂದೂ ಕೇಳಿದಾಗ ಹೇಮಚಂದ್ರಾಚಾರ್ಯರು ಓಲೆಯನ್ನು ಬರಕೊಟ್ಟರು. ಆದರೆ ಶಿವರಾಮಯ್ಯಗಳ ಅಣ್ಣ ಗಂಗಣಯ್ಯಗಳು ಆಣೆಭಾರದ ಓಲೆ ಕೊಡದೆ ಹಿಂದಕ್ಕೆ ಸರಿದರು. ಅದರಿಂದ ಹೇಮದೇವಾಚಾರ್ಯರಿಗೆ ಜಯಪತ್ರವನ್ನು ಕೊಡಲಾಯಿತು ಮತ್ತು ಶಿವರಾಮಯ್ಯಗಳು ಆ ಭೂಮಿಯ ಬಗ್ಗೆ ಇನ್ನು ವಿವಾದ ಮಾಡಕೂಡದೆಂದು ಆಜ್ಞೆಮಾಡಲಾಯಿತು. ಅರಮನೆಯ ಪುರೋಹಿತ ಸಂಗಮದೇವರು ಮತ್ತು ವಿವಿಧ ವಿದ್ವಾನುಗಳು ಅದಕ್ಕೆ ಹಸ್ತಾಕ್ಷರಮಾಡಿದರು.

ಜೈನರಿಗೆ ನ್ಯಾಯದೊರೆಯಿತಾದರೂ ಈ ಭೂವಿವಾದದಲ್ಲಿ ಸ್ಥಳೀಯ ಗೌಡುಪ್ರಜೆಗಳು ಅಷ್ಟು ಕಾಲವೂ ಹಸ್ತಕ್ಷೇಪ ಮಾಡದೆ ಹೇಮದೇವಾಚಾರ್ಯರ ಮತ್ತು ಶಿವರಾಮಯ್ಯಗಳ ನಡುವಣ ಭೂವಿವಾದವನ್ನು ಇತ್ಯರ್ಥಮಾಡದೆ ಕುಳಿತದ್ದು ಜೈನಪರ ಸಹಾನುಭೂತಿಯ ಕೊರತೆಯನ್ನೇ ಸೂಚಿಸುತ್ತಿದೆ.

ಅನೇಕ ವರ್ಷಗಳ ತರುವಾಯ ಮತ್ತೊಂದು ವಿವಾದ ನಡೆಯಿತು. ಇದರ ಸ್ವರೂಪ ಮೊದಲ ವಿವಾದಕ್ಕಿಂತ ಭಿನ್ನವಾಗಿತ್ತು. ಇದೊಂದು ಧಾರ್ಮಿಕ ವಿವಾದ. ಇಲ್ಲಿ ಪರಿಗಣಿಸ ಲಾಗಿರುವ ಲಕ್ಷ್ಮೇಶ್ವರದ ಎರಡನೆಯ ಶಾಸನ ಇದನ್ನು ಪರಿಚಯಿಸುತ್ತದೆ. ಇದು ಸೋಮನಾಥ ದೇವಾಲಯದ ಪ್ರಾಕಾರದಲ್ಲಿದೆ. ಕ್ರಿ.ಶ. ೧೫೩೮ರ (ಅಥವಾ ಕ್ರಿ.ಶ. ೧೪೭೭ರ) ಈ ಶಿಲಾಶಾಸನದಲ್ಲಿ ಆ ವಿವಾದದ ಸ್ವರೂಪ ಮತ್ತು ಪರಿಣಾಮ ದಾಖಲಾಗಿದೆ.

ಶಂಖಬಸ್ತಿಯ ಶಾಂತಿನಾಥ ತೀರ್ಥಂಕರರ ಉತ್ಸವದ ಸಮಯದಲ್ಲಿ ಜೈನರು ಅಷ್ಟದಿಕ್ಪಾಲಾದಿಗಳು ಮತ್ತು ಧ್ವಜಪತಾಕಾದಿಗಳನ್ನು ಮೆರೆಸಿದರು. ಶೈವರು ಇದಕ್ಕೆ ಆಕ್ಷೇಪಿಸಿದರು. ವಿಚಾರಣೆಯಾಯಿತು. ಜೈನರು ಆ ರೀತಿ ಮಾಡಿದ್ದು ತಪ್ಪೆಂದೂ, ವೇದಶಾಸ್ತ್ರ ಪುರಾಣಾಗಮಾದಿಗಳ ಪ್ರಕಾರ ಅಷ್ಟದಿಕ್ಪಾಲಾದಿಗಳು, ಧ್ವಜಪತಾಕಾದಿಗಳು ಜಿನಸಮಯಕ್ಕೆ ಸಲ್ಲವೆಂದೂ ನಿರ್ಣಯಿಸಲಾಯಿತು. ಪ್ರಜ್ಞಾಹೀನತೆಯಿಂದ ತಾವು ಶಾಂತಿನಾಥ ತೀರ್ಥಂಕರರ ಉತ್ಸವದಲ್ಲಿ ಅವನ್ನು ಮೆರೆಸಿದೆವೆಂದು ಶಂಕಬಸದಿಯ ಸಂಖಣಾಚಾರ್ಯರು ಹೇಮಣಾ ಚಾರ್ಯರು ಮುಖ್ಯವಾಗಿ ಜಯಪತ್ರಿಕೆಯನ್ನು ಕಾಳಹಸ್ತಿದೇವರು, ಶಿವರಾಮದೇವರು, ಗಣಂಗಳು, ಬಸವರಾಜವೊಡೆಯರು ಮುಖ್ಯವಾದ ಮಹಾಗಣಂಗಳಿಗೆ ಬರೆದುಕೊಟ್ಟರು.

ಈ ಶಾಸನದಲ್ಲಿ ಬರುವ "ಮರ್ತ್ಯಲೋಕದ ಮಹಾಗಣಂಗಳು" ಮುಂತಾದ ಪದಗಳು ಇದು ವೀರಶೈವರಿಗೆ ಸಂಬಂಧಿಸಿರುವದನ್ನು ಸ್ಪಷ್ಟಪಡಿಸುತ್ತದಲ್ಲದೆ, ಅದರ ಧಾಟಿಯು

ಲಕ್ಷ್ಮೇಶ್ವರದ ಮೇಲೆ ಅವರ ಹಿಡಿತ ಬಿಗಿಯಾಗಿರುವದನ್ನು ಅರುಹುತ್ತದೆ. ಸಮಸ್ಯೆಯನ್ನು ಸ್ಥಳೀಯ ಮಟ್ಟದಲ್ಲಿ ತೀರ್ಮಾನಿಸಿದ್ದನ್ನು ಮತ್ತು ಈ ಸಂದರ್ಭದಲ್ಲಿ ಜೈನರು ಅರಸನಿಗೆ ಅಪೀಲು ಮಾಡಿದಿದ್ದುದನ್ನು ಗಮನಿಸಿದರೆ ಜೈನರಲ್ಲಿ ಅಷ್ಟು ಶಕ್ತಿ ಉಳಿದಿರಲಿಲ್ಲವೆಂದು ಸೂಚಿತವಾಗುತ್ತದೆ.

೧೯೩೦ರ ದಶಕದಲ್ಲಿ ಇವೆರಡೂ ಶಾಸನಗಳು ಭಾರತ ಸರಕಾರದ ಶಾಸನಶಾಸ್ತ್ರ ಇಲಾಖೆಯಿಂದ ಪ್ರತಿ ಮಾಡಲ್ಪಟ್ಟು ನಂತರ South Indian Inscriptions ಸಂಪುಟ ೨೦ರಲ್ಲಿ ಪ್ರಕಟಗೊಂಡಿವೆ. ಆದರೆ ಕುತೂಹಲಕಾರಿಯಾಗಿರುವ ಈ ಶಾಸನಗಳ ಓದಿನಲ್ಲಿ ಸಾಕಷ್ಟು ಅಸ್ಪಷ್ಟತೆಯಿದ್ದು ಅನೂಚಾನತೆಯ ಅಭಾವ ಕಂಡದ್ದರಿಂದ ನಾನು ಈ ಶಾಸನಗಳನ್ನು ಸ್ಥಳದಲ್ಲಿಯೇ ಪುನರ್ಪರಿಶೀಲಿಸಿದೆ. ಅದರ ಫಲವಾಗಿ ಈಗ SII, ಸಂಪುಟ ೨೦ರ ೨೩೨ನೇ ನಂಬರಿನ ಶಾಸನದ ಪೂರ್ತಿ ಪಠ್ಯ ಹಾಗೂ ೩೯೧ನೇ ನಂಬರಿನ ಶಾಸನದ ಹೆಚ್ಚು ಸ್ಪಷ್ಟ ಪರಿಷ್ಕೃತ ಪಠ್ಯ ಲಭ್ಯವಾಗಿವೆ. ಈ ಹೊಸ ಪಠ್ಯಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ಶಾಸನ ನಂ. ೧

ಲಕ್ಷ್ಮೇಶ್ವರದ ಶಂಖಬಸದಿಯ ಅಗ್ರಮಂಟಪದಲ್ಲಿ ಈಶಾನ್ಯ ಮೂಲೆಯ ಕಂಬದ ಮೂರು ಮುಖಗಳಲ್ಲಿರುವ ಶಾಸನ. ಅರಸ ಮೊದಲನೆಯ ದೇವರಾಯ. ಭಾಷೆ, ಲಿಪಿ ಕನ್ನಡ. ಮಿತಿ ಶಾಲಿವಾಹನ ಶಕವರ್ಷ ೧೩೩೪, ನಂದನ ಸಂವತ್ಸರ, ಮಾರ್ಗಶಿರ ಶುದ್ಧ ೨; ಕ್ರಿ.ಶ. ೧೪೧೨, ನವಂಬರ್ ೨, ಆದಿತ್ಯವಾರ.

ಪಠ್ಯ

ಕಂಬದ ಪೂರ್ವಮುಖ

೧. ಸ್ವಸ್ತಿ ಶ್ರೀ ಜಯಾಭ್ಯುದಯ ಶಕವರ್ಷ ೧೩೩೪ನೇ ನಂದನ ಸಂವತ್ಸರದ ಮಾರ್ಗಶಿರ ಶು. ೨

೨. ಆ ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಹರಿಹರಮಹಾ

೩. ರಾಯರ ಕುಮಾರರು ದೇವರಾಯ ಮಹಾರಾಯರು ಪ್ರಿಥ್ವೀರಾಜ್ಯಂ ಗೈವಲ್ಲಿ ತತ್ಪಾ

೪. ದಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನ ನಾಗಂಣ ದಂಣಾಯ್ಕರಿಗೆ ಹುಲಿಗೆರೆ

೫. ಯ ಶಂಖರಬಸ್ತಿಯ ಹೇಮದೇವಾಚಾರ್ಯ್ಯರ್ಕಂ ಆ ಹುಲಿಗೆರೆಯ ಸೋಮ್ಮೆ

೬. ದೇವರ ಸ್ಥಾನದಾಚಾರ್ಯ್ಯರ ಶಿವರಾಮ್ಮೈಯ್ಯಗಳಿಗೆಯು ಆ ಊರ ತಂಮ ತಂಮ ದೇವ

೭. ಸ್ಥಾನಂಗಳ ಭೂಮಿಯ ವಿವಾದದಲ್ಲಿ ಆ ಯೆರಡು ಸ್ಥಾನದಾಚಾರ್ಯ್ಯರು

೮. ನಾಗಂಣದಂಣಾಯ್ಕರಿಗೆ ಬಿಂನಾಹಂ ಮಾಡಲಾಗಿ ಪುರೋಹಿತ ಸಂ

೯. ಗಮದೇವಗಳು ಅರಮನೆಯ ವಿದ್ವಾಂಸುಗಳು ಕೂಡಿಕೊಂಡು ಯಿತ್ತಂಡ

೧೦. ದ ಶಾಸನವನು ವೋದಿಸಿ ನೋಡಿ ತಿದ್ದಿ ಕೊಡಹೇಳಿ ಕಟ್ಟಿಗೆಯ ಷೀಧರಹೆಗ್ಗನಾಯಕ
೧೧. ರಾಜಾಧ್ಯಕ್ಷವ ಕೊಟ್ಟು ಕಳಿಹಿದಲ್ಲಿ ಹೇಂದೇವಾಚಾರ್ಯ್ಯರಿಗೆ ನಿರ್ನ್ನೇಸಿ ಕೊಟ್ಟ
೧೨. ಜಯಪತ್ರದ ಕ್ರಮವೆಂತೆಂದೊಡೆ (II *) ನೀಉ ಯಿತ್ತಂಡಉ ವಿದ್ವಾಂನುಗಳು ಹೇಳಿದ
೧೩. ಹಾಗೆ ಕೇಳುವೆಉ ಯೆಂದು ದಂಣಾಯ್ಕರ ಹೆಸರ ಆಣೆ ವೋಲೆಗಳನು
೧೪. ಕೊಟ್ಟಲ್ಲಿ ತಿದ್ದಿದ ಪ್ರಕಾರ ಆ ಹೇಮದೇವಾಚಾರ್ಯ್ಯರ ಕೈಯಲಿ ಯಿದ್ದ ಶಾಸನಂ
೧೫. ಗಳನು ವೋದಿ ನೋಡಲಾಗಿ ಆ ಭೂಮಿಯ ವ(ಳ)ಯವನು ಪಟದಲ್ಲಿ ಬಂದು ನೋಡಿ ಆ
೧೬. ಹೇಮದೇವಾಚಾರ್ಯ್ಯರ ಕೈಯಲಿ ಇದ್ದ ಶಾಸ(ನ *) ಸ್ತಿತಿಯನು ಕಂಡು ಅ ಶಿವರಾಮ್ಮೆಯಗ
೧೭. ಳ ಅಂಣ ಗಂಗಂಣ ಅಯ್ಯಗಳ ಕೈಯಲ್ಲಿದ್ದ ಶಾಸನಂಗಳನು ವೋದಿ ನೋಡಲಾಗಿ
೧೮. ಆ ಹುಲಿಗೆರೆ ಯೀಶಾಂನ್ಯದ ಮಂನೆಯ ಒಲನೊಳಗೆ ನಾಲ್ವತ್ತು ಮತ್ತರದ ಭೂ
೧೯. ಮಿಯ ಚತುಸ್ಸೀಮೆಯನು ಬರೆದು ನೋಡಲಾಗಿ ತೆಂಕಲು (ಬೆಳ್ಳ)ನೂರ ಮೂಡ
೨೦. ದ ಪಡುವಲು ಶಂಖರಬಸ್ತಿಯ ಶಾಸನಸ್ಥವಹ ಯೇಕ ನಿವರ್ತ್ತನಾಂತರವಹ ಉ
೨೧. ಜಲಯುಗಲಪ್ರಮಾಣಿನ ವಳೆಯದ ಅವಧಿಯಾಗಿ ಯಿನಿತು ಬಡಗ ಮೂಡಲು
೨೨. ಶಂಖರಬಸ್ತಿಯ ಸೀಮೆಯನು ನಾಲ್ವತು ಮತ್ತರ ಭೂಮಿಯ ಚತುಸ್ಸೀಮೆಯ ವಳೆಯಉ
೨೩. ಶಂಖರಬಸ್ತಿಯ ಭೂಮಿಯ ವಳಯನವನು ಹೊಕ್ಕ ಕುರುಹೆ ಕಂಡದಿಲ್ಲ (I*) ಆ ವಿಷಯವಾಗಿ ಸಂ
೨೪. ವಾಜವ ಮಾಡಸಲ್ಲದು (I*) ಸೀವಟದರುಸಾವಿರದ ಮೂಡ ವಲದೊಳಗಣ ಹದಿನಾಲ್ಕು ಮ
೨೫. ತ್ತರ ಭೂಮಿ ಶಂಖರಬಸ್ತಿಯ ಶಾಸನಪ್ರಮಾಣಿತ ಭೂಮಿಯ ಒಳಗೆ ಹೊಕ್ಕ
೨೬. ಕುರುಹ ಕಂಡದಿಲ್ಲವಾಗಿ ಅ ಭೂಮಿವಿಡಿದು ಸಂವಾಜವ ಮಾಡಸಲ್ಲದು (II*) ಆ ಹೇ
೨೭. ಮದೇವಾಚಾರ್ಯ್ಯರು ಕರೆದು ಶಿವರಾಮಯ್ಯಗಳು ಯೇಸುಕಾಲ (ತೊ)

ಕಂಬದ ದಕ್ಷಿಣ ಮುಖ

೨೮. ಡಗಿ ಸಂವಾಜವ ಮಾಡುತಂ ಯಿದಾರೆಂದು ಕೇಳಲಾಗಿ ಕುದನೂರ ಗಿರಿಯಂಣಗಳು ಬೊಮ್ಮೆ

೨೯. ಯನ ಸಾವಪ್ಪ ದೇಹರದ ಸೋವಪ್ಪ ಯೀ ಮೂವರು ಮಾಡುವ ಮೂರು ಕಯ್ಯನು ಅವರು

೩೦. ವ್ಯವಸಾಯವ ಮಾಡಿವೆಂದರೆ ನಾಉ ಮಾಡಲಿಸದ ಆಣೆಯಿಡುತ ಬಹೆಉ (I*) ಆಣೆ

೩೧. ಮೀರಿ ಬಲಮೆಯಿಂದ ಶಿವರಾಮ್ಮೆಯ್ಯಗಳವರು ಮಾಡುತ್ತ ಬಹರು (I*) ನಾಉ ನಂಮ ಕೈಗೆ ಸಿಕ್ಕಿದ

೩೨. ಅಷ್ಟನು ಕೊಂಬೆಉ (I*) ಕಾಲಕಾಲದ ಬೆಳೆಯನು ನಂಮ ಕೈಗೆ ಸಿಕ್ಕಿದಷ್ಟನು ಕೊಂಬೆಉ (I*) ಯೀ ಸ್ಥಿತಿಯ

೩೩. ನು ಹುಲಿಗೆರೆಯ ನಾಗಗೌಡ ಸಮಸ್ತ ನಾಗಿಸೆಟ್ಟಿ ಮುಂಡರ ಕಾಮಿಸೆಟ್ಟಿ ಗಡ್ಡದ ಕೇತಿಸೆಟ್ಟಿಯ ಮ

೩೪. ಗ (ಪ)ಳಲಿಸೆಟ್ಟಿ ಮುಂತಾದ ಗೌಡು ಪ್ರಜೆಗಳು ನಾಉ ಆಣೆಯಿಡುವದನು ಶಿವರಾಮಯ್ಯಗಳವ

೩೫. ರ ಮಾಡೆ ಕಾಡಿ ಬೆಳೆಯ ಕೊಂಬಹದನು ಕಾಲ ಕಾಲದ ಅಸೇದವನು ಹುಲಿಗೆರೆಯ ನಾಗಗೌ

೩೬. ಡ ಮುಂತಾದ ಗೌಡು ಪ್ರಜೆಗಳು ಬಲ್ಲರೆಂದು ಹೇಮದೇವಾಚಾರ್ಯ್ಯರು ಹೇಳಲಾಗಿ (II*) ವಿದ್ವಾಂ

೩೭. ನುಗಳು ಶಿವರಾಮಯ್ಯಂಗಳ ಅಂಣ ಗಂಗಣ್ಣೆಯಗಳನು ಕರೆದು ಹೇಮದೇವಾಚಾ

೩೮. ರ್ಯ್ಯರನು ಕರೆದು ಹರಿಹರರಾಯರ ಕಾಲತೊಡಗಿ ಯಿಂದು ಪರಿಯಂತರದಲು ಹು

೩೯. ಲಿಗೆರೆಯ ನಾಗಗೌಡ ಮುಂತಾದ ಗೌಡು ಪ್ರಜೆಗಳು ಹರಿಹರರಾಯರ ಮನ್ವಂತರ

೪೦. ಪರಿಯಂತವಾಗಿ ಯೀ ಮೂರು ಕೈಯ್ಯನು ನಿರಾಸೇದದಲ್ಲಿ ಶಿವರಾಮ ಅಯ್ಯಗಳು ಭೋಗಿಸಿ

೪೧. ಹರೆಂದು ಹುಲಿಗೆರೆಯ ನಾಗಗೌಡ ಮುಂತಾದ ಗೌಡು ಪ್ರಜೆಗಳೆಂದರೆ ಆ ಹೇಮದೇವಾಚಾರ್ಯ್ಯ

೪೨. ರು ಆ ಮೂರು ಕೆಯ್ಯನು ಶಿವರಾಮ ಅಯ್ಯಗಳಿಗೆ ಬಿಡುವರು (I*) ಯೀ ಮೂರು ಕೆಯ್ಯನು ಹೇಮದೇವಾ

೪೩. ಚಾರ್ಯ್ಯರವರು ಅಸೇಧವನು ಮಾಡುತಿರಲಾಗಿ ಆಕ್ರಮಣದಲ್ಲಿ ಆ ಶಿವರಾಮಯ್ಯಗಳವ

೪೪. ರು ಭೋಗಿಸುತಂ ಯಿದ್ದಾರೆಂದು ನಾಗಗೌಡ ಮುಂತಾದ ಗೌಡುಪ್ರಜೆಗಳೆಂದರೆ ಆ ಮೂರು ಕೈ

೪೫. ಯೂ ಹೇಮದೇವಾಚಾರ್‍ಯ್ಯರಿಗೆ ಸಲ್ಲುವಲು (I*) ಆ ನಾಗಗೌಡ ಮುಂತಾದ ಪ್ರಜೆಗಳು ಹೇಳಿದ ಮರಿಯಾ

೪೬. ದೆಯಲು ನೀಉ ಯಿತ್ತಂಡಉ ತಿದ್ದಿಕೊಂಡೆವೆಂದು ನಾಗಂಣದಂಣಾಯ್ಕರ ಹೆಸರ ಆಣೆಭಾರದ ಓ

೪೭. ಲೆಯನು ಬೇಡಿದರೆ ಆ ಹೇಮದೇವಾಚಾರ್‍ಯ್ಯರು ನಾಗಗೌಡ ಮುಂತಾದ ಗೌಡು ಪ್ರಜೆಗಳು ಹೇಳಿ

೪೮. ದ ಹಾಗೆ ಕೇಳುವೆಉ ಯೆಂದು ದಂಣಾಯ್ಕರ ಹೆಸರ ಆಣೆಭಾರದ ಓಲೆಯನು ಕೊಟ್ಟರು (II*) ಆ

೪೯. ಶಿವರಾಮ ಅಯ್ಯಗಳ ಅಂಣ ಗಂಗಂಣ್ಣೆಯಗಳು ನಾಗಗೌಡ ಮುಂತಾದ ಪ್ರಜೆಗಳು ಹೇ

೫೦. ಳಿದಹಾಗೆ ಕೇಳುವೆಉ ಯೆಂದು ದಂಣಾಯ್ಕರ ಹೆಸರ ಆಣೆ ಭಾರದ ವೋಲೆಯನು ಬೇಡಿದರೆ

೫೧. ಕುಡದೆ ಹಿಂವೆಟ್ಟಿದರಾಗಿ ತಂಮ ಕೈಯಲ್ಲಿದ್ದ ಸೋಮನಾಥ'ದೇವರ ಶಾಸನಂಗಳವೊಳಗೆ ಶಂ

೫೨. ಖರಬಸ್ತಿಯ ಭೂಮಿಯ ತಂಮ ಶಾಸನಂಗಳೊಳಯಿತೆ ಅವಧಿಯಾಗಿ ಯಿದಿತಾಗಿ ಆ ಹುಲಿ

೫೩. ಗೆರೆಯ ಯೀಶಾನ್ಯದ ಮಂನೆಯ ವೊಲದ ನಾಲ್ವತು ಮತ್ತರು ಭೂಮಿಯೂ ಶಂಖರಬಸ್ತಿ

೫೪. ಯ ಭೂಮಿಯ ವಳಯಸ್ಥವಹ ಭೂಮಿವೊಳಗೆ ಹೊಕ್ಕ ಕುರುಹ ಕಂಡದಿಲ್ಲವಾಗಿಸಿದ

೫೫. ಉದ ಆರುಸಾವಿರದ ಮೂಡ ವಲದೊಳಗೆ ಹದಿನಾಲ್ಕು ಮತ್ತರ ಭೂಮಿಯೂ ಶಂಖರಬಸ್ತಿ

೫೬. ಯ ಭೂಮಿಯುವೊಳಗೆ ಹೊಕ್ಕ ಕುರುಹ ಕಂಡದಿಲ್ಲವಾಗಿಯೂ ಆ ಹೇಮದೇವಾಚಾರ್‍ಯ್ಯ

೫೭. ರ ಕೈಯಲ್ಲಿದ್ದ ಶಾಸನಸ್ಥಂಗಳಹ ಪಂಚಶತಷಟ್ಸತ ನಿವರ್‍ತ್ತನ ಭೂಮಿಯ ವಳ

೫೮. ಯಸ್ತಿತಿಯನೂ ಸಾಸೆನಪ್ರಣೀ (ತ) ಸಲುತವೆವಾಗಿ ಶಿವರಾಮಯ್ಯಂಗಳು ಆ ಭೂಮಿ

ಕಂಬದ ಪಶ್ಚಿಮ ಮುಖ

೫೯. ಯ ವಿಷಯವಾಗಿ ಹೇಮದೇವಾಚಾರ್‍ಯ್ಯರ ಕೂಡೆ ವಿವಾದವನು ಮಾಡ ಸಲ್ಲದೆಂದು

೬೦. ಶ್ರೀ ವೀರಪ್ರತಾಪದೇವರಾಯಮಹಾರಾಯರ ಅರಮನೆಯ ಪುರೋಹಿತ ಸಂಗಮದೇವ

೬೧. ಗಳು ವಿದ್ವಾಂಸುಗಳು ಹೇಮದೇವಾಚಾರ್ಯ್ಯರಿಗೆ ನಿರ್ನ್ನೈಸಿ ಕೊಟ್ಟ ಜಯಪತ್ರ (II*) ಯೀ

೬೨. ಅರ್ಥ್ಥಕ್ಕೆ ಸಂಗಮದೇವಗಳ ವಿದ್ವಾಂಸುಗಳ ಸುಹಸ್ತದ ಬರಹಂಗಳು (II*) ಸಂಗ

೬೩. ಮದೇವಗಳ ಬರಹ (I*) ಶ್ರೀಧರದೀಕ್ಷಿತರ ಬರಹ (I*) ವಿರೂಪಾಕ್ಷಭಟ್ಟರ ಬರಹ (I*) ಚೆಂನಕ್ರು

೬೪. ಷ್ಣದೀಕ್ಷಿತರ ಬರಹ (I*) ಬುಕ್ಕಂಣಗಳ ಬರಹ (I*) ತಾರ್ಕ್ಕಿಕ ನರಹರಿಭಟ್ಟರ ಬರಹ (I*) ಶ್ರೀ ಶ್ರೀ (II*)

ಶಾಸನ ನಂ. ೨

ಸೋಮೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಶಿಲಾಫಲಕದ ತುಂಡು. ಭಾಷೆ ಮತ್ತು ಲಿಪಿ ಕನ್ನಡ. ಮಿತಿ ಶಾಲಿವಾಹನಶಕವರ್ಷ ೧೪(೬೦), ವಿಳಂಬಿ ಸಂವತ್ಸರ, ಪ್ರಥಮಜ್ಯೇಷ್ಠ ಶುದ್ಧ ೧, ಸೋಮವಾರ; ಕ್ರಿ.ಶ. ೧೫೩೮, ಎಪ್ರಿಲ್ ೨೯ (ಅಥವಾ ಶಾಲಿವಾಹನಶಕವರ್ಷ ೧೪(೦೦) ಆಗಿದ್ದರೆ ಕ್ರಿ.ಶ. ೧೪೭೮).

ಪಠ್ಯ

೧. ....ಮಲ್ಲಿಕಾರ್ಜನ (ಮಹಾ) .....

೨. ...ಕರಾಬ್ಜಜೋ ಜಿತಜಗ: ಶ್ರೀಕಾಳಹಸ್ತೀಶ್ವರಃ ‖ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನಶಕವರುಷ ೧೪..

೩. ನೆಯ ವಿಳಂಬಿ ಸಂವತ್ಸರದ ಪ್ರಥಮ ಜೇಷ್ಟ ಶು ೧ ಸೋಮವಾರದಲ್ಲು ಶ್ರೀಮದ್ದಕ್ಷಿಣ ಸೋಮೇಶ್ವರದೇವರ ದಿವ್ಯಶೀಪಾದಪದ್ಮಾ

೪. ರಾಧಕರಪ್ಪ ದ್ಯಾವಾಪೃಥ್ವೀಮಹಾಮಹತ್ತಿನೊಳಗಾದ ಕಾಳಹಸ್ತಿದೇವರು ಶಿವರಾಮದೇವರು ಗಣಂಗಳು ಬಸ

೫. (ವರಾಜ) ವೊಡೆಯರು ಮುಖ್ಯವಾದ ಮರ್ತ್ತ್ಯಲೋಕದ ಮಹಾಗಣಂಗಳಿಗೆ ಜಿನ

೬. (ಸಮಯ) ಶ್ರೇಷ್ಟರಾದ ಶಂಖದಬಸದಿಯ ಸಂಖಣಾಚಾರ್ಯ್ಯ ಹೇಮಣಾಚಾರ್ಯ್ಯರು ಮುಖ್ಯವಾ

೭. (ಗಿ ಬ)ರು ಕೊಟ್ಟ ಜಯಪತ್ರಿಕಾಕ್ರಮವೆಂತೆಂದಡೆ‖ ನಾಲು ನಿಂಮ ಸೋಮೇಶ್ವರದೇವರ

೮. (ಉತ್ಸವಗಳಿಗೆ) ಸಲುವ ಅಷ್ಟದಿಕ್ಪಾಲಾದಿಗಳ ಧ್ವಜಪತಾಕಾದಿಗಲನು ನಾಲು ನಮ್ಮ ಶಂ

೯. (ಖದ)ಬಸ್ತಿಯ ಶಾಂತಿತೀರ್ಥ್ಥಕರರೋತ್ಸಾಹ ಸಮೆಯ ಪ್ರಜ್ಞಾಹೀನತೆಯಿಂದ ಮೆರೆಸಿದ ಸಂಬಂಧ ನೀಉ

೧೦. ಮಾಡಿದ ಶಿಕ್ಷೆಗೊಳಗಾಗಿ ಕಾಲತ್ರಯದೊಳುಂ ವೇದಶಾಸ್ತ್ರಪುರಾಣಾಗಮಾದಿಗಳೊಳುಂ ಸಲ್ಲವೆಂದು ಶ್ರೀ

೧೧. ಕಾಳಹಸ್ತಿದೇವರ ಸತ್ಯವಚನಸಮುದಾಯದಿಂ ಕೇಳಿದ ಜಿಯಂಬಟ್ಟು ನಾಲು ನಂಮ ಜಿನಸಮಯಕ್ಕೆ ಅಷ್ಟ

೧೨. ದಿಕ್ಪಾಲಾದಿಗಳು ಧ್ವಜಪತಾಕಾದಿಗಳು ಸಲ್ಲವೆಂದು ಕೊಟ್ಟ ಜಯಪತ್ರಿಕೆ ॥ ಶ್ರೀ ಸೋಮನಾಥಂ ಗಣಕುಮಾರ(ಗ)

೧೩. (ಣಾ)ಧಿನಾಯಕನ ರಕ್ಷಿಸಲಿ ॥ ನಾಕೇ ತ್ವಂ ಕಾಳಹಸ್ತೀಂದ್ರೋ ಲೋಕೇಸ್ಮಿನ್ಕಾಳಹಸ್ತಿರಾಟ್ ವಾಕ್ಯಾತುರ್ಯ್ಯಗುಣಾದಿ

೧೪. ನಿಧೇ ಕೋತ್ರ ಭುವಿ ರಾಜತೇ ॥ ಶ್ರೀ ಸೋಮನಾಥ ॥ ಯೀ ಜಯಪತ್ರಿಕೆಯ ಪಡೆದ ಕರ್ತ್ತರುಗಳು

೧೫. ...ಯ ಮಠದ ಲಿಂಗಣೊಡೆಯರು ದೇವರ ಪೂಜೆಯ ದೇವರು ಅಂನದಾನಿದೇವರು ಭೋಗವ ... ದೇವರು (ಆ)ರಾಧ್ಯ

೧೬. ದೇವರು ವೀರಬಸ(ವ*) ರಾಜದೇವರು ನಾಡಕಂಥೆಯದೇವರು ಭೈ(ರೊಡೆಯರು ಭಟ್ಟವೊ)ಡೆಯರು

೧೭. ರಾಚವೆಟ್ಟಿಯೊಡೆಯರೊಳಗಾದ ಹುಲಿಗೆರೆಯ ಪುರನಿವಾಸಿಗಳಪ್ಪ ಮರ್ತ್ಯಲೋಕದ ಮಹಾಗಣಂಗಳು ॥ ॥ ಶ್ರೀ (II*)

ಕೃತಜ್ಞತೆಗಳು

ಈ ಶಾಸನಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಲಕ್ಷೇಶ್ವರದ ಸೋಮನಾಥ ದೇವಾಲಯದ ಅರ್ಚಕರು ಹಾಗೂ ಶಂಖಬಸ್ತಿಯ ಟ್ರಸ್ಟಿಗಳಲ್ಲಿ ಒಬ್ಬರಾಗಿರುವ ಪಾಟೀಲರು ಸಾಕಷ್ಟು ಸಹಕರಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ನನ್ನ ವಿದ್ಯಾರ್ಥಿಮಿತ್ರರಾದ ಶ್ರೀಯುತ ತೇರದಾಳ ಮತ್ತು ತಬೋಜಿಯವರು ಒಂದಿಗಿದ್ದು ಸಹಾಯ ಮಾಡಿದ್ದಾರೆ. ಇವರೆಲ್ಲರಿಗೂ ಲೇಖಕನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಅಡಿಟಿಪ್ಪಣಿಗಳು

೧. ಲಕ್ಷೇಶ್ವರದ ಕುರಿತು ಶಾಸನ, ವಾಸ್ತು ಇತ್ಯಾದಿಗಳ ಅಧ್ಯಯನದ ವಿವರಗಳ ಬಗ್ಗೆ ನೋಡಿ, ಸದಾನಂದ ಕನವಳ್ಳಿ ಮತ್ತು ಚನ್ನಪ್ಪ ಕೆರೆಮನಿ (ಸಂಪಾದಕರು), ೧೯೭೨, ತಿರುಳ್ಗನ್ನಡ ಪುಲಿಗೆರೆ (ಪಂಪ ಪ್ರಕಾಶನ, ಲಕ್ಷೇಶ್ವರ). ಆದರೆ ಜೈನ - ಶೈವರ ವ್ಯಾಜ್ಯಗಳ ಬಗ್ಗೆ ಈ ಕೃತಿ ಮೌನವಾಗಿದೆ. ಲಕ್ಷೇಶ್ವರದ ಶಾಸನಗಳು Indian Antiquary, VII (Pp.104, 106-07); Epigraphia Indiaca VI (Pp.163-167); XIV (Pp.188-191); XVI (Pp.35-44; 58-66); South Indian Inscriptions XVIII; XX ಸಂಪುಟಗಳಲ್ಲಿ ಪ್ರಕಟಗೊಂಡಿವೆ.

೨. ಸುಂಕಾಪುರ ಎಂ.ಎಸ್. ೧೯೭೬, ಮಹಾಕವಿ ಹಂಪೆಯ ಹರಿಹರದೇವಕೃತ ನೂತನ ಪುರಾತನರ ರಗಳೆಗಳು, "ಆದಯ್ಯನ ರಗಳೆ", ಸ್ಥಲ ೨, ಪು. ೩೭೦ (ಕ.ವಿ.ವಿ. ಧಾರವಾಡ).

೩. ಅದೇ, ಸ್ಥಲ ೩, ಪು. ೩೩೩-೩೩೫.

ನಿಂದಿರೆ ಸವಣರ್ ಲಕ್ಷದ ಸಂಖ್ಯೆಗೆ
ಬಂದುರವಣಿಸುತ್ತಂ ಕೋಪಂ ಮಿಗೆ
ಕಂಡಾದಯ್ಯಂ ಬೇಡೆಂದೆನುತಿರೆ
ತಂಡದ ಜೈನರನುರೆ ಗರ್ಜಿಸುತ್ತಿರೆ

...

ಬರಲಾದೈಯ್ಯಂ ಗರ್ಜಿಸಿ ನುಡಿದಂ
ಆರುಹವ್ರತಿಗಳನ್ನೆಲರ ಜಡಿದಂ

...

ಕ್ಷಣದಿಂದೊಂದಾಯುಧಮಂ ನೀಡಲು
ಕೊಂಡಾದಯ್ಯಂ ಶಿವನಂ ನೆನೆವುತೆ
ಕಂಡುರವಣಿಸುತೆ ಜೈನರನಟ್ಟುತೆ

...

ಈ ತೆರದಿಂ ಬತ್ತೀಸಾಯುಧದಿಂ
ಪಾತಕರಂ ಕೊಲುತಿರೆ ಕಡುಭರದಿಂ
ಕಂಡಾ ಜೈನರ ತಿಂತಿಣಿಯೆಲ್ಲಂ ...
ಮುಂತಾದ ಪದ್ಯಗಳನ್ನು ನೋಡಿ.

❑❑

೯

ಕರ್ನಾಟಕದ ವಿಜಯನಗರ ಶಾಸನಗಳ ಪ್ರಸರಣ ಮಾದರಿ

* ಡಾ. ಸಿ.ಎಸ್.ವಾಸುದೇವನ್

ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೪ನೆಯ ಶತಮಾನದಲ್ಲಿ ಸ್ಥಾಪನೆ ಆಯಿತು. ಮುಸ್ಲಿಂರ ಆಕ್ರಮಣವನ್ನು ಧೈರ್ಯವಾಗಿ ಎದುರಿಸಿ, ಇಡೀ ದಕ್ಷಿಣಭಾರತದಲ್ಲಿದ್ದಂತಹ ರಾಜಕೀಯ ಅಭದ್ರತೆಯನ್ನು ಹೋಗಲಾಡಿಸಿ ಸುಭದ್ರವಾದ ಆಡಳಿತವನ್ನು ವಿಜಯನಗರದ ರಸರುಗಳು ಸುಮಾರು ಮುನ್ನೂರು ವರ್ಷಗಳವರೆಗೆ ನೀಡಿದರು. ದಕ್ಷಿಣ ಭಾರತವು ಈ ಅರಸರ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರದರಸರು ವಿವಿಧ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬೆಂಬಲ ನೀಡಿದರು. ಸಾಮ್ರಾಜ್ಯದ ಉತ್ತರ ದಿಕ್ಕಿನಿಂದ ಆಕ್ರಮಣದ ಹೆದರಿಕೆಯು ಸದಾಕಾಲವೂ ಇದ್ದರೂ ವಿಜಯನಗರ ದರಸರು ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಇತರೆ ಕಾರ್ಯಗಳಲ್ಲಿ ತಮ್ಮನ್ನು ಸದಾಕಾಲವೂ ತೊಡಗಿಸಿಕೊಂಡಿದ್ದರು.

ಮಹಮ್ಮದೀಯರ ಆಕ್ರಮಣಕ್ಕೆ ಸದಾ ಕಾಲವೂ ಎಚ್ಚರಿಕೆಯಿಂದಿರಬೇಕಾದ ಪರಿಸ್ಥಿತಿ ಇರುವಾಗಲೂ ಈ ವಿಜಯನಗರದರಸರು ಸುಭದ್ರ ಆಡಳಿತವನ್ನು ನೀಡುವುದರೊಂದಿಗೆ ಕಾಲದಿಂದ ಕಾಲಕ್ಕೆ ತಮ್ಮ ರಾಜ್ಯದ ಗಡಿಯನ್ನು ವಿಸ್ತಾರ ಮಾಡಿಕೊಳ್ಳುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ತಮ್ಮ ರಾಜ್ಯದ ಗಡಿಯ ರಕ್ಷಣೆಯ ಭಾರದೊಂದಿಗೆ, ಗಡಿವಿಸ್ತರಣೆಯನ್ನು ಸತತವಾಗಿ ಮಾಡುತ್ತಲೇ ಬಂದರು.[೧] ಅವರ ರಾಜ್ಯದ ಎಲ್ಲೆಯು ಪೂರ್ವದಲ್ಲಿ ಬಂಗಾಳಕೊಲ್ಲಿಯಿಂದ ಪಶ್ಚಿಮದ ಅರಬ್ಬೀ ಸಮುದ್ರವರೆಗೆ, ಉತ್ತರದ ಕೃಷ್ಣಾ

ನದಿಯಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ವಿಜಯನಗರ ಸಾಮ್ರಾಜ್ಯವು ವಿಸ್ತರಿಸಿತ್ತೆಂಬುದು ಕಂಡುಬಂದಿದೆ. ಇಂದಿನ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಒರಿಸ್ಸಾದ ಕೆಲವು ಭಾಗಗಳು ಅಂದಿನ ವಿಜಯನಗರ ಸಾಮ್ರಾಜ್ಯವಾಗಿತ್ತು.[೨]

ವಿಜಯನಗರ ಸಾಮ್ರಾಜ್ಯದ ರಾಜಧಾನಿಯು ಹಂಪೆಯಾಗಿದ್ದಿತು. ಕರ್ನಾಟಕದಲ್ಲಿರುವ ೨೬ ಜಿಲ್ಲೆಗಳಲ್ಲಿ ವಿಜಯನಗರ ಕಾಲದ ಸುಮಾರು ೩,೦೦೦ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಶಾಸನಗಳು ದೊರಕಿವೆ.[೩] ಶಾಸನಗಳ ಸರ್ವೇಕ್ಷಣಾ ಕಾರ್ಯದಿಂದ ಶಾಸನಗಳ ಸಂಖ್ಯೆಯು ಹೆಚ್ಚುತ್ತಿದೆ.[೪] ಅದೇ ಸಮಯದಲ್ಲಿ ನೂರಾರು ಶಾಸನಗಳು ಹಲವಾರು ಕಾರಣಗಳಿಂದ ನಶಿಸಿಹೋಗುತ್ತಲಿವೆ. ಇಲ್ಲಿಯವರೆಗೆ ಲಭ್ಯವಿರುವ ಶಾಸನಗಳು, ರಾಜ್ಯದ ಉತ್ತರ ಭಾಗಗಳಲ್ಲಿ, ಕಡಿಮೆ ಸಂಖ್ಯೆಯಲ್ಲಿ ದೊರಕಿದ್ದು ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಅಧಿಕ ಸಂಖ್ಯೆಯಲ್ಲಿ ದೊರಕಿರುವುದು ಗಮನಾರ್ಹ ಸಂಗತಿ.[೫] ದಕ್ಷಿಣ ಪ್ರಾಂತ್ಯದಲ್ಲಿ ದೊರಕಿರುವ ವಿಜಯನಗರ ಕಾಲದ ಶಾಸನಗಳು ಬೇರೆ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ದೊರಕಿರುವುದಕ್ಕಿಂತ ಕಡಿಮೆಯಾಗಿರುವುದು ಕುತೂಹಲಕಾರಿಯಾದ ಸಂಗತಿ. ಈ ರೀತಿಯ ವೈವಿಧ್ಯತೆ ಮತ್ತು ವೈಪರಿತ್ಯಗಳಿಗೆ ಇರಬಹುದಾದ ಕಾರಣವನ್ನು ಅರಿಯುವುದೇ, ಪ್ರಸ್ತುತ ಪ್ರಬಂಧದ ಉದ್ದೇಶ.

ಮನುಷ್ಯನ ಸಾಂಸ್ಕೃತಿಕ ಬೆಳವಣಿಗೆಗೆ ಮತ್ತು ವಿಕಸನಕ್ಕೆ ಭೌಗೋಳಿಕ ಹಿನ್ನೆಲೆಯು ಅತ್ಯಂತ ಅವಶ್ಯಕವೆಂದು ಬಿ.ಸುಬ್ಬರಾವ್ ಅವರು ತಮ್ಮ "ದಿ ಪರ್ಸನಾಲಿಟಿ ಆಫ್ ಇಂಡಿಯಾ" ಎಂಬ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದಾರೆ.[೬] ಭೌಗೋಳಿಕ ವೈವಿಧ್ಯತೆಯು ಕಾಲ ಮತ್ತು ಪ್ರಾಂತ್ಯದಿಂದ ಬೇರೆಯಾಗಿದ್ದು, ಸಾಂಸ್ಕೃತಿಕ ವಿಕಸನದಲ್ಲಿ ಅದು ಮುಖ್ಯಪಾತ್ರ ವಹಿಸುತ್ತದೆಂದು ಸಹ ಅವರು ತೋರಿಸಿಕೊಟ್ಟಿದ್ದಾರೆ. ಅದರಂತೆ ಭೌಗೋಳಿಕ ಪರಿಸರ ಮತ್ತು ಮನುಷ್ಯನ ವಿಕಸನವನ್ನು ಬೇರ್ಪಡಿಸಲು ಆಗುವುದಿಲ್ಲ ಮತ್ತು ಅವೆರಡರ ನಡುವೆ ಸಾವಯವ ಸಂಬಂಧವಿರುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಪ್ರಾಚೀನ ಭಾರತವನ್ನು ಒಳಗೊಂಡು, ಪ್ರಪಂಚದೆಲ್ಲೆಡೆಯಲ್ಲಿ ಮಾನವನ ನೆಲೆ ಮತ್ತು ನಾಗರಿಕತೆಗಳನ್ನು ನದಿ ಪಾತ್ರ ಅಥವಾ ನೀರಿನ ಸೆಲೆಗಳ ಸಮೀಪದಲ್ಲಿ ಉಗಮ ಮತ್ತು ವಿಕಾಸ ಹೊಂದಿರುವುದು ಕಂಡುಬಂದಿದೆ. ಕಾಂಸಯುಗ ಮತ್ತು ನವ ಶಿಲಾಯುಗದ ಪ್ರಾರಂಭಿಕ ವ್ಯವಸಾಯಿಗಳು ತಮ್ಮ ಕಸುಬಿಗೆ ಅತ್ಯಗತ್ಯವಾದ ನೀರಿಗೆ ನದಿಯನ್ನು ಮತ್ತು ಮಳೆಯನ್ನು ಆಶ್ರಯಿಸಿಕೊಂಡಿದ್ದರು. ಕೃಷಿ ಪ್ರಧಾನ ಸಮುದಾಯವಾದ ಕಾಂಸ ಮತ್ತು ನವಶಿಲಾಯಗುದ ನೆಲೆಗಳು ಮುಖ್ಯವಾಗಿ ಭಾರತದ ಸಿಂಧೂ, ಗಂಗಾ, ಯುಮುನಾ, ನರ್ಮದಾ, ಗೋದಾವರಿ, ಕೃಷ್ಣಾ, ಮಹಾನದಿ, ತಾಪಿ ಮತ್ತು ಇತರೇ ಮುಖ್ಯ ನದಿ ತೀರಗಳಲ್ಲಿಯೇ ಸಂಸ್ಕೃತಿ ಇದ್ದಿತು. ಇವುಗಳ ಜೊತೆಗೆ ಸಣ್ಣ ತೊರೆಗಳು, ಹಳ್ಳಗಳು ಸಹ ಒಂದು ಸಂಸ್ಕೃತಿಯ ಬೆಳವಣಿಗೆಗೆ ಆಧಾರವನ್ನು ನೀಡಿತ್ತೆಂಬುದು ಪ್ರಾಕ್ತನ ಅವಶೇಷಗಳಿಂದ ತಿಳಿದುಬಂದ ವಿಷಯವಾಗಿದೆ.

ಕರ್ನಾಟಕದಲ್ಲಿ ತುಂಗಭದ್ರಾ, ಕೃಷ್ಣಾ, ಕಾವೇರಿ, ಮುಖ್ಯ ನದಿಗಳಾದರೆ, ಕಪಿಲ, ಹೇಮಾವತಿ, ಶಿಂಷಾ ಮುಂತಾದವುಗಳು ಚಿಕ್ಕ ನದಿಪಾತ್ರಗಳಾಗಿವೆ. ಈ ನದಿಗಳು ಕರ್ನಾಟಕದ ನೀರಿನ ಪೂರೈಕೆಯನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಪೂರೈಸುತ್ತಾ ಬಂದಿರುವುದು ಸರಿಯಷ್ಟೆ. ಮಲೆನಾಡು, ಬಯಲುಸೀಮೆ, ದಟ್ಟವಾದ ಕಾಡಿನಿಂದ ಕೂಡಿದ ಪಶ್ಚಿಮ ಘಟ್ಟಗಳು, ವ್ಯವಸಾಯಕ್ಕೆ ಯೋಗ್ಯವಾದ ಭೂಭಾಗಗಳು, ಲಂಬವಾದ ಕರಾವಳಿ (ಕಡಲ ತೀರ) ಪ್ರದೇಶಗಳು ಮತ್ತು ಹವಾಮಾನ, ಮುಂಗಾರು ಮತ್ತು ಹಿಂಗಾರು ಮಳೆಗಳು ಕರ್ನಾಟಕದ ಭೌಗೋಳಿಕ ವೈವಿಧ್ಯತೆಯನ್ನು ಹೆಚ್ಚಿಸಿವೆಯೆಂದರೆ ತಪ್ಪಾಗಲಾದು.[೭] ಈ ಎಲ್ಲಾ ಭೌಗೋಳಿಕ ಅಂಶಗಳು ಕರ್ನಾಟಕದ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾದ ಪರಿಣಾಮವನ್ನು ಪ್ರಾಚೀನ ಕಾಲದಿಂದಲೂ ಬೀರುತ್ತಲೇ ಬಂದಿವೆ. ಒಂದು ಸಂಸ್ಕೃತಿಯ ವಿಕಸನಕ್ಕೆ ಭೌಗೋಳಿಕ ಅಂಶಗಳು ಹೇಗೆ ಮುಖ್ಯವಾಗುತ್ತದೆ ಮತ್ತು ಅವೆರಡೂ ಒಂದಕ್ಕೊಂದು ಅವಲಂಬಿತವಾಗಿರುತ್ತವೆ ಎಂಬುದು ಪ್ರಾಕ್ತನ ಅಧ್ಯಯನಗಳಿಂದ ತಿಳಿದುಬರುತ್ತದೆ. ಈ ಮಾತುಗಳು ಶಾಸನಗಳಿಗೂ ಸಹ ಸೂಕ್ತವಾಗಿ ಅನ್ವಯಿಸುತ್ತದೆ.

ಒಂದು ಪ್ರಾಂತ್ಯ ಅಥವಾ ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ದೊರಕುವ ಶಾಸನಗಳು, ಆ ಪ್ರಾಂತ್ಯ ಅಥವಾ ಪರಿಸರದಿಂದ ಪ್ರಭಾವಿತವಾಗಿರುತ್ತದೆ ಎಂಬುದಕ್ಕೆ ಅವುಗಳ ಸಂಖ್ಯೆ ಮತ್ತು ಅದರಲ್ಲಿರುವ ವಿಷಯಗಳಿಂದ ಅರಿಯಬಹುದು. ಇದರೊಂದಿಗೆ ಆ ಪ್ರಾಂತ್ಯದ ಜನಸಂಖ್ಯೆಯು ಮುಖ್ಯ ಪಾತ್ರವನ್ನು ವಹಿಸುತ್ತವೆ.

ಭೌಗೋಳಿಕ ಅಂಶವಾದ ಮಳೆಯು ಹಾಗೂ ಇನ್ನಿತರ ಭೌಗೋಳಿಕ ಲಕ್ಷಣಗಳಾದ ಭೂಮಿಯ ಹರವು, ಫಲವತತ್ತೆ, ಹವಾಮಾನ ಹಾಗೂ ಇತರೆ ಸಂಬಂಧಿ ವಿಷಯಗಳು ಸಂಸ್ಕೃತಿಯ ವಿಕಸನಕ್ಕೆ ಮುಖ್ಯವಾಗಿದೆ. ವಾರ್ಷಿಕವಾಗಿ ೨೦ "(೫೦೮ ಮಿಮಿ) ಯಿಂದ ೪೦" (೧೦೧೬ ಮಿಮಿ) ಯಷ್ಟು ಮಳೆಯಾಗುವ ಪ್ರದೇಶವು ವ್ಯವಸಾಯಕ್ಕೆ ಬಹಳ ಯೋಗ್ಯವಾದದ್ದು ಎಂದು ಸುಬ್ಬಾರಾವ್ ಅವರು ಸಮಂಜಸವಾಗಿ ತೋರಿಸಿಕೊಟ್ಟಿದ್ದಾರೆ. ಆದಿ ಇತಿಹಾಸ ಕಾಲದಿಂದಲೂ ಭಾರತದಲ್ಲಿ ಕೃಷಿಕನು ಮಳೆಯನ್ನೇ ಮುಖ್ಯವಾಗಿ ಅವಲಂಬಿಸಿದ್ದಾನೆ. ನದಿಯ ನೀರನ್ನು ಆಶ್ರಯಿಸಿದ್ದರೂ, ಮಳೆಯು ಕೃಷಿಗೆ ಅತ್ಯಂತ ಅವಶ್ಯಕ, ಇದರಂತೆಯೇ ಕರ್ನಾಟಕದಲ್ಲಿ, ಈ ಹಿಂದೆ ಆಗುತ್ತಿದ್ದ ವಾರ್ಷಿಕ ಮಳೆಯು, ವಿಜಯನಗರ ಶಾಸನಗಳ ಮೇಲೆ ಹೇಗೆ ಪ್ರಭಾವ ಬೀರಿತ್ತೆಂಬುದನ್ನು ಪರಿಶೀಲಿಸಲಾಗುವುದು. ಈ ನಿಟ್ಟಿನಲ್ಲಿ ಕೆಲವು ವಿದ್ವಾಂಸರಗಳು ಪ್ರಾರಂಭಿಕ ಅಧ್ಯಯನವನ್ನು ಕೈಗೊಂಡಿದ್ದಾರೆ. ನೊಬೊರೋ ಕರಾಶಿಮಾ ಮತ್ತು ಸಂಗಡಿಗರು,[೮] ಥಾಮಸ್ ಆರ್.ಟ್ರೌಟ್‌ಮನ್[೯] ಮುಂತಾದವರುಗಳ ಪ್ರಯತ್ನವು ನಿಜಕ್ಕೂ ಶ್ಲಾಘನೀಯ. ಆದರೆ ಇವರುಗಳು ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ಶಾಸನಗಳನ್ನು ಗಮನಿಸಿಲ್ಲ. ಸಿಂಥಿಯಾ ಥಾಲ್‌ಬೋಲ್ ಆಂಧ್ರದ ಕಾಕತೀಯ ಅರಸರ ಶಾಸನಗಳನ್ನಾಧರಿಸಿ ನಡೆಸಿರುವ ಅಧ್ಯಯನವು ಹೆಚ್ಚು

ಉಪಯುಕ್ತವಾಗಿದೆ.[೧೦] ಅವರು ಆಂಧ್ರಪ್ರದೇಶವನ್ನು ವಿವಿಧ ಭೌಗೋಳಿಕ ವಲಯಗಳನ್ನಾಗಿ ವಿಂಗಡಿಸಿ ಆ ಪ್ರದೇಶಗಳಲ್ಲಿರುವ ಶಾಸನಗಳ ನಿರ್ದಿಷ್ಟ ಸಂಖ್ಯೆಗಳನ್ನು ವಿಶ್ಲೇಷಿಸಿದ್ದಾರೆ.

ಕರ್ನಾಟಕದಲ್ಲಿ ದೊರಕಿರುವ ವಿಜಯನಗರ ಕಾಲದ ಶಾಸನಗಳ ಸಂಖ್ಯೆ, ಅವುಗಳ ವಿಷಯಗಳನ್ನು ವಾರ್ಷಿಕ ಮಳೆಯ ಪ್ರಮಾಣಕ್ಕೆ ಸರಿಹೊಂದಿಸಲಾಗುವುದು. ಕೋಷ್ಟಕದಲ್ಲಿ[೧೧] ತೋರಿಸಿಕೊಟ್ಟಂತೆ ಕರ್ನಾಟಕದಲ್ಲಿ ಆಗುವ ವಾರ್ಷಿಕ ಸರಾಸರಿ ಮಳೆಯ ಪ್ರಮಾಣವನ್ನು ನೀಡಲಾಗಿದೆ. ಇದರೊಂದಿಗೆ ಲಭ್ಯವಿರುವ ವಿಜಯನಗರ ಕಾಲದ ಶಾಸನಗಳ ಸಂಖ್ಯೆಯನ್ನು ನೀಡಲಾಗಿದೆ. ಈ ಕೋಷ್ಟಕವನ್ನು ಪರಿಶೀಲಿಸಿದಾಗ ತಿಳಿದುಬರುವ ಅಂಶವೆಂದರೆ, ಯಾವ ಜಿಲ್ಲೆಯಲ್ಲಿ ೬೦೦ ಮಿಮೀ ಯಿಂದ ೧೦೦೦ ಮಿಮಿಗಳಷ್ಟು ವಾರ್ಷಿಕ ಮಳೆಯಾಗುತ್ತದೆಯೋ ಆ ಜಿಲ್ಲೆಗಳಲ್ಲಿ ಅತ್ಯಧಿಕವಾಗಿ ವಿಜಯನಗರ ಕಾಲದ ಶಾಸನಗಳು ದೊರಕಿವೆ.[೧೨] ೬೦೦ ಮಿಮಿಗಳಿಗಿಂತಲೂ ಕಡಿಮೆ ಅಥವಾ ೧೦೦೦ ಮಿಮಿಗಳಿಗಿಂತಲೂ ಅಧಿಕವಾಗಿ ಮಳೆಯಾಗುವ ಪ್ರದೇಶ (ಜಿಲ್ಲೆ)ಗಳಲ್ಲಿ ವಿಜಯನಗರ ಶಾಸನಗಳ ಸಂಖ್ಯೆಯು ಗಣನೀಯವಾಗಿ ಕಡಿಮೆ ದೊರಕಿರುವುದು ಗಮನಾರ್ಹ. ಇವುಗಳಿಗೆ ಅಪವಾದವೆಂಬಂತೆ ಬಿಜಾಪುರ, ಬೀದರ್, ಗುಲ್ಬರ್ಗ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸರಾಸರಿ ಮಳೆಯು ೬೦೦ ರಿಂದ ೧೦೦೦ ಮಿಮಿಯ ಒಳಗೆ ಇದ್ದರೂ, ಅಲ್ಲಿ ಅಲ್ಪ ಸಂಖ್ಯೆಯಲ್ಲಿ ಶಾಸನಗಳು ದೊರಕಿವೆ. ಇದಕ್ಕೆ ಕಾರಣವು ವಿಜಯನಗರ ಸಾಮ್ರಾಜ್ಯದ ಹೊರಭಾಗದಲ್ಲಿ ಮೇಲಿನ ಪ್ರದೇಶಗಳಿರುವುದೇ ಆಗಿದೆ. ರಾಜಕೀಯವಾಗಿ ಆದಿಲ್‌ಶಾಹಿಗಳ ಆಳ್ವಿಕೆಗೆ ಈ ಪ್ರದೇಶಗಳು ಒಳಪಟ್ಟಿರುವುದು ಇತಿಹಾಸದಿಂದ ತಿಳಿದುಬರುವ ವಿಷಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆಯಾಗುತ್ತದೆ. ಆದರೂ ಇಲ್ಲಿ ಅಧಿಕ ಸಂಖ್ಯೆಯಲ್ಲಿ ಶಾಸನಗಳು ದೊರಕಿರುವುದು ಗಮನಾರ್ಹ. ಅಲ್ಲಿಯ ಶಾಸನಗಳ ಪಠ್ಯವನ್ನು ಗಮನಿಸಿದಾಗ ಕಾರಣಗಳು ತಿಳಿದುಬರುತ್ತವೆ. ಆಂತರಿಕ ಸಾಕ್ಷ್ಯಗಳನ್ನು ಗಮನಿಸುವುದು ಅಷ್ಟೇ ಮುಖ್ಯ. ವಿಜಯನಗರ ಕಾಲದ ಶಾಸನಗಳ ಮುಖ್ಯ ಲಕ್ಷಣಗಳನ್ನು ಜಿಲ್ಲಾವಾರಿಯಾಗಿ ನೀಡಲಾಗಿದೆ.

ಬಳ್ಳಾರಿ

ಈ ಜಿಲ್ಲೆಯಲ್ಲಿ ದೊರಕಿರುವ ಬಹುತೇಕ ಶಾಸನಗಳನ್ನು ಅತ್ಯಂತ ಜಾಗರೂಕತೆಯಿಂದ ರಚಿಸಲಾಗಿದೆ. ಕನ್ನಡ, ತೆಲುಗು, ತಮಿಳು, ಸಂಸ್ಕೃತ ಭಾಷೆ ಮತ್ತು ಲಿಪಿಯನ್ನು ಬಳಸಲಾಗಿದೆ. ಈ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಹಂಪೆಯಿದ್ದು, ಅದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದಿತು. ರಾಜಧಾನಿಯು ಪರಿಸರದಲ್ಲಿ ದೊರಕಿರುವ ಶಾಸನಗಳು ಬಹಳ ಆಸ್ಥೆಯಿಂದ ರಚಿಸಲಾಗಿದೆ. ಬಹುಶಃ ರಾಜಧಾನಿಯು ಸಮೀಪವಿರುವ ಕಾರಣವಿರಬಹುದು.

ಶಿವಮೊಗ್ಗ

ಈ ಪ್ರದೇಶವು ರಾಜಧಾನಿಗೆ ಸಮೀಪವಿರುವ ಕಾರಣದಿಂದಾಗಿ, ಶಾಸನಗಳು ಸಹ ಬಳ್ಳಾರಿ ಜಿಲ್ಲೆಯ ಶಾಸನಗಳಂತೆಯೇ ಇರುವುದನ್ನು ಕಾಣಬಹುದು. ಸದರಿ ಜಿಲ್ಲೆಯಲ್ಲಿ ದೊರಕಿರುವ

ಶಾಸನಗಳು ಬಹುತೇಕವಾಗಿ ದಾನಶಾಸನಗಳಾಗಿವೆ. ಭೂದಾನ ಮತ್ತು ಗ್ರಾಮ ದಾನಗಳನ್ನು ಕುರಿತು ಅವು ತಿಳಿಸುತ್ತವೆ. ಶಿವಮೊಗ್ಗ ಪ್ರಾಂತ್ಯದಲ್ಲಿ ಅರಣ್ಯಪ್ರದೇಶವು ಅಧಿಕವಾಗಿರುವುದು ಗಮನಾರ್ಹ. ಇತರೆ ಜಿಲ್ಲೆಗಳ ಶಾಸನಗಳಿಗಿಂತ ಇಲ್ಲಿಯ ಶಾಸನಗಳಲ್ಲಿ ತೆರಿಗೆ ಪದಗಳು ಅಧಿಕವಾಗಿ ಕಾಣಸಿಗುತ್ತವೆ. ಶಾಸನಗಳ ಭಾಷೆಯು 'ಕಠಿಣ'ವಾಗಿದ್ದು, ಲೋಪದೋಷಗಳಿಂದ ಹೊರತಾಗಿರುವುದು ಗಮನಾರ್ಹ. ಕನ್ನಡ ಲಿಪಿ ಮತ್ತು ಭಾಷೆಯನ್ನು ಶಾಸನಗಳಲ್ಲಿ ಅಧಿಕವಾಗಿ ಬಳಸಿದ್ದರೂ, ಸಂಸ್ಕೃತಭಾಷೆ ಮತ್ತು ನಾಗರಿಯ ಶಾಸನಗಳು ಸಹ ದೊರಕಿವೆ. ದಾನಶಾಸನಗಳ ತರುವಾಯ ಕ್ರಯಶಾಸನಗಳು ಎರಡನೆಯ ಸ್ಥಾನವನ್ನು ಆಕ್ರಮಿಸಿರುವುದು ಗಮನಾರ್ಹ.

ಚಿತ್ರದುರ್ಗ

ಚಿತ್ರದುರ್ಗ ಪ್ರದೇಶವು ತುಂಗಭದ್ರಾ ನದಿಯ ದಕ್ಷಿಣಕ್ಕಿದ್ದು, ಶುಷ್ಕ ಹವಾಮಾನವನ್ನು ಹೊಂದಿರುವ ಜಿಲ್ಲೆಯಾಗಿದೆ. ಭೌಗೋಳಿಕವಾಗಿ ಈ ಪ್ರದೇಶವು ಅತೀ ಮುಖ್ಯವಾದದ್ದು. ಈ ಜಿಲ್ಲೆಯಲ್ಲಿ ದೊರಕಿರುವ ಶಾಸನಗಳು ಅಧಿಕವಾಗಿ ಗ್ರಾಮದಾನ ಶಾಸನಗಳಾಗಿವೆ. ಇದರೊಂದಿಗೆ ಸದರಿ ಜಿಲ್ಲೆಯ ಅಧಿಕ ಶಾಸನಗಳಲ್ಲಿ ನಾಯಿಂದರಿಗೆ ತೆರಿಗೆಯಲ್ಲಿ ವಿನಾಯ್ತಿಯನ್ನು ನೀಡಿರುವುದು ಕುತೂಹಲಕಾರಿ ಸಂಗತಿ. ಕನ್ನಡ ಭಾಷೆ ಮತ್ತು ಲಿಪಿಯನ್ನು ಶಾಸನಗಳಲ್ಲಿ ಬಳಸಲಾಗಿದೆ ಮತ್ತು ಶಾಸನದ ಭಾಷೆಯು ಸರಳವಾಗಿರುವುದು.

ಬೆಂಗಳೂರು

ಈ ಜಿಲ್ಲೆಯು ಅಥವಾ ಪ್ರಾಂತ್ಯವು ರಾಜಧಾನಿಯಿಂದ ದೂರವಿದ್ದು, ವೈವಿಧ್ಯಮಯವಾದ ಶಾಸನಗಳಿರುವುದು ಕಂಡುಬರುತ್ತದೆ. ಗ್ರಾಮದಾನ ಮತ್ತು ಭೂದಾನ ಶಾಸನಗಳು ಅಧಿಕ ಸಂಖ್ಯೆಯಲ್ಲಿ ದೊರಕುತ್ತವೆ. ಶಾಸನಗಳ ಲಿಪಿ ಮತ್ತು ಭಾಷೆಯಲ್ಲಿ ಅನೇಕ ವೈವಿಧ್ಯಮಯತೆಯನ್ನು ಗುರುತಿಸಬಹುದು. ಅವುಗಳಲ್ಲಿ ತಮಿಳು, ಗ್ರಂಥ, ಕನ್ನಡ, ನಾಗರಿ ಮತ್ತು ತೆಲುಗು ಲಿಪಿಗಳನ್ನು ಮತ್ತು ಸಂಸ್ಕೃತ, ತಮಿಳು, ಕನ್ನಡ ಮತ್ತು ತೆಲುಗು ಭಾಷೆಗಳು ಮುಖ್ಯವಾಗಿವೆ. ಈ ಪ್ರಾಂತ್ಯದಲ್ಲಿ ಹೆಚ್ಚು ಬಯಲಸೀಮೆ ಪ್ರದೇಶವು ಲಭ್ಯವಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿರುವಂತಹದಾಗಿದೆ. ಇದರೊಂದಿಗೆ ಇಂದಿನ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಗಡಿಪ್ರದೇಶವಾಗಿದ್ದು, ಬಹುಭಾಷಿಕರು ವಾಸಿಸುವ ಪ್ರದೇಶವಾಗಿರುವುದರಿಂದ ಶಾಸನಗಳಲ್ಲಿಯೂ ಬಹುಭಾಷೆ ಮತ್ತು ಲಿಪಿಗಳನ್ನು ಬಳಸಿರುವುದು ಸ್ಪಷ್ಟವಾಗುತ್ತದೆ. ರಾಜಕೀಯವಾಗಿ ಈ ಪ್ರದೇಶವು ಮುಖ್ಯತ್ವವನ್ನು ಪಡೆದಿರುವುದು.

ಕೋಲಾರ

ಈ ಜಿಲ್ಲೆಯ ಶಾಸನಗಳು, ಬೆಂಗಳೂರು ಜಿಲ್ಲೆಯ ಶಾಸನಗಳ ಲಕ್ಷಣಗಳನ್ನು ಹೊಂದಿವೆ. ಭೌಗೋಳಿಕವಾಗಿ ಈ ಪ್ರಾಂತ್ಯವು ಸಹ ಮೂರು ರಾಜ್ಯಗಳ ಗಡಿಪ್ರದೇಶವಾಗಿದೆ. ಇಲ್ಲಿಯ

ಶಾಸನಗಳು ತಮಿಳುನಾಡಿನ ಆಡಳಿತ ವಿಭಾಗಗಳನ್ನು ಉಲ್ಲೇಖಿಸಿರುವುದನ್ನು ಕಾಣಬಹುದು. ಗ್ರಂಥ, ಕನ್ನಡ, ತಮಿಳು ಮತ್ತು ತೆಲುಗು ಲಿಪಿಗಳು ಶಾಸನಗಳಲ್ಲಿ ಕಾಣಸಿಗುತ್ತವೆ.

ಮೈಸೂರು

ಮೈಸೂರು ಪ್ರಾಂತ್ಯದ ಶಾಸನಗಳು ವೈವಿಧ್ಯಮಯತೆಯನ್ನು ಹೊಂದಿವೆ. ಗ್ರಾಮದಾನ ಮತ್ತು ಭೂದಾನ ಶಾಸನಗಳು ಹೆಚ್ಚಾಗಿ ಕಂಡುಬಂದಿವೆ. ಈ ಪ್ರದೇಶದಲ್ಲಿ ಕಾವೇರಿ ನದಿಯು ಹರಿಯುತ್ತಿದ್ದು ಅಧಿಕವಾದ ಭೂಪ್ರದೇಶಗಳು ವ್ಯವಸಾಯಕ್ಕೆ ಒಳಪಟ್ಟಿವೆ. ಇಲ್ಲಿ ಪ್ರಾಚೀನ ಹೆದ್ದಾರಿಯನ್ನು ಸಹ ಶಾಸನಗಳ ಮೂಲಕ ಗುರುತಿಸಬಹುದಾಗಿದೆ. ಶಾಸನಗಳ ಭಾಷೆಯು ಸರಳವಾಗಿದ್ದು, ಸಾಮಾನ್ಯ ಜನರು ಬಳಸುವ ಭಾಷೆಯಂತೆ ಇರುವುದು ಉಲ್ಲೇಖನಾರ್ಹ.

ದಕ್ಷಿಣಕನ್ನಡ

ಈ ಜಿಲ್ಲೆಯಲ್ಲಿ ಅತ್ಯಧಿಕವಾದ ವಿಜಯನಗರ ಕಾಲದ ಶಾಸನಗಳು ದೊರಕಿವೆ. ಅದರಂತೆಯೇ ವಿಜಯನಗರೇತರ ಕಾಲದ ಶಾಸನಗಳು ಸಹ ಲಭ್ಯವಿದೆ. ಸದರಿ ಪ್ರಾಂತ್ಯವು ವೈವಿಧ್ಯಮಯ ಭೌಗೋಳಿಕ ಪರಿಸರವನ್ನು ಹೊಂದಿದೆ. ದಟ್ಟವಾದ ಕಾಡು, ಬಯಲುಸೀಮೆ, ಉದ್ದವಾದ ಕಡಲತೀರ ಮತ್ತು ರೇವುಗಳನ್ನು ಹೊಂದಿದೆ. ಶಾಸನಗಳಲ್ಲಿ ಅಧಿಕವಾಗಿ ಕಾಡಿನ ಉತ್ಪನ್ನಗಳಾದ ಅಡಿಕೆ, ತೆಂಗು, ಸಾಂಬಾರು ಪದಾರ್ಥಗಳನ್ನು ದೇವಾಲಯ ಮತ್ತು ವ್ಯಕ್ತಿಗಳಿಗೆ ದಾನವಾಗಿ ನೀಡಿರುವುದು ಕಂಡುಬರುತ್ತವೆ. ವ್ಯಾಪಾರಿ ಬೆಳೆಗಳು ಅಥವಾ ಆರ್ಥಿಕ ಬೆಳೆಗಳು ಉಲ್ಲೇಖವನ್ನು ಶಾಸನಗಳಲ್ಲಿ ಕಾಣಬಹುದು. ಈ ಪ್ರದೇಶದಲ್ಲಿ ಶೃಂಗೇರಿಯಿದ್ದು, ಇಲ್ಲಿನ ದೇವಾಲಯವು ನಗರದ ವಿಜಯನಗರದ ಅರಸರಿಗೆ ಮುಖ್ಯ ಆಕರ್ಷಣೆಯಾಗಿತ್ತು. ಶೃಂಗೇರಿಯಲ್ಲಿ ರಾಜಗುರುಗಳ ವಾಸ್ತವ್ಯವಿದ್ದುದರಿಂದ ಈ ಪ್ರದೇಶವು ಅರಸರ ಮನ್ನಣೆಗೆ ಪಾತ್ರವಾಗಿತ್ತು. ಆರ್ಥಿಕವಾಗಿ ಈ ಪ್ರಾಂತ್ಯವು ಸುಭದ್ರೆಯನ್ನು ಹೊಂದಿದ್ದು, ರೇವುಗಳು ಕಡಲ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಿದ್ದು ಎಂಬುದು ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ.

ಉತ್ತರಕನ್ನಡ

ಈ ಜಿಲ್ಲೆಯ ಶಾಸನಗಳು ದಕ್ಷಿಣಕನ್ನಡ ಜಿಲ್ಲೆಯ ಶಾಸನಗಳಂತೆಯೇ ಇರುವುದು ಗಮನಾರ್ಹ.

ಕೊಡಗು

ಕೊಡಗು ಪ್ರಾಂತ್ಯವು ಅಧಿಕವಾಗಿ ಮಲೆಗಳ ನಾಡಾಗಿದ್ದು, ಬೆಟ್ಟ, ಗುಡ್ಡ ಮತ್ತು ದಟ್ಟವಾದ ಕಾಡಿನಿಂದ ಆವೃತವಾಗಿದೆ. ಈ ಪ್ರದೇಶವು ಅಧಿಕ ಮಳೆಯನ್ನು ಹೊಂದಿವೆ.

ಕಾಡಿನಿಂದ ಕೂಡಿರುವ ಪ್ರದೇಶವಾದ್ದರಿಂದ ವ್ಯವಸಾಯಕ್ಕೆ ಯೋಗ್ಯ ಭೂಮಿಯು ಅತ್ಯಲ್ಪವಾಗಿ ದೊರಕುತ್ತದೆ. ಇಲ್ಲಿ ವಿಜಯನಗರ ಕಾಲದ ಒಂದು ಶಾಸನ ಮಾತ್ರ ದೊರಕಿದೆ.

ತುಮಕೂರು

ತುಮಕೂರು ಜಿಲ್ಲೆಯು ಮಿಕ್ಕೆಲ್ಲಾ ಜಿಲ್ಲೆಗಳಿಗೆ ಹೋಲಿಸಿದಾಗ ಒಣ ಹವಾಮಾನವನ್ನು ಹೊಂದಿರುವ ಪ್ರದೇಶವಾಗಿದೆ. ಇಲ್ಲಿ ವೀರಗಲ್ಲು ಮತ್ತು ಸತಿಕಲ್ಲುಗಳು ಅಧಿಕವಾಗಿದ್ದು, ಗ್ರಾಮ ಮತ್ತು ಭೂದಾನ ಶಾಸನಗಳು ಅಧಿಕಸಂಖ್ಯೆಯಲ್ಲಿ ದೊರೆತಿಲ್ಲ. ಅದರಂತೆಯೇ ಕೆಲವು ತೆರಿಗೆಗಳ ಉಲ್ಲೇಖಗಳನ್ನು ಶಾಸನಗಳಲ್ಲಿ ಕಾಣಸಿಗುತ್ತವೆ ಮತ್ತು ವಿಶೇಷವಾಗಿ ಮದುವೆ ಸುಂಕವನ್ನು ವಿನಾಯ್ತಿಗೊಳಿಸಿರುವುದು ಅಧಿಕವಾದ ಸಂಖ್ಯೆಯಲ್ಲಿ ದೊರಕುವುದು ಗಮನಾರ್ಹ ಸಂಗತಿ.

ಉತ್ತರಕನ್ನಡ ಜಿಲ್ಲೆಗಳು

ಬಿಜಾಪುರ, ಬೀದರ್, ಗುಲ್ಬರ್ಗಾ ಮತ್ತು ಬೆಳಗಾವಿ ಜಿಲ್ಲೆಗಳು ರಾಜಕೀಯವಾಗಿ ವಿಜಯನಗರ ಆಳ್ವಿಕೆಗೆ ಹೊರಪಟ್ಟ ಪ್ರದೇಶಗಳಾಗಿರುವುದರಿಂದ ಇವರ ಶಾಸನಗಳು ಅತ್ಯಲ್ಪವಾಗಿ ದೊರಕಿವೆ.

ಮೇಲೆ ವಿವರಿಸಿದ ಲಕ್ಷಣಗಳು, ಶಾಸನಗಳ ಸಾಮಾನ್ಯ ಲಕ್ಷಣಗಳಾಗಿವೆ. ಪ್ರತಿ ಜಿಲ್ಲೆಯ ಎಲ್ಲಾ ಶಾಸನಗಳ ಕೂಲಂಕಷ ಅಧ್ಯಯನಗಳಿಂದ ಇನ್ನೂ ವಿಶೇಷವಾದ ಸಂಗತಿಗಳು ಬೆಳಕಿಗೆ ಬರುವುದೆಂಬುದರಲ್ಲಿ ಸಂಶಯವಿಲ್ಲ. ವಿಜಯನಗರ ಅರಸರ ಕಾಲದ ಶಾಸನಗಳ ವ್ಯಾಪ್ತಿ ಮತ್ತು ಅವುಗಳು ದೊರಕಿರುವ ಸಂಖ್ಯೆಗಳು, ಆಯಾ ಪ್ರಾಂತ್ಯದ ಭೌಗೋಳಿಕ ಪರಿಸರದೊಂದಿಗೆ ನೇರವಾದ ಸಂಬಂಧವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಶಾಸನಗಳ ಆಂತರಿಕ ಸಾಕ್ಷ್ಯಗಳು ಆಯಾ ಪ್ರಾಂತ್ಯದ ಆರ್ಥಿಕ ಚಟುವಟಿಕೆಗಳನ್ನು ಪ್ರತಿನಿಧಿಸುತ್ತವೆ ಹಾಗೂ ಪರಿಸರಕ್ಕೆ ಅನುಗುಣವಾಗಿರುತ್ತವೆ. ಉದಾಹರಣೆಗೆ ದಕ್ಷಿಣಕನ್ನಡ ಜಿಲ್ಲೆಯ ಶಾಸನಗಳಲ್ಲಿ ಆರ್ಥಿಕ ಉತ್ಪನ್ನಗಳ ಉಲ್ಲೇಖವಿದ್ದರೆ, ತುಮಕೂರು ಜಿಲ್ಲೆಯ ಶಾಸನಗಳಲ್ಲಿ ತೆರಿಗೆ ವಿನಾಯ್ತಿಯನ್ನು ಕಾಣಬಹುದು. ಅದಕ್ಕೆ ಅಲ್ಲಿಯ ಹವಾಮಾನವು ಶುಷ್ಕವಾಗಿರುವುದೇ ಮುಖ್ಯ ಕಾರಣ. ಇದರೊಂದಿಗೆ ವಿಜಯನಗರದ ಆರ್ಥಿಕ ವಲಯಗಳನ್ನು ಗುರುತಿಸಬಹುದು ಹಾಗೂ ಪರಿಸರದೊಂದಿಗೆ ನೇರ ಸಂಪರ್ಕವಿರುವುದು ಸಹ ಕಂಡುಬರುತ್ತವೆ. ಇಂತಹ ಅಧ್ಯಯನದಿಂದ ಮಧ್ಯಕಾಲೀನ ಇತಿಹಾಸದ ಭೌಗೋಳಿಕ ಪರಿಸರ, ಆರ್ಥಿಕ ವಲಯ ಮತ್ತು ಆರ್ಥಿಕ ಚಟುವಟಿಕೆ, ಪ್ರಾಚೀನ ಜನಸಂಖ್ಯೆ, ಸಮಾಜ, ಮತ್ತು ಇತರೇ ವಿಷಯಗಳನ್ನು ಗುರುತಿಸುವಲ್ಲಿ ಸಾಧ್ಯವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಕೋಷ್ಟಕ [೧೩]

ಕ್ರಮ ಸಂಖ್ಯೆ	ಜಿಲ್ಲೆಯಹೆಸರು	ಸರಾಸರಿ ವಾರ್ಷಿಕ ಮಳೆ (ಮಿಮಿ)	ಲಭ್ಯವಿರುವ ಶಾಸನಗಳ ಸಂಖ್ಯೆ
೧.	ಗುಲ್ಬರ್ಗಾ	೭೨೯.೭	೦
೨.	ಬೀದರ್	೯೦೫.೭	೧
೩.	ಕೊಡಗು	೩,೨೬೫.೪	೧
೪.	ಬೆಳಗಾವಿ	೧,೩೦೩.೨	೩
೫.	ಬಿಜಾಪುರ	೫೨೦.೫	೪
೬.	ರಾಯಚೂರು	೬೬೧.೩	೫೦
೭.	ಧಾರವಾಡ	೮೧೩.೩	೭೨
೮.	ಉತ್ತರಕನ್ನಡ	೩,೦೧೦.೦	೧೦೦
೯.	ಮಂಡ್ಯ	೬೮೮.೫	೧೧೪
೧೦.	ಚಿತ್ರದುರ್ಗ	೬೩೮.೧	೧೧೫
೧೧.	ಹಾಸನ	೧,೦೪೦.೭	೧೨೭
೧೨.	ತುಮಕೂರು	೬೮೭.೯	೧೪೨
೧೩.	ಬಳ್ಳಾರಿ	೫೧೯.೯	೧೫೩
೧೪.	ಚಿಕ್ಕಮಗಳೂರು	೯೨೧.೮	೧೬೫
೧೫.	ಶಿವಮೊಗ್ಗ	೧,೫೨೬.೫	೧೬೬
೧೬.	ಮೈಸೂರು	೮೦೯.೦	೨೨೫
೧೭.	ಕೋಲಾರ	೭೧೧.೪	೨೩೮
೧೮.	ಬೆಂಗಳೂರು	೮೮೮.೯	೨೭೭
೧೯.	ದಕ್ಷಿಣಕನ್ನಡ	೩,೩೯೭.೦	೩೦೭

ಆಕರಗಳು ಮತ್ತು ಟಿಪ್ಪಣಿಗಳು

೧. ವೆಂಕಟರತ್ನಂ ಎ.ವಿ. ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ದಿ ವಿಜಯನಗರ ಎಂಪ್ಯೆರ್, ಪು. ೮

೨. ಎರಡನೆಯ ದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಭಾರತದ ಆಚೆಗೆ ಸಹ ವಿಸ್ತರಿಸಿತ್ತು. ನೋಡಿ ವೆಂಕಟರತ್ನಂ ಎ.ವಿ. ಅದೇ, ಪು. ೮

೩. ಈ ಮಾಹಿತಿಗಳನ್ನು 'ಎಪಿಗ್ರಾಫಿಯ ಕರ್ನಾಟಕ', (ಹಳೆಯ ಮತ್ತು ಹೊಸ ಸಂಪುಟಗಳು), 'ಸೌಥ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್', 'ಆನ್ಯುಯಲ್ ರಿಪೋರ್ಟ್ಸ್ ಆನ್ ದಿ ಇಂಡಿಯನ್ ಎಪಿಗ್ರಾಫಿ', 'ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ಸ್', 'ಹೈದರಾಬಾದ್ ಆರ್ಕಿಯಲಾಜಿಕಲ್ ಸೀರಿಸ್' ಮುಂತಾದ ಗ್ರಂಥಗಳಿಂದ ಸಂಗ್ರಹಿಸಲಾಗಿದೆ. ವಿಜಯನಗರ ಕಾಲದ ಅನೇಕ ಶಾಸನಗಳು ಇನ್ನೂ ಪ್ರಕಟಗೊಳ್ಳಬೇಕಾಗಿದೆ.

೪. ಇಲ್ಲಿ ಉಲ್ಲೇಖಿಸಿರುವ ಶಾಸನಗಳ ಸಂಖ್ಯೆಯು ಮುಂದಿನ ಸರ್ವೇಕ್ಷಣ ಕಾರ್ಯದಿಂದ ಹೆಚ್ಚಾಗುವ ಸಾಧ್ಯತೆಗಳಿವೆ.

೫. ಶಿಲೆ, ಲೋಹ ಮತ್ತು ತಾಳೆಗರಿಗಳನ್ನು ಒಳಗೊಂಡಂತೆ ವಿವಿಧ ಮಾಧ್ಯಮಗಳಲ್ಲಿ ಬಳಸಿರುವ ಬರಹಗಳನ್ನು ಶಾಸನ ಎಂಬ ಅರ್ಥದಲ್ಲಿ ಬಳಸಲಾಗಿದೆ.

೬. ಸುಬ್ಬರಾವ್ ಬಿ. 'ದಿ ಪರ್ಸನಾಲಿಟಿ ಆಫ್ ಇಂಡಿಯಾ', ಪು. ೬

೭. ಕರ್ನಾಟಕದಲ್ಲಿ ಅತೀ ಹೆಚ್ಚು ಮಳೆಯಾಗುವ ಪ್ರದೇಶ.

೮. ನೊಬೊರೊ ಕರಾಶಿಮಾ ಮತ್ತು ಇತರರು, 'ಎ ಲಿಸ್ಟ್ ಆಫ್ ತಮಿಳ್ ಇನ್ಸ್‌ಕ್ರಿಪ್ಶನ್ಸ್ ಆಫ್ ಚೋಳ ಡೈನಾಸ್ಟಿ.'

೯. ಥಾಮಸ್ ಆರ್. ಟ್ರೌಟ್‌ಮನ್, "ಪ್ರಾಸ್ ಪೆಕ್ಟಸ್ ಫಾರ್ ದಿ ಸ್ಟಡಿ ಆಫ್ ಇನ್ಸ್‌ಕ್ರಿಪ್ಶನ್ಸ್ ಆನ್ ಆಲ್ ಇಂಡಿಯಾ ಸ್ಕೇಲ್" ಸೋಶಿಯೋ - ಎಕನಾಮಿಕ್ ಟರ್ಮ್ಸ್ ಆಫ್ ಇನ್ಸ್‌ಕ್ರಿಪ್ಶನ್ಸ್ ಎಂಬ ಕಾರ್ಯಾಗಾರದಲ್ಲಿ ಮಂಡಿಸಿದ ಪ್ರಬಂಧ, ಮೈಸೂರು, ೧೯೮೯

೧೦. ಸಿಂಥಿಯಾ ಥಾಲ್ ಬೋಟ್, "ಟೆಂಪಲ್ಸ್ , ಡೋನರ್ಸ್ ಅಂಡ್ ಗಿಫ್ಟ್ಸ್ : ಪ್ಯಾಟೆರ್ಸ್ ಆಫ್ ಪ್ಯಾಟ್ರೆನೇಜ್ ಇನ್ ಥರ್‌ಟೀನಥ್ ಸೆಂಚುರಿ ಸೌಥ್ ಇಂಡಿಯಾ, 'ದಿ ಜರ್ನಲ್ ಆಫ್ ಏಶಿಯನ್ ಸ್ಟಡೀಸ್', ೫೦, ಸಂ, ೨, (ಮೇ ೧೯೯೧), ಪು. ೩೦೮ - ೩೪೦

೧೧. ಪ್ರಸ್ತುತ ಕರ್ನಾಟಕದಲ್ಲಿ ೨೬ ಜಿಲ್ಲೆಗಳಿವೆ. ಕೊಷ್ಟಕದಲ್ಲಿ ೧೯ ಜಿಲ್ಲೆಗಳ ವಿವರಗಳನ್ನು ಮಾತ್ರ ನೀಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಆರು ಹೊಸ ಜಿಲ್ಲೆಗಳನ್ನು ರಚಿಸಲಾಗಿದೆ. ಹೊಸ ಜಿಲ್ಲೆಗಳ ವಾರ್ಷಿಕ ಮಳೆಯ ಮಾಹಿತಿಗಳು ದೊರೆಯದ ಕಾರಣ ಹಳೆಯ ಜಿಲ್ಲೆಗಳ ಮಾಹಿತಿಗಳನ್ನೇ ಇಲ್ಲಿ ನೀಡಲಾಗಿದೆ. ಒಂದು ಜಿಲ್ಲೆಯನ್ನೇ ವಿಭಜಿಸಿ ಎರಡು ಜಿಲ್ಲೆಗಳನ್ನಾಗಿ ಮಾಡಿರುವ ಕಾರಣ ಮಾಹಿತಿಯಲ್ಲಿ ಅಧಿಕ ವ್ಯತ್ಯಾಸಗಳು ಕಂಡುಬರುವುದಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು, ಬೆಂಗಳೂರು ಎಂದು ಒಂದೇ ಜಿಲ್ಲೆಯಾಗಿ ಪರಿಗಣಿಸಲಾಗಿದೆ.

೧೨. ಕ್ರಿ.ಶ. ೧೪ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಹವಾಮಾನದಲ್ಲಿ ಗಣನೀಯ ಬದಲಾವಣೆಗಳು ಇರಲಿಲ್ಲ ಮತ್ತು ಇಂದಿನ ಹವಮಾನವನ್ನೇ ಹೋಲುತ್ತಿತ್ತು. ಈ ಮಾಹಿತಿಯನ್ನು ಪ್ರೊ.ರಾಜಗುರು, ನಿವೃತ್ತ ಪ್ರಾಧ್ಯಾಪಕರು, ಡೆಕ್ಕನ್ ಕಾಲೇಜ್, ಪುಣೆ ಅವರು ನೀಡಿರುತ್ತಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

೧೩. ಕೋಷ್ಟಕದಲ್ಲಿ ನೀಡಿರುವ ಮಳೆಯ ವಿವರಗಳನ್ನು 'ಕರ್ನಾಟಕ ಗ್ಯಾಸೆಟಿಯರ್'ನಿಂದ (ಪು. ೨೦೫) ಸಂಗ್ರಹಿಸಲಾಗಿದೆ. ಸಾಮಾನ್ಯವಾಗಿ ಸರಾಸರಿ ಮಳೆಯ ವಾರ್ಷಿಕ ವಿವರಗಳನ್ನು ಕೆಲವು ವರ್ಷಗಳ ಮಳೆಯ ಅಳತೆಯನ್ನು ಆಧಾರಿಸಿ ನೀಡಲಾಗುತ್ತದೆ.

❑❑

೧೦

ಹಂಪೆ ಜಾತ್ರೆಗೆ ಕೆಳದಿ ಅರಸರು ಹಾಕಿಸಿದ ದಾನಶಾಸನ

* ಡಾ.ಕೆಳದಿ ವೆಂಕಟೇಶ ಜೋಯಿಸ್

ಕೆಳದಿ ಮತ್ತು ವಿಜಯನಗರ ಒಂದನ್ನೊಂದು ಬಿಟ್ಟು ಇರುತ್ತಿರಲಿಲ್ಲ. ವಿಜಯನಗರ ತಾಯಿಯಾದರೆ ಕೆಳದಿ ಮಗುವಿದ್ದಂತೆ. ವಿಜಯನಗರದ ಪತನ ಕಾಲದಲ್ಲಿ ಕೆಳದಿ ಅರಸರು ಅಲ್ಲಿಯ ನಿರಾಶ್ರಿತರಿಗೆ ಅಲ್ಲಿಂದ ವಲಸೆ ಬಂದವರಿಗೆ ಆಶ್ರಯವಿತ್ತು ರಕ್ಷಿಸಿದುದು ಗಮನೀಯ. ವಿಜಯನಗರದ ಆಡಳಿತದಲ್ಲಿ ಚಿನ್ನಭಂಡಾರದ ಅಧಿಕಾರಿಯಾಗಿದ್ದ ನಾರಾಯಣಪ್ಪನು ಕೆಳದಿ ಆಡಳಿತದಲ್ಲಿ ಸಹ ಅದೇ ಹುದ್ದೆಯಲ್ಲಿ ಮುಂದುವರೆದಿದ್ದನು. ಕ್ರಿ.ಶ. ೧೬೪೬ರ ಸುಮಾರಿನಲ್ಲಿ ವೆಲ್ಲೂರನ್ನು ಕಳೆದುಕೊಂಡು ಸಾಮ್ರಾಜ್ಯವಿಲ್ಲದ ಸಾಮ್ರಾಟನಾಗಿದ್ದ ಶ್ರೀರಂಗರಾಯನು ದಿಕ್ಕುಕಾಣದೆ ಕೆಳದಿ ಸಂಸ್ಥಾನದ ಪ್ರಬಲ ಪರಾಕ್ರಮಿಯು ಸಮರ್ಥನೂ ಆಗಿದ್ದ ಶಿವಪ್ಪನಾಯಕನ ಬಳಿಗೆ ಬಂದಾಗ ಶಿವಪ್ಪನಾಯಕನು ಶ್ರೀರಂಗರಾಯನನ್ನು ಗೌರವದಿಂದ ಬರಮಾಡಿಕೊಂಡು ಆ ಚಕ್ರವರ್ತಿಗೆ ಆಶ್ರಯ ನೀಡಿ ಉದ್ಧರಿಸಿದನು. ಮೊರೆಹೊಕ್ಕ ಶ್ರೀರಂಗರಾಯನಿಗೆ ಕೆಳದಿ ನಾಯಕನು ಸಕ್ಕರಾಯಪಟ್ಟಣದ ಅಧಿಪತ್ಯವಿತ್ತು ರಕ್ಷಿಸಿದನು. ವಿಜಯನಗರದ ಅಂತ್ಯಕಾಲದಲ್ಲಿ ಇದನ್ನು ಪುನರುಜ್ಜೀವಿತಗೊಳಿಸಿದ ಅವನ ಸ್ವಾಮಿನಿಷ್ಠೆಗೆ ಇದು ಶ್ರೇಷ್ಠ ನಿದರ್ಶನವಾಗಿದೆ. ಹೀಗೆ ಕೆಳದಿ - ವಿಜಯನಗರ ರಾಜಕೀಯವಾಗಿ ವಿಶೇಷ ಸಂಬಂಧ ಹೊಂದಿದ್ದಿತು. ವಿಜಯನಗರದ ಆಡಳಿತ, ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯೇ ಕೆಳದಿ ಅರಸರ ಕಾಲದಲ್ಲಿಯೂ ಮುಂದುವರೆದು ಬಂದಿತು.

ಕ್ರಿ.ಶ. ೧೭೦೮ರಲ್ಲಿ ಕೆಳದಿ ಬಸವಪ್ಪನಾಯಕನು ಹಂಪಿ ಉತ್ಸವ (ಜಾತ್ರೆ)ಯಲ್ಲಿ ನಡೆಸುವ ಧರ್ಮಕ್ಕೆ ಬಿಟ್ಟ ದಾನದ ಬಗ್ಗೆ ಉಲ್ಲೇಖವಿರುವ ಶಾಸನದ ಕುರಿತು ಪ್ರಸ್ತಾಪಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ನಲವತ್ತೈದು ಸಾಲುಗಳುಳ್ಳ ಈ ತಾಮ್ರಶಾಸನದಲ್ಲಿ ಹಂಪಿ ಜಾತ್ರೆಯಲ್ಲಿ ಮಹತ್ತಿನವರು ನಡೆಸುವ ಧರ್ಮಕ್ಕೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಶಾಸನದ ಪಾಠ ಹೀಗಿದೆ.

ಕೆಳದಿ ಬಸವಪ್ಪನಾಯಕನು ಹಂಪೆ ಜಾತ್ರೆಗೆ ಬಿಟ್ಟ ದಾನದ ವಿವರವಿರುವ ಶಾಸನ

ಮುಂಭಾಗ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಜಾರವೇ ತ್ರೈ
೨. ಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ
೩. ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರು
೪. ಶ. ೧೬೩೦ನೆಯ ಸರ್ವಜಿತು ಸಂವತ್ಸರದ ಮಾಘ ಶು
೫. ೧೫ ಲು ಶ್ರೀ ಮದ್ವೆಡವಮುರಾರಿ ಕೋಟೆಕೋಳಾಹ
೬. ಳ ವಿಶುಧವೈದಿಕಾದ್ವೈತಸಿದ್ಧಾಂತ ಪ್ರತಿಷ್ಠಾಪಕ ಶಿವಗು
೭. ರುಭಕ್ತಿ ಪರಾಯಣರಾದ ಕೆಳದಿ ಸದಾಶಿವರಾಯನಾ
೮. ಯಕರ ವಂಶೋದ್ಭವರಾದ ಸಿದ್ದಪ್ಪನಾಯಕರ ಪ್ರಪೌ
೯. ತ್ರರು ಶಿವಪ್ಪನಾಯಕರ ಪೌತ್ರರು ಸೋಮಶೇಖರನಾ
೧೦. ಯಕರ ಧರ್ಮಪತ್ನಿಯರಾದ ಚೆಂನಂಮಾಜಿಯವ
೧೧. ರ ಪುತ್ರರು ಬಸವಪ್ಪನಾಯಕರು ಬೊಕ್ಕಸದ ಸಿದ
೧೨. ಬಸವೈಯನು ಹಂಪೆಯಲ್ಲಿ ನಡೆಸುವ ಧರ್ಮದ ಬ
೧೩. ಗೆ ಬರೆಸಿಕೊಟ್ಟ ಭೂದಾನಧರ್ಮಶಾಸನದ ಕ್ರಮವೆಂತ್ತೆಂ
೧೪. ದರೆಯೀ ಧರ್ಮದ ಬಗ್ಗೆ ಮಹತ್ತಿನವರ ವಶಕ್ಕೆ ಹಣವ
೧೫. ಕೊಟ್ಟಿದ್ದೆನು ಸ್ವಾಸ್ಥೆಯಿಲ್ಲ ಪಾಲಿಸಿಕೊಳ್ಳಬೇಕೆಂದು ಸಿದ್ಧ
೧೬. ಬಸವೈಯನು ಹೇಳಿಕೊಳಲಾಗಿ ಮಹತ್ತಿನವರಿಂದ ಅರ
೧೭. ಮನೆಗೆ ಬಂದ ಪತ್ರ ಸಾಲದ ಬಗೆಯಲ್ಲಿ ಗ ೧೨೦ ನೂರ ಯಿ
೧೮. ಪ್ಪತ್ತು ವರಹಂನು ಉತ್ತಾರ ಮಾಡಿಕೊಂಡು ಬಿಟ್ಟು ಸ್ವಾಸ್ತಿಗೆ
೧೯. ಶಾಸನವ ಬರೆಸಿ ಕೊಡಲಿಲ ಶಾಸನವ ಬರಸಿಕೊಡಬೇಕೆ
೨೦. ೦ದು ಮರಿಯಪ್ಪನವರು ಹೇಳಿದ್ದರಿಂದ ಬರೆಸಿಕೊಟ್ಟದು
೨೧. ಯೆಡತೊರೆಯ ಸೀಮೆಯಲಿ ಯಿತ್ತಲಾಗಿ ಸಾಗಾದ ಕಂಬ

೨೨. ದಹಾಳ ಗ್ರಾಮದಿಂದ ಗದ್ದೆಯಿಂದ ಬೀಜ ಖ ೨ ಕೆ ಖ ೧ ಕ್ಕೆ

ಹಿಂಭಾಗ

೨೩. ಗ ೫ ಲೂ ಗ ೧೦ ಬಿರಾಡದಿಂದ ಗ ೧ ಕಲೆ ೨ ಲ್ಲೂ ಗ ೨ ಉ

೨೪. ಭಯಂ ಗ ೧೨ ಹನ್ನೆರಡು ವರಹನು ಸ್ವಾಸ್ಥೇನು ಹಂ

೨೫. ಪೆ ಜಾತ್ರೆಯಲು ಮಹತಿ ನವರಿಗೆ ನಡೆಸುವ ಧರ್ಮ

೨೬. ದ ಬಗೆ ಶಿವಾರ್ಪಿತವಾಗಿ ಕೊಟ್ಟೆವಾಗಿ ಯೀ ಭೂಮಿಗೆ ನೆ

೨೭. ಟ್ಟ ಲಿಂಗವವದ್ರೆ ಕಲ್ಲಿನೊಳಗುಳ್ಳ ನಿಧಿ ನಿಕ್ಷೇಪ ಜಲ ಪಾಷಾ

೨೮. ಣ ಅಕ್ಷೀಣಿ ಆಗಾಮಿ ಸಿಧ ಸಾಧ್ಯಂಗಳೆಂಬ ಅಷ್ಟ

೨೯. ಭೋಗ ತೇಜಸ್ವಾಮ್ಯವನು ಪೂರ್ವಮರಿಯಾದೆಯಲಿ

೩೦. ಆಗುಮಾಡಿಕೊಂಡು ಮಹತ್ತು ಪಾರಂಪರ್ಯ್ಯವಾ

೩೧. ಗಿ ಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂದ ಧರ್ಮವ ನ

೩೨. ಡಸಿಕೊಂಡು ಬಾಹದೆಂದು ಬರೆಸಿಕೊಟ್ಟ ಭೂದಾನ ಧ

೩೩. ರ್ಮಶಾಸನ ಆದಿತ್ಯಚಂದ್ರಾವನಿಲೋನಲಶ್ಚ ದ್ಯೌರ್ಭೂ

೩೪. ಮಿರಾಪೋ ಹ್ರುದಯಂ ಯಮಶ್ಚ ಅಹಶ್ಚ ರಾತ್ರಿಶ್ಚ ಉಭೇ

೩೫. ಚ ಸಂಧ್ಯೇ ಧರ್ಮಶ್ಯ ಜಾನಾತಿ ನರಸ್ಯ ಉ ತ್ತಂ ದಾನಪಾಲನ

೩೬. ಯೋರ್ಮಧ್ಯೆ ದಾನಾಛ್ರೇಯೋನುಪಾಲನಂ ದಾನಾತ್ಸ್ವರ್ಗಮ

೩೭. ವಾಪ್ನೋತಿ ಪಾಲನಾದಚ್ಯುತಂ ಪದಂ ಸ್ವದತ ದ್ವಿಗುಣಂ

೩೮. ಪುಣ್ಯಂ ಪರದತ್ತಾನುಪಾಲನಂ ಪರದತ್ತಾಪಹಾ

೩೯. ರೇಣ ಸ್ವದತ್ತಂ ನಿಷ್ಫಲಂ ಭವೇತು ಸ್ವದತ್ತಾ ಪುತ್ರಿಕಾಧಾ

೪೦. ತ್ರೀ ಪಿತ್ರುದತ್ತಾ ಸಹೋಧರೀ ಅಂನ್ಯದತ್ತಾ ಸ್ವಯಂ ಮಾ

೪೧. ತ್ತಾದತ್ತಾಂ ಭೂಮಿಂ ಪರಿತ್ಯಜೇತು ಯತ್ರ ಯೋಗೀಶ್ವ

೪೨. ರಃಕುರ್ಯಾತು ಶಿವಲಿಂಗಾರ್ಚನಂ ಸಕ್ರುತು ವಸಂತ್ತಿ ತ್ತ

೪೩. ತ್ರ ತೀರ್ಥನಿ ಶರ್ವಾಣೀ ಸಪ್ತಕಂ ಗುಹಹರಸ್ಯ ಪ್ರೀಣನಾ

೪೪. ರ್ಥತ್ತು ಶಿವಭಕ್ತಾಯ ದೀಯತೇ ದಾನಂ ತ್ತದ್ವಿಮಲ

೪೫. ಂಪ್ರೋಕ್ತಂ ಕೇವಲಂ ಮೋಕ್ಷ ಸಾಧನಂ ಶ್ರೀ ಸದಾಶಿವ

ಎಪಿ ಕ ೮ ತೀರ್ಥಹಳ್ಳಿ ೬೦ ಮತ್ತು ಕೆಳದಿ ಅರಸರ ಶಾಸನ ಸಂಪುಟ ಸಂಖ್ಯೆ ೨೨೫, ಪುಟ ೩೨೯ - ೩೯೩

'ಮಹತ್ತು' ಎಂಬುದು ಮಹಾನುಹತ್ತಿನವರ ಆದೇಶಾನುಸಾರ ನಡೆಯುವಂತಹುದಾಗಿದೆ.

ಶಾಸನದ ವಿವರ

ಕ್ರಿ.ಶ. ೧೭೦೮ರಲ್ಲಿ ಬಸವಪ್ಪನಾಯಕನ ಕಾಲದಲ್ಲಿ ಈ ಶಾಸನವು ಕೊಡಲ್ಪಟ್ಟಿದೆ. ಬೊಕ್ಕಸದ ಸಿದ್ಧಬಸವಯ್ಯನು ಹಂಪಿಯಲ್ಲಿ ನಡೆಸುವ ಧರ್ಮದ ಬಗ್ಗೆ ಇದು ಕೊಡಲ್ಪಟ್ಟದ್ದಾಗಿದೆ. ಈ ಭೂದಾನದ ಬಗ್ಗೆ ಈಗಾಗಲೇ ಮಹತ್ತಿಗೆ ಹಣವನ್ನು ಪಾವ್ತಿಸಿದ್ದರೂ ಅದನ್ನು ಇನ್ನೂ ಪಾವ್ತಿಸಿರುವುದಿಲ್ಲವೆಂದು ಸಿದ್ಧಬಸವಯ್ಯನು ಹೇಳಿಕೊಂಡ ಸಂಬಂಧ ಅದನ್ನು ಮರಿಯಪ್ಪನವರು ಮಹತ್ತಿನ ಗಮನಕ್ಕೆ ತಂದು ಮಹತ್ತಿನಿಂದ ಶಾಸನ ಬರೆಸಿಕೊಟ್ಟದ್ದಾಗಿದೆ. ಒಟ್ಟು ೧೨ ವರಹನ ಸ್ವಾಸ್ಥೆಯು ಹಂಪಿ ಜಾತ್ರೆಯಲ್ಲಿ ಮಹತ್ತಿನವರಿಗೆ ನಡೆಸುವ ಧರ್ಮಕ್ಕೆ ಶಿವಾರ್ಪಿತವಾಗಿ ಬಿಟ್ಟಿದ್ದು ಇದಾಗಿದೆ. ಸ್ವಾಮಿ ಕಣ್ಣುಪಿಳ್ಳೆರವರ ಪ್ರಕಾರ ಶಾಸನದ ಕಾಲದ ದಿನಾಂಕ ೨೬.೧.೧೭೦೮ ಸೋಮವಾರವಾಗುತ್ತದೆ.[೧]

ವಿಜಯನಗರ ಮತ್ತು ಕೆಳದಿ ಈ ಎರಡೂ ರಾಜ್ಯಗಳ ಸಂಬಂಧ, ಸಾಂಸ್ಕೃತಿಕ ಕೊಡುಗೆ ಮೊದಲಾದವುಗಳು ಈ ವರೆಗೆ ಅಧ್ಯಯನಕ್ಕೊಳಪಟ್ಟಿಲ್ಲವೆಂದೇ ಹೇಳಬೇಕು. ಇದು ರಾಜಕೀಯ ಸಂಬಂಧಗಳನ್ನು ಕುರಿತದ್ದೆನಿಸಿದರೂ ಸಾಂಸ್ಕೃತಿಕವಾಗಿಯೂ ಈ ಎರಡೂ ರಾಜ್ಯಗಳ ಕುರಿತಂತೆ ಸಾಕಷ್ಟು ಸಾಮ್ಯ ಕಂಡುಬರುತ್ತದೆ. ಈ ಬಗ್ಗೆ ದೀರ್ಘವಾಗಿ ಅಧ್ಯಯನ ಕೈಗೊಳ್ಳುವ ಅಗತ್ಯವಿದೆ. ಇಂತಹ ಪ್ರಯತ್ನ ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸಕ್ಕೆ ಉತ್ತಮ ಕೊಡುಗೆಯಾಗುತ್ತದೆ. ಅಂತಹ ಅಧ್ಯಯನ ಕೈಗೊಳ್ಳುವವರಿಗೆ ಈ ರೀತಿಯ ಆಕರಗಳು ಹೆಚ್ಚು ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ.

---

೧. ಹಂಪಿಯ ಪ್ರಮುಖದೇವರಾದ ಶ್ರೀವಿರೂಪಾಕ್ಷನಿಗೆ ಫಲಪೂಜೆಗಾಗಿ ನೀಡಿರಬಹುದಾದ ದಾನ ಇದಾಗಿದೆ. ಪ್ರತಿ ವರ್ಷ ಮಾಘಮಾಸದಲ್ಲಿ ಈಗಲೂ 'ಫಲಪೂಜೆ' ನಡೆಯುತ್ತದೆ. ಅದು ಜಾತ್ರೆಯಷ್ಟೆ ವಿಜೃಂಭಣೆಯಿಂದ ನಡೆಸಲ್ಪಡುತ್ತದೆ.

❑❑

೧೧

ಕಾರಂಜಿ ಹಾಗೂ ಜಲಕ್ರೀಡಾ ಸೌಧಗಳು

* ಪ್ರೊ. ಬಾಲಸುಬ್ರಮಣ್ಯ

ಹಂಪಿಯ ಕೇಂದ್ರ ಬಿಂದುವಿನಲ್ಲಿ ಕೆಲವು ಲೌಕಿಕ ಕಟ್ಟಡಗಳಿವೆ. ಇವು ಇಸ್ಲಾಂ ವಾಸ್ತುಶಿಲ್ಪದ ಲಕ್ಷಣವನ್ನು ಹೊಂದಿವೆ. ಈ ಸ್ಮಾರಕಗಳ ಬಗೆಗೆ ಚಾರಿತ್ರಿಕ, ಶಾಸನಾಧಾರಿತ, ಜನಪದ ಅಥವಾ ಸಾಹಿತ್ಯಿಕ ಆಧಾರಗಳು ದೊರೆತಿಲ್ಲ. ಈ ಸ್ಮಾರಕಗಳಲ್ಲಿ ಕೆಲವು ಅರಮನೆಗಳಾದರೆ, ಕೆಲವು ಸ್ನಾನಗೃಹ, ಕಾರಂಜಿ, ಆನೆಶಾಲೆ ಮತ್ತು ಜಲಕ್ರೀಡಾ ಸೌಧಗಳು. ಇವುಗಳೆಲ್ಲ ಒಂದೇ ರೀತಿಯ ವಿಶಿಷ್ಟ ವಾಸ್ತು ಲಕ್ಷಣವನ್ನು ಹೊಂದಿವೆ. ಈ ಸ್ಮಾರಕಗಳಲ್ಲಿ ಕೆಲವು ಮೂಲರೂಪದಲ್ಲಿದ್ದರೆ ಇನ್ನುಳಿದವುಗಳಲ್ಲಿ ಕಲ್ಲಿನ ತಳಪಾಯ ಮಾತ್ರ ಕಾಣಸಿಗುತ್ತವೆ. ಹೆಚ್ಚಿನ ಸ್ಮಾರಕಗಳ ಹೆಸರನ್ನು ಸಿವೆಲ್, ಲಾಂಗ್‌ಹರ್ಸ್ಟ್ ಅವರುಗಳು ನೀಡಿದ್ದಾರೆ. ಈ ಎಲ್ಲಾ ಸ್ಮಾರಕಗಳನ್ನು ವಿಜಯನಗರದರಸರು ನಿರ್ಮಿಸಿದ್ದಾರೆ. ಈ ನಿರ್ಮಿತಿಗಳನ್ನು ವಿಜಯನಗರದ ಅರಸರು, ಅಮಾತ್ಯರು, ಪ್ರತಿಷ್ಠಿತರು ಉಪಯೋಗಿಸಿರಬೇಕು.[೧] ಇಲ್ಲಿಯ ಕೆಲವು ಕಟ್ಟಡಗಳು ಕ್ರಿ.ಶ. ೧೫೬೫ರ ನಂತರ ಅಂದರೆ ರಕ್ಕಸತಂಗಡಿ ಯುದ್ಧದ ನಂತರ ನಿರ್ಮಿಸಲಾಗಿದೆ ಎಂದು ಗುರುತಿಸಿದ್ದಾರೆ. ವಿಜಯನಗರದ ರಾಜಕೀಯ ಇತಿಹಾಸವನ್ನು ನೋಡಿದರೆ, ರಕ್ಕಸತಂಗಡಿಯ ನಿರ್ಣಾಯಕ ಯುದ್ಧದ ನಂತರ ವಿಜಯನಗರ ಪಟ್ಟಣದಲ್ಲಿ ಯಾವುದೇ ಭವ್ಯ ಕಟ್ಟಡ ಕಟ್ಟುವ ಪ್ರಕ್ರಿಯೆ ನಡೆದಿಲ್ಲವೆಂದು ಕಂಡುಬರುತ್ತದೆ. ಇದರಿಂದ ಈ ಕಟ್ಟಡಗಳನ್ನು ಕ್ರಿ.ಶ. ೧೫೬೫ರ ನಂತರ ನಿರ್ಮಾಣ ಮಾಡದೆ, ಅದಕ್ಕೂ ಮೊದಲೇ

ಅಂದರೆ ವಿಜಯನಗರದ ಪ್ರಖ್ಯಾತ ರಾಜರ ಆಳ್ವಿಕೆಯಲ್ಲೇ ನಿರ್ಮಾಣವಾಗಿವೆ ಎಂದು ಹೇಳಬಹುದು.

ಕ್ರಿ.ಶ. ೧೪ನೇ ಶತಮಾನದಲ್ಲಿ ದೌಲತಾಬಾದ್ ಹಾಗೂ ಗುಲ್ಬರ್ಗಾಗಳಲ್ಲಿ ಮುಸ್ಲಿಂ ರಾಜರು ನೆಲಗಳನ್ನು ಹೊಂದಿದ್ದರು. ನಂತರದ ಎರಡು ಶತಮಾನಗಳಲ್ಲಿ ಇನ್ನೂ ಕೆಲವು ಪ್ರದೇಶಗಳಲ್ಲಿ ಮುಸ್ಲಿಂ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಇವುಗಳಿಗೆ ಉತ್ತಮ ಉದಾಹರಣೆ ಎಂದರೆ ಬೀದರ್ ಹಾಗೂ ಫಿರೋಜಾಬಾದ್. ಕ್ರಿ.ಶ. ೧೬-೧೭ರಲ್ಲಿ ಬಿಜಾಪುರ ಹಾಗೂ ಗೋಲ್ಕೊಂಡ ರಾಜ್ಯಗಳು ಪ್ರಖ್ಯಾತಿ ಹೊಂದಿದವು. ಹೊಸದಾಗಿ ಸ್ಥಾಪನೆಯಾದ ಎಲ್ಲ ಪ್ರದೇಶಗಳಲ್ಲಿ ಮುಸ್ಲಿಂ ಶೈಲಿಯ ಕಟ್ಟಡಗಳು, ಅರಮನೆ, ಹೆಬ್ಬಾಗಿಲು, ಗೋರಿಗಳು, ಗುಮ್ಮಟಗಳ ನಿರ್ಮಾಣವನ್ನು ಕಾಣಬಹುದು.

೧೫ನೇ ಶತಮಾನದ ಮುಸ್ಲಿಂ ವಾಸ್ತುಶಿಲ್ಪ ಸರಳವಾಗಿದ್ದು ಅಲಂಕರಣಾ ರಹಿತವಾಗಿದೆ. ಇಲ್ಲಿ ಕಂಬಗಳ ಮೇಲೆ ಕಮಾನುಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಅಲ್ಲದೆ ಇಲ್ಲಿಯ ಗೋಡೆಗಳು ಇಳಿಜಾರು ಮೇಲ್ಮೈಯನ್ನು ಹೊಂದಿವೆ. ಕ್ರಿ.ಶ. ೧೬ನೇ ಶತಮಾನದಲ್ಲಿ ಈ ವಾಸ್ತುವಿನಲ್ಲಿ ಹಲವು ಬದಲಾವಣೆಗಳನ್ನು ಕಾಣಬಹುದು. ಈ ಬದಲಾವಣೆಗಳು ಕಮಾನುಗಳ ನಿರ್ಮಾಣ, ಗುಮ್ಮಟ, ಗುಮ್ಮಟದ ಮೂಲೆಯ ಕಮಾನುಗಳು, ಪುಷ್ಪಾಲಂಕೃತ ಪದಕಗಳು, ಜಾಮಿತಿಯ ಆಕಾರಗಳು, ಹಲವು ಅರೆಚಂದ್ರಗಳ ಕಮಾನುಗಳು ಹೆಚ್ಚಾಗಿ ಕಾಣಸಿಗುತ್ತವೆ. ಇವುಗಳಲ್ಲದೆ ಕಟ್ಟಡದ ಮೇಲೆ ಇರುವ ಕೈಪಿಡಿ ಗೋಡೆ ಮತ್ತು ನಿಗದಿತ ಅಳತೆಯಲ್ಲಿ ನಿರ್ಮಿಸಿರುವ ಸಣ್ಣ ಮಿನಾರ್‌ಗಳನ್ನೂ ಕಾಣಬಹುದು.

ವಿಜಯನಗರದ ವಾಸ್ತುಶಿಲ್ಪಿಗಳು ಮುಸ್ಲಿಂ ಶೈಲಿಯ ವಾಸ್ತುವಿನ ಬಗೆಗೆ ಅರಿವನ್ನು ಹೊಂದಿದ್ದರು. ವಿಜಯನಗರ ಹಾಗೂ ನೆರೆಯ ಬಹಮನಿ ಸುಲ್ತಾನರೊಡನೆ ಆಗಿಂದಾಗ್ಗೆ ಯುದ್ಧ ನಡೆಯುತ್ತಿದ್ದವು. ಕೆಲವು ವಿಜಯನಗರದ ಅರಸರು ತಮ್ಮನ್ನು ಹಿಂದೂರಾಜ ಸುರತ್ರಾಣ ಎಂದು ಕರೆದುಕೊಂಡಿದ್ದಾರೆ. ಅಂದರೆ ಸುಲ್ತಾನ ಎನ್ನುವುದು ರಾಜತ್ವದ ಪರಾಕಾಷ್ಠೆ ಎಂದು ತಿಳಿದಿದ್ದರಿಂದ ಆ ಹೆಸರನ್ನು ಹೊಂದಿದ್ದರೆಂದು ತೋರುತ್ತದೆ. ಪದೇಪದೇ ಯುದ್ಧಗಳು ನಡೆಯುತ್ತಿದ್ದರಿಂದ ಉತ್ತಮ ಬಿಲ್ಲುಗಾರರು ಹಾಗೂ ಕುದುರೆ ಸವಾರರ ಅವಶ್ಯಕತೆ ಮನಗಂಡು ತಮ್ಮ ಸೈನ್ಯದಲ್ಲಿ ಪರಿಣಿತ ಕುದುರೆ ಸವಾರರು ಹಾಗೂ ಬಿಲ್ಲುಗಾರರನ್ನು ಸೇರಿಸಿಕೊಂಡಿದ್ದರು. ಈ ದಿಸೆಯಲ್ಲಿ ಮೊದಲು ಕಾರ್ಯಪ್ರವೃತ್ತರಾದವನು ಎರಡನೇ ದೇವರಾಯ, ಹಲವಾರು ಜನ ಮುಸ್ಲಿಂ ಸೈನಿಕರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡಿದ್ದನು. ಇವರಲ್ಲಿ ಮುಖ್ಯರಾದವರು ಮತ್ತು ಪ್ರಭಾವಿಗಳು ವಿಶಿಷ್ಟ ಶೈಲಿಯ ಕಟ್ಟಡಗಳ ನಿರ್ಮಾಣವನ್ನು ಮಾಡಿದರು. ಇಲ್ಲಿರುವ ಕೆಲವು ಗೋರಿಗಳು ೧೪-೧೫ ನೇ ಶತಮಾನದ ಗೋರಿಗಳ ಶೈಲಿಯನ್ನು, ಅಲ್ಲದೆ ಕೆಲವು ಗುಲ್ಬರ್ಗ ಗೋರಿಗಳ ಶೈಲಿಯನ್ನೂ ಹೋಲುತ್ತವೆ. ಇಲ್ಲಿರುವ ಕಟ್ಟಡಗಳು ರಾಜನಿಗೆ ಹಾಗೂ ರಕ್ಷಣ ವ್ಯವಸ್ಥೆಗೆ ಪೂರಕವಾಗಿವೆ.

ಈ ರೀತಿಯ ರಕ್ಷಣ ವ್ಯವಸ್ಥೆಗೆ ಅನುಕೂಲ ಕಲ್ಪಿಸುವ ಕಟ್ಟಡಗಳು ವಿಜಯನಗರದಲ್ಲಿ ಕ್ರಿ.ಶ. ೧೫೬೫ರ ನಂತರ ವಿಜಯನಗರದಲ್ಲಿ ಕಾಣಬರದಿದ್ದರೂ ಮುಂದೆ ಇವು ಚಂದ್ರಗಿರಿ ಹಾಗೂ ಪೆನುಗೊಂಡೆಯಲ್ಲಿ ವೃದ್ಧಿಯಾಗಿರುವುದನ್ನು ಕಾಣಬಹುದು.

ಕಮಲಾಪುರದಿಂದ ಹಂಪಿಗೆ ಹೋಗುವ ದಾರಿಯಲ್ಲಿ ಅಷ್ಟಕೋನಾಕೃತಿಯ ನೀರಿನ ಕಾರಂಜಿ ಮಂಟಪವಿದೆ. ಈ ಮಂಟಪದ ಮಧ್ಯದಲ್ಲಿ ಕೆಳಬಾಗಕ್ಕೆ ಹೊಂದಿಕೊಂಡಂತೆ ಕೆಲವು ಮೆಟ್ಟಿಲುಗಳಿವೆ. ಮೊದಲನೆಯದು ಅಷ್ಟಕೋನಾಕೃತಿಯಿದ್ದರೆ, ನಂತರದ್ದು ಕಮಲದ ದಳಗಳನ್ನು ಹೊಂದಿದೆ. ಅದರ ನಂತರದ ಕೆಳಭಾಗ ಚೌಕಾಕೃತಿಯಲ್ಲಿನ ಕಾರಂಜಿಯ ವ್ಯವಸ್ಥೆ ಹೊಂದಿದೆ. ಈ ಅಷ್ಟಕೋನಾಕೃತಿಯ ಮಧ್ಯಭಾಗದಿಂದ ನಾಲ್ಕು ದಿಕ್ಕಿಗೂ ಚೂಪಾದ ಕಮಾನಿನ ದ್ವಾರಗಳಿವೆ. ಎರಡು ದ್ವಾರಗಳ ಮಧ್ಯೆ ಮೂಲೆಯ ಮೇಲೆ ಗೋಡೆಯಿದ್ದು, ಮಧ್ಯಭಾಗಕ್ಕೆ ಕಮಾನಿನ ಕಿಟಕಿಯಿದೆ. ಈ ಕಿಟಕಿಯ ಮೇಲೆ ಮತ್ತೊಂದು ಕಮಾನಿನ ಮಾದರಿಯನ್ನು ಗಾರೆಯಿಂದ ಮೂಡಿಸಲಾಗಿದೆ. ಒಟ್ಟು ನಾಲ್ಕು ಕಮಾನಿನ ಆಕಾರಗಳನ್ನು ಕಾಣಬಹುದು. ಇವುಗಳ ಮೇಲೆ ಗುಮ್ಮಟದ ಕೆಳಭಾಗದಲ್ಲಿ ಬಹು ಕಮಾನಿನ ಆಕಾರದ ಗೂಡುಗಳ ಪಟ್ಟಿಕೆಯಿದೆ. ಈ ಪಟ್ಟಿಕೆಗಳ ಕೆಳಭಾಗದಲ್ಲಿ ಬಾಣದ ಮೊನೆಯ ಅಲಂಕರಣೆಯಿದ್ದರೆ ಪಟ್ಟಿಕೆಯ ಮೇಲು ಭಾಗದಲ್ಲಿ ಜಾಲಂದ್ರದ ಸಣ್ಣ ಪಟ್ಟಿಕೆಯಿದೆ. ಇದರ ಮೇಲಿರುವ ಗುಮ್ಮಟದ ಒಳಭಾಗವು ಯಾವುದೇ ಅಲಂಕರಣೆ ಹೊಂದಿಲ್ಲ. ಇಲ್ಲಿರುವ ಏಕಶಿಲಾ ತೊಟ್ಟಿಯಲ್ಲಿ ಹಾಲನ್ನು ತುಂಬಿ ಹಬ್ಬದ ದಿನಗಳಲ್ಲಿ ಬಡವರಿಗೆ ನೀಡುತ್ತಿದ್ದರು ಎಂದು ಹೇಳಲಾಗಿದೆ.[೨]

ಕಾರಂಜಿಯ ಮಧ್ಯಭಾಗದ ಸುತ್ತ ಪ್ರಾಂಗಣವಿದೆ. ಮಧ್ಯ ಕಮಾನುಗಳು ಮತ್ತು ಅಷ್ಟಕೋನಾಕೃತಿಯ ಗುಮ್ಮಟವಿದೆ. ಮಧ್ಯದ ಕಾರಂಜಿಯ ಸುತ್ತ ನಾಲ್ಕು ಬಾಗಿಲು ಹಾಗೂ ಕಿಟಕಿ ಹೊಂದಿದ ಗೋಡೆಯಿದೆ. ನಾಲ್ಕು ಬಾಗಿಲಿನ ಮುಂದಿರುವ ಪ್ರಾಂಗಣದ ಚತ್ತಿಗೆ ಅಷ್ಟಕೋನಾಕೃತಿಯ ಗುಮ್ಮಟವಿದೆ. ಅದೇ ರೀತಿ ಗೋಡೆಯ ಮಧ್ಯೆ ಕಿಟಕಿ ಹೊಂದಿರುವ ಪ್ರಾಂಗಣದ ಚತ್ತಿನಲ್ಲಿ ಷಡ್‌ಕೋನಾಕೃತಿಯ ಗುಮ್ಮಟವಿದೆ. ಅಷ್ಟಕೋನಾಕೃತಿಯ ಮೇಲ್ಛಾವಣಿ ಸಮತಟ್ಟಾಗಿದ್ದರೆ, ಷಡ್‌ಕೋನಾಕೃತಿಯ ಮೇಲ್ಛಾವಣಿ ಚೂಪಾಗಿದೆ.

ಈ ಕಟ್ಟಡದ ಹೊರಭಾಗ ಯಾವುದೇ ಅಲಂಕರಣೆ ಹೊಂದಿರುವುದಿಲ್ಲ. ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಕಮಾನಿನ ಹೊರಭಾಗದಲ್ಲಿ ಬಹು ಕಮಾನಿನ ಗುಚ್ಛದ ಗಾರೆಯ ಉಬ್ಬು ಅಲಂಕರಣೆಯಿದೆ. ಕಟ್ಟಡದ ಮೇಲೆ ಕೈಪಿಡಿ ಗೋಡೆಯಿದೆ. ಇಲ್ಲಿ ಬಾಣದ ಮೊನೆಯ ಹಾಗೆಯೆ ಮೊನೆಯ ಹೊರ ತುದಿಯಲ್ಲಿ ದುಂಡನೆಯ ಮಣಿಗಳ ಅಲಂಕರಣವಿದೆ. ಮೂಲೆಗಳ ಮೇಲೆ ಅರೆ ಕಂಬಗಳಿವೆ. ಅದರ ಮೇಲೆ ಕಳಸದ ಅಲಂಕರಣೆಯಿದ್ದಿರಬೇಕು, ಆದರೆ ಇತ್ತೀಚಿನ ದಿನಗಳಲ್ಲಿ ಈ ಭಾಗ ಹಾಳಾಗಿದೆ ಎಂದು ತೋರುತ್ತದೆ. ಮುಖ್ಯ ಗೋಪುರದ ಹೊರಭಾಗವು ಅಲಂಕರಣೆಯಿಂದ ಕೂಡಿದೆ. ಇದರ ಮಧ್ಯಭಾಗವು

ಅಷ್ಟಕೋನಾಕೃತಿಯ ಗುಮ್ಮಟವನ್ನು ಹೊಂದಿದ್ದು[೩] ಅದರ ಮೇಲೆ ದುಂಡನೆಯ ಗೋಪುರ ಹಾಗೂ ಅದರ ತುದಿಯಲ್ಲಿ ಕಳಸವಿದ್ದಿರಬೇಕು.

ಈ ಕಾರಂಜಿಗೆ ನೀರನ್ನು ಸುಟ್ಟ ಮಣ್ಣಿನ ಕೊಳವೆಯ ಮೂಲಕ ಹಾಯಿಸಲಾಗುತ್ತಿತ್ತು. ಈ ರೀತಿ ನೀರು ಹಾಯಿಸಲು ಸುಟ್ಟ ಮಣ್ಣಿನ ಕೊಳವೆಗಳನ್ನು ಉಪಯೋಗಿಸುತ್ತಿದ್ದು, ಅವುಗಳ ಕುರುಹನ್ನು ಪೂರ್ವದಲ್ಲಿರುವ ಕೊಳವೆಗಳಿಂದ ಗುರುತಿಸಬಹುದಾಗಿದೆ. ಈ ಕಾರಂಜಿಗೆ ಪೂರ್ವ ದಿಕ್ಕಿನಲ್ಲಿ ಗಾರೆಯ ಒಂದು ದೊಡ್ಡ ತೊಟ್ಟಿಯಿದೆ. ಈ ತೊಟ್ಟಿಯಿಂದ ಮೂರು ಕೊಳವೆಗಳು ಬಂದಿವೆ. ಇವುಗಳಲ್ಲಿ ಒಂದನ್ನು ಉಪಯೋಗಿಸಿಕೊಂಡು ನೀರನ್ನು ಕಾರಂಜಿಗೆ ತಂದಿರಬೇಕು. ಇನ್ನುಳಿದ ಎರಡು ಕೊಳವೆಗಳು, ಈ ಕಟ್ಟಡದ ಮುಂಭಾಗದಿಂದ ಹಾಯ್ದು ಹೋಗುತ್ತವೆ. ಇಲ್ಲಿ ಕುರುಹುಗಳು ಹಾಳಾಗಿರುವುದರಿಂದ ಗುರುತಿಸುವುದು ಕಷ್ಟಕರವಾಗಿದೆ. ಈ ಜೋಡು ಕೊಳವೆಗಳನ್ನು ಇಟ್ಟಿಗೆ ಹಾಗೂ ಗಾರೆಯಿಂದ ವ್ಯವಸ್ಥಿತವಾಗಿ ಜೋಡಿಸಿ ಭದ್ರಪಡಿಸಲಾಗಿದೆ. ಈ ರೀತಿ ಮಾಡಿರುವುದರಿಂದ ಮಣ್ಣಿನ ಕೊಳವೆಗಳು ಗಟ್ಟಿಯಾಗಿ ಇರುವುದಲ್ಲದೆ, ಶೀಘ್ರವಾಗಿ ಹಾಳಾಗದ ರೀತಿ ಎಚ್ಚರವಹಿಸಲಾಗಿದೆ.

ಈ ಚೌಕಾಕಾರದ ತೊಟ್ಟಿಗೆ ಹೊರಗಿನಿಂದ ಅಂದರೆ, ಮಹಾನವಮಿ ದಿಬ್ಬದ ಬಳಿಯಿರುವ ನೀರಿನ ಕಾಲುವೆಯಿಂದ ನೀರನ್ನು ಒದಗಿಸುವ ವ್ಯವಸ್ಥೆ ಹೊಂದಿರಬೇಕು. ಇದಕ್ಕೆ ಸಂಬಂಧಿಸಿದಂತೆ ಅಲ್ಲಲ್ಲೆ ಮುರಿದು ಬಿದ್ದಿರುವ ಕೊಳವೆಗಳನ್ನು ಗುರುತಿಸಬಹುದಾಗಿದೆ.

ರಾಜಪ್ರಾಂಗಾಣದ ಪೂರ್ವಕ್ಕೆ ಮಂಟಪದ ಮಾದರಿಯ ಅಷ್ಟಕೋನಾಕೃತಿಯ ಕಟ್ಟಡವಿದೆ. ಇಲ್ಲಿ ಎರಡು ಸಾಲಿನ ಕಂಬಗಳಿದ್ದು ಪ್ರತಿ ಸಾಲಿನಲ್ಲಿಯೂ ೨೪ ಕಂಬಗಳಿವೆ. ಮಧ್ಯದಲ್ಲಿ ಅಷ್ಟಕೋನಾಕೃತಿಯ ವೇದಿಕೆಯಿದೆ. ತೊಟ್ಟಿಯ ಅಧಿಷ್ಠಾನದ ಭಾಗ ಹಾಗೂ ವೇದಿಕೆಯ ಅಧಿಷ್ಠಾನದ ಭಾಗವನ್ನು ದೇವಸ್ಥಾನಗಳ ಅಧಿಷ್ಠಾನದ ರೀತಿ ಸಿಂಗರಿಸಲಾಗಿದೆ.

ಈ ಅಷ್ಟಕೋನಾಕೃತಿಯ ಕಟ್ಟಡದ ಹೊರಭಾಗದಲ್ಲಿ ಯಾವುದೇ ರೀತಿಯ ಅಲಂಕರಣೆಯಿರುವುದಿಲ್ಲ. ಆದರೆ ಒಳಭಾಗದಲ್ಲಿ ಹೂ ಮತ್ತು ಬಳ್ಳಿಯ ಅಲಂಕರಣೆಯಿದೆ. ಮಧ್ಯದ ತೊಟ್ಟಿಗೆ ನೀರನ್ನು ಸಣ್ಣ ಕಾಲುವೆಗಳ ಮೂಲಕ ನೀರನ್ನು ಹಾಯಿಸಲು ವ್ಯವಸ್ಥೆಯಿದೆ. ಈ ಸ್ಥಳಕ್ಕೆ ನೀರನ್ನು ಎಲ್ಲಿಂದ ಹಾಯಿಸುತ್ತಿದ್ದರು ಎಂದು ಹೇಳುವುದು ಕಷ್ಟಕರ. ರಾಜಪ್ರಾಂಗಣಕ್ಕೆ ನೀರನ್ನು ಹಾಯಿಸುವ ಪ್ರಮುಖ ಕೊಳವೆಗಳ ಒಂದು ಟಿಸಿಲು ಕೊಳವೆ ಮೂಲಕ ಇಲ್ಲಿಗೆ ನೀರನ್ನು ಹಾಯಿಸಲಾಗುತ್ತಿತ್ತು ಎಂದು ತೋರುತ್ತದೆ. ಈ ಸ್ನಾನ ಗೃಹದ ಸುತ್ತ ಉತ್ಖನನ ಮಾಡಿದಾಗ ಮಾತ್ರ ಈ ಬಗ್ಗೆ ಹೆಚ್ಚಿನ ಮಾಹಿತಿ ದೊರಕಬಹುದೆಂದು ತೋರುತ್ತದೆ. ತೊಟ್ಟಿಯ ಕೆಳಭಾಗ, ಪಕ್ಕದ ಗೋಡೆ, ವೇದಿಕೆಯ ಮೇಲ್ಭಾಗ ಹಾಗೂ ಪಕ್ಕದ ಗೋಡೆಗಳನ್ನು ಗಾರೆಯಿಂದ ಸಿಂಗರಿಸಲಾಗಿದೆ. ಈ ಗೃಹದ ಪೂರ್ವಕ್ಕೆ ಆಯತಾಕಾರದ ಕಟ್ಟಡವಿದೆ. ಈ ಕಟ್ಟಡಕ್ಕೆ ಉತ್ತರದಲ್ಲಿ ಬಾಗಿಲಿದೆ. ಇದರ ಮೇಲ್ಛಾವಣಿ ಹಾಳಾಗಿದೆ. ಬಹುಶಃ ಇದು ಕಮಾನಿನಾಕೃತಿಯ ಮೇಲ್ಛಾವಣಿ ಹೊಂದಿರಬೇಕು

ಎನಿಸುತ್ತದೆ. ಈ ಮಂಟಪದ ಹೊರಭಾಗ ಸಂಪೂರ್ಣ ಹಾಳಾಗಿದ್ದು ಯಾವುದೇ ಅಲಂಕರಣೆಯಿರುವುದಿಲ್ಲ.

ರಾಣಿಯರ ಸ್ನಾನಗೃಹ ಎಂದು ಕರೆಯುವ ಕಟ್ಟಡವು ಕಮಲಾಪುರ ಹಂಪಿ ರಸ್ತೆಯ ಬದಿಯಲ್ಲಿದೆ. ಈ ಸ್ನಾನಗೃಹ ಅಥವಾ ಜಲಕ್ರೀಡಾ ಸೌಧ ನಿರ್ಮಾಣದ ಬಗೆಗೆ ನಿಖರವಾದ ಮಾಹಿತಿಯಿಲ್ಲ. ಈ ಕಟ್ಟಡವನ್ನು ಯಾರು ನಿರ್ಮಾಣ ಮಾಡಿದರು ಮತ್ತು ಇದರ ಉಪ ಯೋಗ ಮಾಡಿದ ಬಗೆಗೆ ನಿಖರವಾದ ದಾಖಲೆಗಳಿಲ್ಲ. ಈ ಕಟ್ಟಡವು ಚೌಕಾಕಾರವಾಗಿದ್ದು, ಅದರ ಸುತ್ತಲೂ ನೀರನ ಕಾಲುವೆ ಇದೆ.[೪] ಪೂರ್ವ ಭಾಗದಲ್ಲಿರುವ ಸಣ್ಣ ದೋಣಿಯ ಮೂಲಕ ನೀರನ್ನು ಹರಿಸಲಾಗುತ್ತಿತ್ತು. ಈ ಕಟ್ಟಡದ ಮಧ್ಯದಲ್ಲಿರುವ ಚೌಕಾಕಾರದ ತೊಟ್ಟಿಯ ಸುತ್ತ ಸುಮಾರು ೪ ಮೀಟರ್ ಅಗಲದ ಪ್ರಾಂಗಣವಿದೆ. ಇಲ್ಲಿ ೨೪ ಕಮಾನಿನ ಚಾವಣಿ ಹಾಗೂ ಕಂಬಗಳಿವೆ.[೫] ಪ್ರತಿ ಅಂಕಣದ ತುದಿಯಲ್ಲಿರುವ ಹೊರಗೋಡೆಯಲ್ಲಿ ಸಣ್ಣ ಕಮಾನುಗಳ ಕಿಟಕಿಗಳನ್ನು ನಿರ್ಮಿಸಲಾಗಿದೆ. ಪೂರ್ವ, ಪಶ್ಚಿಮ, ಉತ್ತರ ಗೋಡೆಗಳ ಮಧ್ಯಭಾಗದಲ್ಲಿ ದೊಡ್ಡದಾದ ತೆರೆದ ಕಮಾನುಗಳಿವೆ. ದಕ್ಷಿಣದ ಮಧ್ಯಭಾಗವು ಮುಂಚಾಚಿದ ಅಟ್ಟಣಿಗೆಯನ್ನು ಹೊಂದಿದೆ. ಇದು ಮುಂದಿರುವ ಕಾಲುವೆಯ ಮೇಲೆ ಚಾಚಿಕೊಂಡಿದೆ. ಈ ಅಟ್ಟಣಿಗೆಯ ಪಕ್ಕದಲ್ಲಿ ಚಿಕ್ಕಚಿಕ್ಕ ಕಮಾನುಗಳುಳ್ಳ ಪ್ರವೇಶದ್ವಾರವಿದೆ. ಈ ಪ್ರವೇಶದ್ವಾರದ ಪಕ್ಕದಲ್ಲಿ ಗೋಡೆಯು ಸ್ವಲ್ಪ ಮುಂಚಾಚನ್ನು ಹೊಂದಿದೆ. ಇಲ್ಲಿ ಒಳಭಾಗಕ್ಕೆ ಹೊಂದಿಕೊಂಡಂತೆ ಉಪ್ಪರಿಗೆಯ ಮೇಲೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.

ಈ ಕಟ್ಟಡದ ಒಳಭಾಗದಲ್ಲಿನ ಅಂಕಣದ ಸುತ್ತಲೂ ಚೂಪಾದ ಕಮಾನುಗಳನ್ನು ಮೂರು ಭಾಗದಲ್ಲಿ ಕಾಣಬಹುದು. ಈ ಕಮಾನುಗಳಲ್ಲಿರುವ ಮುಂಬಾಣೆ, ಹಿಂಬಣೆಗಳು ಆಧಾರವಾಗಿರುವ ಕಂಬದಲ್ಲೂ ಮುಂದುವರಿದಿದೆ. ಇಲ್ಲಿರುವ ಗುಮ್ಮಟಗಳು ಹಾಗೂ ಕಮಾನು ಛಾವಣಿಗಳು ಹಲವು ಬಗೆಯವು. ಕೆಲವು ಅಷ್ಟಕೋನಾಕೃತಿ, ದುಂಡಾಕೃತಿ ಮತ್ತು ಇತರ ಬಗೆಯದಾಗಿವೆ. ದುಂಡನೆಯ ಮತ್ತು ಅಷ್ಟಕೋನಾಕೃತಿಯ ಗುಮ್ಮಟಗಳು, ಅದರ ಕೆಳತುದಿಯಲ್ಲಿ ಅರೆಗಂಬಗಳು, ಪುಷ್ಪಾಕೃತಿಯ ಫಲಕಗಳು, ಕಮಲದ ಮೊಗ್ಗುಗಳು, ಹಂಸದ ಸಾಲು ಮತ್ತು ಕುಳಿತಿರುವ ಯಾಳಿಗಳು ಇಲ್ಲಿ ಮುಂತಾದ ಅಲಂಕಾರವಿದೆ. ಅಲ್ಲದೆ ಕಮಲದ ಹೂವಿನ ಗಾರೆಯ ಅಲಂಕರಣೆಯೂಯಿದೆ. ಗುಮ್ಮಟಗಳ ಒಳಭಾಗದಲ್ಲಿ ಬಾಗಿರುವಂತೆ ಹಲವು ಪಟ್ಟಿಕೆಗಳು ಸಮೂಹ, ಒಂದೆಡೆ ಸೇರುವ ಪುಷ್ಪಾಕೃತಿ, ವಿಸ್ತೃತವಾದ ದಳಗಳು, ಮೂರು ದಳಗಳ ಆಕೃತಿಗಳು, ಗಿಳಿಗಳ ಸಾಲು, ಹಲವು ಬಗೆಯ ಬಳ್ಳಿಗಳು, ಲತಾಹಾರಗಳು, ಪರಸ್ಪರ ಛೇದಿಸುವ ಕೋನಾಕೃತಿಯವು, ಅಷ್ಟಕೋನಾಕೃತಿಯವು ಗುಮ್ಮಟವನ್ನು ಹೊತ್ತಿರುವಂತೆ ನಿರ್ಮಿಸಲಾಗಿದೆ. ಗೋಪುರದ ರೀತಿಯ ಕಮಾನುಗಳು ಉದ್ದನೆಯ ಅಲಂಕರಣಗಳ ಪಟ್ಟಿಕೆಗಳನ್ನು ಹೊಂದಿವೆ. ಇವುಗಳೊಡನೆ ಸರಪಳಿಗಳ ಪಟ್ಟಿಕೆಗಳೂ ಇವೆ. ಉತ್ತರ ಹಾಗೂ ಪಶ್ಚಿಮದ ಮಧ್ಯದ ಗುಮ್ಮಟಗಳು ಎತ್ತರವಾಗಿದ್ದು ಎರಡು ಸುತ್ತಿನ

ಪಟ್ಟಿಕೆಗಳ ಅಲಂಕರಣೆಯಿದೆ. ಈ ಗುಮ್ಮಟಗಳ ಮಧ್ಯದ ಭಾಗ ಸಮತಟ್ಟಾಗಿದೆ. ಈ ಗುಮ್ಮಟಗಳ ಮಧ್ಯ ಭಾಗದಲ್ಲಿ ದೊಡ್ಡದಾದ ಕಮಲದ ಹೂಗಳ ಫಲಕವಿದೆ.

ಕಿಟಕಿಗಳು ಹಾಗೂ ಬಾಗಿಲಿನ ಕಮಾನುಗಳು ಚೂಪಾಗಿವೆ. ಮುಂಚಾಚಿದ ಅಟ್ಟಣಿಗೆ ಒಳಭಾಗದಲ್ಲಿ ಅತೀ ನಾಜೂಕಿನ ಗಾರೆಯಿಂದ ನಿರ್ಮಿಸಿದ ಜ್ಯಾಮಿತಿಯ ಮಾದರಿಗಳು, ಪುಷ್ಪ ಮಾಲೆ, ಹಂಸಗಳ ಸಾಲು, ಹೀಗೆ ಅನೇಕ ಮಾದರಿಗಳಿವೆ. ಈ ಅಟ್ಟಣಿಗೆಗಳು ಮುಂಭಾಗ ಹಾಗೂ ಎರಡೂ ಪಕ್ಕದ ಭಾಗದಲ್ಲಿ ಎರಡು ಸಾಲಿನ ಕಿಟಕಿಗಳಿವೆ. ಈ ಸಾಲುಗಳ ಮಧ್ಯದಲ್ಲಿ ಉಬ್ಬಿದ ಆಲಂಕೃತ ಪಟ್ಟಿಕೆ ಎದ್ದು ಕಾಣುತ್ತದೆ. ಈ ಎರಡೂ ಸಾಲಿನ ಕಿಟಕಿಗಳೂ ಒಂದು ಆಯತಾಕಾರದ ನಿರ್ಮಿತಿಯೊಳಗಿವೆ. ಈ ಅಟ್ಟಣಿಗೆಯ ಒಳಭಾಗದಲ್ಲಿ ಚಿಕ್ಕದಾದ ಗುಮ್ಮಟದ ಮಾದರಿಗಳಿವೆ. ಕೆಲವು ದುಂಡಗೆ, ಚೌಕಾಕಾರವಾಗಿ, ಕೋನಾಕೃತಿಯಲ್ಲಿವೆ.

ಈ ಕಟ್ಟಡದ ಮಧ್ಯದಲ್ಲಿರುವ ನೀರಿನ ತೊಟ್ಟಿಗೆ ನೀರನ್ನು ಹಾಯಿಸುವ ಹರನಾಳದ ತುದಿಯು ಕಮಲದ ಹೂವಿನ ಆಕಾರವನ್ನು ಹೊಂದಿದೆ. ಈ ಅಟ್ಟಣಿಗೆಗಳನ್ನು ನಾಲ್ಕು ಉದ್ದನೆಯ ಮುಂಚಾಚಿದ ತೊಲೆಗಳ ಮೇಲೆ ನಿರ್ಮಿಸಲಾಗಿದೆ. ಈ ತೊಲೆಗಳು ಒಂದರ ಮೇಲೆ ಒಂದನ್ನು ಇಟ್ಟು ಭದ್ರವಾಗಿ ನಿರ್ಮಿಸಲಾಗಿದೆ. ಒಳಭಾಗದಂತೆ ಈ ಅಟ್ಟಣಿಗೆಯ ಹೊರಭಾಗದಲ್ಲಿಯೂ ಸಹ ಅಲಂಕರಣೆಯಿದೆ. ಇಲ್ಲಿರುವ ಎರಡು ಸಾಲಿನ ಕಿಟಕಿಗಳಲ್ಲಿ ಮೇಲಿನವು ಚೂಪು ಕಮಾನನ್ನು ಹೊಂದಿದ್ದರೆ ಕೆಳಭಾಗದವು ಚೂಪು ಕಮಾನು ಹಾಗೂ ಆಯತಾಕಾರವನ್ನು ಹೊಂದಿವೆ. ಈ ಕಿಟಕಿಗಳ ಸುತ್ತ ನಿರ್ಮಿಸಲಾದ ಅಲಂಕರಣೆ ನೋಡುಗರ ಗಮನ ಸೆಳೆಯುತ್ತವೆ. ಕಿಟಕಿಗಳ ಮೇಲೆ ಸಣ್ಣ ಚಜ್ಜಾವಿದ್ದು ಅದನ್ನು ಹಾರುವ ಯಾಳಿಗಳು ಹೊತ್ತಿರಬೇಕು. ಇಲ್ಲಿ ಕೆಲವು ಹಾರುವ ಯಾಳಿಯ ಕುರುಹುಗಳಿವೆ. ಈ ಚಜ್ಜಾದ ಮೇಲಿನ ಸಣ್ಣ ಕೈಪಿಡಿ ಗೋಡೆಯ ಮೇಲೆ ಕಮಾನು, ಅರೆಗಂಬಗಳನ್ನು ಗಾರೆಯಲ್ಲಿ ಮೂಡಿಸಲಾಗಿದೆ. ಈ ಕಟ್ಟಡದ ಮಧ್ಯದ ನೀರಿನ ತೊಟ್ಟಿಗೆ ಇಳಿಯಲು ಉತ್ತರ ಭಾಗದಲ್ಲಿ ಮೆಟ್ಟಿಲುಗಳಿವೆ.

ಈ ಕಟ್ಟಡದ ಒಳಭಾಗದ ಗೋಡೆಯ ಮೇಲೆ, ಅಂದರೆ ಅಟ್ಟಣಿಗೆಗಳ ಮೇಲೆ ದೊಡ್ಡ ಚಜ್ಜಾವನ್ನು ನಿರ್ಮಿಸಲಾಗಿದ್ದು, ಅವು ಹಾಳಾಗಿರುವುದರಿಂದ, ಚಜ್ಜಾಗೆ ಉಪಯೋಗಿಸಿದ ಅಡ್ಡ ತೊಲೆಗಳ ಒಂದರ ಮೇಲೆ ಒಂದಿರುವುದನ್ನು ಕಾಣಬಹುದು. ಈ ಚಜ್ಜಾವನ್ನು ನೆಗೆಯುವ ಯಾಳಿಗಳು ಹೊತ್ತಂತೆ ನಿರ್ಮಿಸಲಾಗಿದೆ. ಈಗ ಅಲ್ಲಲ್ಲಿ ಅವುಗಳ ಕುರುಹುಗಳು ಗೋಡೆಯಲ್ಲಿವೆ. ಒಳಭಾಗದ ಗೋಡೆಯ ಮೇಲು ತುದಿಯಲ್ಲಿ ಕೈಪಿಡಿ ಗೋಡೆಯಿದೆ. ಇವುಗಳಲ್ಲಿ ಕಮಾನುಗಳು ಮತ್ತು ಕಮಾನಿನ ಸಣ್ಣ ಕಿಟಕಿಗಳನ್ನು ಇಟ್ಟು ಸಿಂಗರಿಸಲಾಗಿದೆ. ಇವುಗಳ ಮಧ್ಯೆ ಅಲ್ಲಲ್ಲಿ ಅರೆಗಂಬಗಳಿವೆ. ಈ ಕಮಾನುಗಳು ಹಾಗೂ ಅರೆಗಂಬಗಳ ಮೇಲೆ ತೆನೆಗಳ ಸಾಲನ್ನು ನಿರ್ಮಿಸಲಾಗಿದೆ.

ಈ ಕಟ್ಟಡವನ್ನು ಗಾರೆಶಿಲ್ಪಗಳಿಂದ ಸಿಂಗರಿಸಲಾಗಿತ್ತು. ಈ ಕಟ್ಟಡವು ರಾಜ ಪರಿವಾರದವರ ಉಪಯೋಗಕ್ಕೆ ಇದ್ದಿರಬೇಕು. ಈ ಕಟ್ಟಡದ ಅಲಂಕರಣೆಯ ಕೆಲವು

ಕುರುಹುಗಳನ್ನು ಇಂದಿಗೂ ಅಲ್ಲಲ್ಲಿರುವ ಶಿಲ್ಪದ ತುಣುಕುಗಳಿಂದ ಗುರುತಿಸಬಹುದಾಗಿದೆ. ಈ ಕಟ್ಟಡವು ೧೫ನೇ ಶತಮಾನದಲ್ಲಿ ಈಗಿರುವುದಕ್ಕಿಂತ ಭಿನ್ನವಾಗಿತ್ತೆಂದು ತಿಳಿಯಲು ಕೆಲವು ದಾಖಲೆಗಳಿವೆ. ಉತ್ತರ ಭಾಗದ ಮಧ್ಯದ ಗುಮ್ಮಟ, ಉಪ್ಪರಿಗೆಗೆ ಹೋಗುವ ಮೆಟ್ಟಿಲುಗಳ ಮೇಲ್ಭಾಗದಲ್ಲಿ ಎರಡು ಅಂತಸ್ತಿನ ಮಾಳಿಗೆ ಹಾಗೂ ಚಜ್ಜಾಗಳಿದ್ದ ಬಗ್ಗೆ ಆಧಾರಗಳಿವೆ. ಈ ಕಟ್ಟಡಕ್ಕೆ ನೀರನ್ನು ಸಮೀಪದಲ್ಲೇ ಇರುವ ಚಂದ್ರಶೇಖರ ದೇವಸ್ಥಾನದ ಬಳಿಯಿರುವ ಗಾರೆಯಿಂದ ನಿರ್ಮಿಸಿದ ಸಣ್ಣ ಕಾಲುವೆಗಳಿಂದ ಹರಿಸಿರಬೇಕು. ನೀರು ಹಾಯಿಸುವ ವ್ಯವಸ್ಥೆ, ಮಲಿನ ನೀರು ಹೊರಹೋಗಲು ಸಣ್ಣ ಕೊಳವೆಗಳ ಬಳಕೆ, ಇವು ವಿಜಯನಗರ ಕಾಲದ ತಾಂತ್ರಿಕತೆಗೆ ಉತ್ತಮ ಉದಾಹರಣೆಯಾಗಿವೆ.

ಕಾರಂಜಿ ಹಾಗೂ ಜಲ ಸೌಧಗಳು ಹಲವು ವಾಸ್ತು ಸಾಮೀಪ್ಯವನ್ನು ಹೊಂದಿವೆ. ಈ ಕಟ್ಟಡಗಳ ಕಾಲಮಾನವನ್ನು ನಿರ್ಧರಿಸುವುದು ಸುಲಭ ಸಾಧ್ಯವಾಗಿಲ್ಲ. ಈ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಶಾಸನ ಮತ್ತು ಉಲ್ಲೇಖಗಳು ದೊರಕಿಲ್ಲ. ಈ ಕಟ್ಟಡಗಳು ಇರುವ ಸ್ಥಳಗಳಲ್ಲಿ ಅನೇಕ ರೀತಿಯ ಭೌಗೋಳಿಕ ಸ್ಥಿತ್ಯಂತರವಾಗಿವೆ. ಈ ಕಟ್ಟಡಗಳು ಹಾಗೂ ಪೂರಕ ವ್ಯವಸ್ಥೆಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೆ ಒಳಪಟ್ಟಿವೆ.

ಕಾರಂಜಿಗಳು, ರಾಣಿಯರ ಸ್ನಾನಗೃಹ ಅಥವಾ ಜಲಕ್ರೀಡಾ ಸೌಧ ಇವುಗಳು ಹಲವು ರೀತಿಯ ಸಮಾನ ವಿನ್ಯಾಸ, ವಾಸ್ತು ವಿಶೇಷತೆಗಳನ್ನು ಹೊಂದಿವೆ. ಕಮಾನುಗಳು, ಗುಮ್ಮಟ, ಪ್ರಾಂಗಣ, ಹೊರಭಾಗ ಹಾಗೆಯೆ ಒಳಭಾಗದ ಗೋಡೆಗಳು, ಗಾರೆಶಿಲ್ಪ, ನೀರಿನ ಪೂರೈಕಾ ವ್ಯವಸ್ಥೆ, ಇವು ಗಮನಿಸಬೇಕಾದ ಅಂಶಗಳು. ಇಲ್ಲಿ ಕೆಲವು ಭಾಗಗಳು ಹಲವು ಸಂದರ್ಭಗಳಲ್ಲಿ ಅನೇಕ ಬದಲಾವಣೆಗೆ ಒಳಪಟ್ಟಿವೆ. ವಿಶಿಷ್ಟ ಶೈಲಿಯ ವಾಸ್ತುಶಿಲ್ಪದ ನಿರ್ಮಾಣವು ಸಾಮಾಜಿಕ ಶಾಂತಿ, ಸುವ್ಯವಸ್ಥೆ, ಭದ್ರತೆ, ನೆಲಸಿದ್ದಾಗ ಆಗಿರಬಹುದಾಗಿದೆ. ಅಲ್ಲದೆ ೧೬ನೇ ಶತಮಾನದ ವಿಜಯನಗರದ ಸಾಹಿತ್ಯದಲ್ಲಿ ಹಲವು ಸೌಧಗಳ ವರ್ಣನೆಗಳಿವೆ. ಈ ಕಾಲವು ವಿಜಯನಗರದ ಉಚ್ಛ್ರಾಯ ಕಾಲವಾಗಿದೆ. ಇವುಗಳ ಹಿನ್ನೆಲೆಯಲ್ಲಿ ಈ ಕಟ್ಟಡಗಳೂ ಸಹ ೧೬ನೇ ಶತಮಾನದ ನಿರ್ಮಾಣವಾಗಿರಬಹುದೆಂದು ತೋರುತ್ತದೆ.







Figure 7.1 Square water pavilion (XX/1), section.



ಜಲಕ್ರೀಡಾ ಸೌಧ



ಅಷ್ಟಕೋನಾಕೃತಿಯ ಕಾರಂಜಿ ಕಟ್ಟಡ



ಅಷ್ಟಕೋನಾಕೃತಿಯ ಜಲಕ್ರೀಡಾ ಸೌಧ

ಅಡಿಟಿಪ್ಪಣಿಗಳು

1. Longhorst A.H., Hampi Ruins, Asia Educational Serrius, New Delhi, pp. 56, 1982
2. ibid pp. 56
3. Deva Kunjari, Hampi, Archaeological Survey of India, New Delhi, pp. 43, 1983
4. Dominic J. Devison, Jemkins, Hydulic works in New light on Hampi marg publications, pp. 94, 2000
5. Setter S., Hampi, kalayatre, Bangalore, pp. 74

❑❑

೧೨

ರಾಮಸಾಗರ ಕೋಟೆ

* ಮಾಡಲಗೇರಿ ಕೊಟ್ರೇಶ್

ರಾಮಸಾಗರವು ಹೋಸಪೇಟೆಯಿಂದ ಆಗ್ನೇಯ ದಿಕ್ಕಿಗೆ ಸುಮಾರು ೨೫ ಕಿ.ಮೀ. ದೂರದಲ್ಲಿದೆ. ರಾಮಸಾಗರದ ಈಶಾನ್ಯ ದಿಕ್ಕಿನ ಬೆಟ್ಟದ ಮೇಲೆ ಈ ಕಿರಿದಾದ ಕೋಟೆ ಇದೆ. ಇದರ ಬಗ್ಗೆ ಯಾವುದೇ ನಿಖರವಾದ ಆಧಾರಗಳಿಲ್ಲ ಆದರೂ ಸಿಕ್ಕಿರುವ ಕೆಲವು ಅಲ್ಪ ಮಾಹಿತಿಗಳಿಂದಲೇ ಈ ಕೋಟೆಯ ಬಗ್ಗೆ ಚರ್ಚಿಸಲಾಗಿದೆ.

ತೆಲುಗು ಭಾಷೆಯ ಕನ್ನಡ ಲಿಪಿಯ ತಾಮ್ರಶಾಸನವೊಂದು ತಿಳಿಸುವಂತೆ[೧] ಭೀಮಾ ಜೆಟ್ಟಿ ಎಂಬುವವನು, ಬಲಿಷ್ಠರಾದ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರ ಬಾಗಿಲಿಗೆ ತನ್ನ ಇಜಾರವನ್ನು ಕಟ್ಟಿಸಿ ಮೆರೆಯುತ್ತಿದ್ದನು. ಬೋಡಿ ಮಲ್ಲಪ್ಪನಾಯಕ ಎನ್ನುವವನು, ಈ ಭೀಮಾಜೆಟ್ಟಿಯನ್ನು ಸೋಲಿಸಿದ್ದಕ್ಕಾಗಿ ಆನೆಗೊಂದಿ ಅರಸ ರಾಮರಾಯ ತಿರುಮಲರಾಜ ದೇವನು, ಬುಕ್ಕಸಾಗರ ಹರಿಯ ಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ ಗ್ರಾಮವನ್ನು ಅದರ ಸಮೀಪವೇ ಇದ್ದ ಕಮಲಾಪುರದ ಕೆರೆಯ ಕೆಳಗಿನ ೩ ಖಂಡುಗದ ಬೀಜಾವರ್ರಿ ಭೂಮಿಯನ್ನು ಉಂಬಳಿಯಾಗಿ ಕೊಟ್ಟನು. ಅಲ್ಲದೆ ಬೋಡಿಯಲ್ಲಪ್ಪನಾಯಕನಿಗೆ ಭೀಮ ಎಂಬ ಬಿರುದನ್ನು ನೀಡಿದರು. ಈ ಬಿರುದು ನೀಡಿದ ನೆನಪಿಗಾಗಿ ಭೀಮನಕೆರೆ, ಹಿರೇಕರೆ, ಚಿಕ್ಕಕೆರೆ, ಹೊಸಕೆರೆ ಹಾಗೂ ರಾಮಸಾಗರದ ಕೆರೆಯನ್ನು ನಿರ್ಮಿಸಿದರು. ಕೆರೆಗಳನ್ನು ಕಟ್ಟಿಸುವುದರ ಮೂಲಕ ಜನಪರ ಕಾರ್ಯಗಳನ್ನು

ಮಾಡಿದುದಲ್ಲದೆ ಆನೆಗೊಂದಿ ರಾಜರ ಹೆಸರಿನಲ್ಲಿ ತಿಮ್ಮಾಪುರಹಳ್ಳಿ, 'ರಾಮಸಾಗರ' ಗ್ರಾಮಗಳನ್ನು ಕಟ್ಟಿಸಿರುವಂತೆ, ಆನೆಗೊಂದಿ ಅರಸರೇ ಈ ಗ್ರಾಮಗಳನ್ನು ಅಸ್ತಿತ್ವಕ್ಕೆ ತಂದರೆಂದು ಮೇಲಿನ ತಾಮ್ರಶಾಸನ ಹೇಳುತ್ತದೆ.[೨]

ಕ್ರಿ.ಶ. ೧೫೬೧ ರ ಸದಾಶಿವರಾಯನ ಶಾಸನದಲ್ಲಿ ವಿಠ್ಠಲ ದೇವರ ಅಮೃತ ಪಡಿಗೆ ರಾಮಸಾಗರದಲ್ಲಿ ಹತ್ತು ಕೊಳಗ ಗದ್ದೆ ನೀಡಿದಂತೆ ವ್ಯಕ್ತವಾಗುತ್ತದೆ.[೩] ಬುಕ್ಕರಾಯನ ಶಾಸನವು ಇಂದಿನ ರಾಮಸಾಗರದ ಪಶ್ಚಿಮಾ ಭಾಗದಲ್ಲಿ ದೊರೆತಿದೆ ಆದರೂ ಅದರಲ್ಲಿ ರಾಮಸಾಗರದ ಉಲ್ಲೇಖವಿಲ್ಲ.[೪] ಈ ಮೇಲಿನ ಆಧಾರಗಳಿಂದ ರಾಮಸಾಗರವು ಕ್ರಿ.ಶ. ೧೫೬೧ ಕ್ಕಿಂತಲೂ ಮೊದಲೇ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಏಕೆಂದರೆ ತಾಮ್ರಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ ಮತ್ತು ಬುಕ್ಕರಾಯನ ಶಾಸನದಲ್ಲಿ ರಾಮಸಾಗರದ ಪ್ರಸ್ತಾಪವೂ ಇಲ್ಲ.

ಈ ಮೇಲಿನ ಆಧಾರಗಳನ್ನು ಇಟ್ಟುಕೊಂಡು ಮುಂದುವರೆದಂತೆ ಕೋಟೆ ನಿರ್ಮಾಣವನ್ನು ಚರ್ಚಿಸಲಾಗುವುದು. ರಾಮಸಾಗರದ ಕೋಟೆಯ ಪ್ರವೇಶದಲ್ಲಿ ಮೊದಲು ಕಂಡುಬರುವುದು 'ಭೀಮೇಶ್ವರ' ದೇವಸ್ಥಾನ. ಆನೆಗೊಂದಿ ಅರಸರು ಕಷ್ಟಕಾಲದಲ್ಲಿ ಸಹಾಯ ಮಾಡಿದ ಬೋಡಿ ಮಲ್ಲಪ್ಪನಾಯಕ 'ಭೀಮಾ' ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. ಈ ಸಹಾಯಾರ್ಥ ನೆನಪಿಗಾಗಿ 'ಭೀಮಾ' ಎಂಬ ಬಿರುದಿನ ಹೆಸರಿನಿಂದಲೇ ಭೀಮೇಶ್ವರ ದೇವಸ್ಥಾನ ನಿರ್ಮಾಣವಾಗಿರಬಹುದು. ಪ್ರಾಯಶಃ ಆಗಲೇ ಅಲ್ಲಿ ಕೋಟೆ ನಿರ್ಮಾಣ ಮಾಡಿರಬೇಕು. ಇಂಥಹ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟಿವೆ.

ಕೋಟೆಯ ಲಕ್ಷಣಗಳು

ರಾಮಸಾಗರದ ಈಶಾನ್ಯಕ್ಕಿರುವ ಚಿಕ್ಕ ಬೆಟ್ಟವೊಂದರ ಮೇಲೆ ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಇದು ಗ್ರಾಮರಕ್ಷಣೆಯ ಗಿರಿದುರ್ಗವಾಗಿದೆ. ಕೋಟೆ ಇರುವ ಬೆಟ್ಟದ ಪೂರ್ವಕ್ಕೆ ಕಣಿವೆ ಇದ್ದು ಇದರಲ್ಲಿ ಹೊಲಗಳಿವೆ. ಇದು ಹಿಂದೆ (ವಿಜಯನಗರ ಕಾಲದಲ್ಲಿ) ಉದಯಗಿರಿಗೆ ದಾರಿಯಾಗಿರಬಹುದು. ಏಕೆಂದರೆ ಈ ಕಣಿವೆ ಮೂಲಕ ನೈರುತ್ಯಕ್ಕೆ ಸಾಗಿದರೆ ಉದಯಗಿರಿ (ವಿಜಯನಗರ ಕೋಟೆಯ) ಹೆಬ್ಬಾಗಿಲು ಸಿಗುತ್ತದೆ.



ರಾಮಸಾಗರದ ಕೋಟೆ

ಪಶ್ಚಿಮ ದಿಕ್ಕಿಗೆ ರಾಮಸಾಗರ ಗ್ರಾಮವಿದೆ. ಉತ್ತರಕ್ಕೆ ಇತ್ತೀಚಿಗೆ ನಿರ್ಮಾಣವಾದ ಮನೆಗಳಿವೆ. ದಕ್ಷಿಣಕ್ಕೆ ರಾಮಸಾಗರ ಗ್ರಾಮವು ವಿಸ್ತರಿಸಿದೆ. ಈ ಕೋಟೆಯು ಉತ್ತರಾಭಿಮುಖವಾಗಿದ್ದು, ಸರಳ ಬಾಗಿಲುವಾಡವನ್ನು ಹೊಂದಿದೆ. ಒಳ ಮಧ್ಯಭಾಗದಲ್ಲಿ ದೊಡ್ಡ ಕೊತ್ತಳವಿದೆ. ಇದು ಸುಮಾರು ೩೦ ಅಡಿ ಸುತ್ತಳತೆ ಹಾಗೂ ೩೦ ಅಡಿ ಎತ್ತರವಾಗಿದೆ. ವೃತ್ತಕಾರದಲ್ಲಿರುವ ಈ ಕೊತ್ತಳವನ್ನು ಮೇಲೇರಿ ಶತ್ರುಗಳನ್ನು ಗಮನಿಸಲು ಅನುಕೂಲವಾಗುವಂತೆ ಕಟ್ಟಲಾಗಿದೆ. ಇದೇ ಲಕ್ಷಣಗಳನ್ನು ಹೋಲುವ ಆರು ಕೊತ್ತಳಗಳು ಕೋಟೆ ಗೋಡೆಗಳಲ್ಲಿವೆ. ಕೋಟೆಯು ಸರಿ ಸುಮಾರು ೧೦ ಅಡಿ ಎತ್ತರವಾಗಿದೆ. ಇದು ೩ ರಿಂದ ೫ ಅಡಿಗಳಷ್ಟು ಅಗಲವಾಗಿದ್ದು, ಸುಮಾರು ೩೦೦ ಮೀಟರುಗಳಷ್ಟು ಸುತ್ತಳತೆಯನ್ನು ಹೊಂದಿದ್ದು ಬಹು ಕಿರಿದಾದ ಕೋಟೆಯಾಗಿದೆ. ತಳಪಾಯವಿಲ್ಲದೆ ಹಾಸುಬಂಡೆಯ ಮೇಲೆ ಮಧ್ಯಮ ಗಾತ್ರದ ಕಲ್ಲುಗಳಿಂದ ಕೋಟೆಯನ್ನು ನಿರ್ಮಿಸಲಾಗಿದೆ. ಮಧ್ಯದಲ್ಲಿ ಕೆಲವು ವಾಸದ ಮನೆಗಳಿದ್ದ ಅವಶೇಷಗಳಿವೆ. ಇಲ್ಲಿ ವಾಸಿಸುತ್ತಿದ್ದ ಜನರಿಗಾಗಿ ಬಾವಿಯೊಂದನ್ನು ನಿರ್ಮಿಸಲಾಗಿತ್ತು. ಇಂದಿಗೂ ಬಾವಿಯಲ್ಲಿ ನೀರು ಇರುವುದು. ಕೋಟೆಯಲ್ಲಿ ಆಂಜನೇಯ ಹಾಗೂ ಭೀಮೇಶ್ವರ ದೇಗುಲಗಳಿವೆ. ಆಂಜನೇಯನ ಗುಡಿಯು ದಕ್ಷಿಣಾಭಿಮುಖವಾಗಿದ್ದು, ಉತ್ತರದ ಕೋಟೆಗೋಡೆಗೆ ಹೊಂದಿಕೊಂಡಿದೆ. ಇದರಲ್ಲಿ ಗರ್ಭಗೃಹ ಹಾಗೂ ತೆರೆದ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಗೆತ್ತನೆಯ ಶಿಲ್ಪ ಹಾಗೂ ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಭೀಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕಲ್ಲುಗುಂಡನಿಟ್ಟು ಆರಾಧಿಸುತ್ತಾರೆ. ಇಂದಿಗೂ ನಿತ್ಯ ಪೂಜೆ ನಡೆಯುತ್ತದೆ.

ಈ ಪ್ರದೇಶದ ಸುತ್ತಲೂ ಇರುವ ಬೆಟ್ಟಗಳಿಗಿಂತ ಇದು ಎತ್ತರವಾಗಿದೆ. ಮತ್ತು ಮೇಲ್ತುದಿಯಲ್ಲಿ ವಿಶಾಲ ಪ್ರದೇಶವನ್ನು ಹೊಂದಿದೆ. ಈ ಕಾರಣವಾಗಿಯೇ ಇಲ್ಲಿ ಕೋಟೆ ಕಟ್ಟಿರಬೇಕು. ಪ್ರಾಯಶಃ ವಿಜಯನಗರಕ್ಕೆ ಪೂರ್ವದಿಂದ ಶತ್ರುಗಳನ್ನು ತಡೆ ಹಿಡಿಯುವದಕ್ಕಾಗಿಯೇ ಈ ಚಿಕ್ಕ ಕೋಟೆಯನ್ನು ನಿರ್ಮಿಸಿ ಇಲ್ಲೊಂದು ಸೈನಿಕ ಠಾಣೆಯನ್ನು ಸ್ಥಾಪಿಸಿರಬಹುದಾಗಿದೆ. ಕ್ರಿ.ಶ. ೧೮ನೇ ಶತಮಾನದಲ್ಲಿ ಈ ಕೋಣೆಯನ್ನು ಜೀರ್ಣೋದ್ಧಾರ ಮಾಡಿ ಪುನಃ ಉಪಯೋಗ ಮಾಡಿರುವ ಸಾಧ್ಯತೆಗಳು ಇರುವುವು.

ಟಿಪ್ಪಣಿಗಳು

೧. ಮೀರಾಸಾಬಿಹಳ್ಳಿ ಶಿವಣ್ಣ. ೨೦೦೧. ನಾಯಕನಹಟ್ಟಿ ಪಾಳೆಯಗಾರರು, *ದಕ್ಷಿಣ ಕರ್ನಾಟಕದ ಅರಸು ಮನೆತನಗಳು* (ಸಂ: ವಸು ಎಂ.ವಿ), ಪು. ೮೦. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. *ಅದೇ*, ಪು. ೮೧

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೨೦೦೦. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಹಂಪಿ)* - ೩, ಪು. ೧೩೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೧೭೭. ಹಂಪಿ : ಕನ್ನಡ ವಿಶ್ವವಿದ್ಯಾಲಯ.

❑❑

೧೩

ಹಂಪಿ ಮೆಟ್ಟಿಲು ಪುಷ್ಕರಣಿಯ ನಿರ್ಮಾಣ ತಾಂತ್ರಿಕತೆ

* ಜಗದೀಶ

ಹಂಪಿ ಮೆಟ್ಟಿಲು ಪುಷ್ಕರಣಿಯು ಪರಿಪೂರ್ಣ ಪ್ರಮಾಣ ಬದ್ಧ ಸುಂದರ ನಿರ್ಮಾಣವಾಗಿದೆ. ಈ ಮೆಟ್ಟಿಲು ಪುಷ್ಕರಣಿಯು ನೆಲಮಟ್ಟಕ್ಕಿಂತ ಕೆಳಗೆ ಇದ್ದು ಇದನ್ನು ಕೇಂದ್ರ ಪುರಾತತ್ವ ಇಲಾಖೆಯವರು ೧೯೮೪ - ೮೫ನೇ ಸಾಲಿನಲ್ಲಿ ಶೋಧಿಸಿದ್ದಾರೆ. ಪುಷ್ಕರಣಿಯು ಐದು ಹಂತಗಳಲ್ಲಿದೆ. ಪ್ರತಿ ಮೇಲಿನ ಹಂತವು ಕೆಳಗಿನ ಹಂತಕ್ಕಿಂತ ಹೆಚ್ಚು ವಿಸ್ತಾರವಾಗಿದೆ. ಪ್ರತಿ ಹಂತವು ಚೌಕಾಕಾರವಾಗಿದೆ.

ಮೊದಲನೇ ಹಂತವು ೬.೯೦ x ೬.೯೦ ಮೀಟರ್ ಇದ್ದು ಆಳವು ೨.೪೫ ಮೀಟರ್ ಇದೆ. ಇದರ ನಾಲ್ಕೂ ದಿಕ್ಕಿನಲ್ಲಿ ೧೧ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಅಗಲ ಮಾತ್ರ ಹೆಚ್ಚಾಗುತ್ತಾ, ಕೊಳದ ಆಳಕ್ಕೆ ಪಕ್ಕಕ್ಕೆ ಚಲಿಸುತ್ತಾ ಇಳಿಯಬೇಕಾಗುತ್ತದೆ. ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಹಂತಗಳು ೯.೨೦ x ೯.೨೦ ಮೀ. ೧೨.೬೫ x ೧೨.೬೫ ಮೀ. ೧೬.೧೦ x ೧೬.೧೦ ಮೀ. ಮತ್ತು ೨೦.೭೦ x ೨೦.೭೦ ಮೀಟರ್ ಕ್ರಮವಾಗಿ ಇದೆ. ಪ್ರತಿ ಹಂತದಲ್ಲಿ ಪಿರಮಿಡ್ ಆಕಾರದ ೦೬ ಮೆಟ್ಟಿಲುಗಳಿವೆ. ಇವು ಅಗಲದಲ್ಲಿ ಮತ್ತು ಉದ್ದದಲ್ಲಿ ಹೆಚ್ಚಾಗುತ್ತಾ, ಪಕ್ಕಕ್ಕೂ ಮತ್ತು ಮುಂದಕ್ಕೂ ಚಲಿಸಲು ಅನುವು ಮಾಡಿಕೊಡುತ್ತವೆ.

ಎರಡನೇ ಹಂತದಲ್ಲಿ ಪ್ರತಿ ದಿಕ್ಕಿನಲ್ಲೂ ಮೂರು ಪಿರಮಿಡ್ ಆಕಾರದ ಮೆಟ್ಟಿಲುಗಳಿವೆ. ಮೂರನೇ, ನಾಲ್ಕನೇ ಮತ್ತು ಐದನೇ ಹಂತದ ಪ್ರತಿ ದಿಕ್ಕಿನಲ್ಲಿ ಐದು, ಏಳು ಮತ್ತು


ಒಂಭತ್ತು ಪಿರಮಿಡ್ ಆಕಾರದ ಮೆಟ್ಟಿಲುಗಳಿವೆ. ಕೋಷ್ಟಕ ರೂಪದಲ್ಲಿ ಮೆಟ್ಟಿಲುಗಳ ವಿವರ ಹೀಗಿದೆ.

ಹಂತ	ಹಂತದಲ್ಲಿರುವ ಮೆಟ್ಟಿಲು	ನಾಲ್ಕು ದಿಕ್ಕಿನ ಮೆಟ್ಟಿಲುಗಳು
೧	೧	೪
೨	೩	೧೨
೩	೫	೨೦
೪	೭	೨೮
೫	೯	೩೬
	ಒಟ್ಟು	೧೦೦


ಮೆಟ್ಟಿಲು ಪುಷ್ಕರಣಿಯ ಪ್ರತಿ ಹಂತದ ಆಳವು ಸುಮಾರು ೧.೦೫ ಮೀಟರ್ ಇದ್ದು ಒಟ್ಟು ಆಳವು ೬.೬೫ ಮೀಟರ್ ಇದೆ. ಪುಷ್ಕರಣಿಯ ತಳಭಾಗದಲ್ಲಿ ಕಲ್ಲುಗಳನ್ನು ಹಾಸಿದ್ದು ಅದರ ಕೆಳಗಡೆ ಮರಳನ್ನು ಒದಗಿಸಲಾಗಿದೆ. ಮರಳಿನ ಕವಚದಿಂದ ತಿಳಿನೀರು (ಶುದ್ಧನೀರು) ಮಾತ್ರ ಕೊಳದೊಳಗೆ ಬರಲು ಸಹಕಾರಿಯಾಗಿದೆ. ಮೆಟ್ಟಿಲು ಪುಷ್ಕರಣಿಯು ಪೂರ್ವನಿಯೋಜಿತ ಕಟ್ಟಡವಾಗಿದ್ದು, ಇದಕ್ಕೆ ಸಂಬಂಧಿಸಿದ ಕಲ್ಲುಗಳ್ನು ಮೊದಲೇ ಸಿದ್ಧಪಡಿಸಲಾಗಿತ್ತೆಂದು ಕಂಡುಬರುತ್ತದೆ. ಏಕೆಂದರೆ, ಪ್ರತಿಯೊಂದು ಕಲ್ಲಿನ ಮೇಲೆ ಸಂಖ್ಯೆ, ಚಿಹ್ನೆ ಮತ್ತು ಅಕ್ಷರಗಳು ಇವೆ. ಇದರ ನಿರ್ಮಾಣ ತಾಂತ್ರಿಕತೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

೧. **ಅಕ್ಷರಗಳು :** ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳನ್ನು ಆಯಾ ದಿಕ್ಕಿನ ಮೊದಲ ಅಕ್ಷರವನ್ನು ಬರೆದು ಸೂಚಿಸಲಾಗಿದೆ. ಅವು ಕ್ರಮವಾಗಿ ಉ, ದ, ತು ಮತ್ತು ಪ ಎಂದು ಸೂಚಿಸಲಾಗಿದೆ. ದಕ್ಷಿಣ ದಿಕ್ಕಿನ ಕೆಲವು ಕಲ್ಲುಗಳ ಮೇಲೆ ತೆಕ ಎಂದು ಸೂಚಿಸಲಾಗಿದೆ. ಇದು ತೆಂಕಣ (ದಕ್ಷಿಣ) ಪದದ ಸಂಕ್ಷಿಪ್ತ ರೂಪವಾಗಿದೆ. ಪೂರ್ವ ದಿಕ್ಕಿನ ಕಲ್ಲುಗಳ ಮೇಲೆ ಪು ಬದಲಾಗಿ ತು ಎಂದು ಬರೆಯಲಾಗಿದೆ. ತೆಲುಗಿನಲ್ಲಿ ಪೂರ್ವ ದಿಕ್ಕನ್ನು ತೂರ್ಪು ಎಂದು ಕರೆಯುತ್ತಾರೆ. ಆದ್ದರಿಂದ ತು ತೆಲುಗು ತೂರ್ಪು ಪದದ ಸಂಕ್ಷಿಪ್ತ ರೂಪವಾಗಿದೆ.

ಐದು ಹಂತಗಳಲ್ಲಿ ಒಟ್ಟು ೩೬ ಮೆಟ್ಟಿಲುಗಳಿವೆ. ಪ್ರತಿ ಮೆಟ್ಟಿಲಿಗೂ ಒಂದು ಕನ್ನಡದ ವರ್ಣಮಾಲೆಯನ್ನು ಬಳಸಲಾಗಿದೆ. ಐದನೇಯ ಹಂತದ ಮೇಲೆ ಸುತ್ತಲೂ ಸಣ್ಣ ಒರಗು ದಿಂಬಿನಾಕಾರದ ಕಲ್ಲುಗಳಿವೆ. ಇದಕ್ಕೆ ಠ ಅಕ್ಷರವನ್ನು ಬಳಸಲಾಗಿದೆ. ನಾವು ಪುಷ್ಕರಣಿಯ ಆಳಕ್ಕೆ ಇಳಿಯುತ್ತಾ ಹೋದಂತೆ, ಪ್ರತಿ ಮೆಟ್ಟಿಲಿಗೆ ವರ್ಣಮಾಲೆ ಠ ನಂತರದ ಅಕ್ಷರಗಳನ್ನು ಕ್ರಮವಾಗಿ ಬಳಸಲಾಗಿದೆ. ಇದನ್ನು ಕೋಷ್ಟಕ ರೂಪದಲ್ಲಿ ಹೀಗೆ ಕೊಡಬಹುದು.





ಪೂರ್ವದಿಕ್ಕಿನ ನಾಲ್ಕನೇ ಹಂತದ ಮದ್ಯದ
ನಾಲ್ಕನೇ ಪಿರಮಿಡ್ ಅಕಾರದ ಮೆಟ್ಟಿಲ ಸಮೂಹ.



ಪೂರ್ವದಿಕ್ಕಿನ ನಾಲ್ಕನೇ ಹಂತದ ಮದ್ಯದ
ನಾಲ್ಕನೇ ಪಿರಮಿಡ್ ಆಕಾರದ ಮೆಟ್ಟಿಲ ಸಮೂಹ.

ಪುಷ್ಕರಣಿಯ ಹಂತ	ಮೆಟ್ಟಿಲು ಹಂತ	ಮೆಟ್ಟಿಲು ಸಂಖ್ಯೆ	ಕನ್ನಡ ಅಕ್ಷರ
ಆರನೇ ಹಂತ	ಒರಗು ದಿಂಬು	೧	ಠ
ಐದನೇ ಹಂತ	ಒಂದನೇ ಮೆಟ್ಟಿಲು	೨	ಡ
	ಎರಡನೇ ಮೆಟ್ಟಿಲು	೩	ಢ
	ಮೂರನೇ ಮೆಟ್ಟಿಲು	೪	ಣ
	ನಾಲ್ಕನೇ ಮೆಟ್ಟಿಲು	೫	ತ
	ಐದನೇ ಮೆಟ್ಟಿಲು	೬	ಥ
	ಆರನೇ ಮೆಟ್ಟಿಲು	೭	ದ
ನಾಲ್ಕನೇ ಹಂತ	ಒಂದನೇ ಮೆಟ್ಟಿಲು	೮	ಧ
	ಎರಡನೇ ಮೆಟ್ಟಿಲು	೯	ನ
	ಮೂರನೇ ಮೆಟ್ಟಿಲು	೧೦	ಪ
	ನಾಲ್ಕನೇ ಮೆಟ್ಟಿಲು	೧೧	ಫ
	ಐದನೇ ಮೆಟ್ಟಿಲು	೧೨	ಬ
	ಆರನೇ ಮೆಟ್ಟಿಲು	೧೩	ಭ
ಮೂರನೇ ಹಂತ	ಒಂದನೇ ಮೆಟ್ಟಿಲು	೧೪	ಮ
	ಎರಡನೇ ಮೆಟ್ಟಿಲು	೧೫	ಯ
	ಮೂರನೇ ಮೆಟ್ಟಿಲು	೧೬	ರ
	ನಾಲ್ಕನೇ ಮೆಟ್ಟಿಲು	೧೭	ಲ
	ಐದನೇ ಮೆಟ್ಟಿಲು	೧೮	ವ
	ಆರನೇ ಮೆಟ್ಟಿಲು	೧೯	ಸ
ಎರಡನೇ ಹಂತ	ಒಂದನೇ ಮೆಟ್ಟಿಲು	೨೦	ಷ
	ಎರಡನೇ ಮೆಟ್ಟಿಲು	೨೧	ಹ
	ಮೂರನೇ ಮೆಟ್ಟಿಲು	೨೨	ಳ
	ನಾಲ್ಕನೇ ಮೆಟ್ಟಿಲು	೨೩	ಕ್ಷ
	ಐದನೇ ಮೆಟ್ಟಿಲು	೨೪	ಜ್ಞ
ಮೊದಲನೇ ಹಂತ	ಆರನೇ ಮೆಟ್ಟಿಲು	೨೫	ಶ್ರಿ

೨. **ಚಿಹ್ನೆಗಳು :** ಈಗಾಗಲೇ ಪುಷ್ಕರಣಿಯು ಐದು ಹಂತಗಳಲ್ಲಿ ಇರುವುದನ್ನು ಮೇಲೆ ತಿಳಿಸಲಾಗಿದೆ. ಪ್ರತಿ ಹಂತದ, ಪ್ರತಿ ಕಲ್ಲಿನ ಮೇಲೂ ವಿವಿಧ ಚಿಹ್ನೆಗಳಿವೆ. ಇವು ಕೂಡ ಒಂದೊಂದು ದಿಕ್ಕಿಗೆ ಮತ್ತು ಹಂತಕ್ಕೆ ಬೇರೆ ಬೇರೆಯಾಗಿವೆ. ಮೂರನೇ ಹಂತದಲ್ಲಿ ಶಂಕ, ನಕ್ಷತ್ರ ಮತ್ತು ಸ್ವಸ್ತಿಕ ಚಿಹ್ನೆಗಳಿವೆ. ನಾಲ್ಕನೇ ಹಂತದಲ್ಲಿ ವೃತ್ತದ ವಿವಿಧ ರೂಪಗಳಾಗಿ, ವೃತ್ತ, ಅರ್ಧ, ವೃತ್ತ, ಹೊರಗಡೆ ಸರಳ ರೇಖೆ ಇರುವ ವೃತ್ತ ಮತ್ತು ಪರಸ್ಪರ ಲಂಭಗಳನ್ನುಳ್ಳ ವೃತ್ತಗಳು ಇವೆ. ಐದನೇ ಹಂತದಲ್ಲಿ ಸರಳ ರೇಖೆಯ ವಿವಿಧ ರೂಪಗಳಾಗಿ, ಎರಡು ಸಮನಾಂತರ ಸರಳ ರೇಖೆಗಳು, ಎರಡು ಸಮನಾಂತರ ರೇಖೆಗಳನ್ನು ವಿಭಜಿಸಿದ ಅಡ್ಡ ರೇಖೆ, ಪರಸ್ಪರ ಲಂಭವಾಗಿರುವ ಎರಡು ರೇಖೆಗಳು ಮತ್ತು ತ್ರಿಕೋಣಾಕಾರದ ಚಿಹ್ನೆಗಳಿವೆ. ಹಂತ, ದಿಕ್ಕು ಮತ್ತು ಚಿಹ್ನೆಗಳನ್ನು ಕೋಷ್ಟಕ ರೂಪದಲ್ಲಿ ಹೀಗೆ ನೀಡಬಹುದು.

ಹಂತ	**ಉತ್ತರ**	**ದಕ್ಷಿಣ**	**ಪೂರ್ವ**	**ಪಶ್ಚಿಮ**
ಐದನೇ ಹಂತ				
ನಾಲ್ಕನೇ ಹಂತ				
ಮೂರನೇ ಹಂತ				
ಎರಡನೇ ಹಂತ				
ಮೊದಲನೇ ಹಂತ				


೩. **ಪಿರಮಿಡ್ ಆಕಾರದ ಮೆಟ್ಟಿಲುಗಳು :** ಪುಷ್ಕರಣಿಯಲ್ಲಿ ಪಿರಮಿಡ್ ಆಕಾರದ ನೂರು ಮೆಟ್ಟಿಲುಗಳ ಸಮೂಹವಿದೆ. ಪ್ರತಿ ಸಮೂಹದಲ್ಲಿ ಆರು ಮೆಟ್ಟಿಲುಗಳು ಮತ್ತು ಪ್ರತ್ಯೇಕ ಗುರುತಿನ ಸಂಖ್ಯೆ ಇದೆ. ಎರಡನೇ ಹಂತದಲ್ಲಿ ಮೂರು ಪಿರಮಿಡ್ ಆಕಾರದ ಮೆಟ್ಟಿಲುಗಳ ಸಮೂಹವಿದ್ದು, ಎಡದಿಂದ ಬಲಕ್ಕೆ ಅವುಗಳ ಸಂಖ್ಯೆಯನ್ನು ನೀಡಲಾಗಿದೆ. ಇದೇ ಕ್ರಮವನ್ನು ಮೂರು, ನಾಲ್ಕು ಮತ್ತು ಐದನೇ ಹಂತದ ಮೆಟ್ಟಿಲುಗಳ ಸಮೂಹಕ್ಕೆ ಅಳವಡಿಸಲಾಗಿದೆ.


ನೂರು ಮೀಟರ್ ಆಕಾರದ ಮೆಟ್ಟಿಲುಗಳಲ್ಲಿ ನಾಲ್ಕು ದಿಕ್ಕಿನ ಮಧ್ಯದ ಮೆಟ್ಟಿಲುಗಳ ಸಮೂಹ ಹೆಚ್ಚು ಅಲಂಕಾರಿಕವಾಗಿದೆ. ಇವು ಪಕ್ಕದ ಮೆಟ್ಟಿಲುಗಳ ಸಮೂಹಕ್ಕೆ ಹೋಲಿಸಿದಾಗ ಸ್ವಲ್ಪ ಅಗಲದಲ್ಲಿಯೂ ಮತ್ತು ಉದ್ದದಲ್ಲಿಯೂ ಹೆಚ್ಚು ಅಳತೆ ಹೊಂದಿದೆ. ಪ್ರತಿ ಮೆಟ್ಟಿಲಿನ ಮೂಲೆಯ ಸ್ವಲ್ಪ ಒಳ ಬಂದಂತೆ (RECESSED CORNER) ಇದೆ. ಮೆಟ್ಟಿಲು ಒಂದೇ ಕಲ್ಲಿನಿಂದ ಕೂಡಿದ್ದರೆ ಅದರ ಸಂಖ್ಯೆಯನ್ನು ಒಂದು ಎಂದು ನೀಡಲಾಗಿದೆ. ಮೂರು, ನಾಲ್ಕು ಮತ್ತು ಐದನೇ ಮೆಟ್ಟಿಲುಗಳ ಅಗಲ ಜಾಸ್ತಿ ಇದ್ದು ಇವು ಎರಡು, ಮೂರು ಕಲ್ಲುಗಳಿಂದ ಕೂಡಿರುತ್ತದೆ. ಆಗ ಕ್ರಮಸಂಖ್ಯೆಯನ್ನು ಎಡದಿಂದ ಬಲಕ್ಕೆ ೧, ೨, ೩ ಎಂದು ಬಳಸಿ ಜೋಡಣೆಯ ಕ್ರಮವನ್ನು ತಿಳಿಸಲಾಗಿದೆ. ಪೂರ್ವ ದಿಕ್ಕಿನ ನಾಲ್ಕನೇ ಹಂತದ ಮಧ್ಯದ ನಾಲ್ಕನೇ ಪಿರಮಿಡ್ ಮೆಟ್ಟಿಲಿನ ಸಮೂಹದ ಕ್ರಮಸಂಖ್ಯೆ (ಪು.೧೨೬) ಗಳು ಹೀಗಿವೆ.

೪. ಅಳತೆ ಗುರುತುಗಳು : ಎರಡನೇ ಮತ್ತು ಐದನೆ ಹಂತದ ಕಲ್ಲುಗಳ ಮೇಲೆ ಅಳತೆ ಗುರುತುಗಳಿವೆ. ಗುರುತುಗಳನ್ನು ತ್ರಿಶೂಲಾಕಾರವಾಗಿದ್ದು, ಮಧ್ಯದ ಗೆರೆಯನ್ನು ಕಲ್ಲಿನ ಲಂಭ ಭಾಗದಲ್ಲೂ ಮೂಡಿಸಲಾಗಿದೆ. ಈ ಗುರುತುಗಳು ಪುಷ್ಕರಣಿಯ ಮಧ್ಯಭಾಗದಲ್ಲಿ ಮತ್ತು ಪ್ರತಿ ಹಂತವು ಕೊನೆಗೊಳ್ಳುವಿಕೆಯನ್ನು ಸೂಚಿಸಲು ಬಳಸಲಾಗಿದೆ. ಈ ಗುರುತುಗಳು ೨.೩೦ ಮೀಟರ್ ಅಂತರದಲ್ಲಿವೆ. ಐದನೇ ಹಂತದ ಉತ್ತರ ದಿಕ್ಕಿನ ಗುರುತುಗಳು ಮಧ್ಯಭಾಗದಿಂದ ಎಡ ಮತ್ತು ಬಲಗಳಲ್ಲಿ ಕ್ರಮವಾಗಿ ೪.೬೦ ಮೀ. ೬.೯೦ ಮೀ. ಮತ್ತು ೯.೨೦ ಮೀ. ದೂರದಲ್ಲಿವೆ. ಐದನೇ ಹಂತದ ಪೂರ್ವ ದಿಕ್ಕಿನ ಅಳತೆಗಳು ಮಧ್ಯಭಾಗದಿಂದ ಎಡಕ್ಕೆ ೨.೩೦ ಮೀ. ೪.೬೦ ಮೀ. ೯.೨೦ ಮೀ. ಹಾಗೂ ಬಲಭಾಗದಲ್ಲಿ ೪.೬೦ ಮೀ. ೬.೯೦ ಮೀ. ಮತ್ತು ೯.೨೦ ಮೀ. ದೂರದಲ್ಲಿದೆ. ಇದೇ ರೀತಿಯಾಗಿ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲೂ ಹಾಗೂ ಎರಡನೇ ಹಂತದ ನಾಲ್ಕೂ ದಿಕ್ಕುಗಳಲ್ಲಿ ಅಳತೆ ಗುರುತುಗಳು ಇವೆ.

ನೆಲ ಮಟ್ಟದಲ್ಲಿ ಈ ಗುರುತುಗಳನ್ನು ಅನುಸರಿಸಿ ಅಡ್ಡ ಮತ್ತು ಉದ್ದ ದಾರಗಳನ್ನು ಕಟ್ಟಿದರೆ ಅವುಗಳಿಂದ ತೂಗು ಗುಂಡು (PLUMB LINE) ಬಿಟ್ಟು ಪ್ರತಿ ಹಂತವು ಸರಿಯಾದ ಸ್ಥಳದಲ್ಲಿಯೇ ಎಂದು ಪರೀಕ್ಷಿಸಬಹುದು.

ಈ ರೀತಿಯ ಅಳತೆ ಗುರುತುಗಳನ್ನು ನಾವು ದೇವಾಲಯಗಳಲ್ಲಿನ ಅಳತೆ ಪಟ್ಟಿಗಳಲ್ಲೂ ಕಾಣುತ್ತೇವೆ. ಗದಗ ಜಿಲ್ಲೆ, ಡಂಬಳದಲ್ಲಿನ ಸೋಮೇಶ್ವರ ದೇವಾಲಯ (ಡಬ್ಬಗುಡಿ) ಕಕ್ಷಾಸನದಲ್ಲಿ ಕಾಣಬಹುದು. ಮಾಧವೇಶ್ವರ ದೇವರ ಗಡಿಂಬ ಎಂದು ಬರೆಯಲಾಗಿರುವ ಶಾಸನದ ಅಕ್ಕ - ಪಕ್ಕದಲ್ಲಿ ೨೩ ಅಡಿ ದೂರದಲ್ಲಿ ತ್ರಿಶೂಲಾಕಾರದ ಗುರುತುಗಳಿವೆ. ಪ್ರಸ್ತುತದಲ್ಲಿ ಪುಷ್ಕರಣಿಯ ಅಳತೆ ಗುರುತುಗಳು ೨.೩೦ ಮೀ. ಅಂತರದಲ್ಲಿದ್ದು ಇದರ ಎರಡು, ಮೂರು, ಮತ್ತು ನಾಲ್ಕರ ಗುಣಾಕಾರದಲ್ಲಿ ಅಳತೆ ಗುರುತುಗಳನ್ನು ನಾವು ಕಾಣಬಹುದು. (ನಕ್ಷೆ - ೨)





ನಕ್ಷೆ ೨

೫. **ನಿರ್ಮಾಣ ತಾಂತ್ರಿಕತೆ :** ಸಂಪೂರ್ಣ ತಾಂತ್ರಿಕ ವಿವರಗಳನ್ನುಳ್ಳ ಸುಂದರ ಮೆಟ್ಟಿಲು ಪುಷ್ಕರಣಿ ಇದಾಗಿದೆ. ಪ್ರತಿ ದಿಕ್ಕೂ, ಹಂತ, ಮೆಟ್ಟಿಲುಗಳಿಗೆ ಅಕ್ಷರ ಚಿಹ್ನೆ ಮತ್ತು ಸಂಖ್ಯೆಗಳನ್ನು ಬಳಸಲಾಗಿದೆ. ಅದರ ಸ್ಥಳ ಮತ್ತು ಹಂತವನ್ನು ಮೊದಲೇ ನಿರ್ಧರಿಸಿ ಕೆಲಸವನ್ನು ಬೇರೆಡೆಯಲ್ಲಿ ನೆಲದ ಮೇಲೆ ಮಾಡಲಾಗಿದೆ. ಪ್ರತಿ ಹಂತವನ್ನು ಕರಾರುವಕ್ಕಾಗಿ ಮೊದಲೇ ನಿರ್ಧರಿಸಲಾಗಿದೆ. ನಕ್ಷೆ ಮತ್ತು ವಿನ್ಯಾಸ ಹಾಗೂ ಶಿಲ್ಪಿಗಳ ಕುಶಲತೆ ಒಂದುಗೂಡಿದಾಗ ಸುಂದರ ನಿರ್ಮಾಣ ಸಾಧ್ಯವೆಂದು ರೂಪಿಸಲು ಈ ಮೆಟ್ಟಿಲು ಪುಷ್ಕರಣಿಯೂ ಸಾಕ್ಷಿಯಾಗಿದೆ.

ಲಕ್ಕುಂಡಿಯ ಮಾಣಿಕೇಶ್ವರ ದೇವಾಲಯದ ಮುಂದೆ ಇರುವ ಮಾಣಿಕೇಶ್ವರ ಕುಂಡದ (ಪುಷ್ಕರಣಿ) ಮಧ್ಯದ ಹಂತದಲ್ಲಿ ಕೆಲವು ದೇವರ ಗೂಡುಗಳಿವೆ. ಹೊಯ್ಸಳರ ಕಾಲದ ಹಳೇಬೀಡಿನ ಬಳಿಯ ಪುಷ್ಕರಣಿಯಲ್ಲಿ ೨೭ ದೇವರ ಗೂಡುಗಳಿದ್ದವು. ಇವುಗಳು ೨೭ ನಕ್ಷತ್ರಗಳನ್ನು ಸೂಚಿಸುತ್ತಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ. ಹುಂಚ ಬಳಿಯ ಬಿಲ್ಲೇಶ್ವರ ಬೆಟ್ಟದಲ್ಲಿ ಕುಮದ್ವತಿ ನದಿಯು ಉಗಮವಾಗುತ್ತದೆ. ಉಗಮ ಸ್ಥಳದಲ್ಲಿರುವ ಬಿಲ್ಲೇಶ್ವರ ತೀರ್ಥದಲ್ಲಿ ಮೆಟ್ಟಿಲಿನ ಕಲ್ಲಿನ ತೊಟ್ಟಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಕೂಡ ಮಧ್ಯದ ಹಂತದಲ್ಲಿ ಮೆಟ್ಟಿಲುಗಳ ಮುಂಚಾಚು ಇದೆ.

ಹಂಪಿಯ ಮೆಟ್ಟಿಲು ಪುಷ್ಕರಣಿಯ ದಕ್ಷಿಣ ದಿಕ್ಕಿಗೆ ಒಂದು ದೇವಾಲಯವಿದೆ. ಇದು ಯಾವುದೆಂಬುದು ತಿಳಿದಿಲ್ಲ. ಈ ಪುಷ್ಕರಣಿಯನ್ನು ನಿರ್ಮಿಸಿದ ನಂತರ ಕಲ್ಲಿನ ತೊಟ್ಟಿಲು ಕಾಲುವೆಗಳ ಮೂಲಕ ನೀರು ಪೂರೈಕೆಯಾಗುತ್ತಿತ್ತು. ಮೆಟ್ಟಿಲು ಪುಷ್ಕರಣಿ ವರ್ಷ ಪೂರ್ತಿ ಬಳಕೆಯಲ್ಲಿತ್ತೆಂದು ತೋರುತ್ತದೆ. ಋತುಮಾನಕ್ಕೆ ಅನುಸಾರವಾಗಿ ನೀರಿನ ಮಟ್ಟ ಕಡಿಮೆಯಾದಾಗ ಈ ಮೆಟ್ಟಿಲುಗಳು ನೀರಿನ ಹಂತವನ್ನು ತಲುಪಲು ಸಹಾಯಕವಾಗಿದ್ದವು. ನೆಲ ಮಟ್ಟದಲ್ಲಿ ಒರಗು ದಿಂಬು ಕಲ್ಲು ಇರುವುದು ಈ ಪುಷ್ಕರಣಿಯಲ್ಲಿ ದೇವರ ತೆಪ್ಪೋತ್ಸವ ಇತ್ಯಾದಿ ಆಚರಣೆಗಳನ್ನು ವೀಕ್ಷಿಸಲು ಮಾಡಿದ ಅನುಕೂಲವಿರಬಹುದೆಂದು ಊಹಿಸಬಹುದು.

ಅಡಿಟಿಪ್ಪಣಿ

೧. ಈ ಪ್ರಬಂಧವನ್ನು ಸಿದ್ಧಪಡಿಸಲು ಅಗತ್ಯ ಮಾಹಿತಿ ಮತ್ತು ಪ್ರೋತ್ಸಾಹವನ್ನು ನೀಡಿದ ಡಾ. ಚೆನ್ನಬಸಪ್ಪ ಎಸ್. ಪಾಟೀಲ್ ಅವರಿಗೆ ನನ್ನ ಕೃತಜ್ಞತೆಗಳು

೨. ಸ್ಥಳ ವೀಕ್ಷಣೆಗೆ ಮತ್ತು ಫೋಟೋ ಪಡೆಯಲು ಅನುಮತಿ ನೀಡಿದ ಕೇಂದ್ರ ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ನನ್ನ ಕೃತಜ್ಞತೆಗಳು

೩. Indian Archaeology 1984-85 A Review

೪. B.Narasimhaiah, A Decade of Excavation at Vijayanagara (Hampi), Early Vijayanagara Studies in its history and culture, Edited by G.S.Dikshit, B.M.S. Memorial foundation, Banglore-19 (Proceedings of S.Srikantaya centenary seminar) 1988, P.P. 191-207

❑❑

೧೪

ವಿಜಯನಗರ ರೆವಿನ್ಯೂ ದಾಖಲೆಗಳನ್ನೊಳಗೊಂಡ ರಾಯರೇಖೆ : ಹಸ್ತಪ್ರತಿ

* ಕೆಳದಿ ಗುಂಡಾಜೋಯಿಸ್

ವಿಜಯನಗರ ಚಕ್ರಾಧಿಪತಿ ಕೃಷ್ಣದೇವರಾಯನ ಕಾಲದಲ್ಲಿ ರಾಜ್ಯಾದಾಯದ ನಿಖರ ಏರ್ಪಾಟಿಗಾಗಿ ಹಾಗೂ ರಾಜಭಂಡಾರಕ್ಕೆ ಸಲ್ಲಬೇಕಾದ ಗುದಸ್ತ ಬಾಕಿ ವಗ್ಯೆರೆಗಳನ್ನು ನಿರ್ಧರಿಸಲು ರಾಜ್ಯದ ಸಮಗ್ರ ಭೂಪ್ರದೇಶಗಳನ್ನು ಭೂಮಾಪನೆಗೆ ಕರಾರುವಾಕ್ಕಾಗಿ ನಿಖರಪಡಿಸಲು ಒಳಪಡಿಸಲಾಯಿತು. ಈ ಪದ್ಧತಿಗೆ "ರಾಯರೇಖೆ" ಅಥವಾ "ಹಲ್ಮಾರ್" ಎಂಬುದಾಗಿ ಹೆಸರುಂಟಾಯಿತು. ಡಾ. ಪಿ.ಷಣ್ಮುಗಂ ಅವರು ಚೋಳರ ಕಾಲದ ಕರ್ನಾಟಕದ ರೆವಿನ್ಯೂ ಪದ್ಧತಿಯನ್ನು ಕುರಿತು -

Revenue functions of a mandalam were carried by chief of mandalam known as mandalamudali. One mandalamudali in respect of Mudikonda Chola mandalam figures in 1082. The Mandalamudali seems to the authorised officer in the mandalam to make entries in the puravu Vari register (Revenue Register). In 1082[1] a Tondaimanar acting as mandalamudali at Talaikkadu alias Rajarajapuram in Mudikonda Cholamandalam constituted a new brahmadeya and made necessary entries in revenue (Puravu Vari) under orders from the king ....

ಪ್ರಸ್ತಾಪಿಸಿದ್ದಾರೆ. ವಿಜಯನಗರಕ್ಕೆ ಸೇರಿದ್ದ ಬಿಜಾಪುರದ ಆಡಳಿತದಲ್ಲಿ ಜಾರಿಯಲ್ಲಿದ್ದ "ರಖಂ ಬೇರೀಜ್ " ಮಾದರಿಯಲ್ಲಿ "ರಾಯರೇಖೆ"ಯು ರೂಪುಗೊಂಡಿತೆನ್ನಬಹುದು. ಭೂಪ್ರದೇಶವನ್ನು 'ರಾಯರೇಖೆ'ಗೆ ಅಳವಡಿಸಿ, ಮಲೆನಾಡಿನ ಫಲವತ್ತಾದ ತರಿಭೂಮಿಗಳ ನ್ನೊಳಗೊಂಡು 'ಪರಗಣ' ಹಾಗೂ ಗ್ರಾಮದ ಅಳತೆಗಳನ್ನು ಅದರದೇ ಆದ ನಾಮಾಂಕಿತದಲ್ಲಿ ವಿಂಗಡಿಸಲಾಯಿತು. 'ರಾಯರೇಖೆ', 'ಮಾರ್' ಗದಗದ ಕೋಟೆ ದಿಡ್ಡೀಬಾಗಿಲು ಅಳತೆ ಪ್ರಮಾಣದಲ್ಲಿ ೭' ೯೧/೨" ಅಡಿಗಳಾಗಿದ್ದು ಇದರ ೨೦ ರಷ್ಟನ್ನು "ಬಿಘಾ"ವನ್ನಾಗಿಯೂ, ಇಂತಹ ೩೬ ಬಿಘಾಕ್ಕೆ ಒಂದು "ರಾಯರೇಖಾ" 'ಮಾರ್' ಎಂಬುದಾಗಿ ಪರಿಗಣಿಸಲ್ಪಟ್ಟಿತು. ನವಲಗುಂದದ ಬಸವನ ದೇಗುಲದ ಪ್ರಮಾಣವೂ ೭' ೬.೬" ಆಗಿತ್ತು. ಆನೆಗೊಂದಿಯ ರಾಜಪ್ರತಿನಿಧಿಯು (Governor), ತನ್ನ ನಾಮಾಂಕಿತದಲ್ಲಿ "ವಿಠಲಪಂತಿ" 'ಮಾರ್' ಎಂದು ಹೇಳಲಾದ ಪದ್ಧತಿಯನ್ನು ಜಾರಿಗೆ ತಂದನು. ೧೦' - ೬ - ೩" ಕ್ರಮವಾಗಿ ೧೦' - ೧೧ - ೮" ಮತ್ತು ೧೦' - ೬" ಪ್ರಮಾಣದಲ್ಲಿರುವ ಅಣ್ಣಿಗೇರಿ, ಅಮ್ಮಿನಭಾವಿ ಮತ್ತು ಹೆಬ್ಬಿಯಲ್ಲಿರುವ ಶಿಲಾದೇಗುಲದಲ್ಲಿ ಇವುಗಳನ್ನು ಗುರ್ತಿಸಬಹುದಾಗಿದೆ.

ಹರಿಹರರಾಯನು ವಿದ್ಯಾರಣ್ಯರ ಸೂಚನೆಯಂತೆ ಆರಂಭದಲ್ಲಿ ರೆವಿನ್ಯೂ ಲೆಖ್ಖಪತ್ರ ಪದ್ಧತಿ ಜಾರಿಗೆ ತಂದಿದ್ದನು.[2] ಕ್ರಿ.ಶ. ೧೫೧೮ ರಿಂದ ೧೫೨೮ ರವರೆಗೆ ವಿಜಯನಗರ ಚಕ್ರಾಧಿಪತಿಯಾಗಿದ್ದ ಕೃಷ್ಣದೇವರಾಯನ ಕಾಲದಲ್ಲಿ ರೆವಿನ್ಯೂ ಆದಾಯವು ಸುಧಾರಿಸಿ, ಕ್ರಮವಾದ ಲೆಖ್ಖ ಪತ್ರಗಳಿದ್ದವು. ವಿಜಯನಗರ ಸಮಕಾಲೀನ ಕೆಳದಿ ಅರಸರ ಕಾಲದ ಪತ್ರಾಗಾರದ ವರ್ಣನೆಯನ್ನು ೧೬೩೭ರಲ್ಲಿ ಭೇಟಿಯಿತ್ತ ಇಂಗ್ಲೆಂಡಿನ ಪ್ರವಾಸಿ ಪೀಟರ್ ಮಂಡಿಯು -

"At my beeing alt Eccary I was alt the King's secretaries, where in his house I saw many hundreds (I may say thousands) of these written palme leaves, beeing very long and narrow, handsomely rouled uppe, those again tied into bundles hung upp in order about his romme or office soe thatt hee may (not improperly) be stiled Master of the Roules"[3]

- ಹೀಗೆ ನುಡಿದಿದ್ದಾನೆ.

ವಿಜಯನಗರ ಕಾಲದಲ್ಲಿ ಹಿಂದೆಯೇ ಪ್ರಸ್ತಾಪಿಸಿದಂತೆ ಭೂಮಾಪನಾ ಅಳತೆ ಮೇರೆಗೆ ಜಮೀನುಗಳನ್ನು ವಿಂಗಡಿಸಿ ನಿಗದಿಯಂತೆ ಗೊತ್ತುಪಡಿಸಿದ ತೆರಿಗೆ ಕುರಿತು ರಿಜಿಷ್ಟರು ಇಡಲ್ಪಟ್ಟಿತು. ಬಂಜರು ಭೂಮಿಯನ್ನು ಆಯಾ ಪ್ರದೇಶದ ಭೂಗುಣ ಆದಾಯಕ್ಕನು ಗುಣವಾಗಿ ರೈತರ ಹಿತಕ್ಕೆ ಧಕ್ಕೆ ಬಾರದಂತೆ 'ರಾಯರೇಖೆ' ಅಳವಡಿಸಿ ಹೊನ್ನಿನ ರೂಪದಲ್ಲಿ ತೆರಿಗೆ ನಿಗದಿಪಡಿಸಲ್ಪಟ್ಟಿತು. ತರಿಭೂಮಿಗೆ ಬೀಜವರಿಯಂತೆ 'ಖಂಡಿ' ಮತ್ತು ("ಖಿಡು"?) ವನ್ನು ಗೊತ್ತುಪಡಿಸಲಾಯಿತು. ಸರಕಾರ ಅಥವಾ ರಾಜ್ಯದ ರಾಜಸ್ವ ಭಾಗವನ್ನು ಸೇನ ಬೋವನ ತನಿಖೆ ಆಧಾರದ ಮೇರೆಗೆ, ಭೂರೈತನ ಅಗತ್ಯ ವೆಚ್ಚವನ್ನನುಸರಿಸಿ ಸಮಪಾಲು ವಿಂಗಡಿಸಿ 'ರಾಯರೇಖೆ' ಗೊತ್ತುಪಡಿಸಲಾಯಿತು.

ರಾಯರೇಖೆಯ ಮಾದರಿ ಈ ಕೆಳಕಂಡಂತೆ ವ್ಯಕ್ತಪಡುತ್ತದೆ.

ಉತ್ತಮಭೂಮಿ	:	೧೬ ರಿಂದ ೨೦ ಎಕರೆ	೪ ಕೂರ್ಗಿ
ಮಧ್ಯಮಭೂಮಿ	:	೨೪ ರಿಂದ ೩೦ ಎಕರೆ	೬ ಕೂರ್ಗಿ
ಅಧಮಭೂಮಿ	:	೩೨ ರಿಂದ ೪೦ ಎಕರೆ	೮ ಕೂರ್ಗಿ

ಅಧಮಾಧಮ ಕುರಿತೂ ಆಗಾಗ್ಯೆ ಬದಲಾವಣೆಗೆ ಒಳಪಟ್ಟಿದ್ದು ಕಂಡುಬರುತ್ತದೆ. ಕ್ರಿ.ಶ. ೧೫೬೫ರ ತಾಳೀಕೋಟೆ ಕದನದ ಅಂತ್ಯದವರೆಗೂ 'ರಾಯರೇಖೆ' ಪದ್ಧತಿ ನಡೆದುಬಂದು ಅನಂತರ ಬಿಜಾಪುರದವರು ನೂತನ ಪದ್ಧತಿ ಅಳವಡಿಸಿದುದು ಕಂಡುಬರುತ್ತದೆ. ಶೃಂಗೇರಿ ರಾಯಿರೇಖೆ[೪] ಹಾಗೂ ತಮಿಳು ರಾಯರೇಖ ಕುರಿತು ಉಲ್ಲೇಖನಗಳು ಹಲವೆಡೆ ಕಂಡುಬಂದಿವೆ.

ರಾಯರೇಖೆ (ಅಪೂರ್ವ ಹಸ್ತಪ್ರತಿ)

ಮದರಾಸ್ (ಚೆನ್ನೈ)ನ ಪ್ರಾಚ್ಯ ಹಸ್ತಪ್ರತಿ ಭಂಡಾರದಲ್ಲಿ ಹಾಗೂ ಮೈಸೂರು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಈ ಕೆಳಕಂಡಂತೆ 'ರಾಯರೇಖೆ' ಕುರಿತು ಹಸ್ತಪ್ರತಿಗಳಿರುವುದು ಕಂಡುಬಂದಿದೆ.

ಮದಾರಾಸು, ನಂ.	೧೩೬೧	ರಾಯರೇಖೆ ಕೊಡಗೆ ಮಾನ್ಯದ ಲೆಕ್ಕ
	೧೩೬೨	ರಾಯರೇಖೆ ರೆವಿನ್ಯೂ ಬಾಬುಗಳು.[೫]
	೧೩೬೩	ರಾಯರೇಖೆ ರೆವಿನ್ಯೂ ಬಾಬುಗಳು.
ಮೈಸೂರು, ನಂ.	೪೧ / ದಿ/೧೯೬೫	ರಾಯರೇಖೆ ಪದ್ಯ ಇತ್ಯಾದಿ. ವಿಜಯನಗರದ ರೆವಿನ್ಯೂ ದಾಖಲೆಗಳು

ಪ್ರಕೃತ ಈ ಹಸ್ತಪ್ರತಿಯು ಮದರಾಸಿನ ನಂ. ೧೩೬೨/ದಿ. ನಂ. ೧೯೬೫ರ ಕಾಗದದ ಹಸ್ತಪ್ರತಿಯಿಂದ ಪ್ರತಿ ಮಾಡಿರಬಹುದೆಂದು ತೋರುತ್ತದೆ.

ಹಸ್ತಪ್ರತಿಯಲ್ಲಿನ ಉಲ್ಲೇಖನಗಳು

ನನ್ನ ಸಮೀಕ್ಷಾ ಸಂಶೋಧನೆಯಲ್ಲಿ ಕಂಡುಬಂದಂತೆ ಲೇಖನ ವಿಸ್ತಾರಭಯದಿಂದ ಸ್ಥೂಲವಾಗಿ ರಾಯರೇಖೆಯನ್ನೂ ಕುರಿತಂತೆ ನಿರೂಪಿಸಲಾಗಿದೆ.

೨ನೇ ಪುಟದಿಂದ ೫ನೇ ಪುಟಗಳವರೆಗೆ ಉತ್ಪ್ರೇಕ್ಷಾಲಂಕಾರಗಳಿಂದ ಕೂಡಿದ ಉಲ್ಲೇಖನಗಳಿವೆ. ೩ನೇ ಪುಟದಲ್ಲಿ (೧೧ನೇ ಸಾಲು) ಗಡಿದುರ್ಗಕೋಟೆ ಕೋಲಾಹಲ ಕುತುಪುಷಾ| (ಕುತುಬ್ ಷಾಹ?) ಪುರ| ಗೋಲಕೊಂಡೆಯವರ | ಪಟ್ಟಣ ಶಾಸನಾಂಕ - ೧೭ನೇ ಸಾಲಿನಲ್ಲಿ ರಾಮನಾಥನ ಪಂಚಘಿರಂಗೀ ಬಿರದಾಂಕಿತ ಘಣಾಂಕ ಚಕ್ರೇಶ್ವರ ಬಿರುದ ಬೆಸಗೊಂಬ ರಾಯರ ಗಂಡ ತುಳುವ ಕ್ಷಿತೀಪಾಲಕ | ಚತುಸ್ಸಮುದ್ರ ರಾಜ್ಯಧರ್ಮ ಪ್ರತೀಪಾಲಕ | ಶ್ರೀ ವಿರೂಪಾಕ್ಷಸ್ವಾಮಿ ವರಪ್ರಸಂನ - ೩೧ನೇ ಪುಟ - ಸಾಲು | ವೀರನರಸಿಂಗ

ಸಾಳುವೇಂದ್ರ | ನರಸಿಂಗ ನೃಪಾಲಕ | ಈಶ್ವರ | ನರಸಿಂಗ ಕುಮಾರಾಂಕ | ಕೃಷ್ಣರಾಯಾ - ೫ನೇ ಸಾಲು - ರಾಮರಾಜಯನು | ಚಿಕ್ಕರಾಯಪಟ್ಟಣದಿ | ವಿಯನಗರದ ವೀರಸಿಂಹಾಸನದಲ್ಲು | ಸ್ಥಿರರಾಜ್ಯಂಗೈಯುತ್ತಿರಲು - ಸಾಲು ೧೨ - ಕೃಷ್ಣರಾಯರು ಸಾಧಿಸಿದ ತುರುಕ ದೊರೆಗಳ ರಾಜ್ಯ ೨೨೬೦೦೦೦೦.೦೦ ಆಮೇಲೆ | ಶ್ರೀಮನ್ಮಹಾಪ್ರಧಾನ | ನಂದೀಶ್ವರ | ಇಂಗಿತಭಾವವನಾಜ್ಞಾನಾವಿಚಕ್ಷಣ | ಶಿರಪ್ರಧಾನ ಸಾಳುವ ತಿಮ್ಮರಸ | ತನ್ನ ಮಂತ್ರಶಕ್ತಿಯಿಂದ ಕೊಮಾರ ತಿಮ್ಮಪ್ಪ ಸಹಾ ಡಣಾಯಕರ ಜನ ೪ಕ್ಕೆ ದಿಕ್ಕು ೩ಕ್ಕೆ ಸಮುದ್ರ ಕೆರೆ ಸಮುದ್ರ ಯಡಕಿಟ್ಟು ದೀಪಾಂತರ | ೪೫ ಪಟ್ಟಣ ೨೦೦ ಗಿರಿದುರ್ಗಗಳು ೧೧೫ ಸಹಾ ಸಾಧಿಸಿದ ರಾಜ್ಯ ೫೦೦೦೦೦೦೦.೦೦ - - - - - - - - - (ಪುಟ ೩೨ - ೪ನೇ ಸಾಲು) ರಾಜ್ಯಕ್ಕೆ ಶ್ರೀಮನ್ಮಹಾಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರ್ಷಗಳು ೧೪೭೮ ಈ ಮೇಲೆ ಸಲ್ಲುವ ಆನಂದ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿ ೫ ಶುಕ್ರವಾರದಲ್ಲು ರಾಮರಾಜಯನು ಮುಖಾಸಿಯಾಗಿ ಜಗದೇವರಾಯರಿಗೆ ಪಾಲಿಸಿದ ೯೦೦೦೦೦ ಲಕ್ಷ ರಾಜ್ಯಕ್ಕೆ ವಿವರ - - - - - - ಈ ರೀತಿ ಚೆನ್ನಪಟ್ಟಣ, ಬೆಂಗಳೂರನ್ನೊಳಗೊಂಡು ೪೮ ಊರುಗಳ ಉಲ್ಲೇಖನಗಳಿವೆ.

ರಾಯರೇಖೆ

(೩೩ನೇ ಪುಟ ಸಾಲು ೩) - ಯೀಶ್ವರ ಸಂವತ್ಸರದಲ್ಲು ಪುರಂಗರಾಯರು ಉಚಿತವಾಗಿ ಪಾಲಿಸಿದ ಢಂಕಣೀಕೋಟೆ ಸೊನಲು ಪೊಂಪುನಾಡು ಎಂಬ ಢೆಂಕಣೀ ಕೋಟೆ ರಾಜ್ಯ - - - - - - - - - ನರಸಿಂಗರಾಯರ ಪ್ರತಿನಾಮಧೇಯ ಢೆಂಕಣೀಕೋಟೆ - - - - - - - ಅಂತು ವಳಿತ ೪ ಅಂತು ಢೆಂಕಣೀಕೋಟೆ ಸೀಮೆ ೩ಕ್ಕೆ ಸ್ಥಳ ೬ಕ್ಕೆ ದುರ್ಗ ಪಟ್ಟಡೆ ೧೨ಕ್ಕೆ ವಳಿಕ ೪ಕ್ಕೆ ಸಲ್ಲುವ ರಾಯರೇಖೆ ಗ್ರಾಮ ೧೨೩೫ಕ್ಕೂ ಸಲ್ಲುವ ರಾಯರೇಖೆ ೪೦೦೦೦ಕ್ಕೆ ಈಚೀಮರದ ಮಧ್ಯ ಪಾವನ ಗುತ್ತಿಗೆ ಸುಂಕ | ಬೋಗಾರಿಕೆ | ಕುರಿವೆರಿಗೆ | ತಳವಾರಿಕೆ ನೋಟವರ್ತನೆ ದರ್ಶನ ಕಾಣಿಕೆ | ಪಾಶಿ ತೆರಿಗೆ | ಶ್ರೀಗಂಧ | ಶೀಗೆಕಾಯಿ | ಬಾಣವಟ್ಟಿಗೆ | ಚೆರಸ್ಥಳ |

೬೦ನೇ ಪುಟದಿಂದ ೭೦ ರವರೆಗೆ

ಮಾದರಿ : ತಿಮ್ಮಣ್ಣನಾಯಕನ ಧರ್ಮಪುರೋಹಿತ ವಿನಾಯಕ ವಿಶ್ವೇಶ್ವರಭಟರ್ಗೆ ಮಲ್ಲರಸನ ಕಾಲುವೆಗದ್ದೆ ೧೯೦ ಖಂಡುಗ ವೊಡಗೆರೆಯ ಹೊ ೦೧೧೦ ಕೊಳಗ, - ಪುಟ ೬೧ - ಜಂಗಮ ಸ್ಥಳದ ಸೊಗದ ಶಿವಯೋಗಿ ಬಾಲಯ್ಯಗೆ ವೊಡಗೆರಿಯ ಗದ್ದೆ ಹೊಲ | ವುಪಾರದ ಕಾಲುವೆ ಹೊರಮಡೆ ಹೊಲ - ಗದ್ದೆ | ಕೆಮ್ಮಣ್ಣು ಹಳ್ಳ ಹೊಲ ೨ ಖಂಡುಗ ಶಾಂಬೆ ಮೆಡುಗದ್ದೆ ೧೯೦ ಖಂಡುಗ ಗುರುಲಿಂಗವೊಡಿಯರಿಗೆ ಅಲಮೆಡ ಹೊಲ ಖಂಡುಗ ೧೯೦.

ಈ ರೀತಿಯ ಜಮೀನುಗಳ ವಿವರಗಳು, ಕೊಳಗ, ರಾಯರೇಖೆ, ಬೀಜವರಿ ಪ್ರಮಾಣಗಳು, ಅರಸರಲ್ಲದೆ ಸಾಮಂತರುಗಳೂ ಉತ್ತಾರ ನೀಡಿದ ಉಂಬಳಿ ಲೆಖ್ಖ ಪತ್ರಗಳೂ,

ಜುಂಲಾ ವಿವರಣೆಗಳನ್ನೊಳಗೊಂಡು ಈಗಿನ ಬಾರಾಬಲೂತಿ ನಮೂನೆಯಲ್ಲಿ ಸಮ್ಮಿಳಿತಗೊಂಡಿವೆ.

ಅಗ್ರಹಾರ ಮತ್ತು ವೃತ್ತಿಗಳು

ಸೋಮೇಶನಹಳ್ಳಿ ಅಗ್ರಹಾರ ವೃತ್ತಿ	೧
ಸೆಟ್ಟಿಹಳ್ಳಿ ಅಗ್ರಹಾರವೃತ್ತಿ	೧
ತಿಮ್ಮಣ್ಣನ ಅಗ್ರಹಾರದಲ್ಲಿ ವೃತ್ತಿ	೧
ಕುಂಜಿನ ಅಗ್ರಹಾರದಲ್ಲಿ ವೃತ್ತಿ	೧
ಮಾರಸಂದ್ರದ ಅಗ್ರಹಾರದ ವೃತ್ತಿ	೧
ಕಾಡಗ್ರಹಾರದ ವೃತ್ತಿ	೧
ತಿಮ್ಮ ಸಮುದ್ರದ ವೃತ್ತಿ	೧
ಪುವ್ವನಹಳ್ಳಿ ವೃತ್ತಿ	೧
ಮೇಡು ಅಗ್ರಹಾರದಲ್ಲು ಕವಿ ತಿಮ್ಮಣ್ಣಗೆ ತೆಗೆದುಕೊಟ್ಟ ಸಮ್ಮಂಧ ವೃತ್ತಿ	೧
------ ಚವುರದ ವೃತ್ತಿ	೧
ಕಾಶೀ ಅಗ್ರಹಾರ ವೃತ್ತಿ	೧
ಮುಳ್ಳು ಕೋಟೆ ವೃತ್ತಿ	೧
ತಿಪ್ಪಸಮುದ್ರದ ವೃತ್ತಿ	೧

ಇತ್ಯಾದಿ -

ಉಂಬಳಿ ಉತ್ತಾರ ರಾಯರೇಖೆ

ಕೆರೆಯುಡ = ಯೊಡೆಯುತ್ತಿದ್ದರೆ ನೀರು ನಿಲ್ಲಿಸಿದ (ಕೆರೆಯೊಡೆಯುತ್ತಿರಲು ನೀರುನಿಲ್ಲಿಸಿದಯುಪಕಾರಕ್ಕೆ) (ಉ) (ದು) ಸಿಂಹಗಿರಿಬೆಟ್ಟರಸರಿಗೆ ರಂಗಸಮುದ್ರದ ಗ್ರಾಮ ೧ಕ್ಕೆ ೨೧೧೦ ಅರವಟ್ಟಿಗೆ ಅನ್ನಸತ್ರದ ಧರ್ಮಕ್ಕೆ ನೀಲಾಭಟ್ಟರ ಶರಭಯ್ಯನಿಗೆ ಅನ್ನಸಾಗರಗ್ರಾಮ ೧ಕ್ಕೆ ೮೯೦ ಅದಟರಾಯನಧರ್ಮ (ಪು ೭೩) ಅನೇಕ ಊರುಗಳ ಉಲ್ಲೇಖನವಿದೆ, ಪುರವರ್ಗದ ಗ್ರಾಮಗಳು (ಪು. ೭೪) ಮಣಿಹಪ್ಪೈಕ (ಪು. ೧೭೦) ಸೀಮೇಗೌಡ ಗುತ್ತಿಗೆ (ಪು. ೧೭೧) ಡೆಂಕಣಿಕೋಟೆ, ಕೆಲಮಂಗಲ ರಾಯಕೋಟೆಸೀಮೆ ೩ಕ್ಕೆ ರೇಖೆ (ರಾಯರೇಖೆ) ಗ್ರಾಮ ೫೩ಕ್ಕೆ ರೇಖೆ (ರಾಯರೇಖೆ) ಹಚ್ಚಿದ ಗ್ರಾಮ (ಪು. ೧೭೧)

ಶಾ.ಶ. ೧೪೫೧ ಸಾಧಾರಣ ಸಂ||ದ ವೈಶಾಖ ಶುದ್ಧ ೫ ಸೋಮವಾರ ಆರಭ್ಯವಾಗಿ ಸ್ಥಳದ ಸಂಪ್ರತಿಯ ಗೋವಿಂದರಸರ ನಡೆವಳಿ ಬೆಟ್ಟದರಸರ ಲೆಖ್ಖ (ಪು. ೧೭೩) ಇಲ್ಲಿ ಉಲ್ಲೇಖನಗೊಂಡ ಆಳಿ > ಆಯಾಯಾ ಪ್ರದೇಶದ ಲೆಖ್ಖದ ವಿವರ - ಸೇನಬೋವರು ೧

ವರ್ಷಕ್ಕೆ ೪೫,೦೦೦.೦೦ ಪಗುದಿ ಸಲ್ಲಿಸುವುದು[೭] ಪು. ೧೭೩, ೧೭೪, ೧೭೫ ರಲ್ಲಿ ನರಸಿಂಗರಾಯನಿಂದ ಚಕ್ರವರ್ತಿ, ಪ್ರಧಾನಿ, ಪಾಳೆಯಗಾರರುಗಳು ಆಯಾ ಪ್ರಾಂತಗಳಲ್ಲಿ ಆಡಳಿತ ನಡೆಸಿದ ಅವಧಿಯ ಕಾಲಗಳ ಉಲ್ಲೇಖನಗಳಿವೆ.

ಬೆಳೆಯ ರಾಯರೇಖೆಗಳು

೭೦೦.೦೦	ರಾಯರೇಖೆಗೆ	ಭತ್ತ
೧,೦೦೦.೦೦	ರಾಯರೇಖೆಗೆ	ರಾಗಿ
೩೦೦.೦೦	ರಾಯರೇಖೆಗೆ	ಹುರುಳಿ
೩೦೦.೦೦	ರಾಯರೇಖೆಗೆ	ಬೆಲ್ಲದ ಅಚ್ಚು
೧೦.೦೦	ರಾಯರೇಖೆಗೆ	ಬೂದಿಹಾಳು

ಇದಕ್ಕೆ ರಾಮಪ್ಪನಾಯಕನ ಕಾವಲು ವಿವರ (ಪು. ೧೭೫)

ಹಸ್ತಪ್ರತಿಯಲ್ಲಿರುವ ಅಂಕಿಸಂಖ್ಯೆಗಳು

(ಪು. ೩೧) ನರಸಿಂಗರಾಯರು ಸಾಧಿಸಿದ ಕರ್ನಾಟಕ ರಾಜ್ಯ ೪,೦೦,೦೦೦x೦೦[೮]

(ಪು. ೩೧) ಕೃಷ್ಣರಾಯರು ಸಾಧಿಸಿದ ತುರಕದೊರೆಗಳ ರಾಜ್ಯ- ೨೨೬೦೦೦೦೦.೦೦

(ಪು. ೩೨) ತಿಪ್ಪಣ್ಣ ಢಣಾಯಕಗೆ ಸಲುವ ನಾಡು ೯೦,೦೦೦೦೦.೦೦
೧೧ಕ್ಕೆ ಮುಳವಾಯಲು ದುರ್ಗಕ್ಕೆ ಸಲುವದು.

ಈ ರಾಜ್ಯಕ್ಕೆ ಧರ್ಮ ಉತ್ತಾರ,

ದೇವಾದಾಯ	- ೮,೦೦೦೦೦.೦೦
ಬ್ರಹ್ಮಾದಾಯ	- ೬,೦೦೦೦೦.೦೦
ಪುರವರ್ಗ	- ೪,೦೦೦೦೦.೦೦
ಸ್ಥಳಮಾನ್ಯ	- ೨,೦೦೦೦೦.೦೦
ಅಂತು,	- ೨೦,೦೦೦೦೦.೦೦
ಧರ್ಮ ಉತ್ತಾರ ಸಹ	- ೯೦,೦೦೦೦೦.೦೦

ಸ್ಥಳನಾಮಗಳು

ವಿಜಯಾಪುರ > ಬಿಜಾಪುರ ; ತಿಮ್ಮನಾಯಕನ ಕೋಟೆ ಪ್ರತಿ ನಾಮಧೇಯ ಢೆಂಕಣೀಕೋಟೆ; ಭೂಪನದುರ್ಗ ಪ್ರತಿನಾಮ ಚಕ್ರದಿ ವರಾಹಾಯ ಕೋಟೆ.


ಉಪಸಂಹಾರ

ಸುಮಾರು ೪೪೧ ಪುಟಗಳವರೆಗೆ ಹಳಗನ್ನಡ ಮೋಡೀ ಲಿಪಿಗಳಿಂದ ಕೂಡಿದ ಹಾಗೂ ಓದಲು ಸುಲಭ ಗ್ರಾಹ್ಯವಾದ ಈ ಹಸ್ತಪ್ರತಿಯು ವಿಜಯನಗರದ ಆರ್ಥಿಕ ಸಾಮಾಜಿಕ

ಹಾಗೂ ಆಡಳಿತ ಇತಿಹಾಸದಲ್ಲಿ ಚಾರಿತ್ರಿಕ ಮೌಲ್ಯದೊಂದಿಗೆ ಉತ್ಕೃಷ್ಟ ಆಕರ ಗ್ರಂಥಗಳ ಸಾಲಿಗೆ ಸೇರಲು ಅರ್ಹವಾಗಿದೆ. ಪ್ರಸಿದ್ಧ ಅಭಿಲೇಖಾಗಾರ ತಜ್ಞರಾದ ಸೈಲನ್ ಘೋಷ್ ರವರು ವಿಜಯನಗರ ರಾಜ್ಯಾಡಳಿತ ಪತ್ರಾಗಾರವನ್ನು ಕುರಿತಂತೆ -

Vijayanagara, however, presents an interesting though meagre account about the royal record office there abdur Razzaq who visited Vijayangar in 1442 left the following account : "On the right hand of the palace of the sultan there is the Diwan Khana or ministers office, which is extremely large, and presents the appearance of a chihal-sutum, or forty pillared hall : and infront of it there runs a raised gallery, higher than the stature of man, thirty yards long and six broad, where records are kept and the scribes are seated."[9]

ಪ್ರಸ್ತಾಪಿಸಿರುವುದನ್ನು ಅವಲೋಕಿಸಿದಾಗ ಈ ಕೊರತೆಯನ್ನು ಈ ಹಸ್ತಪ್ರತಿಯು ತುಂಬಿಕೊಡಬಹುದೆಂದು ಹೇಳಬಹುದಾಗಿದೆ. ಮೂಲ ಪ್ರತಿಯಿಂದ ಲಿಪಿ ಮಾಡಿಕೊಂಡ ಕೃತಿಯಿದಾಗಿದ್ದು, ಲಿಪಿಕಾರನ ಹಾಗೂ ಕಾಲಮಾನವೂ ಅಲಭ್ಯವಾಗಿದೆ. ಹಸ್ತಪ್ರತಿಯಲ್ಲಿ ಉಲ್ಲೇಖನಗೊಂಡ ಶಾ.ಶ. ೧೪೫೧ ಸಾಧಾರಣ ಸಂವತ್ಸರದ ವೈಶಾಖ ಶುದ್ಧ ೫ ಸೋಮವಾರ ಹಾಗೂ ಶಾ.ಶ. ೧೪೭೭ಲನೇ ಆನಂದ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿ ೫ ಶುಕ್ರವಾರದಲ್ಲೂ ಮುಂತಾದ ಕಾಲಮಾನಾಧಿಗಳು ಹಸ್ತಪ್ರತಿಯ ಮೌಲ್ಯಾತ್ಮಕ ಚಾರಿತ್ರಿಕ ಹಿನ್ನೆಲೆಯನ್ನು ಗುರುತಿಸಲು ಪರಿಶೀಲನಾರ್ಹವಾಗಿವೆ. ಪಾಠಾಂತರ ಭೇದಗಳೊಂದಿಗೆ ತುಲನಾತ್ಮಕವಾಗಿ ಇತರೆ ಹಸ್ತಪ್ರತಿಗಳನ್ನು ಪರಿಶೀಲಿಸಿ ಅಧ್ಯಯನ ಕೈಗೊಳ್ಳುವುದೂ ಅಗತ್ಯ. ನನಗೆ ಕೇವಲ ೨೧ ಪತ್ರಗಳ ಜೆರಾಕ್ಸ್ ಪ್ರತಿ ಲಭಿಸಿದ್ದು, ಉಳಿದ ಸಮಗ್ರ ಭಾಗಗಳನ್ನು ಪರಿಶೀಲಿಸಲು ಅವಕಾಶಕ್ಕಾಗಿ ಎದುರು ನೋಡುತ್ತಿರುವೆನು. ನನಗೆ ಲಭಿಸಿದ ೪೩೭ನೇ ಪುಟದ ಅಂತ್ಯ ಸಾಲಿನಲ್ಲಿ - "ಪ್ರಾಕು ಬರೆದು ವಿಳಂಬಿ ಸಂವತ್ಸರದಲ್ಲಿ ಕುಮ್ಮಸೆಮನೆ (ಸುಚ್ಚುಗಾ?) ಆರದಾರ್ ಕನಕಾ ಸುಟ್ಟು ಹೋಯಿತು. ಚಿಲವಾಲರ (ನ)ಕ ನೀರಲ್ಲಿ ತೊಯಿದು ಉಳ್ಳದ್ದಾರಿಂದ ಬರೆದಿದೆ. ಮುಂದಣ ಕೆಲವು ಭಾಗವು ಮೂಲಪ್ರತಿಯಲಿಲ್ಲ (೪೩೮ನೇ ಪುಟದ ೧ನೇ ಸಾಲು) ಎಡೆಯು ಖಾಲಿಯಾಗಿ ಬಿಡಲ್ಪಟ್ಟಿದೆ. ಎಂಬ ಉಲ್ಲೇಖವಿದೆ. ಈ ಹಸ್ತಪ್ರತಿಯಲ್ಲಿ ಹಲವು ಶಾಸನದ ಪ್ರತಿಗಳೂ ಉಲ್ಲೇಖನಗೊಂಡಿರುವುದು ಗಣನೀಯ, ಒಟ್ಟಿನಲ್ಲಿ ರಾಯರೇಖೆಯನ್ನು ಕುರಿತಂತೆ ವಿಜಯನಗರದ ರಾಜಕೀಯ ಆರ್ಥಿಕ ಸಾಮಾಜಿಕ ಇತಿಹಾಸದಲ್ಲಿ ಆಕರಗಳ ಪರಿಶೋಧನೆಗೆ ಅಧ್ಯಯನ ಕೈಗೊಳ್ಳಲು ಸೂಕ್ತ ಅವಕಾಶವನ್ನಿತ್ತ ಹಸ್ತಪ್ರತಿಯಿದಾಗಿದ್ದು ಮುಂದಿನ ವಿದ್ವತ್ ಪೀಳಿಗೆಗೆ ಇದನ್ನು ರಕ್ಷಿಸಿ ಸಂಶೋಧನೆ ಸಂಪಾದನೆ ಕೈಗೊಳ್ಳುವುದು ಅಗತ್ಯ. ಈ ಮುಖಾಂತರ ವಿಜಯನಗರ ಇತಿಹಾಸದಲ್ಲಿ ಆಕರಗಳ ಮಾಲೆಗೆ ಈ ಹಸ್ತಪ್ರತಿಯೂ ಸೇರಿದಂತಾಗುತ್ತದೆ.



ರಾಯರೇಖೆ ಉಲ್ಲೇಖನವನ್ನೊಳಗೊಂಡ ಚಾರಿತ್ರಿಕ ದಾಖಲೆ

ಅಡಿಟಿಪ್ಪಣಿ

1. The History of Vijayanagar Empire, M.H. Rama Sharma, 1308-1569 A.D.
2. M.A.R. 1946
3. Ancient tenures of Land in the Maratha Country - By Walter Elliot, K.C.F.I, F.R.S.
4. Archieves in India by Sailon Ghose
5. Giridhara Sri, Essays on Indology; A.V. Narasimha Murthy and Dr. K.V. Ramesh, Agam Prakashana, Delhi, 1987
6. Indian Antiquary, 1886, September
7. Maratha Influence on the Revenue Administration in North Karnataka by Dr. K.N.Chitnis.
8. An Alphabetical Index of Kannada Mss. GOML, Madras, 1952
9. Western Karnataka its Agrarian Relations AD 1500-1800, Dr. K.G. Vasantha Madhava, Navrang, New Delhi, 1991.

DISTRIBUTION OF FREQUENT REVENUE TERMS IN KANNADA INSCRIPTIONS

	Region					Period							
Term	N	W	S	E	Total	1	2	3	4	5	6	7	NP
alivu	8	1	4	-	13	-	6	2	-	2	2	-	1
anyaya	9	10	7	-	26	-	11	4	3	4	3	-	1
bedige	9	3	20	5	37	-	2	1	4	19	11	-	-
bhattadaya	7	-	5	6	18	1	-	2	-	8	5	2	-
birada	32	4	10	6	52	-	2	9	3	31	7	-	-
bitti	29	-	11	4	44	-	7	6	2	19	9	1	-
grama-gadyana	15	-	2	-	17	-	2	15	-	-	-	-	-
hadike	8	3	1	-	12	-	6	4	1	-	-	-	1
hodake	6	2	3	-	11	-	7	3	1	-	-	-	-
horavaru	3	-	15	-	18	-	-	8	3	6	1	-	-
jodi	5	1	3	2	11	-	1	1	-	6	3	-	-
kaddaya	13	3	6	3	25	-	5	6	4	8	2	-	-
kandaya	6	4	-	1	11	-	3	1	1	4	2	-	-
kanike	26	3	22	13	64	-	9	5	7	32	8	2	1
kottana	9	-	2	-	11	-	5	3	-	3	-	-	-
kula	24	9	9	-	42	1	9	15	5	9	2	1	-
kumbara-dere	-	-	11	-	11	-	1	1	3	6	-	-	-
madarike	2	-	11	-	13	-	-	3	1	8	1	-	-

Term	Region				Total	Period							
	N	W	S	E		1	2	3	4	5	6	7	NP
maduveya-sunka	14	-	-	8	22	-	-	4	-	2	16	-	-
magga-dere	4	-	32	10	46	-	5	7	6	17	8	3	-
mane-vana	2	-	25	3	30	-	1	1	3	17	7	1	-
siddhaya	35	21	3	4	63	1	13	18	8	15	7	1	-
sunka	22	4	45	22	93	-	6	13	8	39	23	3	1
sunka-karuka	11	-	-	-	11	-	2	9	-	-	-	-	-
suvarnadaya	22	1	36	21	80	1	2	9	5	35	23	4	1
talavarike	17	-	10	5	32	-	1	6	4	12	9	-	-
terige	10	6	5	2	23	-	2	1	4	13	3	-	-
udugore	12	2	-	1	15	1	2	9	2	1	-	-	-
volavaru	3	-	12	-	15	-	1	6	2	5	1	-	-

Region	Districts
N (= North)	Dharwar, North Kanara, Bellary, Shimoga, Chitradurga and Chikkamagalur
W (= West)	South Kanara
S (= South)	Hassan, Mysore and Mandya
E (= East)	Tumkur, Kolar and Bangalore

❑❑

೧೫

ತಲಕಾವೇರಿಯಲ್ಲಿ ವಿಜಯನಗರ ಕಾಲದ ನಾಣ್ಯಗಳ ಸಂಶೋಧನೆ

* ಡಾ. ನಾ.ಶಿ.ರಂಗಾರಾಜು

ಮಡಿಕೇರಿ ಜಿಲ್ಲೆಯು ಪೂರ್ವ‌ಇತಿಹಾಸ ಕಾಲದಿಂದಲೂ ಬಹಳ ಪ್ರಸಿದ್ಧವಾದ ಜನವಸತಿ ನೆಲೆಯಾಗಿದ್ದು ಅನೇಕ ಬೃಹತ್ ಶಿಲಾಯುಗದ ಸಾಂಸ್ಕೃತಿಕ ನೆಲೆಗಳು ಮತ್ತು ಸಮಾದಿಗಳನ್ನು ಅನೇಕ ವಿದ್ವಾಂಸರು ಬ್ರಿಟೀಷರ ಕಾಲದಿಂದಲೂ ಅನ್ವೇಷಣೆ ಮಾಡಿ ಅಧ್ಯಯನ ನಡೆಸಿದ್ದಾರೆ. ೧೮೫೬ರಲ್ಲಿ ಪ್ರಪ್ರಥಮ ಬಾರಿಗೆ ಡಾ. ಮೋಂಗ್ಲಿಗ್ ಎನ್ನುವವರು ಈ ಬೃಹತ್ ಶಿಲಾಯುಗದ ನೆಲೆಗಳನ್ನು ಕಂಡು ಹಿಡಿದು ಸಂಶೋಧನೆ ನಡೆಸಿದ ಮೇಲೆ ಮಡಿಕೇರಿ ಜಿಲ್ಲೆ ಪೂರ್ವ‌ಇತಿಹಾಸದ ಅಧ್ಯಯನದ ಭೂಪಟದಲ್ಲಿ ಉನ್ನತ ಸ್ಥಾನ ಪಡೆದುಕೊಂಡಿತು. ಈ ಜಿಲ್ಲೆಯ ಕೆಲವು ನೆಲೆಗಳನ್ನು ಕುತೂಹಲಕ್ಕಾಗಿ ಮತ್ತು ಸಂಶೋಧನೆಗಾಗಿ ಉತ್ಖನನ ನಡೆಸಿ ಅಧ್ಯಯನ ಮಾಡಿದ್ದಾರೆ. ಇಲ್ಲಿಯ ಅಧ್ಯಯನಗಳಲ್ಲಿ ಹೆಗ್ಗಡೆ ಹಳ್ಳಿಯಲ್ಲಿ ನಡೆದಿರುವ ಉತ್ಖನನ ಬಹಳ ಮುಖ್ಯವಾಗಿದ್ದು ಬೃಹತ್ ಶಿಲಾಯುಗದ ಜನರ ಜೀವನದ ಬಗ್ಗೆ ಮತ್ತು ಅವರ ವ್ಯವಸಾಯದ ವಿಧಾನಗಳ ಬಗ್ಗೆಯು ಸಹ ಉನ್ನತ ಮಾಹಿತಿಗಳು ಲಭ್ಯವಾಗಿದ್ದು ಸಂಶೋಧಕರಿಗೆ ಬಹಳ ಸಹಕಾರಿಯಾಗಿದೆ. ಹೆಗ್ಗಡೆ ಹಳ್ಳಿಯಲ್ಲಿ ಮಾತ್ರವಲ್ಲದೆ ಕುಶಾಲನಗರದ ಪಕ್ಕದಲ್ಲಿ ಹರಿದು ಹೋಗುವ ಕಾವೇರಿ ನದಿಯ ದಡದಲ್ಲಿರುವ ಮೈಸೂರು ಜಿಲ್ಲೆಯ ಕೊಪ್ಪದಲ್ಲಿ ನಡೆದ ಉತ್ಖನನದಲ್ಲಿಯೂ ಸಹ ಬತ್ತದ ಹೊಟ್ಟು ದೊರಕಿರುವುದರಿಂದ ವ್ಯವಸಾಯದ ಬಗ್ಗೆ ಉತ್ತಮ ಮಾಹಿತಿ ಇದಾಗಿದೆ. ಕೊಡಗು ಜಿಲ್ಲೆಯ ಬೃಹತ್

ಶಿಲಾಯುಗದ ಸಂಸ್ಕೃತಿಯ ಬಗ್ಗೆ ಕೆ.ಕೆ.ಸುಬ್ಬಯ್ಯನವರು ವಿಶೇಷ ಅಧ್ಯಯನ ನಡೆಸಿ ಸಂಶೋಧನಾ ಗ್ರಂಥವನ್ನು ಪ್ರಕಟಿಸಿದ್ದಾರೆ.


ಆದರೆ ಪುರಾತತ್ವದ ಇತರ ಆಧಾರಗಳು ಈ ಜಿಲ್ಲೆಯಲ್ಲಿ ಕಡಿಮೆ ಲಭ್ಯವಾಗಿವೆ ಎಂದು ಹೇಳಬಹುದು. ಇದುವರೆಗೂ ಸುಮಾರು ೧೧೦ ಶಾಸನಗಳನ್ನು ಮಾತ್ರ ಕಂಡುಹಿಡಿದು ಅಧ್ಯಯನ ನಡೆಸಿ ಪ್ರಕಟಿಸಲಾಗಿದೆ. ಈ ಶಾಸನಗಳನ್ನು ಕಂಡು ಹಿಡಿದು ಮೊದಲು ಪ್ರಕಟಿಸಿದವರು ಬಿ.ಎಲ್.ರೈಸ್ ರವರು. ನಾಣ್ಯ ಶಾಸ್ತ್ರದ ವಿಷಯದಲ್ಲಂತೂ ಅತ್ಯಂತ ಕಡಿಮೆ ಮಾಹಿತಿ ಲಭ್ಯವಾಗಿದ್ದು, ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ಕೊಡಗಿನ ತಲಕಾವೇರಿಯಲ್ಲಿ ಸಂಗ್ರಹಿಸಿರುವ ನಾಣ್ಯಗಳು ಈ ಜಿಲ್ಲೆಯ ನಾಣ್ಯ ಶಾಸ್ತ್ರದ ಅಧ್ಯಯನಕ್ಕೆ ಹೊಸ ಬೆಳಕನ್ನು ಚೆಲ್ಲುತ್ತದೆ.

ಇದೇ ವರ್ಷ ನನಗೆ UGC ಯವರಿಂದ ಕಾವೇರಿ ನದಿಯ ದಡದಲ್ಲಿ ಸಂಶೋಧನೆ ಮಾಡಲು ಮಂಜೂರಾಗಿರುವ "ARCHAEOLOGICAL EXPLORATIONS IN CAUVERY RIVER BASIN AT MADIKERI, MYSORE AND MANDYA DISTRICT" ಎಂಬ ಬೃಹತ್ ಸಂಶೋಧನಾ ಯೋಜನೆಯ ಬಗ್ಗೆ ಚರ್ಚೆ ನಡೆಸುವಾಗ ನನ್ನ ಹಳೆಯ ವಿದ್ಯಾರ್ಥಿ ಹಾಗೂ ಅಧ್ಯಾಪಕರು ಮತ್ತು ಸಂಶೋಧಕರೂ ಆದ ಕೊಡಗಿನ ಚಟ್ಟಹಳ್ಳಿಯ ಜನಾರ್ಧನ್ ರವರು ಸುಮಾರು ೫೨ ತಾಮ್ರದ ನಾಣ್ಯಗಳನ್ನು ಮತ್ತು ಒಂದು ಬೆಳ್ಳಿಯ ನಾಣ್ಯವನ್ನು ಕಾವೇರಿ ನದಿ ಹುಟ್ಟುವ ಹಾಗೂ ಯಾತ್ರಾಸ್ಥಳವಾಗಿರುವ ಕೊಡಗಿನ ತಲಕಾವೇರಿಯ ಪ್ರದೇಶದಲ್ಲಿ ಸಂಗ್ರಹಿಸಿರುವುದನ್ನು ತಿಳಿಸಿದರು. ಇವು ನನ್ನ ಬೃಹತ್ ಸಂಶೋಧನಾ ಯೋಜನೆಗೆ ಬಹಳ ಸಹಕಾರಿಯಾಗಿದ್ದು ಕೆಲವು ನಾಣ್ಯಗಳು ವಿಜಯನಗರ ಕಾಲದ್ದಾಗಿವೆ.

ಈ ನಾಣ್ಯಗಳಲ್ಲಿ ಕೆಲವು ತಾಮ್ರದ ನಾಣ್ಯಗಳು ಬಹಳ ಮುಖ್ಯವಾಗಿದ್ದು ಕೊಡಗಿನ ಪ್ರದೇಶದಲ್ಲಿ ವಿಜಯನಗರದ ಅರಸರ ಆಳ್ವಿಕೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಿಕೊಡುತ್ತದೆ. ಇವುಗಳಲ್ಲಿ ಬಹಳಷ್ಟು ನಾಣ್ಯಗಳು ಸವೆದು ಹೋಗಿದ್ದರೂ ಕೆಲವು ನಾಣ್ಯಗಳಿಂದ ಉತ್ತಮ ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸಲು ಸಹಕಾರಿಯಾಗಿವೆ. ಕರ್ನಾಟಕದ ನಾಣ್ಯಗಳ ಬಗ್ಗೆ ಹೆಚ್ಚಿನ ಹಾಗೂ ಉನ್ನತ ಸಂಶೋಧನೆಯನ್ನು ನಡೆಸಿರುವ ಡಾ. ಎಂ.ಹೆಚ್.ಕೃಷ್ಣರವರಾಗಲಿ ಅಥವಾ ವಿಜಯನಗರದ ನಾಣ್ಯಗಳ ಕೆಲವು ಗ್ರಂಥಗಳನ್ನು ಹಾಗೂ ಅನೇಕ ಲೇಖನಗಳನ್ನು ಬರೆದಿರುವ ಡಾ.ಎ.ವಿ.ನರಸಿಂಹಮೂರ್ತಿಯವರಾಗಲಿ ಅಥವಾ ಉಳಿದ ನಾಣ್ಯ ಸಂಶೋಧಕರಾಗಲಿ ಮಡಿಕೇರಿ ಜಿಲ್ಲೆಯಲ್ಲಿ ವಿಜಯನಗರದ ನಾಣ್ಯಗಳ ಬಗ್ಗೆ ಉಲ್ಲೇಖಿಸಿಲ್ಲದಿರುವುದರಿಂದ ಈ ಸಂಶೋಧನೆ ಮಡಿಕೇರಿ ಜಿಲ್ಲೆಯಲ್ಲಿನ ವಿಜಯನಗರದ ಇತಿಹಾಸದ ಬಗ್ಗೆ ಹೊಸ ಬೆಳಕನ್ನು ಚೆಲ್ಲುತ್ತದೆ. ಕಾರಣವೆಂದರೆ ಈ ಜಿಲ್ಲೆಯು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತೆಂದು ಅವರಿಗೆ ಸಂಬಂಧಪಟ್ಟ

ಶಾಸನಗಳಿಂದ ತಿಳಿದು ಬರುತ್ತದೆ. ಈ ಜಿಲ್ಲೆಯಲ್ಲಿ ವಿಜಯನಗರದ ಅರಸರ ಮೊದಲ ಶಾಸನ ಮುಳ್ಳೂರಲ್ಲಿ ಕಂಡು ಬಂದಿದ್ದು ಕ್ರಿ.ಶ. ೧೩೯೦ರಲ್ಲಿ ಬರೆಸಿರುವ ಈ ಶಾಸನದಲ್ಲಿ ಚಕ್ರವರ್ತಿ ಎರಡನೇ ಹರಿಹರನ ಉಲ್ಲೇಖವಿದ್ದು ಮುಳ್ಳೂರಿನಲ್ಲಿ ಕೊಂಗಾಳ್ವ ಅರಸರು ಕಟ್ಟಿಸಿದ ಪಾರ್ಶ್ವನಾಥ ಬಸದಿಯನ್ನು ಬಾಹುಬಲಿದೇವರೆಂಬ ಜೈನ ಸನ್ಯಾಸಿಗಳು ಜೀರ್ಣೋದ್ಧಾರ ಮಾಡಿಸಿರುವುದನ್ನು ತಿಳಿದ ಎರಡನೇ ಹರಿಹರನು ಕರಗೂಡು ಎಂಬ ಗ್ರಾಮಕ್ಕೆ ಅಣ್ಣಾಂಗಪುರವೆಂಬ ಹೆಸರಿಟ್ಟು ದಾನ ಮಾಡಿದನೆಂದು ತಿಳಿಸುತ್ತದೆ. ಈ ದಾನಕ್ಕೆ ಕಾರಣಕರ್ತರು ಗುಂಡಪ್ಪ ದಂಡನಾಯಕನೆಂಬ ಅಧಿಕಾರಿ. ಈ ಶಾಸನವನ್ನು ಬಿಟ್ಟರೆ ಮಡಿಕೇರಿ ಜಿಲ್ಲೆಯಲ್ಲಿ ವಿಜಯನಗರದ ಶಾಸನಗಳು ಬಹಳ ಕಡಿಮೆ ಎಂದು ಹೇಳಬಹುದು. ಅಷ್ಟೆ ಅಲ್ಲ ಈ ನಾಣ್ಯಗಳು ದೊರೆತಿರುವ ತಲಕಾವೇರಿ ಪ್ರದೇಶದಲ್ಲಿ ಈ ಅರಸರ ಶಾಸನಗಳು ಕಂಡುಬಾರದೇ ಇರುವುದರಿಂದ ಈ ನಾಣ್ಯಗಳ ಸಂಶೋಧನೆ ಬಹಳ ಮುಖ್ಯವಾಗಿದ್ದು ವಿಜಯನಗರದ ಅರಸರ ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸದ ಮೇಲೆ ಹೊಸಬೆಳಕನ್ನು ಚೆಲ್ಲುತ್ತದೆ.



ತಲಕಾವೇರಿಯಲ್ಲಿ ದೊರೆತ ವಿಜಯನಗರ ನಾಣ್ಯಗಳು

ಈ ಸಂಶೋಧನೆಯಲ್ಲಿ ವಿಜಯನಗರದ ಸುಮಾರು ಹನ್ನೆರಡು ತಾಮ್ರದ ನಾಣ್ಯಗಳು ದೊರೆತಿವೆ. ಇವುಗಳಲ್ಲಿ ಎರಡು ನಾಣ್ಯಗಳು ಮುಖ್ಯವಾಗಿದ್ದು, ಈ ಎರಡು ನಾಣ್ಯಗಳ ಮುಂಬದಿಯಲ್ಲಿ ಗರುಡನ ಚಿತ್ರಗಳಿದ್ದು ಒಂದು ನಾಣ್ಯದ ಹಿಂಭಾಗ ಸ್ವಲ್ಪ ಮಟ್ಟಿಗೆ ಅಳಿಸಿ ಹೋಗಿದ್ದು ಮತ್ತೊಂದು ನಾಣ್ಯದ ಹಿಂಭಾಗದಲ್ಲಿ ನಾಗರೀ ಲಿಪಿ ಇರುವುದು ಕಂಡುಬರುತ್ತದೆ. ಮೊದಲ ನಾಣ್ಯದಲ್ಲಿ ನಾಗರೀ ಲಿಪಿ ಇರುವುದು ಕಂಡುಬಂದರೂ ಸ್ಪಷ್ಟವಾಗಿ ಓದಲು ಸಾಧ್ಯವಾಗುವುದಿಲ್ಲ. ಇವುಗಳಲ್ಲಿ ಒಂದು ನಾಣ್ಯದ ತೂಕ ೪ ಗ್ರಾಮನಿಷ್ಟಿದ್ದು, ಸುತ್ತಳತೆ ೧.೪ ಸೆಂ.ಮೀಟರನಷ್ಟಿದೆ. ಮತ್ತೊಂದು ೨ ಗ್ರಾಂ ತೂಕವಿದ್ದು, ೧ ಸೆಂ.ಮೀ. ಸುತ್ತಳತೆ ಇದೆ. ಉಳಿದ ಆರು ನಾಣ್ಯಗಳ ಮುಂಭಾಗದಲ್ಲಿ ಆನೆಗಳ ಚಿತ್ರಗಳಿವೆ. ಅವುಗಳಲ್ಲಿ ನಾಲ್ಕು ಆನೆಗಳು ಎಡಭಾಗಕ್ಕೆ ಚಲಿಸಿರುವಂತೆ ಕಂಡುಬರುತ್ತದೆ. ಅದರಲ್ಲಿ ಎರಡು ಆನೆಗಳ ಸುತ್ತ ವೃತ್ತಾಕಾರದಲ್ಲಿ ಚುಕ್ಕೆಗಳಿರುವುದು ಸಹ ಕಂಡುಬರುತ್ತದೆ. ಈ ಪ್ರತಿಯೊಂದು ಆನೆಯ .ಕತ್ತು ಭೂಮಿಗೆ ಸಮನಾಂತರವಾಗಿದ್ದು ಸೊಂಡಿಲುಗಳನ್ನು ಕೆಳಬಿಟ್ಟುಕೊಂಡು ಚಲಿಸುತ್ತಿರುವಂತೆ ಮುದ್ರಿಸಲಾಗಿದೆ.

ಉಳಿದ ಎರಡು ನಾಣ್ಯದಲ್ಲಿ ಆನೆಗಳು ತಮ್ಮ ತಲೆಗಳನ್ನು ಸ್ವಲ್ಪ ಮೇಲ್ಭಾಗಕ್ಕೆ ಎತ್ತಿಕೊಂಡು ಬಲಭಾಗಕ್ಕೆ ಚಲಿಸುತ್ತಿರುವಂತೆ ಮುದ್ರಿಸಲಾಗಿದೆ. ಪ್ರತಿಯೊಂದು ನಾಣ್ಯದ ಹಿಂಭಾಗದಲ್ಲಿ ಇರಬಹುದಾದ ಬರಹಗಳು ಸ್ಪಷ್ಟವಾಗಿ ಕಾಣಿಸದಷ್ಟು ಅಳಿಸಿಹೋಗಿವೆ. ಅಳತೆ ಹಾಗೂ ತೂಕದಲ್ಲಿ ಈ ಆರು ನಾಣ್ಯಗಳು ಚಿಕ್ಕದಾಗಿದ್ದು ಹೆಚ್ಚು ಕಡಿಮೆ ಒಂದೇ ಅಳತೆಯಲ್ಲಿ ಇವೆ. ಪ್ರತಿಯೊಂದು ನಾಣ್ಯದ ತೂಕ ೪ ಗ್ರಾಂ ನಷ್ಟಿದ್ದು, ಸುತ್ತಳತೆ ೧.೨ ಸೆಂ.ಮೀ.ನಷ್ಟಿದೆ.

ಇದೇ ಅಳತೆಯ ಮತ್ತೊಂದು ತಾಮ್ರದ ನಾಣ್ಯದ ಮುಂಭಾಗದಲ್ಲಿ ಜಿಂಕೆಯ ಚಿತ್ರವಿದ್ದು ಹಿಂಭಾಗದ ಬರಹ ಸ್ಪಷ್ಟವಾಗಿ ಕಾಣುವುದಿಲ್ಲ. ಇದರ ತೂಕ ೨ ಗ್ರಾಂಗಳಿಷ್ಟಿದ್ದು, ಸುತ್ತಳತೆ ೧.೨ ಸೆಂ.ಮೀ.ನಷ್ಟಿದೆ.

ಅಳತೆಯಲ್ಲಿ ಮೇಲೆ ಹೇಳಿದ ನಾಣ್ಯಗಳಿಗಿಂತ ಚಿಕ್ಕದಾದ ಇನ್ನೊಂದು ನಾಣ್ಯದ ಮುಂಭಾಗದಲ್ಲಿ ನವಿಲಿನ ಚಿತ್ರದ ಮುದ್ರಣವಿದ್ದು ಹಿಂಬದಿ ಅಸ್ಪಷ್ಟವಾಗಿದೆ. ಈ ನಾಣ್ಯದ ತೂಕ ೨ ಗ್ರಾಂನಷ್ಟಿದ್ದು, ಸುತ್ತಳತೆ ೧.೨ ಸೆಂ.ಮೀ. ನಷ್ಟಿದೆ. ಇದಕ್ಕಿಂತ ಚಿಕ್ಕದಾದ ಮತ್ತೊಂದು ನಾಣ್ಯದ ಮುಂಭಾಗದಲ್ಲಿ ನವಿಲು ಮುದ್ರಣವಿದ್ದು ಹಿಂಭಾಗ ಅಸ್ಪಷ್ಟವಾಗಿದೆ. ಇದರ ತೂಕ ೨ ಗ್ರಾಂನಷ್ಟಿದ್ದು, ಸುತ್ತಳತೆ ೦.೯ ಸೆಂ.ಮೀ.ನಷ್ಟಿದೆ.

ಈ ನಾಣ್ಯಕ್ಕಿಂತಲೂ ಚಿಕ್ಕದಾದ ಮತ್ತೆರಡು ನಾಣ್ಯಗಳ ಮುಂಭಾಗದಲ್ಲಿ ವೃತ್ತಾಕಾರದ ಆರು ಚುಕ್ಕೆಗಳಿದ್ದು, ಅವುಗಳ ಒಳಭಾಗದ ಮಧ್ಯದಲ್ಲಿ ಮತ್ತೊಂದು ಚುಕ್ಕೆ ಇದೆ. ಇವುಗಳ ಹಿಂಭಾಗವು ಸಂಪೂರ್ಣವಾಗಿ ಅಳಿಸಿಹೋಗಿದೆ. ಈ ಪ್ರತಿ ನಾಣ್ಯದ ತೂಕ ೨ ಗ್ರಾಂನಷ್ಟಿದ್ದು, ಸುತ್ತಳತೆ ೦.೭ ಸೆಂ.ಮೀ.ನಷ್ಟಿದೆ.

ಮೇಲೆ ಹೇಳಿರುವ ಪ್ರತಿಯೊಂದು ನಾಣ್ಯವು ಈಗಾಗಲೇ ದೊರಕಿರುವ ಇತರ ವಿಜಯನಗರದ ನಾಣ್ಯಗಳ ಮಾದರಿಯಾಗಿದ್ದು ಡಾ.ಎ.ವಿ.ನರಸಿಂಹಮೂರ್ತಿ, ನಾನು ಹಾಗೂ ಉಳಿದ ನಾಣ್ಯ ಸಂಶೋಧಕರು ಇಂತಹ ಮಾದರಿಯ ನಾಣ್ಯಗಳ ಬಗ್ಗೆ ಸಂಶೋಧನೆ ಮಾಡಿ ಅನೇಕ ಗ್ರಂಥಗಳಲ್ಲಿ ಪ್ರಕಟಿಸಿದ್ದು ಅವುಗಳ ಎರಡನೇ ದೇವರಾಯನ ಕಾಲದ್ದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಆದರೆ ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳೆಂದರೆ

೧. ಕೊಡಗು ಜಿಲ್ಲೆಯಲ್ಲಿ ಅದರಲ್ಲಿಯೂ ಬಹಳ ಪುರಾತನವಾದ ಪವಿತ್ರ ಯಾತ್ರಾಸ್ಥಳ ಹಾಗೂ ಕಾವೇರಿ ನದಿಯು ಹುಟ್ಟುವ ತಲಕಾವೇರಿಯಲ್ಲಿ ವಿಜಯನಗರ ಕಾಲದ ಎರಡನೇ ದೇವರಾಯನ ಕಾಲದ ನಾಣ್ಯಗಳು ಪ್ರಥಮವಾಗಿ ದೊರಕಿರುವುದು.

೨. ಈ ಸಂಶೋಧನೆಯಿಂದ ಹೇಳಬೇಕೆಂದರೆ ಮಡಿಕೇರಿ ಜಿಲ್ಲೆಯಲ್ಲಿ ಕಂಡುಬಂದ ಮೊದಲ ವಿಜಯನಗರ ಕಾಲದ ತಾಮ್ರದ ನಾಣ್ಯಗಳಾಗಿರುವುದು.

೩. ಎ.ವಿ.ನರಸಿಂಹಮೂರ್ತಿಯವರು ತಮ್ಮ ವಿಜಯನಗರದ ನಾಣ್ಯಗಳ ಪುಸ್ತಕಗಳಲ್ಲಿ ತಿಳಿಸಿರುವ ಎರಡನೇ ದೇವರಾಯನ ಕಾಲದ ಅನೇಕ ಮಾದರಿಗಳು ದೊರಕಿರುವುದು.

೪. ಬಹುಶಃ ಬಹಳ ಹಿಂದಿನಿಂದಲೂ, ಅಂದರೆ ವಿಜಯನಗರದ ಕಾಲದಿಂದಲೂ ಮಡಿಕೇರಿಯಲ್ಲಿ ಆನೆಗಳು ಹೆಚ್ಚಾಗಿದ್ದುದರಿಂದ ಆನೆಗಳ ಮಾದರಿಯ ನಾಣ್ಯಗಳನ್ನು ಹೆಚ್ಚಾಗಿ ಮುದ್ರಿಸಿರಬಹುದು.

೫. ಒಂದು ತಾಮ್ರದ ನಾಣ್ಯದ ಮುಂಭಾಗದಲ್ಲಿ ಗರುಡನ ಚಿತ್ರವಿದ್ದು ಅದರ ಹಿಂಭಾಗದಲ್ಲಿ ನಾಗರೀ ಲಿಪಿಯಲ್ಲಿ ದೇವರಾಯ ಎಂದು ಬರೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

೬. ಆದರೂ ಈಗ ದೊರೆತಿರುವ ತಾಮ್ರದ ನಾಣ್ಯಗಳಲ್ಲಿ ವನ್ಯ ಪ್ರಾಣಿಗಳ ಚಿತ್ರಗಳನ್ನು ಹೆಚ್ಚಾಗಿ ಅಚ್ಚು ಹಾಕಿಸಿರುವುದನ್ನು ನೋಡಿದರೆ ವಿಜಯನಗರದ ಅರಸರಿಗೆ ಪರಿಸರದ ಮೇಲಿನ ವ್ಯಾಮೋಹ ಹೆಚ್ಚಾಗಿರುವುದು ಸ್ಪಷ್ಟವಾಗುತ್ತದೆ.

೭. ಮಡಿಕೇರಿ ಜಿಲ್ಲೆಯಲ್ಲಿ ನನ್ನಂತೆ ಹೆಚ್ಚಿನ ಸಂಶೋಧನೆ ಮಾಡುವವರಿಗೆ ಇದು ಇನ್ನಷ್ಟು ಸಹಾಯಕವಾಗುತ್ತದೆ.

ಈ ನಾಣ್ಯಗಳನ್ನು ಸಂಗ್ರಹಿಸಿ ನನ್ನ ಸಂಶೋಧನೆಗೆ ಹೆಚ್ಚಿನ ಸಹಾಯ ಹಸ್ತನೀಡಿದ ಜನಾರ್ಧನ್ ರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆಧಾರ ಗ್ರಂಥಗಳು

೧. A.V.Narasimha Murthy : Coins and Currency system in Karnataka, 1997

೨. A.V.Narasimha Murthy : Studies in Karnataka Numasmatics, 1991

೩. A.V.Narasimha Murthy : Archaeology of Karnataka, 1973

೪. A.V.Narasimha Murthy : Early Historic Archaeology and Numasmatics of Karnataka, 1991

೫. A.V.Narasimha Murthy : Coins and Currency in Vijayanagar period, 1991

೬. M.V.Krishnappa, R.Gopal (Edt), Recent Researches in Karnataka Archaeology

೭. Relevant numbers of the Journals of the Numasmatics society of India

೮. Relevant numbers of the Studies in South Indian Coins volumes

೯. Epigraphia Karnatica volume- I.

೧೦. ಎ.ವಿ.ನರಸಿಂಹಮೂರ್ತಿ : ವಿಜಯನಗರದ ನಾಣ್ಯ ಸಂಪತ್ತು.

೧೧. ಎಂ.ವಿ.ಕೃಷ್ಣಪ್ಪ, ಆರ್.ಗೋಪಾಲ್ : ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ನಾಣ್ಯಶಾಸ್ತ್ರ

೧೨. ಇತಿಹಾಸ ದರ್ಶನದ ಸಂಬಂಧಪಟ್ಟ ಸಂಪುಟಗಳು

೧೩. ಕೊಡಗು ಜಿಲ್ಲೆ (ಪರಿಷ್ಕೃತ ಆವೃತ್ತಿ) ಗ್ಯಾಜೆಟಿಯರ್

೧೪. ಎ.ವಿ.ನರಸಿಂಹಮೂರ್ತಿ : ಭಾರತೀಯ ನಾಣ್ಯಗಳು

❑❑

೧೬

ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಮಾಳಿಗೆಯ ಭಿತ್ತಿಚಿತ್ರಗಳು

ಕಲಾ ಇತಿಹಾಸದ ದೃಷ್ಟಿಯಲ್ಲಿ ಒಂದು ಅವಲೋಕನ

*ಆರ್.ಎಚ್.ಕುಲಕರ್ಣಿ

ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಮಾಳಿಗೆಯಲ್ಲಿರುವ ಚಿತ್ರಗಳು ಆ ಕಾಲದ ಅತ್ಯಂತ ಪ್ರಮುಖ ಉದಾಹರಣೆಗಳಾಗಿವೆ. ವಿಜಯನಗರ ಕಾಲದಲ್ಲಿ ಅಂದರೆ ಕ್ರಿ.ಶ. ೧೬ನೇ ಶತಮಾನದ ಮೊದಲೆರಡು ದಶಕಗಳಲ್ಲಿ ರಚನೆಯಾಗಿರಬಹುದಾದ ಈ ಚಿತ್ರಗಳು ಹಲವಾರು ಅಂಶಗಳಿಂದ ಅತ್ಯಂತ ಮುಖ್ಯವಾಗಿವೆ. ಚಿತ್ರಕಲಾ ಇತಿಹಾಸದ ದೃಷ್ಟಿಯಿಂದ ಈ ಚಿತ್ರಗಳು ವಿಜಯನಗರದ ಕಾಲದಲ್ಲಿ ರಚಿತವಾದ ಅಪೂರ್ವ ಐತಿಹಾಸಿಕ ದಾಖಲೆಗಳಾಗಿವೆ. ಪ್ರಸ್ತುತ ಪ್ರಬಂಧದಲ್ಲಿ ಇವುಗಳಿಗೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ಅಭ್ಯಾಸ ಮಾಡಲಾಗಿದೆ.

ಈ ಚಿತ್ರಗಳನ್ನು ಕುರಿತಂತೆ ಹಲವಾರು ವಿದ್ವಾಂಸರು ಈಗಾಗಲೇ ಅಭ್ಯಾಸ ಮಾಡಿದ್ದಾರೆ ಮತ್ತು ಇವುಗಳ ರಚನಾ ಕಾಲದ ಬಗ್ಗೆ ವಿಭಿನ್ನವಾದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಇವುಗಳಲ್ಲಿ ರಚಿತವಾಗಿರುವ ಹಲವಾರು ವಿಷಯ ವಸ್ತುಗಳನ್ನು ವಿಭಿನ್ನವಾಗಿ ತಮ್ಮದೇ ಆದ ದೃಷ್ಟಿಕೋನದಲ್ಲಿ ಗುರುತಿಸಿದ್ದಾರೆ. ಚಿತ್ರಕಲಾ ಇತಿಹಾಸದ ದೃಷ್ಟಿಯಿಂದ ನಾವು ಈ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಚಿತ್ರಗಳ ಬಗ್ಗೆ ಇದುವರೆಗೂ ಆಗಿರುವ ಅಧ್ಯಯನಗಳು ಅಪೂರ್ಣವೆನಿಸುತ್ತವೆ. ಮಹಾರಂಗಮಂಟಪದಲ್ಲಿನ ಚಿತ್ರಗಳು

ಬೆಳವಣಿಗೆ ಹೊಂದಿರಬಹುದಾದ ರೀತಿ, ಚಿತ್ರಗಳ ಶೈಲಿ, ವರ್ಣವಿನ್ಯಾಸ, ಕಥಾಸಂಯೋಜನೆ, ಆಕೃತಿಗಳ ಸಂಯೋಜನೆ ಹಾಗೂ ಇಡೀಯಾದ ಚಿತ್ರಸ್ಥಳದ (Painting Space) ಬಳಕೆ ಮತ್ತು ಇವುಗಳ ರಚನಾ ಕಾಲವನ್ನು ಒಂದೆಡೆ ಗಮನಿಸಿವುದು, ಈ ಚಿತ್ರಗಳ ಕಾಲದಲ್ಲಿದ್ದ ಸಮಕಾಲೀನ ಚಿತ್ರಶೈಲಿಗಳೊಂದಿಗೆ ಇವುಗಳಿಗಿದ್ದಿರಬಹುದಾದ ಸಂಬಂಧ - ಪ್ರಭಾವ, ಅಥವಾ ಕೊಡುಕೊಳ್ಳುವಿಕೆಯ ಕುರಿತು ವಿಮರ್ಶಾತ್ಮಕವಾಗಿ ನೋಡುವ ಪ್ರಯತ್ನವು ಅವಶ್ಯಕವಾಗಿ ಆಗಬೇಕಾಗಿದೆ.[೧] ಇದರಿಂದ ಪ್ರಸ್ತುತ ಚಿತ್ರಗಳ ಬಗ್ಗೆ ಒಂದು ಪೂರ್ಣ ಚಿತ್ರ ದೊರೆದಂತಾಗುತ್ತದೆ.

ಹಿನ್ನೆಲೆ

ಮಹಾರಂಗಮಂಟಪದ ಚಿತ್ರಗಳ ಕಾಲದ ಹಿನ್ನೆಲೆಯನ್ನು ಗಮನಿಸಿದಾಗ, ಪ್ರಾಚೀನ ಭಾರತದ ಭಿತ್ತಿ ಚಿತ್ರ ಪರಂಪರೆಯ ಮುಂದುವರೆದ ಶೈಲಿ ಅಥವಾ ಚಿತ್ರ ಪರಂಪರೆಯದು ಎನ್ನಬಹುದು. ಅಜಂತಾ (ಮಹಾರಾಷ್ಟ್ರ), ಬಾಗ್ (ಮಧ್ಯಪ್ರದೇಶ)ಗಳಲ್ಲಿರುವ ಬೌದ್ಧಾಲಯ ಗಳಲ್ಲಿನ ಭಿತ್ತಿಚಿತ್ರಗಳ ರಚನೆಯ ನಂತರ ಈ ಪರಂಪರೆ ಮುಂದುವರೆದುಕೊಂಡು ಬಂದದ್ದು - ಬಾದಾಮಿಚಾಲುಕ್ಯರ ಕಾಲದಲ್ಲಿ. ಬಾದಾಮಿಯ ವೈಷ್ಣವ ಲಯಣದಲ್ಲಿ ಮತ್ತು ಐಹೊಳೆಯ ರಾವಣಪಹಾಡಿ ಲಯಣಗಳಲ್ಲಿ ಇಂದಿಗೂ ಒಳಮಾಳಿಗೆಯಲ್ಲಿ ಹಲವಾರು ಭಿತ್ತಿಚಿತ್ರಗಳ ಅವಶೇಷಗಳು ಕಂಡುಬರುತ್ತವೆ. ಇದರಿಂದ ನಂತರದ ಕಾಲದಲ್ಲಿ ಅಂದರೆ - ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರ ಮತ್ತು ಧಾರಾಶಿವ (ಮಹಾರಾಷ್ಟ್ರ) ಲಯಣಗಳಲ್ಲಿ, ಇತ್ತ ದಕ್ಷಿಣದಲ್ಲಿ ಪಲ್ಲವರ ಕಾಲದಲ್ಲಿನ ಕಾಂಚಿಪುರಂ ಮತ್ತು ಚೋಳರ ಕಾಲದ ಸಿತ್ತನವಾಸಲ್ ಹಾಗೂ ತಂಜಾವೂರು ಬೃಹದೀಶ್ವರ ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾದ ಬಗ್ಗೆ ದಾಖಲೆಗಳಿವೆ ಮತ್ತು ಅವಶೇಷಗಳಿವೆ.[೨] ಹಂಪೆಯಲ್ಲಿ - ಚಿತ್ರಗಳ ರಚನೆಯು ಪ್ರಾರಂಭವಾಗುವುದಕ್ಕೆ ಮೊದಲೇ ಈ ಮೇಲೆ ಹೆಸರಿಸಿದ ಸ್ಥಳಗಳಲ್ಲಿ ಚಿತ್ರಕಲೆ - ಆಯಾ ಕಾಲದ ಸಂವೇದನೆಗಳಿಗೆ ಅನುಗುಣವಾಗಿ ಪ್ರವರ್ಧಮಾನಕ್ಕೆ ಬಂದಿತ್ತು ಮತ್ತು ಬೆಳವಣಿಗೆ ಹೊಂದಿತ್ತು. ಆದರೆ ಕರ್ನಾಟಕದಲ್ಲಿ ವಿಶೇಷವಾಗಿ ಆ ಕಾಲದ ಚಿತ್ರಕಲೆಯ ಉದಾಹರಣೆಗಳನ್ನು ಕುರಿತು ಹುಡುಕಾಟ ಮಾಡಿದಾಗ ನಮಗೆ ಅಷ್ಟು ತೃಪ್ತಿಕರವಾದ ಪುರಾವೆ ಗಳು ದೊರೆಯುವುದಿಲ್ಲ. ಬಹುಶಃ ಇದರಿಂದಲೇ ನಮ್ಮ ಹಲವು ವಿದ್ವಾಂಸರಿಗೆ - ಹಂಪೆಯ ಚಿತ್ರಗಳ ಕಾಲದ ಬಗ್ಗೆ ಸಂಶಯಗಳು ಇರುವುದು.

ವಿಜಯನಗರದ ರಾಜ್ಯ ಸ್ಥಾಪನೆಯಾದ ಸಮಯದಲ್ಲಿ ಮತ್ತು ಆ ಕಾಲಕ್ಕಿಂತಲೂ ಮೊದಲು, ಅಂದರೆ ಬಾದಾಮಿ ಚಾಲುಕ್ಯ ನಂತರದ ಕಾಲದಲ್ಲಿ, ಹಾಗೂ ಇಂದಿನ ಕರ್ನಾಟಕಕ್ಕೆ ಸೀಮಿತವಾದಂತೆ ಹೆಚ್ಚಿನ ಪ್ರೋತ್ಸಾಹ ವಾಸ್ತು ಮತ್ತು ಶಿಲ್ಪಕಲೆಗೆ ದೊರೆತಿತ್ತು ಎಂಬ ಅಂಶವನ್ನು ನಾವು ವಿಶೇಷವಾಗಿ ಗಮನಿಸಬೇಕು. ಈ ಕಾಲಗಳಲ್ಲಿ ಚಿತ್ರಕಲೆಯ ಪ್ರಚಲಿತತೆಯ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಈ ಕಾಲದಲ್ಲಿ ಚಿತ್ರಕಲೆಯ ಅಂಗವಾಗಿ ಪ್ರಾರಂಭವಾದ 'ಜೈನ ಮಾನಸ ಪ್ರತಿಗಳಲ್ಲಿ' (Jaina Manuscript Paintings)

ಕಂಡುಬರುವ ತೀರ್ಥಂಕರರ ಮತ್ತು ಜೈನ ಯಕ್ಷ ಯಕ್ಷಣಿಯರ ಹಾಗೂ ಆಚಾರ್ಯರ ರೇಖಾಚಿತ್ರಗಳನ್ನು ಇಲ್ಲಿ ಉದಾಹರಿಸಬಹುದು.[೩] ಆದರೆ ಭಿತ್ತಿಚಿತ್ರಗಳ ರಚನೆಯ ಬಗ್ಗೆ ಯಾವುದೇ ದಾಖಲೆಗಳು ಈ ಕಾಲದಲ್ಲಿ ದೊರೆಯುವುದಿಲ್ಲ. ಚಿತ್ರಕಲೆಗೆ ಪ್ರಾಯಶಃ ಹೆಚ್ಚಿನ ಪ್ರೋತ್ಸಾಹ ಮತ್ತೊಂದು ಬಾರಿ ದೊರೆತದ್ದು ವಿಜಯನಗರದ ಕಾಲದಲ್ಲಿಯೇ ಎಂದು ಹೇಳಬೇಕು. ಈ ಕಾಲದಲ್ಲಿಯೇ ಚಿತ್ರಕಲೆಗೆ ಅತ್ಯಂತ ಪ್ರಾಮುಖ್ಯತೆ ದೊರೆತು, ದೇವಾಲಯ ಗಳ ಗೋಡೆಗಳ ಮೇಲೆ - ಒಳಮಾಳಿಗೆಯ ಮೇಲೆ ಹಾಗೂ ಅಂದಿನ ಅರಮನೆಗಳಲ್ಲಿ ಚಿತ್ರಗಳ ರಚನೆಯಾದ ಬಗ್ಗೆ ಅವುಗಳ ವರ್ಣಸಂಯೋಜನೆಯ ಬಗ್ಗೆ ತಿಳಿದುಬರುತ್ತದೆ. ಅದರಲ್ಲೂ ವಿಶೇಷವಾಗಿ ಹಂಪೆಗೆ ಆ ಕಾಲದಲ್ಲಿ ಬಂದಿದ್ದ ಹಲವು ವಿದೇಶಿ ಪ್ರವಾಸಿಗರು ದಾಖಲಿಸಿರುವಂತೆ ಅರಮನೆಗಳಲ್ಲಿ, ಮುಖ್ಯಬೀದಿಗಳಲ್ಲಿನ ಮನೆಗಳಲ್ಲಿ ಹಾಗೂ ರತಿಗೃಹಗಳಲ್ಲಿ, ಹಲವಾರು ಚಿತ್ರಗಳಿದ್ದ ಬಗ್ಗೆ ವಿವರಣೆಗಳು ದೊರೆಯುತ್ತವೆ.[೪] ದುರದೃಷ್ಟ ವಶಾತ್, ಇಂದು ಆ ಯಾವ ಚಿತ್ರಗಳು ಅಥವಾ ಅವಶೇಷಗಳು ಉಳಿದುಕೊಂಡು ಬಂದಿಲ್ಲ. ಆದರೆ ಇಂದು ನಮ್ಮೆದುರು ಆ ಕಾಲದ ಉದಾಹರಣೆಗಳಾಗಿ ಹಂಪೆಯಲ್ಲಿ ಉಳಿದಿರುವ ಚಿತ್ರಗಳೆಂದರೆ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಮಾಳಿಗೆಯಲ್ಲಿ ಉಳಿದುಕೊಂಡು ಬಂದಿರುವ ಭಿತ್ತಿಚಿತ್ರಗಳು ಮಾತ್ರ ಮತ್ತು ಪಕ್ಕದ ಆನೆಗೊಂದಿಯ ಉಚ್ಚಪ್ಪಯ್ಯ ಮಠದ ಚಿತ್ರಗಳ ಅವಶೇಷಗಳು. ಈಗ ನೇರವಾಗಿ ಮಹಾರಂಗಮಂಟಪದಲ್ಲಿನ ಚಿತ್ರಗಳನ್ನು ಕುರಿತು ತಿಳಿಯುವುದು ಅವಶ್ಯಕವಾಗಿದೆ.

ಚಿತ್ರಗಳ ವಿವರ


ಮಹಾರಂಗಮಂಟಪದ ಒಳಮಾಳಿಗೆಯ ಆಯಾತಾಕಾರವಾಗಿದ್ದು ಸಂಪೂರ್ಣವಾಗಿ ಚಿತ್ರರಚನಾ ಅವಕಾಶ (Painting Space)ವನ್ನು ಯಾವ ರೀತಿ ವಿಭಾಗಿಸಬೇಕು, ಎಲ್ಲೆಲ್ಲಿ ಯಾವ ಚಿತ್ರಗಳು ಬರಬೇಕೆಂಬುದು, ಇಷ್ಟು ವಿಶಾಲವಾದ ಚಿತ್ರಗಳ ಸಂಯೋಜನೆ, ವರ್ಣ ವಿನ್ಯಾಸ, ಈ ಎಲ್ಲಾ ಅಂಶಗಳು ಪೂರ್ವ ನಿಯೋಜಿತವಾಗಿವೆ ಎಂದು ಹೇಳಬಹುದು. ಇದರಿಂದ ನಿರ್ದಿಷ್ಟ ಆಕೃತಿಯಲ್ಲಿ ಮತ್ತು ಸ್ಥಳದಲ್ಲಿ ಉದ್ದೇಶಿತ ವಿಷಯದ ನಿರೂಪಣೆ ಕಂಡುಬರುತ್ತದೆ. ಪ್ರಸ್ತುತ ಚಿತ್ರಗಳನ್ನು ನಾವು ಕೊಂಚ ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೂ ಚಿತ್ರರಚನೆಯ ತಾಂತ್ರಿಕತೆ, ರಚನೆಯನ್ನು ಪ್ರಾರಂಭಿಸಿರುವ ವಿಧದಲ್ಲಿ ಕುರಿತು ಚಿಂತಿಸಿದರೆ ಬಹುಶ: ಈ ಚಿತ್ರಗಳ ರಚನೆಯ ಬಗ್ಗೆ ಒಂದು ಉತ್ತಮ ಚಿತ್ರ ದೊರೆಯಲು, ಸಾಧ್ಯವಾಗುತ್ತದೆ. ಇಲ್ಲಿ ಕಲಾವಿದ, ನೇರವಾಗಿ ಚಿತ್ರರಚನೆ ಪ್ರಾರಂಭಿಸಿಲ್ಲ. ಸಂಯೋಜನಗೆ ಚಿತ್ರವಿನ್ಯಾಸದ ಚೌಕಟ್ಟನ್ನು ಹಾಕಿಕೊಂಡು ಅದರಲ್ಲಿ ಮತ್ತು ವಿಷಯ ವ್ಯಾಪ್ತಿಗೆ ಸರಿಹೊಂದುವ ರೀತಿಯಲ್ಲಿ ಆಕೃತಿಗಳನ್ನು ದುಡಿಸಿಕೊಂಡಿದ್ದಾನೆ. ಕಲಾವಿದ ಈ ಚಿತ್ರಗಳನ್ನು ಚಿತ್ರಿಸಿರುವ ರೀತಿಯನ್ನು ಗಮನಿಸಿದರೆ, ಪ್ರಾಯಶಃ ಎಂಥ ಸಾಮಾನ್ಯನಿಗಾದರೂ - ಸಂಪೂರ್ಣ ವಾಗಿ ಚಿತ್ರದ ಮೂಲ, ರೇಖಾಚಿತ್ರ ರಚನೆಯಾದಮೇಲೆಯೇ ಅಲ್ಪಸ್ವಲ್ಪ ಬದಲಾವಣೆಗಳೊ ಡನೆ ಚಿತ್ರಗಳನ್ನು ವರ್ಣಸಂಯೋಜನೆಯೊಡನೆ ಪೂರ್ತಿಗೊಳಿಸಿರಬಹುದೆಂದು ತಿಳಿಯುತ್ತದೆ.

ಚಿತ್ರಗಳ ಸಾಮಾನ್ಯವಾದ ಒಂದು ವಿವರವನ್ನು ಈ ಕೆಳಗೆ ನಾವು ಈಗ ನೋಡಬಹುದಾಗಿದೆ. ಚಿತ್ರಗಳಿರುವ ಒಳಮಾಳಿಗೆಯನ್ನು ಮೂರು ಮುಖ್ಯಭಾಗಗಳನ್ನಾಗಿ ವಿಂಗಡಿಸಿದೆ. ಇವುಗಳಲ್ಲಿ ಒಟ್ಟು ಎಂಟು ಉಪಭಾಗಗಳಿವೆ. ಪ್ರತಿಯೊಂದು ಭಾಗದಲ್ಲಿ ಚೌಕ, ಆಯತ ಹೀಗೆ ವಿಭಿನ್ನ ಅವಕಾಶಗಳಲ್ಲಿ ಚಿತ್ರಗಳನ್ನು ರಚಿಸಲಾಗಿದೆ. ದೇವಾಲಯದ ನವರಂಗದ ಕಡೆಗೆ ಹೊಂದಿಕೊಂಡಂತೆ ಇರುವ ಅವಕಾಶದಲ್ಲಿ ಕ್ರಮವಾಗಿ ವಿಷ್ಣು, ಲಕ್ಷ್ಮೀಯರು ಬಲಗಡೆ ಗರುಡ ಮತ್ತು ಎಡಗಡೆ ಹನುಮಂತರಿಂದ ಜೊತೆಗೂಡಿ ಚಿತ್ರಿಸಲ್ಪಟ್ಟಿದ್ದಾರೆ. ಮಧ್ಯದ ಚೌಕದಲ್ಲಿ ಶಿವಪಾರ್ವತಿಯರನ್ನು ನಾರದ ಮತ್ತು ತುಂಬುರರನ್ನು ಚಿತ್ರಿಸಿದ್ದಾನೆ. ಕೊನೆಯದಾಗಿ, ಬ್ರಹ್ಮ ಮತ್ತು ಅವನ ಎಡತೊಡೆಯ ಮೇಲೆ ಕುಳಿತ ಸರಸ್ವತಿಯನ್ನು ಚಿತ್ರಿಸಲಾಗಿದೆ. ಇವರ ಎರಡೂ ಬದಿಯಲ್ಲಿ ಈರ್ವರು ದ್ವಾರಪಾಲಕರನ್ನು ತೋರಿಸಿದೆ. ಈ ಮೂರು ಚಿತ್ರಗಳಿಗೆ ಮತ್ತು ಸಾಮಾನ್ಯವಾಗಿ - ಕೊನೆಯ ೨ - ೩ ಚಿತ್ರಗಳನ್ನು ಬಿಟ್ಟು ಈ ಭಿತ್ತಿಯ ಉಳಿದ ಬಹುತೇಕ ಎಲ್ಲ ಚಿತ್ರಗಳಿಗೆ ವಾಸ್ತುಕೃತಿಯ ಅಲಂಕಾರವಿದೆ. ಚಿತ್ರದ ಮುಖ್ಯವಸ್ತುವನ್ನು ಕಮಾನಿನಲ್ಲಿ ಚಿತ್ರಿಸುವುದು, ಚಿತ್ರದ ಸಂಯೋಜನೆಯ ಮೇಲೆ ಹಣೆಪಟ್ಟಿಯಂತಿರುವ ಮತ್ತೊಂದು ಚಿತ್ರ ಅವಕಾಶದಲ್ಲಿ ಗೋಪುರಗಳನ್ನು ಕಲಾವಿದ ಚಿತ್ರಿಸಿದ್ದಾನೆ. ಚಿತ್ರಗಳ ಮೇಲೆ ಇರುವ ಗೋಪುರಗಳು ಸಾಂಕೇತಿಕವಾಗಿ ಆಯಾ ಸಂಯೋಜನೆಯಲ್ಲಿ ಇರುವ ದೇವಾನುದೇವತೆಗಳಿಗೆ ದೇವಾಲಯಗಳಂತೆ ಕಾಣುತ್ತವೆ.[೫]

ನಂತರದ ಸಾಲಿನಲ್ಲಿ ಪಾರ್ವತಿ ಕಲ್ಯಾಣದ ಚಿತ್ರವೇ ಚಿತ್ರಣದ ಪ್ರಮುಖ ಕಥಾವಸ್ತು. ಚಿತ್ರದ ಮಧ್ಯದಲ್ಲಿ ಶಿವನು ಪಾರ್ವತಿಯ ಕೈಯನ್ನು ಹಿಡಿದುನಿಂತಿದ್ದಾನೆ. ಈ ಚಿತ್ರಪಟ್ಟಿಕೆಯ ಪ್ರಾರಂಭದಲ್ಲಿ ಶಿವಪಾರ್ವತಿಯ ಆಕೃತಿಗಳ ಜೊತೆಗೆ, ಭೈರವ, ನಾದರ, ತುಂಬುರ, ವಾಣಿ, ಬ್ರಹ್ಮ, ಹಿಮವತ್ ಮತ್ತು ಇನ್ನಿತರರು ಇದ್ದಾರೆ. ಇಲ್ಲಿ ಬ್ರಹ್ಮನೆ ಈ ದಿವ್ಯಮದುವೆಯ ಪುರೋಹಿತ, ಹಿಮವತ್‌ನು ಕನ್ಯಾದಾನ ಮಾಡುತ್ತಿದ್ದಾನೆ. ಈ ಚಿತ್ರಸಂಯೋಜನೆಯ ಕೆಳಗಡೆ ಚಿಕ್ಕ ಚಿತ್ರಪಟ್ಟಿಕೆ ಇದೆ. ಇದರಲ್ಲಿ ಗಣ ಮತ್ತು ಮಧ್ಯದಲ್ಲಿ ಶಿವನ ವಾಹನ ನಂದಿಯನ್ನು ಚಿತ್ರಿಸಿದೆ. ಇಲ್ಲೂ ಕೂಡ ಕಲಾವಿದನ ಸಮಯಪ್ರಜ್ಞೆಯನ್ನು ನಾವು ಗುರುತಿಸಬಹುದು. ನಂದಿಯು ಮುಖವನ್ನು ಮೇಲಕ್ಕೆತ್ತಿ ಮದುವೆಯನ್ನು ವೀಕ್ಷಿಸುತ್ತಿರುವಂತೆ ಕುಳಿತಿದ್ದಾನೆ.[೬] ಈ ವಿವಾಹ ದೃಶ್ಯವನ್ನು ಸ್ಥಳೀಯ ದೇವತೆ ವಿರೂಪಾಕ್ಷ ಮತ್ತು ಪಂಪಾಂಬಿಕೆಯರ ವಿವಾಹಕ್ಕೆ ಹೋಲಿಸಲಾಗಿದೆ. ಇಲ್ಲೂ ಕೂಡ ಚಿತ್ರ ಸಂಯೋಜನೆಯ ಮೇಲ್ಭಾಗದಲ್ಲಿ ಗೋಪುರಗಳ ಸಾಲು ಮತ್ತು ತಾಳೆಯಮರಗಳನ್ನು ತೋರಿಸುವ ಚಿತ್ರಗಳಿವೆ. ಶಿವಪಾರ್ವತಿಯರ ಕಲ್ಯಾಣದ ದೃಶ್ಯದ ಕೆಳಗಡೆಯ ಸ್ಥರದಲ್ಲಿ ಅಷ್ಟದಿಕ್ಪಾಲಕರನ್ನು ಚಿತ್ರಿಸಲಾಗಿದೆ. ಇವರುಗಳಲ್ಲಿ ಇಂದ್ರ, ವರುಣ, ಅಗ್ನಿ, ವಾಯು, ಈಶಾನ ಯಮ, ನೈರುತಿ, ಕುಬೇರ ಈ ದಿಕ್ಪಾಲಕರು ತಮ್ಮ ವಾಹನಗಳಿಂದ ಇರುವುದು ಕೂಡಾ ಕಂಡುಬರುತ್ತದೆ.

ಅಷ್ಟದಿಕ್ಪಾಲಕರ ನಂತರದ ಎರಡು ಮುಖ್ಯ ಸಂಯೋಜನೆಗಳೆಂದರೆ ಮನ್ಮಥವಿಜಯನ ಅಥವಾ ಶಿವನ ತಪಸ್ಸನ್ನು ಮನ್ಮಥನು ಮುರಿಯುವುದು ಮತ್ತು ತ್ರಿಪುರ ಸಂಹಾರಿ ಶಿವ.


ಮನ್ಮಥ ವಿಜಯ ಚಿತ್ರದ ಸಂಯೋಜನೆಯಲ್ಲಿ ಕಲಾವಿದ ಅತ್ಯಂತ ಕ್ರಿಯಾತ್ಮಕವಾಗಿ ದೃಶ್ಯ ಸಂಯೋಜನೆಯನ್ನು ದುಡಿಸಿಕೊಂಡಿದ್ದಾನೆ (ಚಿತ್ರ ೧).



ಚಿತ್ರ ೧ ಮನ್ಮಥ ವಿಜಯ

ಇಲ್ಲಿ ಚಿತ್ರದ ಒಂದು ಭಾಗದಲ್ಲಿ ಜಟಾಧಾರಿ ಶಿವ ತಪಸ್ಸನ್ನು ಮಾಡುತ್ತಾ ಕುಳಿತಿದ್ದಾನೆ. ಇತ್ತ ಕಾಮರತಿಯರು ಗಿಳಿಯೇ ವಾಹನವಾಗಿರುವ ರಥವನ್ನು ಏರಿ, ಕಬ್ಬಿನ ಜಲ್ಲೆಯಿಂದ ಮಾಡಿದ ಬಿಲ್ಲಿನಿಂದ ಶಿವನತ್ತ ಸುಮಬಾಣಬಿಡುತ್ತಿದ್ದಾನೆ. ಕಾಮನ ನಿಂತ ಭಂಗಿಯಲ್ಲಿ ಮುಮ್ಮುಖವಾದ ಚಾಲನೆ ಇದೆ ಮತ್ತು ನೈಜತೆ ಇದೆ.[೭] ಕಾಮನ ಆಕೃತಿಯಲ್ಲೂ ಕೂಡ ಪ್ರೌಢತೆ ಕಾಣುತ್ತದೆ. ಶಿವನು ಕುಳಿತು ಭಂಗಿ ಎದುರಿನಿಂದ ನೋಡಿದಾಗ ಇರುವಂತೆ ಇದೆ. ಇಲ್ಲಿ ಶಿವನನ್ನು ಧ್ಯಾನಮಗ್ನನಾಗಿ ಇರುವಂತೆ ತೋರಿಸದೇ ಅಗಲವಾದ ಕಣ್ಣುಗಳನ್ನು ಬಿಟ್ಟು ದಿಟ್ಟಿಸಿ ನೋಡುತ್ತಿರುವಂತೆ ಕುಳಿತಿದ್ದಾನೆ.[೮] ಚಿತ್ರದ, ತೀರ ಕೆಳಸ್ತರದಲ್ಲಿ ಜಲಾವೃತವಾದ ಭಾಗವನ್ನು ವಿವಿಧ ಆಕಾರದ ಮೀನುಗಳನ್ನು ಚಿತ್ರಿಸಿ ಚಿತ್ರದಲ್ಲಿ ಮತ್ತಷ್ಟು ನೈಜತೆಯನ್ನು ಕಲಾವಿದ ತುಂಬಿದ್ದಾನೆ.[೯]


ಶಿವನು ತ್ರಿಪುರಾಸುರನನ್ನು ಕೊಲ್ಲುವ ದೃಶ್ಯದಲ್ಲಿಯೂ ಕಲಾವಿದ ಮೇಲಿನ ಚಿತ್ರದಂತೆಯೇ ಜಾಣ್ಮೆ ಮೆರೆದಿದ್ದಾನೆ. ತ್ರಿಪುರಾಸುರರನ್ನು ಮೂರು ಬೇರೆ ಬೇರೆ ವೃತ್ತಗಳಲ್ಲಿ ಚಿತ್ರಿಸಿದ್ದಾನೆ (ಚಿತ್ರ ೨).



ಚಿತ್ರ ೨ ತ್ರಿಪುರಾಸುರರ ಸಂಹಾರ

ಇನ್ನು - ಶಿವನನ್ನು ಅವನ ರಥ ಹಾಗೂ ಬಿಲ್ಲುಬಾಣಗಳನ್ನು, ಕಥೆಯಲ್ಲಿ ಬರುವ ನಿರೂಪಣೆಗೆ ತಕ್ಕಂತೆ ನೈಜವಾಗಿ ಚಿತ್ರಿಸಿದ್ದಾನೆ. ಇಲ್ಲಿ ಭೂಮಿಯೇ ರಥ, ಬ್ರಹ್ಮನೇ ಸಾರಥಿ, ಸೂರ್ಯ - ಚಂದ್ರರೇ ರಥದ ಗಾಲಿಗಳು, ಇಂದ್ರ, ವರುಣ, ಯಮ ಕುಬೇರರೇ ರಥಾಶ್ವಗಲು. ಆದರೆ ಇಲ್ಲಿ ಕಲಾವಿದ ಐದು ಕುದುರೆಗಳನ್ನು ಮಾತ್ರ ಚಿತ್ರಿಸಿದ್ದಾನೆ. ಶಿವನ ಕೈಯಲ್ಲಿರುವ ಬಿಲ್ಲು ಮಂದಾರ ಪರ್ವತ, ವಾಸುಕಿಯೇ ಬಿಲ್ಲಿನ ದಾರ, ಅಗ್ನಿ, ವಿಷ್ಣು, ವಾಯು ಇವರು ಬಾಣಗಳಾಗಿದ್ದಾರೆ. ಇದರಿಂದಲೇ ಶಿವನು ತ್ರಿಪುರಾಸುರರನ್ನು ಧ್ವಂಸಮಾಡುವ ಕೆಲಸ ಅತ್ಯಂತ ಸುಗಮವಾಗುತ್ತದೆ. ಈ ಸಂಯೋಜನೆಯಲ್ಲಿನ ಎಲ್ಲ ಆಕೃತಿಗಳ ಮಧ್ಯೆ ಆಂತರಿಕವಾದ ಸಂಬಂಧವಿದೆ (Internal relation). ಪ್ರತಿಯೊಂದು ಆಕೃತಿಗಳು ಚಾಲನೆಯಿಂದ ಕೂಡಿವೆ. ಶಿವನ ಆಕೃತಿಯ ಮತ್ತು ಮನ್ಮಥನ ಆಕೃತಿಗಳಲ್ಲಿ ನಿಂತಿರುವ ಭಂಗಿಯನ್ನು ಗಮನಿಸಿದರೆ, ಎರಡೂ ಒಂದೇ ತೆರನಾಗಿ ಇರುವುದನ್ನು ಗಮನಿಸಬಹುದು. ಅಲ್ಲದೆ, ಆಕೃತಿಗಳಲ್ಲಿ ಮುಂದೆ ಬಾಗಿದಂತಿರುವ ಚಾಲನೆ ಕೂಡಾ ಒಂದೇ ತೆರನಾಗಿ ಇದೆ. ಈ ಎಲ್ಲ ಆಕೃತಿಗಳು ಒಂದೇ ಕಲಾವಿದನಿಂದ ರಚನೆ ಆಗಿರಬಹುದೆಂದು ತೋರುತ್ತದೆ.

ಮನ್ಮಥ ವಿಜಯ ಮತ್ತು ತ್ರಿಪುರ ಸಂಹಾರದ ಚಿತ್ರಸಂಯೋಜನೆಗಳ ಕೆಳಗಿನ ಪಟ್ಟಿಕೆಯಲ್ಲಿ ದಶಾವತಾರದ ಆಕೃತಿಗಳಿವೆ. ಈ ಆಕೃತಿಗಳ ಕೊನೆಯ ಭಾಗದಲ್ಲಿ ಕಾಮ - ರತಿಯರನ್ನು ಬೇರೆಬೇರೆಯಾಗಿ ಒಂದೊಂದು ಚೌಕದಲ್ಲಿ ಚಿತ್ರಿಸಲಾಗಿದೆ (ಚಿತ್ರ ೩).



ಚಿತ್ರ ೩ ದಶಾವತಾರದ ಚಿತ್ರಗಳು

ಇಲ್ಲಿ ಕಾಮ ಗಜಾರೂಢನಾಗಿ ಮತ್ತು ರತಿ ಅಶ್ವಾರೂಢಳಾಗಿದ್ದಾಳೆ. ವಿಶೇಷವೆಂದರೆ ಈ ಎರಡೂ ವಾಹನಗಳು ಮಾನವಾಕೃತಿಗಳಿಂದ ಚಿತ್ರಿತವಾಗಿವೆ. ಅಂದರೆ, ಇಲ್ಲಿ - ಮಾನವಾ ಕೃತಿಗಳೇ ಗಜದ ಮತ್ತು ಅಶ್ವದರೂಪದಲ್ಲಿ ಚಿತ್ರಿತವಾಗಿವೆ. ದಶಾವತಾರದ ಚಿತ್ರಗಳಲ್ಲಿ ವಿಷ್ಣುವಿನ ಹತ್ತು ಅವತಾರದ ಚಿತ್ರಗಳು ವೈವಿಧ್ಯಮಯವಾಗಿ ಮತ್ತು ನೈಜವಾಗಿ ಮೂಡಿ ಬಂದಿವೆ. ಇಲ್ಲೂ ಕೂಡಾ ಪ್ರತಿಯೊಂದು ಆಕೃತಿಯ ಚೌಕವಾದ ದೃಶ್ಯಾವಕಾಶದಲ್ಲಿ ಚಿತ್ರಿತವಾಗಿದ್ದು ಮೇಲ್ಭಾಗದಲ್ಲಿ ಕಮಾನಿನ ಚಿತ್ರಣವೂ ಇವೆ.

ದಶಾವತಾರದ ಚಿತ್ರಗಳ ನಂತರದಲ್ಲಿ ಬರುವುದು ಆಯತಾಕೃತಿಗಳಲ್ಲಿ ಚಿತ್ರಿತವಾಗಿರುವ ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳು (ಚಿತ್ರ ೩) ಇವು ಒಟ್ಟು ಮೂರು ಚಿತ್ರಗಳಿದ್ದು, ಇವುಗಳಲ್ಲಿ ಎರಡು ಚಿತ್ರಗಳು ಸೀತಾಸ್ವಯಂವರಕ್ಕೆ ಮತ್ತು ರಾಮಸೀತೆಯರ ಕಲ್ಯಾಣಕ್ಕೆ ಸಂಬಂಧಿಸಿದ್ದು ಮೂರನೆಯದು ದ್ರೌಪದಿಯ ಸ್ವಯಂವರದಲ್ಲಿ ಅರ್ಜುನನು ಮತ್ಸಯಂತ್ರವನ್ನು ಭೇದಿಸುತ್ತಿರುವ ದೃಶ್ಯವಿದೆ. ಈ ಎರಡೂ ಚಿತ್ರಗಳು ಸ್ವಯಂವರಕ್ಕೆ ಸಂಬಂಧಿಸಿದವೇ ಆಗಿದ್ದು ಇದರಲ್ಲಿ ರಾಮಸೀತೆಯರ ಕಲ್ಯಾಣದ ಒಂದೇ ಒಂದು ಚಿತ್ರಣವಿದೆ. ಈ ಚಿತ್ರಗಳಲ್ಲೂ ಕೂಡಾ ಮೇಲಿನ ಹಾಗೆಯೇ ಸಂಯೋಜನೆ ಇದ್ದು ಕೆಳಸ್ತರಗಳಲ್ಲಿ ಹಲವಾರು ಜನರನ್ನು ನೈಜವಾಗಿ ತೋರಿಸಲಾಗಿದೆ. ಸೀತಾಸ್ವಯಂವರದಲ್ಲಿ ರಾಮನು ಸಂಯೋಜನೆಯ ಮಧ್ಯದಲ್ಲಿ ನಿಂತು ಶಿವಧನಸ್ಸಿಗೆ ಹೆದೆ ಏರಿಸುವ ಭಂಗಿಯಲ್ಲಿ ಇದ್ದಾನೆ. ಸೀತೆ ಹಿಂಭಾಗದಲ್ಲಿ - ರಾಮನನ್ನು ವರಿಸಲು ಸಿದ್ಧಳಾಗಿ ನಿಂತಿದ್ದಾಳೆ. ಕೆಳಸ್ತರದಲ್ಲಿ ಕಿರೀಟಗಳನ್ನು ಧರಿಸಿದ - ಹಲವಾರು ಆಕೃತಿಗಳನ್ನು ತೋರಿಸಲಾಗಿದೆ. ಬಹುಶಃ ಈ ಆಕೃತಿಗಳು ಕೂಡಾ ಸ್ವಯಂವರದಲ್ಲಿ ಭಾಗವಹಿಸಲು ಬಂದ ರಾಜರುಗಳೇ ಆಗಿರಬೇಕು. ನಂತರದ ಸಂಯೋಜನೆಯ, ಸೀತಾ - ರಾಮರ ಕಲ್ಯಾಣದ ಚಿತ್ರ, ಇದರ ಮಧ್ಯದಲ್ಲಿ ಸೀತಾ - ರಾಮರನ್ನು ತೋರಿಸಲಾಗಿದೆ (ಚಿತ್ರ ೪).



ಚಿತ್ರ ೪ ಸೀತಾ ಕಲ್ಯಾಣ

ಅವರ ಪಕ್ಕದಲ್ಲಿ ಸೀತೆಯ ತಂದೆತಾಯಿಗಳು ಮತ್ತು ರಾಮನ ತಂದೆತಾಯಿಗಳು ವಧುವರರನ್ನು ಆಶೀರ್ವದಿಸುವ ತೆರದಲ್ಲಿ ನಿಂತಿದ್ದಾರೆ. ಈ ಕಲ್ಯಾಣ ಚಿತ್ರದಲ್ಲಿ ವಶಿಷ್ಟ ಮತ್ತು ವಿಶ್ವಾಮಿತ್ರ ಋಷಿಗಳನ್ನು ಕೂಡಾ ಗಮನಿಸಬಹುದು. ಅಲ್ಲದೇ ಇನ್ನು ಹಲವಾರು ಕಿರು ಆಕೃತಿಗಳನ್ನು ಕೂಡಾ ನೋಡಬಹುದು. ಉಳಿದ ಚಿತ್ರಗಳಂತೆ - ಚಿತ್ರದ ಮೇಲ್ಭಾಗದಲ್ಲಿ ಗೋಪುರಗಳು ಮತ್ತು ತಾಳೆಯ ಗಿಡಗಳು ಚಿತ್ರಕ್ಕೆ ಕಲಶಪ್ರಾಯವಾಗಿ ಚಿತ್ರಿತವಾಗಿವೆ.


ಪ್ರಾಯಶಃ ಹೊಯ್ಸಳ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಅತ್ಯಂತ ಜನಪ್ರಿಯವಾದ ಚಿತ್ರವೆಂದರೆ ಅರ್ಜುನ ಮತ್ಸ್ಯ ಯಂತ್ರವನ್ನು ಭೇದಿಸುವ ಚಿತ್ರ ಈ ಚಿತ್ರ ಇಲ್ಲಿ ದ್ರೌಪದಿಯ ಸ್ವಯಂವರಕ್ಕೆ ಪೂರಕವಾಗಿ ಮೂಡಿಬಂದಿದೆ. ಈ ಚಿತ್ರದಲ್ಲಿ ಕೊಪ್ಪರಿಗೆಯಲ್ಲಿ ಮೇಲೆ ತಿರುಗುತ್ತಿರುವ ಮತ್ಸ್ಯದ ಪ್ರತಿಬಿಂಬವನ್ನು ನೋಡುತ್ತ, ಮೇಲಕ್ಕೆ ಬಿಲ್ಲಿನಿಂದ ಗುರಿ ಇಟ್ಟಿರುವ ಅರ್ಜುನನ ಆಕೃತಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ.[೧೦] ಹಿನ್ನೆಲೆಯಲ್ಲಿ ದ್ರೌಪದಿಯ ಕೈಯಲ್ಲಿ ಹೂಮಾಲೆ ಹಿಡಿದು ನಿಂತಿದ್ದು ಅವಳ ಪಕ್ಕದಲ್ಲಿ ದ್ರುಪದನೂ ಕೂಡಾ ನಿಂತಿದ್ದಾನೆ. ಹಿನ್ನೆಲೆಯಲ್ಲೂ ಕೆಲವು ಆಕೃತಿಗಳನ್ನು ಗಮನಿಸಬಹುದು. ಒಟ್ಟಾರೆಯಾಗಿ ಈ ಚಿತ್ರಸಂಯೋಜನೆ ಮನೋಜ್ಞವಾಗಿ ಮೂಡಿಬಂದಿದೆ. ಈ ಮೂರು ಚಿತ್ರಗಳ ಕೆಳಗಿನ ಚಿತ್ರಪಟ್ಟಿಕೆಗಳಲ್ಲಿ ರಥಗಳಲ್ಲಿ ಸಾಗುತ್ತಿರುವ ಪ್ರಮುಖರು ಮತ್ತು ಸೈನಿಕರನ್ನು ನಾವು ಗಮನಿಸಬಹುದು. ಇವುಗಳಲ್ಲಿ ಕುದುರೆಗಳು, ರಥಗಳು, ಆನೆಗಳು ಮತ್ತು ಸೈನಿಕರು ಮುಂದೆ ಮುಂದೆ ಹೋಗುತ್ತಿರುವ ರೀತಿಯನ್ನು ಗಮನಿಸಿದರೆ ಇವೆಲ್ಲವು ರಾಜಕೀಯ ಪ್ರಮುಖರ ಚಿತ್ರಗಳೆನ್ನಬಹುದು.[೧೧]

ಈ ಭಿತ್ತಿ ಚಿತ್ರಗಳಲ್ಲಿಯೇ ಪ್ರಾಯಶಃ ಅತ್ಯಂತ ಚರ್ಚಾ ವಸ್ತುವಾದ ಚಿತ್ರವೆಂದರೆ, ಯತಿಗಳ ಮೆರವಣಿಗೆಯ ಚಿತ್ರ (ಚಿತ್ರ ೫).



ಚಿತ್ರ ೫ ಯತಿಗಳ ಮೆರವಣಿಗೆ

ಈ ಚಿತ್ರ - ಈ ಚಿತ್ರಗಳ ಸಮೂಹದ ಕೊನೆಯ ಸ್ತರದಲ್ಲಿದೆ. ಚಿತ್ರದ ಎರಡೂ ಕೊನೆಯ ಬದಿಯಲ್ಲಿ ಬೇರೆ ಬೇರೆ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಒಂದೆಡೆ, ಕೃಷ್ಣನು ಗೋಪಿಕೆಯ ವಸ್ತ್ರಾಪಹರಣ ಮಾಡಿದ ದೃಶ್ಯವಿದ್ದರೆ ಇನ್ನೊಂದೆಡೆ ವಿರೂಪಾಕ್ಷ ದೇವಾಲಯವನ್ನು ತೋರಿಸುವ ಲಿಂಗರೂಪಿ ವಿರೂಪಾಕ್ಷನ ಚಿತ್ರವಿದೆ (ಚಿತ್ರ ೬).



ಚಿತ್ರ ೬ ಯತಿಗಳ ಮೆರವಣಿಗೆ

ನಂದಿಯನ್ನು ಕೂಡಾ ಕಲಾವಿದ ಇಲ್ಲಿ ತೋರಿಸಿದ್ದಾನೆ. ಈ ಎರಡೂ ಚಿತ್ರಗಳ ಮಧ್ಯದಲ್ಲಿ ವಿರೂಪಾಕ್ಷನ ಕಡೆ ಮುಖಮಾಡಿ, ಯತಿಗಳನ್ನು ತೆರೆದ ಪಲ್ಲಕ್ಕಿಯಲ್ಲಿ ಕುಳ್ಳರಿಸಿ ಸಕಲ ರಾಜಮರ್ಯಾದೆಯಿಂದ ಕರೆದೊಯ್ಯುತ್ತಿರುವ ದೃಶ್ಯವಿದೆ. ಈ ಚಿತ್ರದ ಸಂಯೋಜನೆ, ಒಂದು ಉದ್ದವಾದ ಪಟ್ಟಿಕೆಯಂತೆ ಇದ್ದು - ಮಧ್ಯದಲ್ಲಿ ಯತಿಗಳನ್ನು ತೆರೆದ ಪಲ್ಲಕ್ಕಿಯಲ್ಲಿ ಕೂಡಿಸಲಾಗಿದೆ. ಅವರ ಸುತ್ತಲೂ ಪರಿಚಾರಕರು, ರಾಜಭಟರು ಮತ್ತು ಪ್ರಮುಖರು, ಸೈನಿಕರು ಯತಿಗಳನ್ನು ರಾಜಮರ್ಯಾದೆಯಿಂದ - ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದಾರೆ. ಈ ಮೆರವಣಿಗೆಯ ಮುಂಭಾಗದ ಕೊನೆಯ ಭಾಗದಲ್ಲಿ ಶಿವಲಿಂಗದ (ವಿರೂಪಾಕ್ಷ ಲಿಂಗ) ಚಿತ್ರಣ ಇರುವುದನ್ನು ಈ ಮೇಲೆ ಹೇಳಿದೆ. ಈ ಮೆರವಣಿಗೆಯ ಪಥವನ್ನು ಕುರಿತು ಒಂದು ಕ್ಷಣ ಸ್ಮೃತಿಪಟಲದ ಮೇಲೆ ಚಿತ್ರವನ್ನು ತಂದುಕೊಂಡರೆ ಹಂಪೆಯಲ್ಲಿನ ಈಗಿನ ಎದುರು ಬಸವಣ್ಣನ ಮಂಟಪದ ಕಡೆಯಿಂದ ವಿರೂಪಾಕ್ಷ ದೇವಾಲಯದ ಕಡೆಗೆ ಅಂದರೆ ವಿರೂಪಾಕ್ಷ ಬಜಾರ್ ನಲ್ಲಿ ಈ ಮೆರವಣಿಗೆ ಹೊರಟಿದೆಯೋ ಎಂಬ ಚಿತ್ರಣ ಬರುತ್ತದೆ. ಈ ಮೆರವಣಿಗೆ ಚಿತ್ರದ ಕೇಂದ್ರಬಿಂದುವಾದ ಯತಿಗಳನ್ನು ಇದುವರೆಗೂ ಹಲವಾರು ವಿದ್ವಾಂಸರು, ವಿದ್ಯಾರಣ್ಯರು ಎಂದು ಗುರುತಿಸಿದ್ದಾರೆ. ಆದರೆ ಈ ಯತಿಗಳ ಚಿತ್ರವನ್ನು ಕೃಷ್ಣದೇವರಾಯನ ಕಾಲದಲ್ಲಿ ಹಂಪೆಯಲ್ಲಿದ್ದು ಅವನ ರಾಜಗುರುಗಳೂ, ಮಾರ್ಗದರ್ಶಕರೂ ಮತ್ತು ದಾಸಸಾಹಿತ್ಯದ ಹರಿಕಾರರೂ ಆಗಿದ್ದ ವ್ಯಾಸರಾಯರದು ಎಂದು ಹಲವಾರು ದಾಖಲೆಗಳ ಸಹಿತ ಈ ಹಿಂದೆ ನಾನು ಪ್ರತಿಪಾದಿಸಿದ್ದೇನೆ.[೧೨]

ಇನ್ನು ಕೊನೆಯದಾಗ - ಈ ಭಿತ್ತಿಗಳು ಸುತ್ತಲೂ ಇರುವ ಕಂಬಗಳ ಬೋದಿಗೆಯ ಮೇಲಿರುವ ಪಟ್ಟಿಕೆಗಳ (ಹಾರದ ಭಾಗ) ಮೇಲೆ ಹಲವಾರು ಚಿತ್ರಗಳಿವೆ. ಇವುಗಳಲ್ಲಿ ಕೆಲವು ಮಹಾಭಾರತದ ವಿರಾಟಪರ್ವಕ್ಕೆ ಸಂಬಂಧಿಸಿದ ಗೋಗ್ರಹಣ ಘಟನೆಯ ಚಿತ್ರಗಳಿವೆ.[೧೩] ನವರಂಗದ ಹೊರಭಾಗದ ಪಟ್ಟಿಕೆಯ ಮೇಲೆ ಬಾಗಿಲಿಗೆ ನೇರವಾಗಿ ಮೇಲೆಡೆಗೆ ಚೌಕಾಕಾರದ ಸಂಯೋಜನೆಯಲ್ಲಿ ಲಿಂಗರೂಪಿ ವಿರೂಪಾಕ್ಷನ ಚಿತ್ರಣವಿದ್ದು - ಪಕ್ಕದಲ್ಲಿ ಅರ್ಚಕರು (ಯತಿಗಳು?) ಮತ್ತು ರಾಜಪೋಷಾಕಿನಲ್ಲಿರುವ ಈರ್ವರು ಪುರುಷಾಕೃತಿಗಳಿವೆ. ಬಹುಶಃ ಈ ಎರಡು ಆಕೃತಿಗಳು ಕೃಷ್ಣದೇವರಾಯ ಮತ್ತು ಅಚ್ಯುತರಾಯನದಾಗಿರಬಹುದೆಂದು ತೋರುತ್ತದೆ. ಆದಾಗ್ಯೂ, ಇವುಗಳ ಕುರಿತು ಸದ್ಯದ ಅಧ್ಯಯನ ಅಪೂರ್ಣವಾಗಿದೆ.[೧೪]

ಮಹಾರಂಗಮಂಟಪದ ಚಿತ್ರಗಳು - ಸಂಪೂರ್ಣವಾಗಿ ಅಜಂತಾದ ಬೌದ್ಧಾಲಯಗಳಂತೆ ಒಳಮಾಳಿಗೆಯನ್ನು ಅಲಂಕರಿಸಿವೆ. ಇಲ್ಲಿ ಪ್ರತಿಯೊಂದು ಸನ್ನಿವೇಶವೂ ಅಲಂಕಾರಿಕ ಹೂಬಳ್ಳಿಗಳ ಪಟ್ಟಿಕೆಗಳಿಂದ ವಿಭಾಗಿಸಿದೆ. ಆಯಾ ಚೌಕಟ್ಟು - ಆಯಾ ಚಿತ್ರಕ್ಕೆ ಮಾತ್ರ ಸೀಮಿತವಾಗಿದೆ. ಇದರಿಂದ ಇಲ್ಲಿ ಪ್ರತಿಯೊಂದು ಚಿತ್ರವು ಸ್ವತಂತ್ರವಾದುದೇ ಆಗಿದೆ. ಚಿತ್ರಗಳ ಸಂಯೋಜನೆಯ ಭಾಗವಾಗಿರುವ ಗೋಪುರಗಳ ಮತ್ತು ವಾಸ್ತುಕೃತಿಗಳ ಇತರೆ ಅಂಶಗಳು ಸಮಕಾಲೀನ ವಾಸ್ತುಕಲೆಯ ಅಂಶಗಳನ್ನು ತೋರಿಸುತ್ತವೆ ಎಂದು ಈ ಹಿಂದೆ

ಸೂಚಿಸಿದ್ದೇನೆ. ಈ ಚಿತ್ರಗಳಲ್ಲಿನ ಆಕೃತಿಗಳೆಲ್ಲವೂ ರೇಖಾಪ್ರಧಾನವಾದವುಗಳಾಗಿವೆ. ಬಾಹ್ಯರೇಖೆಗಳೇ ಚಿತ್ರದ ಜೀವಾಳ. ಆಕೃತಿಯ ಉಬ್ಬು - ತಗ್ಗು, ಹಾವ - ಭಾವ ಮತ್ತು ಆಕೃತಿಯಲ್ಲಿನ ಯಾವುದೇ ಅಲಂಕಾರವನ್ನು ರೇಖೆಯೇ ನಿರ್ದೇಶಿಸುತ್ತದೆ.[೧೫] ಇಲ್ಲಿ ವರ್ಣ ಸಂಯೋಜನೆಯು ಕೆಲವೇ ವರ್ಣಗಳಿಗೆ ಸೀಮಿತವಾದಂತೆ ತೋರುತ್ತದೆ. ಕೆಂಪು, ನೀಲಿ, ಬಿಳಿ, ಹಸಿರು, ಕಂದು, ಹಳದಿ ವರ್ಣಗಳೇ ಪ್ರಧಾನವಾಗಿ ಕಂಡುಬರುತ್ತವೆ. ಆದರೆ ಈ ವರ್ಣಗಳನ್ನು ನೇರವಾಗಿ ಉಪಯೋಗಿಸಿರುವುದರಿಂದ - ಇಲ್ಲಿ ವರ್ಣಗಳ ನೈಜತೆಗೆ ಅಥವಾ ಭಾವಾಭಿವ್ಯಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ಇರುವುದಿಲ್ಲ.[೧೬] ಪ್ರಾಯಶಃ ಇದರಿಂದಲೇ ಆಕೃತಿಗಳಲ್ಲಿ ನೆರಳು ಬೆಳಕಿನ ಸಂಯೋಜನೆ (Light and Shade) ಅಷ್ಟಾಗಿ ಕಂಡುಬರುವುದಿಲ್ಲ. ಈ ಆಕೃತಿಗಳಲ್ಲಿ ಕೆಲವು ಸ್ಥಳೀಯ ಅಥವಾ ಆ ಕಾಲದ ಕೆಲವಾರು ಶಿಲ್ಪಗಳನ್ನು ಜ್ಞಾಪಕಕ್ಕೆ ತರುತ್ತವೆ. ಈ ಕುರಿತು ಕೂಡಾ ಬೇರೆಡೆ ನಾನು ಚರ್ಚಿಸಿದ್ದೇನೆ.[೧೭]

ಮಹಾರಂಗಮಂಟಪದ ಚಿತ್ರಗಳ ರಚನಾ ಕಾಲದ ಬಗ್ಗೆ ಹಲವಾರು ವಿದ್ವಾಂಸರು ವಿಭಿನ್ನ ನಿಲುವುಗಳನ್ನು ಹೊಂದಿದ್ದಾರೆ. ಎಸ್.ಪರಮಶಿವನ್‌ರವರು[೧೮] ಇವುಗಳ ಕಾಲವನ್ನು ಕ್ರಿ.ಶ. ೧೫ - ೧೬ನೇ ಶತಮಾನಕ್ಕೆ ಸೇರಿಸಿರುತ್ತಾರೆ. ಅದರಂತೆ ಶ್ರೀ ಸಿ.ಟಿ.ಯಂ.ಕೊಟ್ರಯ್ಯ[೧೯] ಅವರು ಕ್ರಿ.ಶ. ೧೫೦೮ರ ನಂತರ ಇವು ರಚನೆ ಆಗಿರಬಹುದೆಂಬ ಅಭಿಪ್ರಾಯಪಟ್ಟಿದ್ದಾರೆ. ಸಿ.ಶಿವರಾಮಮೂರ್ತಿಯವರು[೨೦] ಕ್ರಿ.ಶ. ೧೫ನೇ ಶತಮಾನಕ್ಕೆ ಸೇರಿಸಿದ್ದಾರೆ. ಇವರಿಗಿಂತ ವಿಭಿನ್ನವಾಗಿ ಡಾ.ಎಸ್.ರಾಜಶೇಖರ,[೨೧] ಶ್ರೀಮತಿ ಎ.ಎಲ್.ದೆಲ್ಲಾಪಿಕೋಲಾರವರು[೨೨] ಇವುಗಳನ್ನು ಕ್ರಿ.ಶ. ೧೮-೧೯ನೇ ಶತಮಾನಕ್ಕೆ ಸೇರಿಸಿದ್ದಾರೆ. ರಾಜಶೇಖರ್ ಅವರು ಇವುಗಳನ್ನು ಹೊಳಲಗುಂಡಿಯ ಚಿತ್ರಗಳಿಗೆ ಹೋಲಿಸುತ್ತಾ ಈ ಚಿತ್ರಗಳಲ್ಲಿಯ ಕೆಲವು ಅಂಶಗಳು ನಂತರದ ಕಾಲದವು ಎಂದು ಪ್ರತಿಪಾದಿಸುತ್ತ ನಂತರದ ಕಾಲಕ್ಕೆ ಸೇರಿಸುತ್ತಾರೆ. ಅದರಂತೆ ಶ್ರೀಮತಿ ಎ.ಎಲ್.ದೆಲ್ಲಾಪಿಕೋಲಾರವರು - ಇವುಗಳಲ್ಲಿನ ಕೆಲವು ಅಂಶಗಳು ಕ್ರಿ.ಶ. ೧೮ - ೧೯ನೇ ಶತಮಾನದ ಶ್ರೀರಂಗಪಟ್ಟಣ ಮತ್ತು ಮೈಸೂರು ಶೈಲಿಯ ಚಿತ್ರಗಳಿಗೆ ಹೋಲಿಸುತ್ತಾ ಇವುಗಳ ಕಾಲವನ್ನು ಕ್ರಿ.ಶ. ೧೯ನೇ ಶತಮಾನಕ್ಕೆ ಸೇರಿಸುತ್ತಾರೆ. ಅಲ್ಲದೇ, ಯತಿಗಳ ಚಿತ್ರವನ್ನು ವಿದ್ಯಾರಣ್ಯ ಎಂಬುದಾಗಿಯು ಹಾಗೂ ಯತಿಗಳು ಜಡೆಗಟ್ಟಿದ ಕೂದಲು ಉಳ್ಳವರಾಗಿಯೂ ಇದ್ದಾರೆಂದು ಅವರು ಬರೆಯುತ್ತಾರೆ.[೨೩] ಆದರೆ, ವಾಸ್ತವದಲ್ಲಿ ಪ್ರಸ್ತುತ ಯತಿಗಳು ಜಡೆಗಟ್ಟಿದ ಕೂದಲನ್ನು ಹೊಂದಿಲ್ಲ. ಕೇಶಮಂಡಲನಾದ ತಲೆಯಮೇಲೆ ಹೊದೆದ ಕಾಷಾಯವಸ್ತ್ರ ಮಾತ್ರ ಕಂಡುಬರುತ್ತದೆ. ಇದರಿಂದ ಪ್ರಸ್ತುತ ವಿದ್ವಾಂಸರ ಅಭಿಪ್ರಾಯಗಳನ್ನು ಸಂಶಾಯಸ್ಪದ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ.[೨೪]

ಪ್ರಸ್ತುತ ಚಿತ್ರಗಳು ಶೈಲಿಯ ದೃಷ್ಟಿಯಿಂದ ಇವುಗಳ ರಚನಾ ಕಾಲವನ್ನು ಕ್ರಿ.ಶ. ೧೫೧೦ - ೩೦ರ ಅವಧಿಯವರೆಗೆ ನಿರ್ಧರಿಸುವುದು ಸಮಂಜಸವಾಗಿದೆ. ಇವುಗಳು ಇರುವ ಮಹಾರಂಗಮಂಟಪದ ನಿರ್ಮಾಣವಾದದ್ದು ೧೫೦೯-೧೦ರಲ್ಲಿ.[೨೫] ಇದೇ ದಿನಾಂಕದಲ್ಲಿ ಕೃಷ್ಣದೇವರಾಯುನು ಪಟ್ಟಾಭಿಷಕ್ತನಾದ ವಿವರವು ಶಾಸನೋಕ್ತವಾಗಿದೆ.

ಮಹಾರಂಗಮಂಟಪದ ಚಿತ್ರಗಳು - ಕೃಷ್ಣದೇವರಾಯನ ಕಾಲದಲ್ಲಿಯೇ ರಚನೆ ಆಗಿರುವವು. ಇಂತಹ ದೊಡ್ಡಮಟ್ಟದ ಚಿತ್ರಗಳ ಪೋಷಕ ರಾಜ - ರಾಜ ಪ್ರಮುಖನಾಗಿರಬೇಕೆಂದು ಹೇಳಬಹುದು. ಆದರೆ, ಕ್ರಿ.ಶ. ೧೮ - ೧೯ನೇ ಶತಮಾನದ ಇಲ್ಲಿನ ರಾಜಕೀಯ ಸ್ಥಿತಿಯನ್ನು ಗಮನಿಸಿದರೆ ಅಂತಹ ದೊಡ್ಡ ಪೋಷಕರಾರು ಕಂಡುಬರುವುದಿಲ್ಲ. ಇಲ್ಲಿ ಚಿತ್ರಿತವಾದ ವಿಷಯಗಳು - ದೇವಾಲಯದ ಶಿಲ್ಪಗಳು ಆ ಕಾಲದ ಕಲಾ ಚಟುವಟಿಕೆಗಳ ಸಮನ್ವಯತೆಯನ್ನು ಪ್ರತಿಬಿಂಬಿಸುತ್ತದೆ. ಕೃಷ್ಣದೇವರಾಯನಂತಹ ಕಲಾ ಸಹೃದಯರು ಮಾತ್ರವೇ ಇಂತಹ ಚಿತ್ರಗಳ ರಚನೆಯ ಹಿನ್ನೆಲೆಯಲ್ಲಿ ಇದ್ದರೇ ಹೊರತು - ಏನೊಂದು ವಿಶೇಷತೆಯನ್ನು ತೋರದ ನಂತರದ ಪ್ರಮುಖರಲ್ಲ. ಆದುದರಿಂದ ಚಿತ್ರಗಳು ಕೃಷ್ಣದೇವರಾಯನ ಕಾಲದಲ್ಲಿಯೇ ರಚನೆಯಾದ ಸಾಧ್ಯತೆ ಹೆಚ್ಚು.[೨೬]

ಚಿತ್ರಶೈಲಿಯ ದೃಷ್ಟಿಯಿಂದ ನಾವು ಇವುಗಳನ್ನು ಆ ಕಾಲದ ಸಮಕಾಲೀನ ಚಿತ್ರಗಳಿಗೆ ತುಲನಾತ್ಮಕವಾಗಿ ಹೋಲಿಸಬಹುದಾಗಿದೆ. ಕರ್ನಾಟಕದಲ್ಲಿ ಆಗಲೇ ನೆಲೆ ಕಂಡುಕೊಂಡಿದ್ದ ಇಸ್ಲಾಮಿಕ್ ದೊರೆಗಳ ಆಸ್ಥಾನದಲ್ಲಿ ಚಿಕಣಿ ಚಿತ್ರಕಲೆಯು ತನ್ನ ಪ್ರಾರಂಭಿಕ ಹಂತದಲ್ಲಿತ್ತು. ಮಧ್ಯಭಾರತದಲ್ಲಿ - ಚೌರ - ಪಂಚಾಶಿಕ ಕಥೆಗಳು ದೃಶ್ಯಮಾಧ್ಯಮದಲ್ಲಿ ಚಿತ್ರಗಳ ರೂಪದಲ್ಲಿ ರಚನೆಗೊಳ್ಳಲು ಪ್ರಾರಂಭಗೊಂಡಿದ್ದವು. ಇದೇ ಕಾಲದಲ್ಲಿ ರಾಜಸ್ಥಾನೀ ಕಲೆ - ಚಿಕಣಿ ಚಿತ್ರಗಳ ರೂಪದಲ್ಲಿ ಅರಳತೊಡಗಿತ್ತು. ಇವುಗಳ ಜೊತೆಯಲ್ಲಿಯೇ ವಿಭಿನ್ನ ಕಲಾಪ್ರಕಾರಗಳಲ್ಲಿ ಚಿತ್ರಕಲೆ ತನ್ನದೇ ಆದ ಛಾಪನ್ನು ಒತ್ತತೊಡಗಿತ್ತು.[೨೭] ಇಂತಹ ಸಂದರ್ಭದಲ್ಲಿ ಆಗಲೇ ವಾಸ್ತುಶಿಲ್ಪ, ಗಾರೆ ಶಿಲ್ಪದಲ್ಲಿ ಪ್ರೌಢಿಮೆ ಕಂಡುಕೊಂಡಿದ್ದ ವಿಜಯನಗರದ ಕಲಾವಿದನಿಗೆ ಚಿತ್ರರಚನೆ ಮಾಡುವುದು, ವಿಶೇಷವಾದ ಶ್ರಮವೆನಿಸಿರಲಿಕ್ಕಿಲ್ಲ. ಇಲ್ಲಿನ ಸ್ಥಳೀಯ ಕಲಾವಿದರೇ ಪ್ರಸ್ತುತ ಚಿತ್ರಗಳ ರಚನಾಕಾರರು. ಇವರೇ ಪೂರ್ವನಿಯೋಜಿಸಿ - ಸಂಯೋಜಿಸಿ ಚಿತ್ರಿಸಿದ ಆಕೃತಿಗಳೇ ಇಲ್ಲಿ ತುಂಬಿವೆ. ಇದರೊಂದಿಗೆ ಸಮಕಾಲೀನ ಸೊಗಡನ್ನು ಭಾವಪೂರ್ಣವಾಗಿ ಇಲ್ಲಿ ಕಲಾವಿದ ದುಡಿಸಿಕೊಂಡಿದ್ದಾನೆ. ಹಂಪೆಯ ಚಿತ್ರಗಳು ಇಂದು ಹಂಪೆಯಲ್ಲಿ ಉಳಿದ ಚಿತ್ರಕಲೆಯ ಗತವೈಭವದ ದಾಖಲೆಗಳಾಗಿವೆ.

ಅಡಿಟಿಪ್ಪಣಿಗಳು

೧. ಈ ಚಿತ್ರಗಳನ್ನು ಕುರಿತಂತೆ ಇದುವರೆಗೂ ಆಗಿರುವ ಅಧ್ಯಯನಗಳಲ್ಲಿ ಸಮಕಾಲೀನ ಚಿತ್ರಗಳ ಅಥವಾ ಚಿತ್ರಕಲಾ ಚಟುವಟಿಕೆಗಳ ವ್ಯಾಪ್ತಿಯಲ್ಲಿ ಚರ್ಚೆ ಆಗಿಲ್ಲವೆಂದೇ ಹೇಳಬಹುದು.

೨. ಅಜಂತಾ ಮತ್ತು ಬಾಗ್‌ಗಳಲ್ಲಿಯ ಭಿತ್ತಿಚಿತ್ರಗಳನ್ನು ಕುರಿತಂತೆ ಹಲವಾರು ಅತ್ಯುತ್ತಮ ಅಧ್ಯಯನಗಳು ಆಗಿವೆ. ಅದರಂತೆ ಬಾದಾಮಿ, ಐಹೊಳೆ, ಎಲ್ಲೋರ ಧಾರಶಿವಗಳ ಬಗ್ಗೆ ಕೂಡಾ ಹಲವಾರು ಲೇಖನಗಳು ಪ್ರಕಟವಾಗಿವೆ. ಇವತ್ತು ದಕ್ಷಿಣದ ಪಲ್ಲವ ಚೋಳರ ಕಾಲದಲ್ಲಿನ ಚಿತ್ರಕಲಾ ಚಟುವಟಿಕೆಗಳನ್ನು ಕುರಿತಂತೆ ಕೂಡಾ ಹಲವಾರು ಪುಸ್ತಕಗಳು - ಲೇಖನಗಳು ಪ್ರಕಟವಾಗಿವೆ. ಈ ಎಲ್ಲ ವಿಷಯಗಳ ಆಕರಗ್ರಂಥಗಳಿಗೆ ನೋಡಿ; Susan L.Huntington : The Art of Ancient India, Buddhist, Hindu, Jain, Weatherhill N.Y. 1985

೩. ಜೈನ ಮಾನಸಪ್ರತಿಗಳಲ್ಲಿನ ಚಿತ್ರಗಳು ಕರ್ನಾಟಕಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನವಾದದ್ದೂ ಎಂದರೆ ಮೂಡುಬಿದ್ರೆಯ 'ಧವಳ' ತಾಳಪತ್ರಗಳ ಮೇಲೆ ಚಿತ್ರಿತವಾದ ರೇಖಾ ಚಿತ್ರಗಳೆಂದು ಹೇಳಬಹುದು. Vijaya Rao, 1989 : Mural Paintings at the Jain Math, Shravanabelgola (Unpublished) MF A dissertation ಇದರಲ್ಲಿ ವಿವರವಾಗಿ ಧವಳ ಚಿತ್ರಗಳ ಬಗ್ಗೆ ಚರ್ಚೆ ಇದೆ.

೪. ಹಂಪೆಯಲ್ಲಿ - ಅಂದಿನ ಕಾಲದಲ್ಲಿ ಅರಮನೆಗಳಲ್ಲಿ, ಮುಖ್ಯಬೀದಿಗಳ ಮನೆಗಳ ಗೋಡೆಗಳ ಮೇಲೆ ಮತ್ತು ಇನ್ನಿತರ ಪ್ರಮುಖ ಕಟ್ಟಡಗಳಲ್ಲಿ ಚಿತ್ರಗಳನ್ನು ನೋಡಿದ್ದ ಬಗ್ಗೆ ಹಂಪೆಗೆ ಬಂದಿದ್ದ ವಿದೇಶಿ ಪ್ರವಾಸಿಗರು ತಿಳಿಸುತ್ತಾರೆ. ಇವರಲ್ಲಿ ಮುಖ್ಯವಾಗಿ ನ್ಯುನಿಚ್ ಮತ್ತು ಪೇಸ್‌ರು ಈ ಕುರಿತು ವಿವರಿಸುತ್ತಾರೆ.

೫. ವಿಜಯನಗರ ಕಾಲದಲ್ಲಿಯೇ ಪ್ರಾಯಶಃ ಪ್ರಥಮಬಾರಿಗೆ ಮಹಾಗೋಪುರಗಳ ನಿರ್ಮಾಣವಾದದ್ದು. ಈ ಗೋಪುರಗಳು ಅದರಲ್ಲೂ ವಿಶೇಷವಾಗಿ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ನಿರ್ಮಾಣವಾದದ್ದು ಐತಿಹಾಸಿಕ ದಾಖಲೆಗಳಿಂದ ತಿಳಿದುಬರುತ್ತದೆ. ಪ್ರಾಯಶ: ಇದರ ಪ್ರಭಾವವೇ ಪ್ರಸ್ತುತ ಚಿತ್ರಗಳ ಚಿತ್ರಸಂಯೋಜನೆಯಲ್ಲಿ ಗೋಪುರಗಳ ರೂಪದಲ್ಲಿ ಚಿತ್ರಣಗೊಂಡಿವೆ. ಇಲ್ಲಿ ಕಲಾವಿದ ಪ್ರತಿಯೊಂದು ಚಿತ್ರ ಸಂಯೋಜನೆಗೂ ಒಂದೊಂದು ಚೌಕವನ್ನು ರಚಿಸಿ ಪ್ರತ್ಯೇಕ ಗೋಪುರಗಳನ್ನು ಬಿಡಿಸಿದ್ದಾನೆ. ಕಲಾವಿದನ ಸೂಕ್ಷ್ಮತೆ ಮತ್ತು ಅವನ ದೂರದೃಷ್ಟಿ - ಅಂದರೆ ಪ್ರತಿಯೊಂದು ಸಂಯೋಜನೆ ಸಾಂಕೇತಿಕವಾಗಿ ಒಂದೊಂದು ದೇವಾಲಯದಂತೆ ಕಂಡುಬರುತ್ತದೆ.

೬. ಇಲ್ಲೂ ಕೂಡಾ ಕಲಾವಿದನ ಸಮಯಪ್ರಜ್ಞೆಯನ್ನು ಗಮನಿಸಬೇಕು. ಪ್ರತಿಯೊಂದು ಹಂತದಲ್ಲೂ - ಸಂಯೋಜನೆಯ ಪ್ರತಿಯೊಂದು ಆಕೃತಿಗಳು ಮುಖ್ಯ ಕಥಾವಸ್ತುವಿಗೆ ಪೂರಕವಾಗಿ ಕಾರ್ಯತತ್ಪರವಾಗಿರಬೇಕೆಂಬುದು ಕಲಾವಿದನ ಉದ್ದೇಶ. ಇದನ್ನೇ ಆಂತರಿಕ ಸಂಬಂಧ (Internal Relation) ಎಂದು ಚಿತ್ರ ಸಂಯೋಜನೆಯಲ್ಲಿ ಹೇಳುವುದು.

೭. ಈ ಚಿತ್ರದಲ್ಲಿ ಕಾಮನ ಮುಖಮಾತ್ರ ಪಾರ್ಶ್ವ ಭಂಗಿಯಲ್ಲಿದೆ (Profile). ಆದರೆ ದೇಹ ಮಾತ್ರ ಮುಂದಿನಿಂದ ನೋಡಿದಾಗ ಇರುವಂತೆ ಇದೆ. ಇದು ಚಿತ್ರಗಳ ರೇಖಾಕೃತಿಯ ರಚನೆಯಲ್ಲಿ ಆಗುವ ತಾಂತ್ರಿಕವಾದ ಕ್ರಿಯೆ ಆಗಿದೆ. ಆರ್.ಎಚ್.ಕುಲಕರ್ಣಿ ೧೯೯೮ ವಿಜಯನಗರದ ಚಿತ್ರಶೈಲಿಯ ಕಿನ್ನಾಳದ ರೇಖಾಚಿತ್ರಗಳು. "ವಿಜಯನಗರ ಅಧ್ಯಯನ" ಸಂ. III, ಪು. ೨೫ - ೩೫

೮. ಶಿವನನ್ನು ಮನ್ಮಥವಿಜಯ ಚಿತ್ರಗಳಲ್ಲಿ ಸಾಮಾನ್ಯವಾಗಿ ಧ್ಯಾನಮುದ್ರೆಯಲ್ಲಿ ಚಿತ್ರಿಸಿರುವುದು ಹಲವಾರು ಶಿಲ್ಪಗಳಲ್ಲಿ - ಚಿತ್ರಗಳಲ್ಲಿ ಕಂಡುಬರುತ್ತದೆ. ಇಲ್ಲಿ ಅವನು ಧ್ಯಾನದಿಂದ ಆಗಲೇ ಹೊರಬಂದಿರುವ ಹಂತ ಅಂದರೆ - ಮನ್ಮಥನನ್ನು ತನ್ನ ನೊಸಲಕಣ್ಣಿನಿಂದ ಭಸ್ಮ ಮಾಡುವ ಪೂರ್ವ ಹಂತವನ್ನು ತೋರಿಸುತ್ತದೆ. ಅಲ್ಲದೇ ಶಿವನ ಅಗಲವಾದ ಕಣ್ಣುಗಳು ಈ ಕ್ರಿಯೆಗೆ ಪೂರಕವಾಗಿವೆ.

೯. ಈ ಚಿತ್ರ ಸಂಯೋಜನೆಯ ತೀರ ಕೆಳಸ್ಥರದಲ್ಲಿ ಕಂಡುಬರುವ ಲಯಬದ್ಧವಾದ ನೀರಿನ ಮತ್ತು ಜಲಚರಿಗಳ ಚಿತ್ರಣ - ಚಿತ್ರದ ಅವಿಭಾಜ್ಯ ಅಂಗವಾಗಿದೆ. ಇದು ಚಿತ್ರದಲ್ಲಿ - ಈ ಘಟನೆ ನಡೆದ ಸ್ಥಳಕ್ಕೆ ಪೂರಕವಾಗಿ - ಸಾಂಕೇತಿಕವಾಗಿ ಚಿತ್ರಣಗೊಂಡಿದೆ. ಸಂಯೋಜನೆಯ ದೃಷ್ಟಿಯಲ್ಲಿ ಈ ಚಿತ್ರಣ ನಂತರದ ದಶಕಗಳಲ್ಲಿ ಪ್ರಾರಂಭವಾದ ಮೊಘಲ್ - ರಾಜಸ್ಥಾನಿ ಚಿಕಣಿ ಚಿತ್ರಗಳಲ್ಲಿ (Miniature Paintings) ನೀರನ್ನು ಮುನ್ನೆಲೆಯಾಗಿ (Foreground) ದುಡಿಸಿಕೊಂಡಿರುವುದನ್ನು

ನಾವು ಗಮನಿಸಬಹುದು. ಇಲ್ಲಿ ಹಲವಾರು ಕಥಾನಕ ಶಿಲ್ಪಗಳಲ್ಲಿ ಅದರಲ್ಲೂ ರಾಮಾಯಣದ ದೃಶ್ಯಗಳಲ್ಲಿ (ಹಜಾರ ರಾಮದೇವಾಲಯ) ಸಂಯೋಜನೆಯಲ್ಲಿ ನೀರನ್ನು ದುಡಿಸಿಕೊಂಡಿರುವ ವಿಧ ಗಮನಾರ್ಹವಾದದ್ದು.

೧೦. ಅರ್ಜುನ ಮತ್ಸ್ಯಯಂತ್ರವನ್ನು ಭೇದಿಸುವ ದೃಶ್ಯ ಮೊಟ್ಟಮೊದಲಬಾರಿಗೆ ಶಿಲ್ಪಗಳಲ್ಲಿ ಮೂಡಿಬಂದಿದೆ. ಹೊಯ್ಸಳಕಾಲದ ಹಲವಾರು ದೇವಾಲಯಗಳಲ್ಲಿ ಭಿತ್ತಿಯ ಸಾಲುಗಳಲ್ಲಿ - ಕಥಾನಕ ಚಿತ್ರಗಳಲ್ಲಿ ಒಂದಾಗಿ ಮೂಡಿಬಂದಿದೆ. ಹಳೇಬೀಡು, ಬೇಲೂರು, ಸೋಮನಾಥಪುರ ಇತ್ಯಾದಿ ಕಡೆಗಳಲ್ಲಿ ಇದನ್ನು ಕಾಣಬಹುದು. ವಿಜಯನಗರದಲ್ಲಿ - ದೇವಾಲಯ ಶಿಲ್ಪಗಳಲ್ಲಿ ಮೂಡಿಬಂದಿರುವುದು ಸ್ಪಷ್ಟವಾಗಿದೆ. ಈಗ ಈ ಭಿತ್ತಿಯಲ್ಲಿ ನಂತರದ ಕಿನ್ನಾಳ ಚಿತ್ರಗಳಲ್ಲಿ ಕೂಡಾ ಅತ್ಯಂತ ಜನಪ್ರಿಯವಾದ ಚಿತ್ರವಸ್ತು ಇದಾಗಿದೆ. ಕುಲಕರ್ಣಿ. ಆರ್.ಎಚ್. ೧೯೯೮ ಅದೇ.

೧೧. ಈ ಚಿತ್ರಗಳ ಬಗ್ಗೆ ಸ್ಪಷ್ಟವಾದ ಗುರುತಿಸುವಿಕೆ ಇನ್ನೂ ಆಗಬೇಕಿದೆ. ಬಹುಶಃ ಅಂದಿನ ರಾಜರನ್ನೇ ಇವು ತೋರಿಸುವ ಸಾಧ್ಯತೆ ಇದೆ.

೧೨. ಕುಲಕರ್ಣಿ ಆರ್.ಎಚ್. ೨೦೦೧, ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಭಿತ್ತಿಯಲ್ಲಿನ ಯತಿಗಳ ಚಿತ್ರ ವಿದ್ಯಾರಣ್ಯರದೆ? ವ್ಯಾಸರಾಯರದೆ? "ಇತಿಹಾಸದರ್ಶನ," ಸಂ. ೧೬, ಬೆಂಗಳೂರು, ಪು. ೧೭೮ - ೧೮೧.

೧೩. ದೆಲ್ಲಾಪಿಕೋಲಾ ಎ.ಎಲ್. ೧೯೯೭ "Ceiling Paintings in the Virupaksha Temple," Hampi. South Asian Studies, No.13, Pp.55-56

೧೪. ಈ ರಾಜರ ಆಕೃತಿಗಳನ್ನು ತೀರ ಹತ್ತಿರದಿಂದ ನೋಡುವ ಅವಕಾಶ ಇದುವರೆಗೂ ನನಗೆ ದೊರೆತಿಲ್ಲ. ಪೇಟ, ಉದ್ದವಾದ ಜುಬ್ಬದಂತಹ ಮೇಲಂಗಿ ಮತ್ತು ಧೋತ್ರಗಳನ್ನು ಧರಿಸಿದ್ದು ಈ ಆಕೃತಿಗಳು ಮುಮ್ಮುಖವಾಗಿ - ಲಿಂಗಕ್ಕೆ ಪೂಜೆಸಲ್ಲಿಸಲು ಹೊರಟಿರುವಂತೆ ಪ್ರತ್ಯೇಕವಾದ 'ಚೌಕದ' ಸಂಯೋಜನೆಯಲ್ಲಿ ಚಿತ್ರಣಗೊಂಡಿವೆ. ಇವುಗಳು ಲೇಪಾಕ್ಷಿಯ ವೀರಭದ್ರ ದೇವಾಲಯದ ಕಲ್ಯಾಣಮಂಟಪದ ಭಿತ್ತಿ ಚಿತ್ರಗಳಲ್ಲಿ ಕಂಡು ಬರುವ ವೀರಣ್ಣ ಮತ್ತು ವಿರುಪಣ್ಣರ ಚಿತ್ರಗಳಂತೆ ಈ ಸಂಯೋಜನೆಯಲ್ಲಿ ಕಂಡುಬರುತ್ತವೆ.

೧೫. ಕುಲಕರ್ಣಿ ಆರ್.ಎಚ್. ೨೦೦೦, ವಿಜಯನಗರ ಚಿತ್ರಶೈಲಿಯ ಕಿನ್ನಾಳದ ಮತ್ತಷ್ಟೂ ರೇಖಾ ಚಿತ್ರಗಳು "ವಿಜಯನಗರ ಅಧ್ಯಯನ" - ೬, ಪು. ೪೩ - ೬೨.

೧೬. ವರ್ಣಗಳು ಈಗ ಬಹುತೇಕವಾಗಿ ಮಾಸಿಹೋಗಿ ಕೇವಲ ಕೆಲವೇ ಕೆಲವು ವರ್ಣಗಳು ಕಾಣುತ್ತವೆ.

೧೭. ಕುಲಕರ್ಣಿ ಆರ್.ಎಚ್. ಕಿನ್ನಾಳದ ರೇಖಾ ಚಿತ್ರಗಳು. ೧೯೯೮, ೨೦೦೦, ವಿಜಯನಗರ ಅಧ್ಯಯನ.

೧೮. ಪರಮಶಿವನ್ ಎಸ್. ೧೯೩೬. The Vijayanagara Paintings : Late Vijayanagara Paintings in Brihadishwara Temple at Tanjore "in Vijayanagara Sex centenary Commemoration Volume" Vijayanagara Sex centenary Association, Dharwad, Pp. 326-343

೧೯. ಕೊಟ್ರಯ್ಯ ಸಿ.ಟಿ.ಯಂ. ೧೯೫೫, Vijayanagara Paintings at the Virupaksha Temple, Hampi, QJMS, Bangalore, Pp.228-237

೨೦. ಶಿವರಾಮಮೂರ್ತಿ ಸಿ. ೧೯೬೮, South Indian Paintings, National Museum, New Delhi.

೨೧. ರಾಜಶೇಖರ ಎಸ್. ೧೯೮೨, Holalagundi Paintings, Dharwad.

೨೨. ದೆಲ್ಲಾಪಿಕೋಲಾ ಎ.ಎಲ್. ೧೯೯೭, ಅದೇ

೨೩. ಅದೇ, ಪು. ೬೩

೨೪. ಕುಲಕರ್ಣಿ ಆರ್.ಎಚ್. ೨೦೦೧ 'ಇತಿಹಾಸ ದರ್ಶನ'

೨೫. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ೪, ಸಂಖ್ಯೆ ೨೫೪.

೨೬. ಕೃಷ್ಣದೇವರಾಯನ ಕಾಲವನ್ನು ಎಲ್ಲ ದೃಷ್ಟಿಯಿಂದಲೂ ವಿಜಯನಗರಕಾಲದ - ಸುವರ್ಣಕಾಲವೆಂದು ಇತಿಹಾಸತಜ್ಞರು ಹೇಳುತ್ತಾರೆ. ಹಾಗಿದ್ದ ಮೇಲೆ ಈ ಚಿತ್ರಗಳು, ಕಾಲದ ದೃಷ್ಟಿಯಿಂದ ರಚನೆಗೊಂಡಿರುವ ಸ್ಥಳದ ಮತ್ತು ಸಂದರ್ಭಗಳನ್ನು ಗಮನಿಸಿದರೆ ಅವನ ಕಾಲದಲ್ಲಿ ರಚನೆ ಆಗಿರಬೇಕೆಂಬುದು ರುಜುವಾತಾದಂತಾಗುತ್ತದೆ.

೨೭. ಕ್ರಿ.ಶ. ೧೫೦೦ರ ಕಾಲ ಭಾರತೀಯ ಚಿತ್ರಕಲಾ ಇತಿಹಾಸದ ಪುನರುತ್ಥಾನದ ಸಮಯವೆಂದು ಕಲಾ ಇತಿಹಾಸತಜ್ಞರ ಅಭಿಮತ. ಏಕೆಂದರೆ ದೇಶದ ಎಲ್ಲೆಡೆ - ಮತ್ತೊಂದು ಬಾರಿ ಚಿತ್ರಕಲೆಗೆ ವಿಶೇಷ ಪ್ರಾಮುಖ್ಯತೆ ದೊರೆತು ಚಿತ್ರರಚನೆ ವಿಭಿನ್ನ ನೆಲೆಗಟ್ಟಿನಿಂದ ಪ್ರಾರಂಭವಾಯಿತು. ಇದೇ ಸಂದರ್ಭದಲ್ಲಿ ದಕ್ಷಿಣದಲ್ಲೂ ಕೂಡಾ ಇದು ವಿಜಯನಗರದಲ್ಲಿನ ಚಿತ್ರಕಲೆಯ ರೂಪದಲ್ಲಿ ಪ್ರಾರಂಭವಾದದ್ದೇ ಪ್ರಸ್ತುತ ಚರ್ಚೆಯ ವಸ್ತು.

❑❑

೧೭

ಹಂಪೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ದೇವತಾರಾಧನೆ

** ಡಾ.ಸಿ.ಟಿ.ಯಂ. ಕೊಟ್ರಯ್ಯ*

ವಿಜಯನಗರದ ಬಹು ವಿಖ್ಯಾತ ಅರಸ ಪ್ರೌಢದೇವರಾಯನಲ್ಲಿ ಅಮಾತ್ಯನೂ, ದಂಡನಾಯಕನೂ ಆಗಿದ್ದ ಸುಪ್ರಸಿದ್ಧ ಲಕ್ಕಣದಂಡೇಶನು ತನ್ನ ಕಾವ್ಯಗ್ರಂಥವಾದ 'ಶಿವತತ್ವ ಚಿಂತಾಮಣಿ' (ಕ್ರಿ.ಶ. ೧೪೫೦)ಯ ಸಂಧಿ ೫೮ರಲ್ಲಿ, ಬಹು ಪುರಾತನ ಕಾಲದಿಂದಲೂ ವಿರೂಪಾಕ್ಷ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿದ್ದ ಹಂಪೆಯಲ್ಲಿಯೂ ಶ್ರೀಶೈಲ ಮಲ್ಲಿಕಾರ್ಜುನ ದೇವತಾರಾಧನೆ ಅಸ್ತಿತ್ವಕ್ಕೆ ಬಂದುದನ್ನು ಮತ್ತು ಅದು ಜನಾದರಣೀಯವಾಗಿದ್ದ ವಿಷಯಗಳನ್ನು ಪ್ರಸ್ತಾಪಿಸಿರುತ್ತಾನೆ.[೧] ಇದೇ ವಿಷಯವನ್ನು ಸುಮಾರು ನೂರು ವರ್ಷಗಳ ನಂತರದ ಕವಿಯಾದ ಸಿದ್ಧನಂಜೇಶನೂ ತನ್ನ ಗ್ರಂಥವಾದ 'ಗುರುರಾಜ ಚಾರಿತ್ರ' (ಸು.ಕ್ರಿ.ಶ. ೧೫೩೦)ದ ಹನ್ನೊಂದನೆಯ ಸಂಧಿಯಲ್ಲಿಯೂ ಪ್ರಸ್ತಾಪಿಸಿರುತ್ತಾನೆ.[೨] ಎಂದರೆ ವಿಜಯನಗರದ ಅಮಾತ್ಯ ದಂಡನಾಯಕ ಲಕ್ಕಣನು ದಾಖಲಿಸಿರುವುದನ್ನೇ, ಸಿದ್ಧನಂಜೇಶನು ಪುನ: ಕ್ರಿ.ಶ. ೧೫೩೦ರಲ್ಲಿ ಹೇಳಿರುತ್ತಾನೆಂದರೆ ಆ ಮಲ್ಲಿಕಾರ್ಜುನ ದೇವತಾರಾಧನೆ ಅಷ್ಟೊಂದು ಜನಾದರಣೀಯವಾಗಿತ್ತೆಂದು ತಿಳಿಯುತ್ತದೆ.

ಅಲ್ಲಿ ವಿವರಿಸಿರುವ ಪ್ರಕಾರ, ಪರಮ ಪುಣ್ಯ ಕ್ಷೇತ್ರವಾದ ಪಂಪಾ ವಿರೂಪಾಕ್ಷನ ದಕ್ಷಿಣ ದಿಕ್ಕಿನಲ್ಲಿದ್ದ ಒಂದು ಅರಣ್ಯದೊಳಗೆ ಬಿಲ್ವವನ. ಆ ವನದಲ್ಲಿ ಒಂದು ಗುಹೆ; ಆ ಗುಹೆಯಲ್ಲಿ

ಲೀಲೆಯ ರಾಮಣ್ಣಯ್ಯನೆಂಬ ಶಿವಯೋಗಿ ಇದ್ದನು. ಒಂದು ದಿನ ಆ ಶಿವಯೋಗಿಯು ಹತ್ತಿರದಲ್ಲಿಯೇ ಇದ್ದ ಒಂದು ಹುತ್ತದಿಂದ ಶಿವಲಿಂಗವು ಉದ್ಭವಿಸುವುದೆಂದು, ತನ್ನ ದರ್ಶನಕ್ಕೆ ಬಂದಿದ್ದ ಭಕ್ತರಿಗೆ ತಿಳಿಸುತ್ತಾನೆ. ಆದರೆ ಪರಸಮಯದವರು ಆ ಹುತ್ತದೊಳಗೆ ಮೊದಲೇ ಶಿವಲಿಂಗವನ್ನು ತಂದಿರಿಸಿಟ್ಟಿರಬೇಕೆಂದು ಪರಿಹಾಸಮಾಡುತ್ತಾರೆ; ಮತ್ತು ಆ ಲಿಂಗವು ಪಕ್ಕದಲ್ಲಿಯೇ ಇದ್ದ ಹುಟ್ಟು ಹಾಸು ಬಂಡೆಯ ಮೇಲೆ ಉದ್ಭವವಾದರೆ, ಅದು ಸತ್ಯ ಸಂಗತಿಯಾದೀತೆಂದು ವಾದಿಸುತ್ತಾರೆ. ಆಗ ಯತೀಶ ಲೀಲೆಯ ರಾಮಣಯ್ಯನು ಆ ಹಾಸುಬಂಡೆಯ ಸ್ಥಳಕ್ಕೆ ಬಂದು ಪುಷ್ಪಾಂಜಲಿ ಮಾಡಿ ವಂದಿಸಲು ಸಿದ್ಧಾರ್ಥಿ ಸಂವತ್ಸರದ ಪಾಲ್ಗುಣ ಮಾಸದ ಬಹುಳ ಪಂಚಮಿ ಸೋಮವಾರದ ಶುಭಯೋಗದಲ್ಲಿ, ಆ ಶ್ವೇತಶಿಲೆಯನೊಡೆದು ಮಲ್ಲಿಕಾರ್ಜುನ ಲಿಂಗವು ಪವಾಡ ಸಾದೃಶ್ಯವಾಗಿ ಉದಿಸಿತೆಂದು ಖಚಿತವಾದ ತೇದಿ ಸಹಿತ ವಿವರಿಸಲಾಗಿದೆ.೩ ಆ ವಿಷಯವನ್ನು ದೃಢೀಕರಿಸುವ ಪದ್ಯ ಭಾಗವು ಈ ಕೆಳಗಿನಂತಿದೆ:

"ಅಂತವರು ನುಡಿದು ತೋರಿದ ಹಾಸರೆಯ ಮೇಲೆ
ಶಾಂತಲೀಲೆಯ ರಾಮಣಯ್ಯ ಪುಷ್ಪಾಂಜಲಿಯ
ಸಂತಸದಿ ಮಾಡಿ ವಂದನೆಗೆಯ್ಯಲೊಪ್ಪದಿಂ ಲಿಂಗವೃಷ್ಟಿಗಳು ಸುರಿಯೆ
ಕಂತು ಮದಮರ್ದನಂ ಸಿದ್ಧಾರ್ಥಿಯಬ್ದದೊಳ
ಗಂತು ಫಾಲ್ಗುಣ ಬಹುಳ ಪಂಚಮಿಯ ಶಶಿದಿನ ಶು
ಭಂದಳೆದು ಶಿವಯೋಗದುದಯದೊಳಗುದಿಸಿದನ ..... ||೧೩೧||"
ಎಂದರೆ
"ಅಲ್ಲಿಯತಿ ಹರುಷದಿಂಶ್ವೇತಶಿಲೆಯೊಳು ವೊಡದು
ಮಲ್ಲಿಕಾರ್ಜುನನಾಮದಿಂದಿರಲ್ ವಾದಿಗಳ
ಸೊಲ್ಲಡಗಿ ಜಯ ಜಯ ನಮೋ ನಮಸ್ತೇ ಎಂದು ಭಕ್ತಿ ದೆಸೆ ದೆಸೆಗೆ ಬೀರೆ
ಅಲ್ಲಿಯಂಧಕರಕ್ಷಿಯಂ ಪಡೆವರೊಪ್ಪದಿಂ
ದಲ್ಲಿ ಬಂಜೆಯರು ಸುತರೊದವ ಕಾಣ್ಬರು ಮತ್ತೆ
ಯಲ್ಲಿ ಬಯಸಿದ ಬಯಕೆಯಂ ಕೊಡುವ ಮಲ್ಲಯನ ....." ||೧೩೨||

ಮಲ್ಲಿಕಾರ್ಜುನ ಲಿಂಗವು ಆ ದಿನದಂದು ಹಂಪೆಯಲ್ಲಿ ಅಸ್ತಿತ್ವಕ್ಕೆ ಬಂದಿತೆಂದು ಮುಖ್ಯವಾಗಿ ತಿಳಿಯಬೇಕಾದ ವಿಷಯ. ಸೋಜಿಗದ ಸಂಗತಿಯೆಂದರೆ, ಅಲ್ಲಿ ಹೇಳಿರುವ ಕಾಲಗಣನೆಯು ಕ್ರಿ.ಶ. ೧೪೪೦, ಫೆಬ್ರುವರಿ ತಿಂಗಳ ೨೩ನೇ ತಾರೀಖಿಗೆ, ಗಣನೀಯವಲ್ಲದ ಅಲ್ಪ ವ್ಯತ್ಯಾಸದೊಂದಿಗೆ, ಸರಿಹೊಂದುತ್ತದೆ. ಆ ಅಲ್ಪವ್ಯತ್ಯಾಸವೆಂದರೆ, ಗ್ರಂಥದಲ್ಲಿ ಹೇಳಿರುವಂತೆ, ದಿನವು ಸೋಮವಾರವಾಗಿರದೆ, ಮಂಗಳವಾರವಾಗಿತ್ತು (ಕ್ರಿ.ಶ. ೧೪೪೦ ಸೋಮವಾರ, ಫೆಬ್ರುವರಿ ೨೩ F dt. ೦.೪೪ ತಿಥಿ Ending moments).[೪] ಬಹುಶಃ ವೀರಶೈವರಿಗೆ ಸೋಮವಾರವು ಹೆಚ್ಚು ಪ್ರಾಶಸ್ತ್ಯವಾದ ದಿನವಾಗಿರುವುದರಿಂದ ಮತ್ತು ಕವಿ

ಲಕ್ಕಣದಂಡೇಶನು ವೀರಶೈವನಾಗಿದ್ದುದರಿಂದ, ಮಂಗಳವಾರಕ್ಕೆ ಬದಲಾಗಿ ಸೋಮವಾರವೆಂದು ಉಲ್ಲೇಖಿಸಿರಲೂಬಹುದು. ಅಥವಾ ತಿಥಿಯು ಚತುರ್ಥಿಯಾಗಿದ್ದಿರಬೇಕು. ಮುಖ್ಯವಾಗಿ ಗುರುತಿಸಬೇಕಾಗಿರುವ ವಿಷಯವೆಂದರೆ, ಉಲ್ಲೇಖಿತ ದಿನದಂದು ಶ್ರೀಶೈಲ ಮಲ್ಲಿಕಾರ್ಜುನ ಲಿಂಗದ ಪ್ರತಿರೂಪವು ಹಂಪೆಯಲ್ಲಿಯೂ ಅಸ್ತಿತ್ವಕ್ಕೆ ಬಂದು ಪೂಜೆಗೊಳ್ಳಲಾರಂಭಿಸಿತೆಂಬುದನ್ನು ಹಂಪೆಯಲ್ಲಿ ಮಲ್ಲಿಕಾರ್ಜುನ ಲಿಂಗವು ಅಸ್ತಿತ್ವಕ್ಕೆ ಬಂದ ಘಟನೆಯು ಕ್ರಿ.ಶ. ೧೪೪೦ರಲ್ಲಿ, ಲಕ್ಕಣನ ಜೀವಿತದ ಕಾಲದಲ್ಲಿಯೇ ಜರುಗಿತೆಂಬುದನ್ನು ವಿದ್ವಾಂಸರು ಈಗಾಗಲೇ ಸಮರ್ಥಿಸಿ ನಿರ್ಧರಿಸಿರುತ್ತಾರೆ.[೫] ಮತ್ತು ಲೀಲೆಯ ರಾಮಣಯ್ಯನು ಐತಿಹಾಸಿಕ ವ್ಯಕ್ತಿಯೂ ಆಗಿದ್ದನೆಂದು ಹೇಳಲಾಗಿದೆ.[೬]

ಕಾವ್ಯಗಳಲ್ಲಿ ವಿವರಿಸಿರುವ ಪ್ರಕಾರ, ಮಲ್ಲಿಕಾರ್ಜುನ ಲಿಂಗವು ಪವಾಡ ಸಾದೃಶ್ಯವಾಗಿ ಅಸ್ತಿತ್ವಕ್ಕೆ ಬಂದ ಸಮಯದಲ್ಲಿ ಅಲ್ಲಿ ನೆರೆದಿದ್ದ ಭಕ್ತಜನರು ಜಯಕಾರಮಾಡಿ ನಮಿಸಿದರು. ಆ ಮಲ್ಲಯ್ಯ ಮೂರ್ತಿಯನ್ನು ಆರಾಧಿಸಿದ ಭಕ್ತರು ತಮ್ಮ ತಮ್ಮ ಇಷ್ಟಾರ್ಥ ಸಿದ್ಧಿಗಳನ್ನು ಹೊಂದಿದರು ಮತ್ತು ಹರಕೆಗಳನ್ನೊಪ್ಪಿಸಿದರು. ಆ ಕಾರಣದಿಂದಾಗಿ ಅದು ಪ್ರಸನ್ನ ಮಲ್ಲೇಶನೆಂದು ಹೆಸರು ಪಡೆದು ಜನಾದರಣೀಯವಾಯಿತು.[೭] ಮತ್ತು ಒಂದು ದಿನ ಯೋಗಾ ನಿದ್ರೆಯ ಸಮಯದಲ್ಲಾದ ಆ ಮಲ್ಲಿಕಾರ್ಜುನ ದೇವರ ಅಪ್ಪಣೆಯ ಮೇರೆಗೆ, ವಿಜಯನಗರದ ಪ್ರಖ್ಯಾತ ಮಂತ್ರಿ ಲಕ್ಕಣದಂಡೇಶನು (ಸು.ಕ್ರಿ.ಶ. ೧೪೦೦ ರಿಂದ ೧೪೮೦ರ ವರೆಗೆ ಜೀವಿಸಿದ್ದ) ಆ ಮಲ್ಲೇಶ ಮೂರ್ತಿಗೆ ವಿಶಾಲವಾದ ಗುಡಿಗೋಪುರಗಳನ್ನು ನಿರ್ಮಿಸಿದನಲ್ಲದೆ ವಿವಿಧ ಪುಷ್ಪಗಳ ತೋಟ, ಕೆರೆ, ಬಾವಿಗಳನ್ನು ಮಾಡಿಸಿ ಅಲ್ಲಿಯೇ ಅಭಿವೃದ್ಧಿಯಾದ ಜನನಿವೇಶನಕ್ಕೆ ಪ್ರಸನ್ನಪುರವೆಂದು ನಾಮಕಾರಣ ಮಾಡಿಸಿದನು; ('ಮಿಸುನಿಯ ಶಿವಾಲಯವನಧಿಕದ ತಟಾಕಮಂ ಬಹುಕೂಪವನ ತತಿಗಳ ಒಸದು'.)[೮] ಈ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ, ಸಿದ್ಧನಂಜೇಶನು ಹೇಳಿರುವ ಕಾಲವೂ ಮಂತ್ರಿ ಲಕ್ಕಣದಂಡೇಶನ ಜೀವಿತಕಾಲಕ್ಕೆ ಹಾಗೂ ವೀರಶೈವ ಧರ್ಮ ಆದರ ಶ್ರೇಯೋಭಿವೃದ್ಧಿ, ಪ್ರಚಾರಗಳಿಗೆ ಬಹುವಾದ ರಾಜಪ್ರೋತ್ಸಾಹವನ್ನು ನೀಡಿದ ಅರಸ ಪ್ರೌಢರಾಯನ ಸಾಮ್ರಾಜ್ಯಾಡಳಿತ ಕಾಲಕ್ಕೆ (ಸು.ಕ್ರಿ.ಶ. ೧೪೨೪ ರಿಂದ ೧೪೪೬ರ ವರೆಗೆ) ಸರಿಹೊಂದುವುದರಿಂದ, ಪ್ರಸ್ತುತ ವಿಷಯದ ವಿವರಗಳಿಗೆ ಹೆಚ್ಚಾದ ಪ್ರಾಮುಖ್ಯತೆ ಮತ್ತು ಸಮರ್ಥನೆ. (ಗುರುರಾಜ ಚಾರಿತ್ರ ಗ್ರಂಥದ ರಚನಾಕಾರನಾದ ಸಿದ್ಧನಂಜೇಶನು ತನ್ನ ಗುರು ಪರಂಪರೆಯನ್ನು, ಹಂಪೆಯ ಪರಿಸರದ, ಎಂದರೆ ಈಗಿನ ಬಳ್ಳಾರಿ ಜಿಲ್ಲೆಯ ನೀಲಗುಂದ, ಕುರುವತ್ತಿ, ಹತ್ತಿರದ ಹೂಲಿ ಎಂಬ ಪುಣ್ಯಕ್ಷೇತ್ರಗಳ ಹೆಸರುಗಳೊಂದಿಗೆ ಗುರುತಿಸಿ ಹೇಳಿರುತ್ತಾನೆ.[೯] ಅಲ್ಲದೆ ಶ್ರೀಶೈಲ ಪರ್ವತದ ನೈರುತ್ಯ ದಿಕ್ಕಿನಲ್ಲಿರುವ ನಂದಿ ಮಂಡಲವೆಂಬ ಪ್ರದೇಶದ ನಂದ್ಯಾಲಪುರವೆಂಬ ಪಟ್ಟಣದಲ್ಲಿ ಮಂಡಲಾಧಿಪತಿಯಾಗಿದ್ದನೆಂದೂ ಹೇಳಲಾಗಿದೆ.[೧೦] ಆ ಕಾರಣದಿಂದಾಗಿಯೇ, ತನ್ನ ಗ್ರಂಥದಲ್ಲಿ ಹಂಪೆಯಲ್ಲಿ ಆಗಲೇ ಸ್ಥಾಪಿತವಾಗಿ, ಪೂಜೆಗೊಳ್ಳುತ್ತಿದ್ದ ಮಲ್ಲಿಕಾರ್ಜುನಸ್ವಾಮಿಯ ವಿಷಯವನ್ನು ಪುನಃ ಹೆಚ್ಚಿನ

ಅಭಿಮಾನದಿಂದ ಪ್ರಸ್ತಾಪಿಸಿರುತ್ತಾನೆ. ಮತ್ತು ಮೇಲೆ ತಿಳಿಸಿದ ಕ್ಷೇತ್ರಗಳ ಮತ್ತು ಪ್ರಾಂತಗಳಲ್ಲಿ ಪ್ರವಾಸವನ್ನು ಕೈಗೊಂಡು, ತನ್ನ ಗ್ರಂಥಕ್ಕೆ ಅವಶ್ಯವಿದ್ದ ಇತರ ವಿಷಯಗಳನ್ನು ಸಂಗ್ರಹಿಸಿ ಬಳಸಿಕೊಂಡಿರುತ್ತಾನೆ.

ಈ ಇಬ್ಬರೂ ಕವಿಗಳು ವೀರಶೈವ ಗ್ರಂಥರಚನಾಕಾರರ ಸಂಪ್ರದಾಯಗಳನ್ನನುಸರಿಸುತ್ತಾ ಪ್ರಸ್ತುತ ಕಥಾವಸ್ತುವನ್ನು ಆರಿಸಿಕೊಂಡು ವಿವರಿಸಿರುತ್ತಾರೆ. ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾದ ವಿಷಯವೆಂದರೆ, ಹಂಪೆ ಕ್ಷೇತ್ರವು, ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಿಂತಲೂ ಪೂರ್ವಕಾಲದಿಂದಲೇ, ಎಂದರೆ ಹಂಪೆಯಲ್ಲಿ ವಾಸಿಸಿದ್ದ ಶರಣ ಕವಿಗಳಾದ ಹರಿಹರ, ರಾಘವಾಂಕ ಮುಂತಾದವರಿಂದ ಸಾಹಿತ್ಯ ರಚನೆ, ಧರ್ಮಬೋಧನೆ, ಧರ್ಮಪ್ರಚಾರ ಮತ್ತು ಅವರ ಶ್ರದ್ಧಾಭಕ್ತಿಗಳಿಂದ ಕೂಡಿದ ಆಚಾರ ವಿಚಾರಗಳಿಂದಾಗಿ, ವೀರಶೈವ ಧರ್ಮಾನುಯಾಯಿಗಳ ಒಂದು ಜಾಗೃತ ಹಾಗೂ ಪರಿಣಾಮಕಾರಿ ಕ್ಷೇತ್ರವಾಗಿ ರೂಪುತಳೆಯುತ್ತಿತ್ತು. ಮತ್ತು ಆ ಚಟುವಟಿಕೆಗಳು ಮುಂದುವರಿದು, ಪ್ರೌಢದೇವರಾಯನ ರಾಜ್ಯಭಾರದ ಸಮಯದಲ್ಲಿ (ಕ್ರಿ.ಶ. ೧೪೨೪ ರಿಂದ ೧೪೪೬ರ ವರೆಗೆ) ಹೆಚ್ಚಾದ ಚುರುಕಿನಿಂದ ಜರುಗಿದವು. ಪರಿಣಾಮವಾಗಿ ವೀರಶೈವ ಧರ್ಮಕ್ಕೆ ಪ್ರಭಾವೀ ಚರಿತ್ರೆ, ವಿಪುಲ ಸಾಹಿತ್ಯ ರಚನೆ, ವ್ಯಾಪಕ ಪ್ರಚಾರ ಹಾಗೂ ಜನಾನುರಾಗ ಮತ್ತು ಅನುವರ್ತಿಗಳ ಸಂಖ್ಯಾಬಲಗಳು ದೊರೆತು, ಅದು ಒಂದು ಪ್ರಮುಖ ಅಧ್ಯಾಯವನ್ನೇ ನಿರ್ಮಿಸಿ ಸಫಲವಾದುದಲ್ಲದೆ, ವಿಕ್ರಮವನ್ನೇ ಸ್ಥಾಪಿಸುವಂತಾದುದರ ಸ್ಪಷ್ಟವಾದ ಕುರುಹುಗಳನ್ನು ಇಂದಿಗೂ ಗುರುತಿಸಬಹುದಾಗಿದೆ.[೧೧] ಆ ಕಾರಣಗಳಿಂದಾಗಿ, ಅನೇಕ ಪ್ರಜ್ಞಾವಂತ ಧರ್ಮಾನುಯಾಯಿಗಳು ವಿವಿಧ ಪ್ರಾಂತಗಳಿಂದ, ಹಂಪೆಗೆ ಧಾವಿಸಿ, ತಮ್ಮ ತಮ್ಮ ಧಾರ್ಮಿಕ ಆಚಾರ, ವಿಚಾರ, ಸಾಧನೆ, ಸಂಪ್ರದಾಯ ಮುಂತಾದ ಚಟುವಟಿಕೆಗಳನ್ನು ಮುಂದುವರಿಸಿದರು. ಹಾಗಾಗಿ, ಬಹು ಪೂರ್ವದಿಂದ, ಎಂದರೆ ಹಂಪೆಯ ವಿರೂಪಾಕ್ಷ ಕ್ಷೇತ್ರವು ಪ್ರಸಿದ್ಧಿಗೆ ಬರುವುದಕ್ಕಿಂತ ಪೂರ್ವದಲ್ಲಿಯೇ, ವೀರಶೈವ ಧರ್ಮಾನುಯಾಯಿಗಳಲ್ಲಿ ಬಹುವಾದ ಭಕ್ತಿ, ಅಭಿಮಾನ, ಆದರಣೆಗಳಿಗೆ ಪಾತ್ರವಾಗಿದ್ದ ಶ್ರೀಶೈಲ ಕ್ಷೇತ್ರದ ಆರಾಧ್ಯ ದೈವವಾದ ಮಲ್ಲಿಕಾರ್ಜುನದೇವರ ಪೂಜೆಯು ಹಂಪೆ - ವಿಜಯನಗರ ಕ್ಷೇತ್ರದಲ್ಲಿಯೂ ಅಸ್ತಿತ್ವಕ್ಕೆ ಬರಲೇಬೇಕಾಯಿತು. ಎಂದರೆ ಹಲವು ವೀರಶೈವ ಧರ್ಮಾನುಯಾಯಿಗಳ ಆಸಕ್ತಿ ಮತ್ತು ಕಾರ್ಯಚರಣೆಗಳ ಫಲವಾಗಿ ಬಹುವಾದ ಅಭ್ಯುದಯ, ಉತ್ಕರ್ಷಗಳ ಪಥದಲ್ಲಿ ಮುಂದುವರಿಯುತ್ತಿದ್ದು ಹಂಪೆ - ವಿಯನಗರದಲ್ಲಿಯೂ ಆ ಜನಾನುರಾಗೀ ಮಲ್ಲಿಕಾರ್ಜುನ ದೇವತಾಮೂರ್ತಿಯು ಸ್ಥಾಪನೆಗೊಂಡು, ದೇವಾಲಯವೂ ನಿರ್ಮಾಣಗೊಂಡು, ದಾನ ದತ್ತಿಗಳೂ ಅಸ್ತಿತ್ವಕ್ಕೆ ಬರುವಂತಾದವು ಮತ್ತು ಆ ಕಾರ್ಯಾಚರಣೆಗಳು, ಲಕ್ಕಣದಂಡೇಶ, ಸಿದ್ಧನಂಜೇಶ ಅವರಂತಹ ವೀರಶೈವ ಕವಿಗಳು ತಮ್ಮ ಗ್ರಂಥಗಳಲ್ಲಿ ಪ್ರಸಂಗೋಚಿತ ವಿವರಣೆಗಳನ್ನೊದಗಿಸುವಂತೆ ಸ್ಫೂರ್ತಿ ಮತ್ತು ಪ್ರೇರಣೆಗಳನ್ನೊದಗಿಸಿದವು. ಹಾಗೂ ಅವು ಸರಿ ಪ್ರಮಾಣದಲ್ಲಿ ಪ್ರಸಿದ್ಧ ಪ್ರಚಾರಗಳನ್ನು ಪಡೆಯುವಲ್ಲಿಯೂ ಯಶಸ್ವಿಯಾದವು.

ಹಾಗೆ ಹಂಪೆಯಲ್ಲಿ ಸ್ಥಾಪನೆಗೊಂಡ ಮಲ್ಲಿಕಾರ್ಜುನ ದೇವಮೂರ್ತಿ ದೇವಾಲಯ ಅವುಗಳಿಗೆ ಸಂಬಂಧಿಸಿದ ಇತರ ವಿವರಗಳನ್ನು ಶಾಸನಾಧಾರಗಳಿಂದಲೂ ದೃಢೀಕರಿಸಬಹುದು. ಅವುಗಳ ವಿವರಗಳನ್ನು ಈಗ ತಿಳಿಯೋಣ. ಹಂಪೆಯ ಕ್ಷೇತ್ರದಲ್ಲಿ, ಶ್ರೀಶೈಲ ಮಲ್ಲಿಕಾರ್ಜುನನ ಪ್ರತೀಕವಾಗಿ ಅಸ್ತಿತ್ವಕ್ಕೆ ಬಂದ ಮಲ್ಲಿಕಾರ್ಜುನ ದೇವರನ್ನು ಗುರುತಿಸುವಲ್ಲಿ ಹಂಪೆಯ ಪರಿಸರದ ಕಡ್ಡಿರಾಮಪುರ ಗ್ರಾಮದ (ಶಾಸನ ಪ್ರಕಾರ ಕಡೆಯ ರಾಮಪುರ) ಹತ್ತಿರ ದೊರೆತಿರುವ ಕನ್ನಡ ಶಾಸನವು ಬಹು ಉಪಯುಕ್ತ.[೧೨] ಇಲ್ಲಿಯೂ ಮೇಲಿನ ಸಾಹಿತ್ಯ ಕೃತಿಗಳಲ್ಲಿ ವಿವರಿಸಲಾಗಿರುವಂತೆ, ಅದೇ ಸನ್ನಿವೇಶವನ್ನು ಪುನರುಚ್ಚರಿಸಲಾಗಿದೆ. ಎಂದರೆ

'.... ಗಿರಿಯ ಪಡೆಯ ಕೆಳಗೆ ಅರೆಯಲೊಡೆದು ಮೂಡಿದ
ಚೆಂಚರ ಮಲ್ಲಿಕಾರ್ಜುನದೇವರು ..... ಗವರಿಯ
(ಗೌರಿಯ) ಗಂಡ ಸಿರಿಸೆಳೆಲಿಂಗ (ಶ್ರೀಶೈಲ ಲಿಂಗ)
ರಾತ್ರಿಯಲ್ಲಿ .... ಗಿರಿಯ ಪಡೆಯ ಕೆಳಗರೆಯಲ್ಲಿ (ವ)ಡದು
ಮೂಡಿ(ದ) .... ಜಂಗಮ
ಬೈ ಇರವ ಮೂತಿ (ರ್ತಿ) ಅಯ್ಯನ ಸಪನಕ್ಕೆ ಹೋಗಿ
ಹೇಳಿದಡೆ ಕ್ಷೇತ್ರವ ವಿರಚಿಸಿದ ಹೂವಿಗನು ಶ್ರೀ ಶ್ರೀ ಶ್ರೀ'[೧೩]

ಆದರೆ ಈ ಶಾಸನವನ್ನು ಹೊರಡಿಸಿದ ಕಾಲವು ಸು (ಭಾನು) ಸಂವತ್ಸರದ ಮಾಘ ಬಹುಳ ೩ ಆ. (ಆದಿತ್ಯವಾರ) ಎಂದಿರುವುದನ್ನು ಕ್ರಿ.ಶ. ೧೪೬೪, ಜನವರಿ ೨೬ ಗುರುವಾರಕ್ಕೆ, (ಲಕ್ಕಣದಂಡೇಶನ ಜೀವಿತ ಕಾಲಕ್ಕೆ) ಸರಿಯಾಗುತ್ತದೆಂದು ತರ್ಕಿಸಬಹುದು.[೧೪] ಶಿವತತ್ವ ಚಿಂತಾಮಣಿಯಲ್ಲಿ ಹೇಳಿರುವ ಕಾಲಕ್ಕೂ ಮತ್ತು ಶಾಸನದಲ್ಲಿ ಉಲ್ಲೇಖವಾಗಿರುವ ಕಾಲಕ್ಕೂ ಸುಮಾರು ೨೪ ವರ್ಷಗಳ ಅಂತರವಿರುವುದೆಂದಾಯಿತು. ಹಾಗಿದ್ದಾಗಲೂ ಮಲ್ಲಿಕಾರ್ಜುನ ಲಿಂಗವು ಅಸ್ತಿತ್ವಕ್ಕೆ ಬಂದ ಸನ್ನಿವೇಶ, ಸ್ಥಳವರ್ಣನೆ, ಹೆಸರುಗಳ ಹೋಲಿಕೆಗಳಿಗೆ ಗಮನ ಕೊಡಬೇಕಾಗುತ್ತದೆ.

ಈ ಶಾಸನದಲ್ಲಿ, ಮೂರ್ತಿಯನ್ನು 'ಚೆಂಚರ ಮಲ್ಲಿಕಾರ್ಜುನ' ಮತ್ತು 'ಪಾತಾಳಗಂಗೆ - ಗೌರಿಯ ಗಂಡ ಶ್ರೀಶೈಲ ಲಿಂಗವೆಂದು ಹೆಸರಿಸಲಾಗಿದೆ. ಶ್ರೀಶೈಲ ಬೆಟ್ಟಗಳ ಕಾಡುಗಳಲ್ಲಿ ವಾಸವಾಗಿರುವ ಒಂದು ಕಾಡು ಜನಾಂಗಕ್ಕೆ ಚೆಂಚರೆಂದು ಹೆಸರು ಮತ್ತು ಅವರ ಆರಾಧ್ಯ ದೈವ ಶ್ರೀಶೈಲ ಮಲ್ಲಿಕಾರ್ಜುನ. ಪಾತಾಳಗಂಗೆ ಎಂಬುದು ಶ್ರೀಶೈಲ ಕ್ಷೇತ್ರಕ್ಕೆ ಹೊಂದಿಕೊಂಡು ಪ್ರವಹಿಸುತ್ತಿರುವ ಕೃಷ್ಣಾನದಿಯ ಎಡದ ದಂಡೆಯ ಮೇಲಿರುವ ಒಂದು ಪವಿತ್ರ ತೀರ್ಥಸ್ಥಳ. ಆ ಕ್ಷೇತ್ರದ ಆರಾಧ್ಯ ಹಾಗೂ ಪ್ರಮುಖ ದೈವ ಮಲ್ಲಿಕಾರ್ಜುನ ಲಿಂಗ. ಆ ಮಲ್ಲಿಕಾರ್ಜುನ ದೈವದ ಪ್ರತೀಕವೇ ಪ್ರಸ್ತುತ ಶಾಸನದಲ್ಲಿ ವಿವರಿಸಲಾಗಿರುವ, ಒಂದು ಶಿಲಾಗುಹೆಯೊಳಗಡೆ ಹುಟ್ಟುಕಲ್ಲು ಅರೆಯಲ್ಲಿ ಮೂಡಿರುವ ಲಿಂಗ ಮತ್ತು ಆ

ಗುಹೆಯಿರುವ ಬೆಟ್ಟಕ್ಕೆ ನೆಳಲ ಹುಣಿಸೆಯಗಿರಿಯೆಂದು ಹೇಳಲಾಗಿದೆ. ಎಂದರೆ, ' .... ನೆಳಲ ಹುಣಿಸೆಯ ಗಿರಿಯ ಪಡೆಯ ಕೆಳಗೆ ಅರೆಯಲ್ಲಿ ಲೊಡೆದು ಮೂಡಿದ' ಶ್ರೀಶೈಲ ಲಿಂಗ (ಚೆಂಚರ ಮಲ್ಲಿಕಾರ್ಜುನ) ಎಂದು.[೧೫] ಅದೇ ಶಾಸನವು ಮುಂದುವರೆದು, ಆ ಶ್ರೀಶೈಲಲಿಂಗವು, ಗಂಟೆಯ ಜಂಗಮ, ಭೈರವಮೂರ್ತಿ ಅಯ್ಯನ ಸಪನಕ್ಕೆ ಹೋಗಿ (ಕನಸಿನಲ್ಲಿ) ಕಾಣಿಸಿಕೊಂಡು ತಾನು ಆ ಗವಿಯಲ್ಲಿ ಸ್ವಯಂಭುಲಿಂಗವಾಗಿ ಅಸ್ತಿತ್ವಕ್ಕೆ ಬಂದ ವಿಷಯವನ್ನು ತಿಳಿಸಿಹೇಳಿದ ನಂತರ, ಆ ಭಕ್ತನು ಅಲ್ಲಿ 'ಕ್ಷೇತ್ರವ ವಿರಚಿಸಿದನು' ಎಂದಿದೆ. ಬಹುಶಃ ಆತನು ದಾನ ದತ್ತಿಗಳನ್ನು ನೀಡಿ, ಪೂಜಾಕಾರ್ಯಗಳಿಗೆ ವ್ಯವಸ್ಥೆ ಮಾಡಿರಬೇಕು. ಅಂದಿನಿಂದ ಆ ಸ್ಥಳವು ಮಲ್ಲಿಕಾರ್ಜುನಸ್ವಾಮಿಯ ಆರಾಧಕರಿಗೆ ಮತ್ತು ಭಕ್ತರಿಗೆ ಆಕರ್ಷಣೀಯ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆಯಿತು. ಇಲ್ಲಿ ಲಕ್ಕಣದಂಡೇಶನ ಮತ್ತು ಸಿದ್ಧನಂಜೇಶನ ಕವಿತಾಗ್ರಂಥಗಳಲ್ಲಿ ವಿವರಿಸಲಾಗಿರುವ ಪ್ರಸಂಗಗಳನ್ನು ಸ್ಮರಿಸಿಕೊಳ್ಳಬಹುದು.[೧೬] ಅಲ್ಲದೆ ಕವಿ ಲಕ್ಕಣ್ಣದಂಡೇಶನು ಸಂಧಿ ೩೮ ಪದ್ಯ ೧೨೮ರಲ್ಲಿ ಆ ನಿವೇಶನವನ್ನು ಕುರಿತು ವಿವರಿಸುವಾಗ, ಅದರ ಪೂರ್ವಕ್ಕೆ ಕಾರ್ತೀಕಸ್ವಾಮಿ (ಸಂಡೂರಿನ ಹತ್ತಿರವಿರುವ ಕಾರ್ತೀಕೇಯ ಸ್ವಾಮಿ ಕ್ಷೇತ್ರ), ಪಶ್ಚಿಮಕ್ಕೆ ಹರಿಹರ (ಹರಿಹರೇಶ್ವರ ಕ್ಷೇತ್ರ), ದಕ್ಷಿಣಕ್ಕೆ ಉಜ್ಜನಿ (ಕೊಟ್ಟೂರಿನ ಹತ್ತಿರವಿರುವ ಸಿದ್ಧೇಶ್ವರ ಕ್ಷೇತ್ರ) ಮತ್ತು ಉತ್ತರಕ್ಕೆ ಶ್ರೀ ವಿರೂಪಾಕ್ಷ (ಹಂಪೆ) ಎಂಬ ಪ್ರಸಿದ್ಧ ಪ್ರಾಚೀನ ಕ್ಷೇತ್ರಗಳನ್ನು ನಿರ್ದಿಷ್ಟವಾಗಿ, ಮೇರೆಗಳಾಗಿ ಹೆಸರಿಸಿರುತ್ತಾನೆ. ಆ ವಿವರಣೆಗಳಿಗನುಗುಣವಾಗಿ ಮತ್ತು ಮೇಲಿನ ಶಿಲಾಶಾಸನದಲ್ಲಿ ಉಲ್ಲೇಖಿತವಾಗಿರುವ ಪ್ರಕಾರ, ಹಂಪೆಯ ವಿರೂಪಾಕ್ಷ ಮಂದಿರದ ದಕ್ಷಿಣಕ್ಕಿರುವ ಕಡ್ಡಿರಾಮಪುರ ಗ್ರಾಮದ ಹತ್ತಿರ ಚಿಕ್ಕ ಗುಡ್ಡದ ಮೇಲಿನ ಶಿಲಾ ಗುಹೆಯೊಂದರಲ್ಲಿ, ಶಾಸನವು ಸೇರಿದಂತೆ ಪೀಠಸ್ಥ ಲಿಂಗವೊಂದು (ಮಲ್ಲಿಕಾರ್ಜುನ ಲಿಂಗವು) ಈಗಲೂ ಕಾಣಬರುತ್ತದೆ. ಆ ಲಿಂಗವು, ಗುಹೆಯೊಳಗಿನ ಹುಟ್ಟು ಬಂಡೆಯಲ್ಲಿ ಕೊರೆಯಲಾಗಿದ್ದು, ಬಹು ಸರಳರೂಪದ ಪೀಠಸಹಿತವಾದ ಲಿಂಗವನ್ನು ಬಿಂಬಿಸುತ್ತದೆ.[೧೭]

ಈ ಎಲ್ಲಾ ಕಾರಣಗಳಿಂದಾಗಿ, ಇದುವೇ ಲಕ್ಕಣದಂಡೇಶ ಮತ್ತು ಸಿದ್ಧನಂಜೇಶ ಕವಿಗಳು ಪ್ರಸ್ತಾಪಿಸಿರುವ, ಹಂಪೆಯಲ್ಲಿದ್ದ ಮಲ್ಲಿಕಾರ್ಜುನ ಮೂರ್ತಿ ಮತ್ತು ಮಂದಿರವಾಗಿದ್ದಿರಬೇಕು ಮತ್ತು ಇದುವೇ ಹಂಪೆಯ ಮಲ್ಲಿಕಾರ್ಜುನ ಮೂರ್ತಿಯ ಆರಾಧನಾ ಕ್ಷೇತ್ರವಾಗಿದ್ದಿರಬೇಕೆಂದು ಹೇಳಬಹುದು. ಆ ಕವಿಗಳು ಉಲ್ಲೇಖಿಸಿರುವ ಪ್ರಕಾರ ಆ ಭಾಗವು ಪ್ರಸನ್ನ ಪುರವೆಂದು, ವಿಜಯನಗರ ಮಹಾನಗರದ ಒಂದು ಬಡಾವಣೆಯಾಗಿ ಪ್ರಸಿದ್ಧಿಯಾಗಿದ್ದಿರಬೇಕು.

ಹಾಗೆ, ಹಂಪೆಯ ವಿರೂಪಾಕ್ಷ ಕ್ಷೇತ್ರದಲ್ಲಿ ಅಸ್ತಿತ್ವಕ್ಕೆ ಬಂದ ಮಲ್ಲಿಕಾರ್ಜುನ ಮೂರ್ತಿಯ ಆರಾಧನೆಯು ಬಹುವಾದ ಜನಾದರಣೆ ಮತ್ತು ಜನಾನುರಾಗಗಳನ್ನು ಪಡೆದಿತ್ತೆಂಬುದು, ಲಭ್ಯವಿರುವ ಇನ್ನೂ ಮೂರು ಬಹು ತೃಟಿತ ಶಿಲಾಶಾಸನಗಳಿಂದಲೂ ವೇದ್ಯವಾಗುತ್ತದೆ.[೧೮] ಈ ಮೂರು ಶಾಸನಗಳು ಪ್ರಸ್ತುತ ಲಿಂಗದಿಂದ ಸುಮಾರು ೧ ರಿಂದ

೩ ಕಿಲೋಮೀಟರ್ ಅಂತರದಲ್ಲಿ ಒಂದೇ ಪ್ರದೇಶದಲ್ಲಿ ಹತ್ತಿರದಲ್ಲೇ ಕಾಣಬರುತ್ತಿದ್ದು,[೧೯] ಅವುಗಳೆಲ್ಲವೂ ಮಲ್ಲಿಕಾರ್ಜುನ ಮೂರ್ತಿಯ ಸೇವಾಕರ್ಯಗಳಿಗಾಗಿ, ವಿವಿಧ ದಾನಗಳನ್ನು ಕೊಡಮಾಡಿದ ಸಂದರ್ಭಗಳಲ್ಲಿ ಹೊರಡಿಸಲಾದವುಗಳಾಗಿವೆ.

ಶಾಸನ ಸಂಖ್ಯೆ ೨೨

"…. ನಾಲ್ವತ್ತಾವರಹನು - - - -
ಮಲ್ಲಿಕಾರ್ಜುನದೇವರ ಅಮೃತಪಡಿಗೆ - - - - ಧರ್ಮ - - - "
ಈ ಶಾಸನವು ಸದಾಶಿವಮಹಾರಾಯನ ಆಡಳಿತಕಾಲ
ಕ್ಕೆ ಸಂಬಂಧಿಸಿದ್ದು ಕ್ರಿ.ಶ. ೧೫೬೧ರಲ್ಲಿ ಹೊರಡಿಸಲಾದುದಾಗಿದೆ.
ಶಾಸನ ಸಂಖ್ಯೆ ೪೩ :- "….. ಮಲ್ಲಿಕಾರ್ಜುನ ದೇವರಿಗೆ
ಕೊಲ ರಾಮ್ಮೆಯನು - - - - - - - ನಾಯಕರಿಗೆ ಪುಣ್ಯವಾಗ
ಬೇಕೆಂದು ದಾರೆನೆರೆ - - - - "

ಶಾಸನ ಸಂಖ್ಯೆ ೮೨

"೦ ಮಲ್ಲಿಕಾರ್ಜುನದೇವರ ದೀಪರಾಧನೆಗೆ
೧ ಅ(೦) ಗಡಿಯ ಮನೆಯನು …."

ಆ ಮೂರು ಶಾಸನಗಳು, ಸಂಖ್ಯೆ ೧೪೭ರಲ್ಲಿ ಕಾಣಬರುವ ವಿವರಗಳನ್ನು ತಿಳಿಸದೆ, ದಾನ ಕಾರ್ಯಗಳ ವಿವರಣೆಗಳನ್ನು ಮಾತ್ರ ತಿಳಿಸುತ್ತದೆ. ಅವುಗಳೆಲ್ಲವೂ ಮೇಲಿನ ಗವಿಯೊಳಗಣ ಅರೆಯಮೇಲೆ ಒಡಮೂಡಿದ ಮತ್ತು ಲಕ್ಕಣದಂಡೇಶ ಹಾಗೂ ಸಿದ್ಧನಂಜೇಶ ಕವಿಗಳು ಪ್ರಸ್ತಾಪಿಸಿರುವ ಮಲ್ಲಿಕಾರ್ಜುನ ಲಿಂಗಕ್ಕೆ ಸಂಬಂಧಿಸಿದವುಗಳಾಗಿರಬೇಕೆಂದು ತರ್ಕಿಸಿ ಹೇಳಬಹುದು. ಪವಾಡದ ಸತ್ಯಾಸತ್ಯತೆ ಏನೇ ಇದ್ದರೂ, ಆ ಸ್ವಾಭಾವಿಕ ಗವಿಯೊಳಗಣ ಹಾಸು ಬಂಡೆಯಲ್ಲಿಯೇ ಕಡೆದು ನಿರ್ಮಿಸಲಾಗಿರುವ ಅತೀ ಸರಳ ರೂಪದ ಪೀಠ ಸಹಿತ ಲಿಂಗವು ಈಗಲೂ ಕಾಣಬರುತ್ತಿದ್ದು[೨೦] ಅದು ಅಮಾತ್ಯ ಲಕ್ಕಣದಂಡೇಶನ ಕಾಲದಿಂದಲೇ ಅಸ್ತಿತ್ವದಲ್ಲಿತ್ತೆಂಬುದು ಖಚಿತ.

ಇಲ್ಲಿ ಇನ್ನೊಂದು ಕುತೂಹಲಕಾರಿ ವಿಷಯವನ್ನು ಗಮನಿಸಬಹುದು. ಮೇಲೆ ವಿವರಿಸಲಾಗಿರುವ, ಪ್ರಸ್ತುತದಲ್ಲಿ ಬಹು ಮುಖ್ಯವಾದ ಸಂಖ್ಯೆ ೧೧೭ರ ಶಾಸನವು ಕಾಣಬರುವ ಶಿಲಾ ಗುಹೆಯೊಳಗಡೆಯೇ ಇನ್ನೊಂದು ಗುಂಡುಬಂಡೆಯ ಮೇಲೆ ಹೆಸರನ್ನು ಮಾತ್ರ ಸೂಚಿಸುವ ಹನ್ನೊಂದು ಅಕ್ಷರಗಳ ಕನ್ನಡಲೇಖನವು ಕಾಣಬರುತ್ತಿದ್ದು, ಅದು "ಚೆಂಚರ ಮಲ್ಲಿಕಾರ್ಜುನ ದೇವರು"[೨೧] ಎಂದು ಮಾತ್ರ ಇದೆ. ಆ ಶಿಲಾಲೇಖನದ ಕೆಳಗೆ ಒಂದು ವಿಚಿತ್ರವಾದ ಉಬ್ಬುಶಿಲಾಕೃತಿಯು ಕಾಣಬರುತ್ತದೆ.[೨೨]

ಈ ಉಬ್ಬುಶಿಲ್ಪದ ವಿವರಣೆಗಳು ಯಾವ ಶಿಲ್ಪಶಾಸ್ತ್ರ ಗ್ರಂಥದಲ್ಲಿಯೂ ಕಾಣಸಿಗುವುದಿಲ್ಲ. ಇದು ವಿಜಯನಗರ ಕಾಲದ ಶಿಲ್ಪಿಯ ಅಪ್ಪಟ ಕಲ್ಪನೆಯೆಂದೇ

ತಿಳಿಯಬೇಕಾಗುತ್ತದೆ. ಬಹುಶಃ ಬೇಟೆಯೇ ಮುಖ್ಯವೃತ್ತಿಯಾಗಿದ್ದು, ಕಾಡಿನಲ್ಲಿಯೇ ಜೀವಿಸುತ್ತಿದ್ದ ಚಂಚು ಜನಾಂಗದವರ ಪರಿಕಲ್ಪನೆಯಾಗಿರುವ ಸಾಧ್ಯತೆಯೂ ಇದೆ. ಹಂಪೆ - ವಿಜಯನಗರದಲ್ಲಿ ಸಹ ಈ ರೀತಿಯ ಶಿಲ್ಪವು ಮತ್ತೆಲ್ಲಿಯೂ ಕಾಣಬರುವುದಿಲ್ಲ. ಇದು ಮನುಷ್ಯ ಮತ್ತು ಮೃಗಗಳ ಲಕ್ಷಣಗಳನ್ನು ಬಿಂಬಿಸುವ ಕಾಲ್ಪನಿಕ ಚಿತ್ರಣ. ಇದರ ಮುಂದಿನ ಭಾಗವು ಎಂಟು ಕೈಗಳುಳ್ಳ ಮಾನವನ ದೇಹವನ್ನು ಹೋಲುತ್ತಿದ್ದು, ಗರುಡನ ಮೂಗು, ಕೋರೆಹಲ್ಲುಗಳು, ದಪ್ಪನೆ ಮೀಸೆ, ತಲೆಯ ಮೇಲೆ ಕರಂಡ ಮುಕುಟಗಳನ್ನು ಹೊಂದಿರುತ್ತದೆ. ಕೊರಳಲ್ಲಿ, ಭುಜಗಳ ಮೇಲೆ, ತೋಳುಗಳ ಮೇಲೆ, ಮುಂಗೈಗಳ ಮೇಲೆ, ನಡುವಿನಲ್ಲಿ, ಕಾಲುಗಳಲ್ಲಿ ಮತ್ತು ಪಾದಗಳ ಮೇಲೆ ಮಾನವರು ಧರಿಸುವಂತಹ ಆಭರಣಗಳನ್ನು ತೋರಿಸಲಾಗಿದೆ. ವೈಜಯಂತಿ ಮಾಲದಂತಹ ಉದ್ದನೆಯ ಹಾರ ಮತ್ತು ಯಜ್ಞೋಪವೀತದಂತಹ ಹಾರಗಳೂ ಇವೆ. ಎಂಟೂ ಕೈಗಳಲ್ಲಿ ಗುರುತಿಸಲು ಸಾಧ್ಯವಾಗದಂತಹ ಆಯುಧಗಳನ್ನು ತೋರಿಸಲಾಗಿದೆ. ಆ ವಿಚಿತ್ರ ಮಾನವ ಶಿಲ್ಪವನ್ನು ಮುಂದಿನ ಎರಡು ಕಾಲುಗಳ ಮೇಲೆ, ಬಲಪಾರ್ಶ್ವಕ್ಕೆ ತಿರುಗಿ ನಿಂತಿರುವಂತೆ ಬಿಡಿಸಲಾಗಿದೆ. ಅದರ ಹಿಂದಿನ ಭಾಗವು ಸೊಂಟಕ್ಕೆ ಹೊಂದಿಕೊಂಡಿರುವಂತೆ ಇದ್ದು, ಅದು ಆನೆಯ ಸ್ಥೂಲದೇಹವನ್ನು, ಹರಡಿದ ಎರಡು ಕಿವಿಗಳು ಮತ್ತು ನಾಲ್ಕು ಕಾಲುಗಳನ್ನು ಹೊಂದಿರುವ ವಿಚಿತ್ರ, ಹಾಗೂ ಅಪ್ಪಟ ಕಾಲ್ಪನಿಕ ಶಿಲ್ಪವಿದಾಗಿದೆ. ಇದು ಒಂದು ಬಹು ವಿರಳವಾದ Therianthropic ಶಿಲ್ಪವೆಂದು ಹೇಳಬಹುದು. ಮತ್ತು ಶಾಸನ ಸಂಖ್ಯೆ ೧೪೭ ತಿಳಿಸುವಂತೆ, ಇದನ್ನು ಕಾಡುವಾಸಿಗಳಾದ ಚಂಚರ ಕಲ್ಪನೆಯ ಮಲ್ಲಿಕಾರ್ಜುನ ದೇವರೆಂದು ಹೇಳಬೇಕು.

ಈ ಸಂದರ್ಭದಲ್ಲಿ ಮತ್ತೊಂದು ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಂದರೆ, ವಿಜಯನಗರ ಸ್ಥಾಪನೆಗಿಂತ ಬಹುಪೂರ್ವದಿಂದಲೂ ಪಂಪಾವಿರೂಪಾಕ್ಷ ಅಧಿದೈವದ ಶೈವ ಕ್ಷೇತ್ರವೆಂದು ಪ್ರಸಿದ್ಧಿಯಾಗಿದ್ದ ಆ ಹಂಪೆಯಲ್ಲಿಯೇ, ಕ್ರಿ.ಶ. ೧೩ನೇ ಶತಮಾನದ ಪೂರ್ವಾರ್ಧದಲ್ಲಿ ವಾಸವಾಗಿದ್ದ ಶರಣಕವಿ ಹರಿಹರದೇವನ ಕೃತಿಗಳಲ್ಲೊಂದಾದ 'ಪಂಪಾಕ್ಷೇತ್ರದ ರಗಳೆ' ಎಂಬ ಕಾವ್ಯದಲ್ಲಿ ಕವಿಯು, ಹಂಪೆಯು 'ಲಿಂಗಮಯವಾದ ನಿಸ್ಸೀಮೆಯಂ' ಎಂದು ಬಣ್ಣಿಸುತ್ತಾ ಅಲ್ಲಿ ಪೂಜೆಗೊಳ್ಳುತ್ತಿದ್ದ ಹಲವಾರು (ಸುಮಾರು ಹದಿನಾಲ್ಕು) ಉಪದೇವತೆಗಳ / ಲಿಂಗಗಳ ಹೆಸರುಗಳನ್ನು ತಿಳಿಸುವಾಗ 'ಮಲ್ಲಿಕಾರ್ಜುನ', 'ಛಾಯಾ ಮಲ್ಲಿಕಾರ್ಜುನ' ಎಂಬ ಹೆಸರುಗಳನ್ನು ಉಲ್ಲೇಖಿಸಿರುತ್ತಾನೆ.[೨] ಎಂದರೆ ಮಲ್ಲಿಕಾರ್ಜುನ ಹೆಸರಿನ ಮೂರ್ತಿ / ಲಿಂಗವು, ಹಂಪೆಯಲ್ಲಿ ಆಗಲೇ ಅಸ್ತಿತ್ವದಲ್ಲಿದ್ದಿರಬೇಕೆಂದಾಯಿತು. ಆದರೆ ಅವುಗಳಾವು, ಗುರುತಿಸಲನುಕೂಲವಾಗುವಂತೆ ಲಭ್ಯವಿರುವದಿಲ್ಲ. ಬಹುಶ: ಕವಿ ಹರಿಹರದೇವನು ಕವಿಸಮಯ, ಭಕ್ತಿಯ ಆವೇಶ ಮತ್ತು ಸ್ಫೂರ್ತಿಗಳಿಂದಾಗಿ ಆ ಹೆಸರುಗಳನ್ನು ಸೇರಿಸಿರಬೇಕು. ಇದೇ ವಿಷಯವನ್ನು ವಿವರಿಸುವ ಸಮಯದಲ್ಲಿ ಕವಿ ಸೋಮರಾಜನು ತನ್ನ ಕಾವ್ಯಗ್ರಂಥ 'ಉದ್ಭಟ ಕಾವ್ಯ'ದಲ್ಲಿ (ಕ್ರಿ.ಶ. ೧೨೨೨) ಅದೇ ಪಂಪಾಕ್ಷೇತ್ರದ ಉಪದೇವತೆಗಳು / ಲಿಂಗಗಳನ್ನು ಹೆಸರಿಸಬೇಕಾದಾಗ

'ಇಂತು ..... ನಾಲ್ಕು ದ್ವಾರಗಳಿರ್ದ ..... ತನ್ಮಧ್ಯದೊಳ್ ಸಾರ್ದ ಯೋಜನ ವಿಶಾಲ ಭೂಮಿಯಲಿರ್ದ ಮಹಾಲಿಂಗಗಳನೊಂದಂದಾಗಿ ಪೆಸರ್ಗೊಡು ಸುರ್ವನೆಂಬೊಡೆ ಸದಳಮಾಗಿ ನೆಗಳ್ತೆವೆತ್ತ ಗಣಿತ ಶಿವಲಿಂಗಗಳ .....'[೭] ಎಂದು ಮಾತ್ರ ಹೇಳಿ ಮುಗಿಸುತ್ತಾನೆ. ಕವಿತಾ ಸಹಜ ಉತ್ಪ್ರೇಕ್ಷೆಯು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೆ ಹರಿಹರ ಕವಿಯ ಜೀವಿತ ಕಾಲದಲ್ಲಿ ಜನವಸತಿಯು ಹಂಪೆಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದು, ಮಿತಪ್ರಮಾಣದಲ್ಲಿದ್ದಿರಬೇಕು. ಅದರ ವಿಸ್ತಾರವಾದ ಬೆಳವಣಿಗೆಯು, ವಿಜಯನಗರ ಸ್ಥಾಪನಾನಂತರ ದೊರೆತ ರಾಜಕೀಯ ಪ್ರಾಧಾನತೆ, ರಾಜಪ್ರೋತ್ಸಾಹ ಹಾಗೂ ಆರ್ಥಿಕ ಅಭಿವೃದ್ಧಿಗಳಿಂದಾಗಿ, ಕ್ರಿ.ಶ. ೧೪ನೇ ಶತಮಾನದ ತರುವಾಯ ಎಂಬುದನ್ನು ಸ್ಮರಿಸಿಕೊಳ್ಳಬೇಕು. ಇಲ್ಲಿ ಪ್ರಸ್ತಾಪಿಸಲಾಗಿರುವ ಮಲ್ಲಿಕಾರ್ಜುನ ಲಿಂಗವು ಕಾಣಬರುತ್ತಿರುವುದು, ಹರಿಹರದೇವ ಮತ್ತು ಸೋಮರಾಜ ಕವಿಗಳ ಕಾಲದನಂತರ ವಿಸ್ತಾರವಾಗಿ ಬೆಳೆದ ಆ ವಿಜಯನಗರ ಮಹಾಪಟ್ಟಣದ ಒಂದು ಬಡಾವಣೆ ಭಾಗದಲ್ಲಿ ವಿಜಯನಗರದ ಅರಸರು, ಮತ್ತು ಅವರ ಅಧಿಕಾರಿಗಳು, ವಿವಿಧ ಧರ್ಮಾಚರಣೆಗಳಿಗೆ ತಮ್ಮ ರಾಜಧಾನಿಯಲ್ಲಿಯೂ ಸಹ ಮನ್ನಣೆ, ಪ್ರೋತ್ಸಾಹಗಳನ್ನು ಉದಾರವಾಗಿ ಕೊಡುತ್ತಿದ್ದರೆಂಬುದು ಮೇಲಿನ ವಿವರಣೆಯಿಂದಲೂ ವೇದ್ಯವಾಗುತ್ತದೆ ಮತ್ತು ಸಮಕಾಲೀನ ಕನ್ನಡ ಸಾಹಿತ್ಯಾಧಾರಗಳು ವಿಶಿಷ್ಟ ಧರ್ಮಾಚರಣೆ ಹಾಗೂ ಚಾರಿತ್ರಿಕ ಘಟನೆಗಳನ್ನು ಗುರುತಿಸುವಲ್ಲಿ ಬಹು ಉಪಯುಕ್ತವೆಂದೂ ತಿಳಿಯುತ್ತದೆ.

ಅಡಿಟಿಪ್ಪಣಿಗಳು

೧. ಶಿವತತ್ವ ಚಿಂತಾಮಣಿ, ಲಕ್ಕಣದಂಡೇಶ ವಿರಚಿತ, ಸಂ, ವಿದ್ವಾನ್ ಎಸ್.ಬಸಪ್ಪ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ ಪ್ರಕಟಿತ, ಮೈಸೂರು, ೧೯೬೦, ಪುಟ ೪೧೩ - ೪೧೫

೨. ಗುರುರಾಜ ಚರಿತ್ರೆ, ಸಿದ್ಧನಂಜೇಶ ವಿರಚಿತ, ಸಂಪಾದಕ, ಸಂ.ಶಿ.ಭೂಸನೂರಮಠ, ಶ್ರೀ.ಮ.ನಿ.ಪ್ರ.ಮೃತ್ಯುಂಜಯ ಸ್ವಾಮಿಗಳು, ಮುರುಘಾಮಠ ಪ್ರಕಟಣೆ, ಧಾರವಾಡ, ೧೯೫೦, ಸಂಧಿ ೧೧, ಪದ್ಯ ೨ ರಿಂದ ೭ ರವರೆಗೆ.

೩. ಶಿವತತ್ವ ಚಿಂತಾಮಣಿ, ಪೂರ್ವೋಕ್ತ, ಪುಟ ೪೧೪, ಪದ್ಯ ೧೩೧, ೧೩೨

೪. Swamikannu Pillai, Indian Ephemeries (Rep), Agama Prakashana, New Delhi, 1982, Vol, V, P. 82

೫. ಶಿವತತ್ವ ಚಿಂತಾಮಣಿ, ಪೂರ್ವೋಕ್ತ, ಉಪೋದ್ಘಾತ ಪುಟ ೯, ಪ್ರಬುದ್ಧ ಕರ್ನಾಟಕ, ಸಂಪುಟ ೩೦, ಸಂಚಿಕೆ ೪, ಚಂದ್ರಯ್ಯ ಬಿ.ನ. ಶರಣ ದರ್ಶನಾವಲೋಕವ, ಸಂವಹನ ಮೈಸೂರು, ೨೦೦೦, ಪುಟ ೧೬, ರಾಮಸ್ವಾಮಿ ಬಿ. ನೂತನ ಗಣಂಗಳ ಕುರಿತು ಒಂದು ಟಿಪ್ಪಣಿ, ಸೂರ್ಯಕೀರ್ತಿ ಅಭಿನಂದನ ಗ್ರಂಥದಲ್ಲಿ, ಪುಟ ೨೨೫

೬. ಶಿವತತ್ವ ಚಿಂತಾಮಣಿ ಪೂರ್ವೋಕ್ತ, ಉಪೋದ್ಘಾತ, ಪುಟ ೭೯

೭. ಮೇಲಿನಂತೆ, ಪದ್ಯ ೧೩೨, ಪುಟ ೪೧೪

೮. ಮೇಲಿನಂತೆ, ಪದ್ಯ ೧೩೩, ಪುಟ ೪೧೪

೯. ಗುರುರಾಜ ಚರಿತ್ರೆ, ಪೂರ್ವೋಕ್ತ, ಪ್ರಸ್ತಾವನೆ, ಪುಟ ೪

೧೦. ಮೇಲಿನಂತೆ, ಪುಟ ೩ - ೬

೧೧. ಕೊಟ್ರಯ್ಯ ಸಿ.ಟಿ.ಯಂ. ಹಂಪೆಯಲ್ಲಿ ವೀರಶೈವ ಪ್ರಾಚೀನ ಕುರುಹುಗಳು, ಎನಗಿಂತ ಕಿರಿಯರಿಲ್ಲ ಎಂಬ ಎ.ಎಸ್.ಅಗಡಿ ಸನ್ಮಾನ ಗ್ರಂಥದಲ್ಲಿ, ಕೊಪ್ಪಳ, ೧೯೯೮, ಪುಟ ೨೨೫ ರಿಂದ ೩೪೭ರ ವರೆಗೆ

೧೨. Channabasappa S. Patil & Vinoda C. Patil : Inscriptions at Vijayanagara (Hampi), Directorate of Archaeology and Museums, Mysore, 1995. No. 67 P. 19-20 and Vijayanagara : Progress of Research for 1984-87. Inscription No. 147 P. 59. Directorate of Archaeology and Museums, Mysore, 1991.

೧೩. ಮೇಲಿನಂತೆ

೧೪. Swamykannu Pillai op.cit. Vol. v p. 82

೧೫. Vijayanagara : Progress of Research for 1984-87. op.cit. Inscription No. 147

೧೬. ಶಿವತತ್ವ ಚಿಂತಾಮಣಿ ಮತ್ತು ಗುರುರಾಜ ಚರಿತ್ರೆ, ಪೂರ್ವೋಕ್ತ

೧೭. Vijayanagara : Progress of Research for 1984-87. op.cit. Plate No. 117

೧೮. Vijayanagara : Progress of Research for 1983-84. op.cit. Inscription No. 23 & 43 for 1984-87 Inscription No. 82

೧೯. Channabasappa S. Patil & Vinoda C. Patil : op.cit P. xvi for mapgrids : M&N

೨೦. Vijayanagara : Progress of Research for 1984-87. op.cit. Plate No. 117

೨೧. Ibid Inscription No. 148 p. 60

೨೨. Ibid Plate No. 118

೨೩. ಹರಿಹರನ ರಗಳೆಗಳು, ಸಂ, ಎಂ.ಎಂ.ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯, ಪುಟ ೪೧೯

೨೪. ಉದ್ಭಟ ಕಾವ್ಯಂ, ಸೋಮರಾಜ ವಿರಚಿತ, ಸಂ, ಶ್ಯಾಮಶಾಸ್ತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೨೧, ಪುಟ ೬೦

❑❑

೧೮

ಬಳ್ಳಾರಿ ಕೋಟೆ ಮಲ್ಲೇಶ್ವರ ದೇವಸ್ಥಾನದಲ್ಲಿರುವ ಮನುಚೋಳನ ಶಿಲ್ಪಗಳು

* ವಿನೋದ ಪಾಟೀಲ

ಈ ದೇವಸ್ಥಾನದ ನಿರ್ಮಾಣ, ಕಾಲಗಳ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲವಾದರೂ ದೇವಸ್ಥಾನದಲ್ಲಿರುವ ಕಂಬಗಳ ಶೈಲಿಯಿಂದ ಇದು ವಿಜಯನಗರ ಕಾಲದ್ದೆಂದು ಗುರುತಿಸಬಹುದಾಗಿದೆ. ದೇವಸ್ಥಾನದ ಪ್ರಾಕಾರದ ಗೋಡೆಯ ಒಳಭಾಗದಲ್ಲಿ ಸುತ್ತಲೂ ಅನೇಕ ಶಿಲ್ಪಗಳಿರುವ ಪಟ್ಟಿಕೆಗಳಿವೆ. ಇಲ್ಲಿ ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದ ಶಿಲ್ಪಗಳನ್ನು, ಬ್ರಹ್ಮ, ವಿಷ್ಣು, ಮಹೇಶ್ವರ, ಪುರಾತನರ ಮತ್ತು ವೀರಶೈವ ಶಿವಶರಣರ ಕಥೆಗಳಿಗೆ ಸಂಬಂಧಿಸಿದ ಶಿಲ್ಪಗಳನ್ನು ಕೆತ್ತಿದ್ದಾರೆ. ಮನುಚೋಳನ ಕಥೆಗೆ ಸಂಬಂಧಿಸಿದ ಕೆಲವು ಶಿಲ್ಪಗಳೂ ಇಲ್ಲಿ ಕಂಡು ಬರುತ್ತವೆ. ಈ ಪ್ರಬಂಧ ಮನುಚೋಳನ ಶಿಲ್ಪಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಆತನ ಕಥೆ ಮತ್ತು ಶಿಲ್ಪಗಳನ್ನು ಮಾತ್ರ ಕೆಳಗೆ ವಿವರಿಸಲಾಗಿದೆ.

ಚೋಳಮಂಡಲದಲ್ಲಿ ಕಮಳಾಲಯಪುರವೆಂಬ ಒಂದು ಊರು ಭೂಮಾತೆಯ ತಿಲಕವೆಂಬಂತೆ ರಂಜಿಸುತ್ತಿತ್ತು. ಆ ಊರು ಶೈವಾಗಮ ಬಲ್ಲವರಿಂದ, ಸದ್ಭಕ್ತರಿಂದ ಯಾವಾಗಲೂ ಶೋಭಿಸುತ್ತಿತ್ತು. ಧರ್ಮಪಾಲಕನಾದ ಮನುಚೋಳನು ಅಲ್ಲಿಯ ಅರಸನಾಗಿದ್ದ. ಈತ ವೇದೋಕ್ತ ಮಾರ್ಗದಿಂದ ಶಿವನನ್ನು ಅರ್ಚಿಸುತ್ತ, ಭಕ್ತರ ಸೇವೆಗೈಯ್ಯುತ್ತ ಸನ್ಮಾರ್ಗದಲ್ಲಿ ನಡೆಯುತ್ತಿದ್ದ. ಶಿವನ ಕೃಪೆಯಿಂದ ಒಬ್ಬ ಮಗನನ್ನು

ಪಡೆದು, ಆತನಿಗೆ ಚಂಚಲನೆಂಬ ಹೆಸರನ್ನಿಟ್ಟಿದ್ದ. ಚಂಚಲನು ಹುಣ್ಣಿಮೆಯ ಶಶಿಯಂತೆ ದಿನದಿಂದ ದಿನಕ್ಕೆ ಬೆಳೆದು ಯೌವನಕ್ಕೆ ಬರಲು ರಾಜಕುಮಾರನಿಗೆ ಇರಬೇಕಾದ ಎಲ್ಲ ವಿದ್ಯೆಗಳನ್ನು ಕಲಿತು ಯೌವನದ ಸುಖವನ್ನನುಭವಿಸುತ್ತಿದ್ದ. ಮನುಚೋಳನು ಮಗನಿಗೆ ಪಟ್ಟಾಭಿಷೇಕವನ್ನು ಮಾಡುವ ಯೋಚನೆಯಲ್ಲಿರುವಾಗ ಒಂದು ದಿನ ಚಂಚಲನು ತನ್ನ ಓರಗೆಯ ಗೆಳೆಯರೊಡನೆ ನಗರದಲ್ಲಿ ಸುತ್ತಿ ಬರಲು ರಥವನ್ನೇರಿ ಹೊರಟ. ಆತನ ರಥದ ಅಕ್ಕಪಕ್ಕಗಳಲ್ಲಿ ಮಂತ್ರಿಗಳು ಕುಮಾರನನ್ನು ಹೊಗಳುತ್ತ, ಸೂತರು ಬಿರುದಾವಳಿಗಳನ್ನು ಹೇಳುತ್ತ ಬರುತ್ತಿದ್ದರು. ಹೀಗೆ ವಾದ್ಯ ಮೇಳಗಳೊಂದಿಗೆ ಬೀದಿಯಲ್ಲಿ ಹೊರಟಿದ್ದ ಕುಮಾರನ ಪರಿವಾರವನ್ನು ಜನರು ಸಂಭ್ರಮದಿಂದ ವೀಕ್ಷಿಸುತ್ತಿದ್ದರು.

ಈ ಸಮಯದಲ್ಲಿ ಮನುಚೋಲನ ಧರ್ಮಪಾಲನೆಯ ಬುದ್ಧಿಯನ್ನು ಪರೀಕ್ಷಿಸುವುದಕ್ಕಾಗಿಯೇ ಎಂಬಂತೆ ಧರ್ಮವೇ ಹಸುವಿನ ರೂಪವನ್ನು ತಳೆದು ಒಂದು ಕರುವಿನೊಡನೆ ಅದೇ ಬೀದಿಯಲ್ಲಿ ಬಂದಿತು. ಕರು ತಾಯಿಯೊಡನೆ ಚಿನ್ನಾಟವಾಡುತ್ತ ಬರುತ್ತಿರುವಾಗ ಅಕಸ್ಮಾತ್ತಾಗಿ ಕುಮಾರನಿರುವ ರಥದ ಗಾಲಿಯ ಕೆಳಗೆ ಬಿದ್ದು ಪ್ರಾಣ ಬಿಟ್ಟಿತು. ಆಗ ತಾಯಿ ಹಸು ಕರುವಿನ ಬಳಿ ಬಂದು ಮೂಸಿ ನೋಡಿ ಗಳಗಳನೆ ಅಳುತ್ತ ಸ್ವಲ್ಪ ದೂರ ಹೋಗುವುದು. ಮತ್ತೆ ಕರುವಿನ ಬಳಿ ಬಂದು ಮೂಸಿ ನೋಡಿ, ಅಲ್ಲಿ ನೆರೆದಿದ್ದ ಜನರತ್ತ ದೈನ್ಯದಿಂದ ನೋಡುತ್ತ ಅಂಬಾ ಎಂದು ಗೋಳಿಡುತ್ತಿತ್ತು.


ಮನುಚೋಳನು ನಗರದಲ್ಲಿ ಯಾರಿಗೆ ಆಗಲಿ ಅನ್ಯಾಯವಾದರೆ ನ್ಯಾಯ ದೊರಕಿಸಿಕೊಳ್ಳಲು ಅರಮನೆಯ ಮುಂದೆ ಒಂದು ನ್ಯಾಯಘಂಟೆಯನ್ನು ಕಟ್ಟಿಸಿದ್ದನು. ಹಸು ತನಗಾದ ಅನ್ಯಾಯಕ್ಕೆ ನ್ಯಾಯ ಕೇಳಲು ಅರಮನೆಯ ಬಳಿ ಹೋಗಿ ನ್ಯಾಯಘಂಟೆಯನ್ನು ಬಾರಿಸಿತು. ಆ ಘಂಟೆಯ ಧ್ವನಿ ರಾಜಪುತ್ರನ ಮೃತ್ಯುರಾಗವೋ, ಕಾಲನ ಕಂಠದ ಘಂಟಾ ನಿನಾದವೊ ಎಂಬಂತೆ ಮನುಚೋಲನ ಕಿವಿಗೆ ಕೇಳಿಸಿತು. ಘಂಟೆಯ ಧ್ವನಿಕೇಳಿ ಅರಸ ಸ್ವತಃ ಘಂಟೆಯಿದ್ದೆಡೆ ಬಂದು ಹಸು ಘಂಟೆಯನ್ನು ಬಾರಿಸುತ್ತಿರುವುದನ್ನು ನೋಡಿ ಅಚ್ಚರಿಪಟ್ಟು, ಹಸುವಿನ ಶೋಕವೇನೆಂದು ಮಂತ್ರಿಗಳನ್ನು ವಿಚಾರಿಸಿದನು. ಆಗ ಒಬ್ಬ ಮಂತ್ರಿಯು ನಗರದ ಬೀದಿಯಲ್ಲಿ ನಡೆದ ವಿಷಯವನ್ನು ಹೇಳಿದ. ತನ್ನ ಪುತ್ರನು ಎಸಗಿದ ಪಾಪಕೃತ್ಯದ ವಿಷಯವನ್ನು ಕೇಳಿ ಮನುಚೋಳನು ಬಹಳ ದು:ಖಪಟ್ಟನು. ಇದುವರೆಗೆ ಧರ್ಮವನ್ನು ಪಾಲಿಸುತ್ತ ರಾಜ್ಯವಾಳಿದ ನನಗೆ ಇದೆಂಥ ಸಂಕಟ ಬಂದಿತೆಂದು ಹಸುವಿನಂತೆಯೇ ಶೋಕಸಾಗರದಲ್ಲಿ ಮುಳುಗಿದನು. ಪುತ್ರ ವ್ಯಾಮೋಹದಿಂದ ನಾನೇ ಧರ್ಮ ತಪ್ಪಿದರೆ ಲೋಕನಿಂದೆಯನ್ನು ಸಹಿಸುವುದೆಂತು ಎಂದು ಪರಿತಪಿಸುತ್ತಿರುವಾಗ ಮಂತ್ರಿಗಳು ಅರಸನಿಗೆ "ಇಷ್ಟೊಂದು ದು:ಖವೇಕೆ? ಬೇರೆ ಏನಾದರೂ ಉಪಾಯವನ್ನು ಬಲ್ಲವರಿಂದ ತಿಳಿದು ಪಾಪಕ್ಕೆ ತಕ್ಕ ಪ್ರಾಯಶ್ಚಿತ ಮಾಡಿಕೊಂಡರಾಯಿತೆಂದು ಸಮಾಧಾನ ಪಡಿಸಲೆತ್ನಿಸಿದನು. ಆದರೆ ಅರಸನು ನೀವೆಂದಂತೆ ಬೇರೆ ರೀತಿಯಲ್ಲಿ ಪ್ರಾಯಶ್ಚಿತ ಮಾಡಿಕೊಂಡು ಮಗನ ತಪ್ಪನ್ನು ಮುಚ್ಚಿಟ್ಟರೆ ನಾನು ಪಾಲಿಸಿಕೊಂಡು ಬಂದ ಧರ್ಮ

ಕೆಡುವುದಿಲ್ಲವೆ? ಮನುಷ್ಯರಾದರೇನು, ಪ್ರಾಣಿಗಳಾದರೇನು, ಎಲ್ಲರಿಗೂ ನ್ಯಾಯ ಒಂದೇ ಎಂದು ಹೇಳಿದನು. ಅಲ್ಲದೇ ಹಸು ಎಷ್ಟು ನೋವನ್ನುಂಡಿದೆಯೋ ಅಷ್ಟೇ ನೋವನ್ನು ನಾನು ಅನುಭವಿಸಿದಾಗಲೇ ಹಸುವಿಗೆ ತಕ್ಕ ನ್ಯಾಯ ಸಿಕ್ಕಂತಾಗುತ್ತದೆ ಎಂದು ಯೋಚಿಸಿ ಒಬ್ಬ ಮಂತ್ರಿಯನ್ನು ಕರೆದು ಪಾಪಿಯಾದ ನನ್ನ ಮಗನನ್ನೂ ರಥದ ಗಾಲಿಯ ಕೆಳಗೆ ನೂಕಿರಿ ಎಂದು ಹೇಳಿದನು. ಆದರೆ ಆ ಘೋರ ಕಾರ್ಯವನ್ನು ಮಾಡಲು ಅಂಜಿದ ಮಂತ್ರಿಯು ತನ್ನ ಪ್ರಾಣವನ್ನೇ ಕಳೆದುಕೊಂಡನು. ಇದನ್ನು ತಿಳಿದ ಅರಸನು ತಾನೇ ರಥದ ಮೇಲೆ ಸತ್ತ ಕರುವನ್ನಿಟ್ಟುಕೊಂಡು ಮಗನನ್ನು ಬೀದಿಯಲ್ಲಿ ಎಳೆದೊಯ್ದು ರಥದ ಗಾಲಿಯ ಕೆಳಗೆ ನೂಕಿ ಆತನ ಮೇಲೆ ರಥವನ್ನು ಓಡಿಸಿದನು. ಆತನ ಕೊರಳು ತುಂಡಾಗಿ ಬಿದ್ದುದನ್ನು ನೋಡಿದರೂ ಅರಸನು ನಿರ್ಮೋಹದಿಂದಿದ್ದನ್ನು ಕಂಡು ಶಿವನು ಮೆಚ್ಚಿ ಪ್ರತ್ಯಕ್ಷನಾಗಿ ನಿನಗಾವ ವರ ಬೇಕೆಂದು ಕೇಳಲು ಮನುಚೋಳನು ಮೊದಲು ಕರುವಿನ ಪ್ರಾಣವನ್ನು ಬೇಡಿದನು. ಶಿವನು ಕರು ಮತ್ತು ರಾಜಪುತ್ರರ ಪ್ರಾಣವನ್ನಿತ್ತು ಅರಸನಿಗೆ ಇದೇ ರೀತಿ ಧರ್ಮವನ್ನು ಪಾಲಿಸುತ್ತ ಇನ್ನೂ ಕೆಲವು ಕಾಲ ಭೂಮಿಯನ್ನಾಳು ಎಂದು ಹರಿಸಿದನು.

ಈ ದೇವಸ್ಥಾನದಲ್ಲಿ ಮನುಚೋಳನ ಕಥೆಗೆ ಸಂಬಂಧಿಸಿದಂತೆ ೧೦ ಶಿಲ್ಪ (ದೃಶ್ಯ)ಗಳನ್ನು ಕೆತ್ತಿದ್ದಾರೆ. ಅವುಗಳನ್ನು ಕೆಳಗೆ ವಿವರಿಸಲಾಗಿದೆ.

ಕೋಟೆ ಮಲ್ಲೇಶ್ವರ ದೇವಸ್ಥಾನ

ಶಿಲ್ಪ ೧, ೨, ೩



ಶಿಲ್ಪ ೧ : ಇಲ್ಲಿ ಮನುಚೋಳ ಮತ್ತು ಆತನ ಪತ್ನಿ ಸಂತಾನ ಪ್ರಾಪ್ತಿಗಾಗಿ ಶಿವಲಿಂಗವನ್ನು ಪೂಜಿಸುತ್ತಿದ್ದಾರೆ.

ಶಿಲ್ಪ ೨ : ಸೇವಕಿಯರು ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುತ್ತಿದ್ದಾರೆ.

ಶಿಲ್ಪ ೩ : ಇಲ್ಲಿ ಮನುಚೋಳನ ಪತ್ನಿಯು ಮಗವನ್ನು ಅರಸನ ಕೈಗೆ ಕೊಡುತ್ತಿದ್ದಾಳೆ. ಅರಸನು ಮಗುವನ್ನು ಪತ್ನಿಯ ಕೈಯಿಂದ ಪಡೆದು ತೊಡೆಯ ಮೇಲೆ ಕೂಡಿಸಿಕೊಂಡಿದ್ದಾನೆ.

ಚಿತ್ರ

ಶಿಲ್ಪ ೪, ೫



ಶಿಲ್ಪ ೪ : ಇಲ್ಲಿ ಮನುಚೋಳನು ಆಸ್ಥಾನದಲ್ಲಿ ಮಂತ್ರಿಗಳಿಗೆ ಏನನ್ನೊ ನಿರ್ದೇಶಿಸುತ್ತ ಕುಳಿತಿದ್ದಾನೆ. ಪಕ್ಕದಲ್ಲಿ ಒಬ್ಬ ಸೇವಕನು ಖಡ್ಗ ಹಿಡಿದು ನಿಂತಿದ್ದಾನೆ. ಇನ್ನಿಬ್ಬರು ಅರಸನ ಮುಂದೆ ನಿಂತಿದ್ದಾರೆ.

ಶಿಲ್ಪ ೫ : ಇಲ್ಲಿ ರಾಜಪುತ್ರನು ಒಬ್ಬ ಸ್ನೇಹಿತನೊಡನೆ ರಥದ ಮೇಲೆ ಕುಳಿತು ಬೀದಿಯಲ್ಲಿ ಹೊರಟಿದ್ದಾನೆ. ಮುಂದೆ ಪರಿವಾರದವರು ಹೊರಟಿದ್ದಾರೆ.

ಶಿಲ್ಪ ೬ : ರಾಜಪುತ್ರನು ಹೊರಟ ರಥದ ಗಾಲಿಗೆ ಸಿಕ್ಕ ಕರು ಸತ್ತು ಬಿದ್ದಿದೆ.


ಶಿಲ್ಪ ೭ : ಸತ್ತ ಕರುವಿನ ಮುಂದೆ ನಿಂತು ಹಸು ಮೂಸಿ ನೋಡುತ್ತಾ ಕಣ್ಣೀರಿಡುತ್ತಿದೆ.

ಶಿಲ್ಪ ೬, ೭



ಶಿಲ್ಪ ೮ : ಕಥೆಯಲ್ಲಿ ಹಸು ನ್ಯಾಯ ಘಂಟೆಯನ್ನು ಬಾರಿಸುತ್ತದೆ ಎಂದು ಇದೆ. ಆದರೆ ಇಲ್ಲಿ ಹಸು ಅರಸನ ಮುಂದೆ ನಿಂತು ನ್ಯಾಯ ಕೇಳುತ್ತಿದೆ.

ಶಿಲ್ಪ ೮



ಶಿಲ್ಪ ೯ : ಇಲ್ಲಿ ಅರಸನು ಸತ್ತ ಕರುವನ್ನು ರಥದ ಮೇಲಿಟ್ಟುಕೊಂಡು ಬೀದಿಯಲ್ಲಿ ಹೋಗುತ್ತಿದ್ದಾನೆ. ರಾಜಪುತ್ರನ ಮೇಲೆ ರಥದ ಗಾಲಿಯನ್ನು ಹರಿಸಿದ್ದಾನೆ.

ಶಿಲ್ಪ ೧೦ : ಮನುಚೋಳನ ಧರ್ಮಪಾಲನೆಗೆ ಮೆಚ್ಚಿದ ಶಿವನು ಪಾರ್ವತಿಯೊಂದಿಗೆ ನಂದಿಯ ಮೇಲೆ ಕುಳಿತು ದರ್ಶನವಿತ್ತಿದ್ದಾನೆ ಮುಂದೆ ಮನುಚೋಳನು ಕೈಮುಗಿದು ನಿಂತಿದ್ದಾನೆ.

ಶಿಲ್ಪ ೯, ೧೦



ಗ್ರಂಥಋಣ

೧. ಡಾ.ಎಂ.ಎಂ.ಕಲ್ಬುರ್ಗಿ, "ಹರಿಹರನ ರಗಳೆಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯, ಬೆಂಗಳೂರು

೨. ಫ.ಗು.ಹಳಕಟ್ಟಿ, "೭೭೦ ಅಮರ ಗಣಾಧೀಶ್ವರರ ಚರಿತ್ರೆಗಳು", ವಿಜಾಪುರ, ೧೯೫೪

3. ಕಥಾಮಣಿ ಸೂತ್ರ ರತ್ನಾಕರ

❑❑

೧೯

ಹರಪನಹಳ್ಳಿಯ ಸ್ಮಾರಕಗಳಲ್ಲಿ ಗುಡ್ಡದಮಠ

* ಡಾ. ರು.ಮ.ಷಡಕ್ಷರಯ್ಯ

ದಾವಣಗೆರೆಯ ಜಿಲ್ಲೆಯಲ್ಲಿರುವ ಹರಪನಹಳ್ಳಿ ನಗರವು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ಚರಿತ್ರೆಯನ್ನು ನಿರ್ಮಿಸಿಕೊಂಡಿದೆ. ಈ ನಗರವು ೧೭ - ೧೮ನೇ ಶತಮಾನದ ಅವಧಿಯಲ್ಲಿ ಪಾಳೆಯಗಾರರ ರಾಜಧಾನಿಯಾಗಿ ವೈಭವದಿಂದ ಮೆರೆಯಿತು. ತನ್ನ ಕೆಲವು ಐತಿಹಾಸಿಕ ಸಂಗತಿಗಳು ಸ್ಥಳೀಕರ ಮನದಲ್ಲಿ ಇನ್ನು ಮಾಸಿಹೋಗಿಲ್ಲ. ಈ ನಗರದ ಧಾರ್ಮಿಕ ಸ್ಥಿತ್ಯಂತರದಲ್ಲಿ ವೈಷ್ಣವ, ಶೈವ, ವೀರಶೈವ, ಜೈನ, ಮುಸ್ಲಿಂ ಸ್ಮಾರಕಗಳು ಹಾಗೂ ಪರಂಪರೆಗಳು ವಿಶಿಷ್ಟ ಸ್ಥಾನವನ್ನು ಗಳಿಸಿವೆ. ಈ ನಗರದ ದೇವಾಲಯಗಳಲ್ಲಿ ವೀರಭದ್ರ, ಕಾಳಮ್ಮ, ಈಶ್ವರ, ಕೋಟೆಹನುಮಪ್ಪ ವೀರಶೈವ ಮಠಗಳಲ್ಲಿ ಕೆಂಪಯ್ಯನ ಮಠ, ತಗ್ಗಿನಮಠ, ಕಲ್ಮಠ, ಗುರುಪಾದ ದೇವರಮಠ, ಸುರಲ್ ಪಾರದೇವರಮಠ, ಗುಡ್ಡದಮಠ, ಲೌಕಿಕ ಸ್ಮಾರಕಗಳಲ್ಲಿ ಹಾಳು ಅರಮನೆ, ಕೋಟೆ - ಕೊತ್ತಳ, ಕೆರೆ, ಬಾವಿ ಮುಂತಾದವುಗಳು ಪ್ರಸಿದ್ಧಿಯನ್ನು ಪಡೆದಿವೆ. ಇವುಗಳಲ್ಲಿ ಈ ನಗರದ - ಗುಡ್ಡದ ಮಠದ ಚಾರಿತ್ರಿಕ ಸಂಗತಿಯು ಇನ್ನು ಮೌನವಾಗಿ ಉಳಿದಿದೆ ಎಂಬುದು ಸ್ಥಳಿಕರ ವಾದವಾಗಿದೆ. ಈ ಗುಡ್ಡದ ಮಠದ ಅನೇಕ ಅವಶೇಷಗಳು ಕಾರಣಾಂತರದಿಮದ ವಿವಿದೆಡೆಗೆ ಚದುರಿಹೋಗಿವೆ. ಅದರ ಸಮಗ್ರವಾಸ್ತು - ಶಿಲ್ಪ, ದಂತಕಥೆ ಮತ್ತು ಅಲ್ಲಿಯ ಪ್ರಾಚೀನ ಜನವಸತಿಯನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಹರಪನಹಳ್ಳಿ - ಹರಿಹರ ರಸ್ತೆಯ ದಕ್ಷಿಣಕ್ಕೆ ಮತ್ತು ಈ ನಗರದ ಕೆರೆಯ ಪಶ್ಚಿಮಕ್ಕಿರುವ ಗುಡ್ಡದ ಬುಡದಲ್ಲಿ ಹಾಳಾದ ಮಠದ ಸಂಕೀರ್ಣವಿದೆ. ಇದನ್ನು ಗುಡ್ಡದ ಮಠವೆನ್ನುವರು. ಅದರ ಸುತ್ತ ಒಂದು ಕಿರು ಕೆರೆ, ಕೋಟೆ - ಕೊತ್ತಳ, ಜನವಸತಿಯ ನೆಲೆ, ಮಠದ ಕಟ್ಟಡಗಳು, ಸ್ವಾಮಿಗಳ ಸಮಾಧಿಗಳು, ತೆರೆದ ಸ್ತಂಭಮಂಟಪ ಮುಖ್ಯವಾಗಿ ಕಾಣುತ್ತದೆ.

ಜನವಸತಿ ನಿವೇಶನ

ಈ ಮಠದ ಬದಿಗೆ ಸುಮಾರು ನಾಲ್ಕು ಹೆಕ್ಟೇರ ಪ್ರದೇಶದಲ್ಲಿ ಒಂದು ಪ್ರಾಚೀನ ಜನವಸತಿಯ ಹಾಳು ನಿವೇಶನವಿದೆ. ಈ ನಿವೇಶನದಲ್ಲಿ ಬಹುತೇಕವಾಗಿ ಪಾಳೆಗಾರರ ಕಾಲದ ಗಡಿಗೆ - ಮಡಿಕೆಗಳು ಚದುರಿಹೋಗಿವೆ ಮಧ್ಯಯುಗೀನ ಕಾಲದ ಅವಶೇಷಗಳು ಕಡಿಮೆ. ಈ ನೆಲೆಯಲ್ಲಿ ಅಲ್ಲಲ್ಲಿ ಚಿಕ್ಕಪುಟ್ಟ ಗುಂಡಿಗಳು ಮತ್ತು ತಗ್ಗು - ದಿನ್ನೆಗಳಿವೆ. ಈ ನೆಲೆಯಲ್ಲಿ ಕಾಣುವ ಸಾಂಸ್ಕೃತಿಕ ಅವಶೇಷಗಳಿಂದ ಅದರ ಕಾಲಮಾನ ಸು.ಕ್ರಿ.ಶ. ೧೪ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನವೆಂದು ಈ ಕಾಲಮಾನದಲ್ಲಿ ಅಲ್ಲಿ ಹೆಚ್ಚಿನ ಜನವಸತಿಯಿದ್ದಿತ್ತೆಂದು ತಿಳಿಯಬಹುದು. ಈ ಕಾಲದ ಇನ್ನೊಂದು ಜನವಸತಿಯ ನೆಲೆಯು ಈ ನಗರ ಪಕ್ಕದಲ್ಲಿ ಮತ್ತು ನಗರದ ಕೆರೆ ಹಾಗು ಮಹಾವಿದ್ಯಾಲಯಗಳ ಬದಿಗೆ ವ್ಯಾಪಿಸಿದೆ. ಅಲ್ಲಿ ಪಾಳೆಯಗಾರರ ಕಾಲದ ಹಾಳಾದ ಅರಮನೆ, ಕೋಟೆ, ಕೊತ್ತಲಗಳ ಕಟ್ಟಡ ಅವಶೇಷಗಳು ವಿಸ್ತೃತವಾಗಿ ಹರಡಿವೆ.

ಕೆರೆ - ಕೋಟೆ

ಈ ಗುಡ್ಡದ ಮಠದ ಬದಿಗೆ ಗುಡ್ಡದ ಬುಡಕ್ಕೆ ಹೊಂದಿ ಕಿರು ಕೆರೆ ಮತ್ತು ಕೋಟೆಯಿದೆ. ಕೋಟೆಯ ಗೋಡೆಯು ಕಿರು ಎತ್ತರವಾಗಿದೆ. ಅಲ್ಲಲ್ಲಿ ಅದು ಹಾಳಾಗಿ ಹೋಗಿದೆ. ಗುಡ್ಡದ ಒಂದು ಮಠದ ಪ್ರವೇಶದಲ್ಲಿ ಈ ಕೋಟೆಯ ಗೋಡೆಯು ಹಾದುಹೋಗಿದೆ. ಈ ಕೋಟೆ ಗೋಡೆಯು ನಾಯಕರ ಕಾಲದ್ದಾಗಿದೆ. (ಸು.ಕ್ರಿ.ಶ. ೧೫ನೇ ಶತಮಾನ)

ಗುಡ್ಡದ ಮಠ

ಗುಡ್ಡದ ಮಠದ ಸಂಕೀರ್ಣದಲ್ಲಿ ಎರಡು ಮಠಗಳು, ಒಂದು ಪಾಕಸಾಲೆ ಎರಡು ಸಮಾಧಿಗಳು ಮತ್ತು ಒಂದು ಸ್ತಂಭಮಂಟಪವನ್ನು ಒಳಗೊಂಡಿದೆ. ಅವುಗಳ ವಾಸ್ತುವಿನ್ಯಾಸ ಮತ್ತು ಶಿಲ್ಪಾವಶೇಷಗಳು ಹೀಗಿವೆ.



ಮಠ - ೧ : (ಚಿತ್ರ ನಂ. ೧)

ಗುಡ್ಡದ ಮಠ ಸ್ಮಾರಕಗಳಲ್ಲಿ ಈ ಮಠವು ಮುಖ್ಯವಾದದ್ದು ಮತ್ತು ವಿಸ್ತಾರವಾಗಿದೆ. ಉತ್ತರಕ್ಕೆ ಮುಖಮಾಡಿದೆ. ಈ ಮಠ ಆಯಾತಾಕಾರದ ತಳಪಾಯವಿದ್ದು ಅದಕ್ಕೆ ಮೂರು ಅಂಕಣಗಳಿವೆ. ಅವುಗಳು ಕ್ರಮವಾಗಿ ತೆರೆದ ಮುಖಮಂಟಪ, ತೆರೆದ ಪಡಸಾಲೆ ಮತ್ತು ಪೂಜಾ ವಸತಿಗೃಹಗಳಿರುವುವು. ಮುಖಮಂಟಪದ ನೆಲವು ಪಡಸಾಲೆಗಿಂತ ಕೆಳಮಟ್ಟದಲ್ಲಿದೆ. ಅದರ ಮುಂಭಾಗದಲ್ಲಿ ಏಕಸಾಲಿನಲ್ಲಿ ಛತ್ತನ್ನು ಹೊತ್ತ ಎತ್ತರವಾದ ನಾಲ್ಕು ಕಂಬಗಳಿವೆ. ಕಂಬಗಳ ಕಾಂಡಭಾಗದಲ್ಲಿ ಮೂರು ಚೌಕಗಳು, ಮಧ್ಯದಲ್ಲಿ ಉದ್ದನೆಯ ಪಟ್ಟಿಗಳಿವೆ.

ಪಡಸಾಲೆ ಕಟ್ಟೆಯ ಪ್ರವೇಶಕ್ಕೆ ಮೆಟ್ಟಿಲುಗಳಿವೆ. ಪಡಸಾಲೆಯ ಮುಂಭಾಗದಲ್ಲೂ ಏಕಸಾಲಿನಲ್ಲಿ ಈ ಮೇಲಿನಂತಹ ಕಂಬಗಳಿವೆ. ತಲಾ ಒಂದಕ್ಕೆ ಎರಡು ಚೌಕ ಪಟ್ಟಿಗಳಿವೆ. ಪಡಸಾಲೆಗೆ ಹೊಂದಿ ಪೂಜಾವಸತಿ ಕೋಣೆಯಿದೆ. ಮಧ್ಯಭಾಗದಲ್ಲಿ ಪ್ರವೇಶದ್ವಾರವಿದೆ. ಅದರ ಬದಿಗಳಲ್ಲಿ ಗಾಳಿ - ಬೆಳಕು ಪ್ರವೇಶಿಸಲು ಕಿರುಕಿಂಡಿಗಳಿವೆ. ಅದರ ಛಾವಣಿಯ ಅಂಚಿನ ಸುತ್ತ ಇಟ್ಟಿಗೆ - ಗಾರೆಯಿಂದ ನಿರ್ಮಿಸದ ಸ್ವಲ್ಪ ಎತ್ತರದ ಗೋಡೆಯಿದೆ. ಈ ಗೋಡೆಯು ಉತ್ತರ ಮತ್ತು ದಕ್ಷಿಣದ ನಾಲ್ಕು ಮೂಲೆಗಳಲ್ಲಿ ದ್ವಿಮುಖವುಗಳ್ಳ ಕುಳಿತ ನಂದಿ ಶಿಲ್ಪಗಳಿವೆ. ಮಾಳಿಗೆಯ ಮುಂದಿನ ಛಾವಣಿ ಇಳಿಜಾರಾಗಿದೆ. ನಂದಿ ಶಿಲ್ಪಗಳು ಇಟ್ಟಿಗೆ - ಗಾರೆಯಿಂದ ನಿರ್ಮಿಸಲ್ಪಟ್ಟಿವೆ. ಈ ಕಟ್ಟಡವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಛಾವಣಿ ಮೇಲಿನ ಗೋಡೆಯನ್ನು ಗಾರೆ - ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಅದರಲ್ಲಿ ವೃತ್ತಾಕಾರದ ಪಟ್ಟಿಗಳಿವೆ. ಭಿತ್ತಿಯು ಸರಳವಾಗಿದೆ.



ಮಠ - ೨ (ಚಿತ್ರ ನಂ. ೨)

ಮಠ ೧ರ ಸಮಾನಾಂತರವಾಗಿ ಬದಿಗೆ ಪೂರ್ವಕ್ಕೆ ಹಾಳುಬಿದ್ದ ಒಂದು ಮಠವಿದೆ. ಗೋಡೆಯ ಒಳಗಡೆ ಶಿಲಾಸ್ತಂಭಗಳು, ಜಂತಿಗಳು ಉಳಿದಿವೆ.

ಎತ್ತರದ ಅಧಿಷ್ಠಾನವನ್ನು ಹೊಂದಿದ್ದು ಅದರ ಪ್ರವೇಶಕ್ಕೆ ಮೆಟ್ಟಿಲುಗಳಿವೆ. ಈ ಮಂಟಪವು ಉತ್ತರಕ್ಕೆ ಮುಖಮಾಡಿದೆ. ಮಂಟಪದ ಒಳಗಡೆ ನಾಲ್ಕು ಸಾಲುಗಳಲ್ಲಿ ಒಟ್ಟು ಹದಿನಾರು ಕಂಬಗಳಿವೆ. ಅವುಗಳಲ್ಲಿ ಪಾರ್ಶ್ವದ ಗೋಡೆಗಳಿಗೆ ಹೊಂದಿ ಎರಡು ಸಾಲು ಕಂಬಗಳಿವೆ. ಉಳಿದೆರಡು ಸಾಲು ಕಂಬಗಳ ಮೇಲೆ ಉಬ್ಬು ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ಕಂಬಗಳ ಬುಡದಲ್ಲಿ ಪೀಠಗಳು, ಕಾಂಡದಲ್ಲಿ ಎರಡು ಚೌಕಪಟ್ಟಿಗಳಿವೆ. ತಲಾ ಒಂದರ ಚೌಕಭಾಗದ ನಾಲ್ಕು ಮುಖಗಳಲ್ಲಿ ಉಬ್ಬು ಶಿಲ್ಪಗಳಿವೆ. ಮೊದಲನೆಯ ಕಂಬದ ಕೆಳಭಾಗದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಗಣೇಶ, ವೀರಭದ್ರ, ಶಿವಲಿಂಗ ಮತ್ತು ಗೋವರ್ಧನ ಕೃಷ್ಣ ಶಿಲ್ಪಗಳಿವೆ. ಮೇಲಿನ ಭಾಗದ ಚೌಕಮುಖಗಳಲ್ಲಿ ಕ್ರಮವಾಗಿ ಎರಡು ಹಾವಿನ ವೃತ್ತಗಳಲ್ಲಿ ಅರ್ಧಮನುಷ್ಯ ಮತ್ತು ಅರ್ಧಪ್ರಾಣಿರೂಪದ ಪ್ರಾಣಿ ಮತ್ತು ಒಂದು ವೃತ್ತದ ಮಧ್ಯ ತ್ರಿಕೋನಾಕಾರದ ಅಲಂಕಾರವಿದೆ.

ಎರಡನೆಯ ಕಂಬದ ಚೌಕಭಾಗದಲ್ಲಿ ಕೆಲವೇ ಮುಖಗಳಲ್ಲಿ ಚಿತ್ರಗಳಿವೆ. ಉಳಿದ ಮುಖಗಳು ಸರಳವಾಗಿವೆ. ಒಂದು ಚೌಕಪಟ್ಟಿಕೆಯು ನಾಲ್ಕು ಹೂಬಳ್ಳಿಗಳ ಉದ್ದ ಪಟ್ಟಿಯನ್ನು ಹೊಂದಿರುವುದು.

ಮೂರನೆಯ ಕಂಬದ ಕೆಳಗಿನ ಚೌಕಮುಖಗಳಲ್ಲಿ ಕ್ರಮವಾಗಿ ವೀರಭದ್ರ, ಶಿವಲಿಂಗ, ಶೈವ ದ್ವಾರಪಾಲಕ ಮತ್ತು ನಂದಿಯ ಶಿಲ್ಪಗಳಿವೆ. ಮೇಲಿನ ಚೌಕದಲ್ಲಿ ಗಜಲಕ್ಷ್ಮೀ ಮತ್ತು ಮೂರು ವೃತ್ತಾಕಾರದ ಹೂ ಬಳ್ಳಿಗಳ ಅಲಂಕರಣಗಳಿವೆ. ಎರಡನೇಯ ಸಾಲಿನಲ್ಲಿರುವ ಕಂಬಗಳಲ್ಲಿ ಮೊದಲನೇಯ ಕಂಬದ ಕಾಂಡಭಾಗದಲ್ಲಿ ವೃತ್ತಾಕಾರದ ಹೂಬಳ್ಳಿ ಅಲಂಕರಣವುಳ್ಳ ಉದ್ದ ಪಟ್ಟಿಕೆಯಿದೆ. ಎರಡನೇಯ ಕಂಬದ ಕೆಳಭಾಗದ ಚೌಕ ಪಟ್ಟಿಕೆಯಲ್ಲಿ

ಪೂರ್ಣಕುಂಭ ವೀರಭದ್ರ ಚಿತ್ರಗಳಿವೆ. ಉಳಿದೊಂದು ಮುಖದಲ್ಲಿ ಚಿತ್ರಗಳಿಲ್ಲ. ಮೇಲಿನ ಚೌಕಪಟ್ಟಿಯಲ್ಲಿ ಶಿವಲಿಂಗ, ನಂದಿ ಮತ್ತು ಬೇಡರ ಕಣ್ಣಪ್ಪ ಶಿವಲಿಂಗಕ್ಕೆ ಕಾಲಿನಿಂದ ತನ್ನ ಕಣ್ಣುಗಳನ್ನು ಕೊಡಿಸುವ ದೃಶ್ಯವಿದೆ. ಮೂರನೆಯ ಕಂಬದ ಚೌಕಪಟ್ಟಿಯಲ್ಲಿ ಹೂ ಬಳ್ಳಿಯ ಉದ್ದ ಪಟ್ಟಿಕೆ ಇದೆ. ಅದರಲ್ಲಿ ಮೂರು ಮುಖಗಳಲ್ಲಿ ಕುಂಭಗಳಿವೆ.

ಉಳಿದ ಒಂದು ಮುಖದಲ್ಲಿ ವೀರಭದ್ರನಿದ್ದಾನೆ. ಕಾಂಡದ ಮೇಲಿನ ಚೌಕಪಟ್ಟಿಯಲ್ಲಿ ಕ್ರಮವಾಗಿ ವೃತ್ತಾಕಾರದ ಆಕೃತಿ ಒಳಗೆ ತ್ರಿಕೋನ, ವೃತ್ತಾಕಾರದ ಒಳಗೆ ಶಿವಲಿಂಗ, ಪ್ರಾಣಿ - ಮನುಷ್ಯ ರೂಪದ ಪ್ರಾಣಿ (ವ್ಯಾಘ್ರಪಾದ)ಯು ತನ್ನ ಕಾಲಿನಿಂದ ಶಿವಲಿಂಗವನ್ನು ಪೂಜಿಸುತ್ತಿರುವುದು ಮತ್ತು ವೃತ್ತಾಕಾರದಲ್ಲಿ ಹೂ ಬಳ್ಳಿಯ ಅಲಂಕರಣಗಳ ಉಬ್ಬು ಶಿಲ್ಪಗಳಿವೆ. ಕೊನೆಯ ಕಂಬದಲ್ಲಿ ಈ ಮೇಲಿನಂತಹ ಅಲಂಕರಣಗಳು ಮತ್ತು ವೃತ್ತಾಕಾರದ ಹೂ ಬಳ್ಳಿಯ ಉದ್ದವಾದ ಪಟ್ಟಿಕೆಗಳಿವೆ.


ಪಶ್ಚಿಮ ಮುಖದ ಗೋಡೆಯಲ್ಲಿರುವ ಒಂದು ಸಾಲಿನ ಕಂಬಗಳಲ್ಲಿ ಮೂರಕ್ಕೆ ವೃತ್ತಾಕಾರದ ಹೂ ಬಳ್ಳಿಯ ಅಲಂಕರಣವಿದೆ. ತಲಾ ಒಂದು ಗೋಡೆಯ ಮಧ್ಯ ಒಂದೊಂದು ಕಿರು ಗೂಡುಗಳಿವೆ. ಈ ಮಠವನ್ನು ಗ್ರಾನೈಟ್ ಶಿಲೆಯಿಂದ ರಚಿಸಲಾಗಿದೆ. ಸರಳ ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಭಿತ್ತಿಯು ಸರಳವಾಗಿದೆ.



ಪಾಕಸಾಲೆ : (ಚಿತ್ರ ೩)

ಆಯತಾಕಾರ ಪಾಕಸಾಲೆ ಈ ಮೇಲಿನ ಮೊದಲನೇ ಮಠದ ಎದುರಿಗಿದೆ. ಸ್ತಂಭಮಂಟಪಕ್ಕೆ ಹೊಂದಿ ಹೊರ ಅಂಚಿನಲ್ಲಿ ಕಲ್ಲು, ಮಣ್ಣು ಮತ್ತು ಇಟ್ಟಿಗೆಗಳಿಂದ ಗೋಡೆಯನ್ನು ರಚಿಸಿದ್ದು ಅದು ಅಲ್ಲಲ್ಲಿ ಬಿದ್ದು ಹೋಗಿದೆ. ತಳಪಾಯವು ಪೂರ್ವ - ಪಶ್ಚಿಮಾಭಿಮುಖವಾಗಿದ್ದು ಅದರಲ್ಲಿ ಒಂದು ಸಾಲಿನಲ್ಲಿ ಏಳು ಕಂಬಗಳು ಮೂರು ಸಾಲುಗಳಲ್ಲಿವೆ. ಒಟ್ಟು ೨೧ ಕಂಬಗಳಿವೆ. ಕೆಲ ಕಂಬಗಳ ಕಾಂಡಭಾಗದಲ್ಲಿ ಮೂರು ಚೌಕಪಟ್ಟಿ, ಭೋದುಗೆಗಳಿದ್ದರೆ, ಕೆಲವುಗಳು ಸರಳವಾಗಿವೆ. ಅದಕ್ಕೆ ಪೂರ್ವದಲ್ಲಿ

ಪ್ರವೇಶವಿದೆ. ಸ್ವಲ್ಪ ಎತ್ತರದ ಸರಳ ಅಧಿಷ್ಠಾನವನ್ನು ಹೊಂದಿದೆ. ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಛಾವಣಿಯು ಸುತ್ತಲೂ ಇಳಿಜಾರಾಗಿದೆ.



ಸ್ತಂಭಮಂಟಪ (ಚಿತ್ರ ೪)


ಈ ಮೇಲೆ ಹೇಳಿದ ಎರಡನೇ ಮಠದಹತ್ತಿರ ಉತ್ತರಕ್ಕೆ ವಿಶಾಲ ಆವರಣದಲ್ಲಿ ಒಂದು ಸುಂದರವಾದ ತೆರೆದ ಸ್ತಂಭಮಂಟಪವಿದೆ. ಈ ಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಈ ಕಂಬಗಳು ಈ ಮೇಲೆ ಹೇಳಿದ ಕಂಬಗಳಿಗಿಂತ ಭಿನ್ನವಾಗಿವೆ. ಇವು ಕರಿಯ ಸಿಸ್ಟ್ ಶಿಲೆಯದಾಗಿದ್ದು ಕಾಂಡಭಾಗದಲ್ಲಿ ಅನೇಕ ವೃತ್ತಪಟ್ಟಿಕೆಗಳಿವೆ. ಅದರಲ್ಲಿ ಪೀಠ, ಕಾಂಡ, ಚಕ್ರಬೋದಿಗೆ, ಘಂಟಾಬೋದಿಗೆ ಚುತುರ್ಮುಖ ಬೋದುಗೆಗಳಿವೆ. ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಈ ಮಂಟಪದ ಛಾವಣಿಯೂ ಚೌಕಾಕಾರದಲ್ಲಿದ್ದು ಅದರ ನಾಲ್ಕು ಮುಖಗಳಲ್ಲಿ ಇಳಿಜಾರಾದ ಛಜ್ಜವಿದೆ. ಈ ಛಾವಣಿಯ ಮೇಲೆ ಚೌಕಾದ ಸ್ವಲ್ಪ ಎತ್ತರದ ಗೋಡೆಯನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದ್ದು, ಮೂಲೆಯಲ್ಲಿ ದ್ವಿಮುಖವುಳ್ಳ ನಂದಿ ವಿಗ್ರಹಗಳನ್ನು ಕೂಡಿಸಲಾಗಿದೆ. ನಂದಿ ವಿಗ್ರಹಗಳನ್ನು ಗಾರೆಯಿಂದ ನಿರ್ಮಿಸಲಾಗಿದೆ. ಈ ಮಂಟಪದ ನೆಲ ಮತ್ತು ಅಧಿಷ್ಠಾನವು ಅಲ್ಲಲ್ಲಿ ಭಗ್ನಗೊಂಡಿದೆ.

ಈ ಮಂಟಪದಲ್ಲಿರುವ ಕಂಬಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ.



ಸಮಾಧಿ - ೧: (ಚಿತ್ರ ೫)

ಈ ಮೇಲೆ ಹೇಳಿದ ಎರಡನೇ ಮಠದ ಬದಿಗೆ ಪೂರ್ವಕ್ಕೆ ಮೂರು ಕಟ್ಟಡಗಳಿವೆ. ಒಂದನೇಯ ಕಟ್ಟಡವು ಚೌಕವಾದ ಕೋಣೆಯನ್ನು ಹೊಂದಿದೆ. ಈ ಕೋಣೆಯ ಛಾವಣಿಭಾಗ ಮಾತ್ರ ಇಟ್ಟಿಗೆ ಗಾರೆಯಿಂದ ರಚಿತವಾಗಿದ್ದರೆ ಉಳಿದ ಕೆಳಭಾಗವು ಶಿಲೆಯದ್ದಾಗಿದೆ. ಉತ್ತರಕ್ಕೆ ಮುಖಮಾಡಿದ ಈ ಕೋಣೆಯ ಪ್ರವೇಶದ್ವಾರ ಚೌಕಟ್ಟಿನಲ್ಲಿ ಐದು ಸರಳವಾಗಿರುವ ಶಾಖೆಗಳ ಅಲಂಕರಣವಿದೆ. (ಈ ಶಾಖೆಗಳು ಲಲಾಟಪಟ್ಟಿಕೆಯಲ್ಲಿ ಸೇರಿವೆ) ಅದರಲ್ಲಿ ವೃತ್ತಾಕಾರದ ಹೂ ಬಳ್ಳಿಯ ಅಲಂಕರಣವನ್ನು ಹೊಂದಿದೆ. ಭಿತ್ತಿಯು ಸರಳವಾಗಿದೆ. ಸರಳ ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಅದರ ಛಾವಣಿಯ ಸುತ್ತಲಿನ ಅಂಚು ಇಳಿಜಾರಾಗಿದೆ. ಅದರ ಮೇಲೆ ಚಚ್ಚೌಕಾದ ಸ್ವಲ್ಪ ಎತ್ತರದ ಇಟ್ಟಿಗೆ ಮತ್ತು ಗಾರೆಯ ಗೋಡೆಯಿದೆ. ಅದರೆ ಕೆಳಭಾಗದಲ್ಲಿ ಶಿಲೆಯ ಕಿರುಗೋಡೆಯಿದೆ. ಈ ಕೋಣೆಯ ಒಳಗಡೆ ವಿಗ್ರಹಗಳಿಲ್ಲ. ಇದೊಂದು ಸಮಾಧಿಯ ಕಟ್ಟಡ ಆಗಿರುವ ಸಾಧ್ಯತೆಗಳು ಇರುವುದು



ಸಮಾಧಿ ೨: (ಚಿತ್ರ ೬)

ಈ ಮೇಲೆ ಹೇಳಿದ ಸಮಾಧಿ ಕೋಣೆಯ ಬದಿಗೆ ವಿಶಾಲವಾಗಿ ಎತ್ತರವಾದ ಅಧಿಷ್ಠಾನವಿದ್ದು ಮಧ್ಯದಲ್ಲಿ ಚೌಕಾದ ಒಂದು ಕಿರುಕೋಣೆಯಿದೆ. ಅದರ ಛಾವಣಿ ಬಿದ್ದು ಹೋಗಿದೆ ಉತ್ತರಕ್ಕೆ ಪ್ರವೇಶದ್ವಾರವಿದ್ದು ಶಿಲೆಯಿಂದ ಇದನ್ನು ರಚಿಸಲಾಗಿದೆ. ಹೊರಮಗ್ಗಲಲ್ಲಿ ಪ್ರದಕ್ಷಿಣಾಪಥವಿದೆ. ಅದರ ಸುತ್ತಲಿನ ನೆಲಕ್ಕೆ ಶಿಲೆಗಳನ್ನು ಹೊಂದಿಸಲಾಗಿದೆ. ಅದರ ಉತ್ತರಕ್ಕೆ ಅಧಿಷ್ಠಾನಕ್ಕೆ ಹೊಂದಿ ಮೆಟ್ಟಿಲುಗಳನ್ನು ಅಳವಡಿಸಲಾಗಿದೆ.



ಸಮಾಧಿ - ೩ : (ಚಿತ್ರ ೭)

ಈ ಮೇಲೆ ಹೇಳಿದ ಎರಡನೇಯ ಮಠದ ಬದಿಗೆ ಪೂರ್ವಕ್ಕೆ ಕೇವಲ ಅಧಿಷ್ಠಾನವನ್ನು ಹೊಂದಿದ ಚೌಕಾದ ಕಟ್ಟಡವಿದೆ. ಅದರ ಮೇಲಿನ ಭಾಗದ ನೆಲವು ಹಾಳಾಗಿದೆ. ಅದರ ಅಧಿಷ್ಠಾನದ ಭಾಗವು ಮಂಚಬಂಧ ಮಾದರಿಯಲ್ಲಿದೆ. ಇದನ್ನು ಗ್ರಾನೈಟ್ ಶಿಲೆಯಿಂದ ರಚಿಸಲಾಗಿದೆ.

ಈ ಗುಡ್ಡದ ಮಠದ ಕಟ್ಟಡಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇವುಗಳು, ವಿಜಯನಗರ ಹಾಗು ವಿಜಯನಗರ ಪೂರ್ವಕಾಲದ ವಾಸ್ತು ಶೈಲಿಯನ್ನು ಅಧಿಷ್ಠಾನ, ಭಿತ್ತಿ, ಶಿಲಾಸ್ತಂಭಗಳಲ್ಲಿ ಕಾಣಬಹುದು. ಕಟ್ಟಡಗಳ ಮೇಲ್ಛಾವಣಿಯ ಮೇಲೆ ಕಟ್ಟಲಾದ ಪ್ಯಾರಾಪೆಟ್ ಗೋಡೆಗಳು ೧೭ - ೧೮ನೇ ಶತಮಾನದವುಗಳಾಗಿರುವುವು. ಈ ಅಧ್ಯಯನದಿಂದ ಗಮನಿಸಬೇಕಾದ ಮುಖ್ಯ ಅಂಶವು ಪುರಾತನ ವಾಸ್ತುಶೈಲಿಯನ್ನು ಹೊಂದಿರುವ ಈ ಕಟ್ಟಡಗಳನ್ನು ಹರಪನಹಳ್ಳಿ ಪಾಳೆಯಗಾರರ ಆಳ್ವಿಕೆಯ ಅವಧಿಯಲ್ಲಿ ಇವುಗಳನ್ನು ಜೀರ್ಣೋದ್ಧಾರ ಮಾಡಿ ಪುನಃ ಮಠಗಳಾಗಿ ಉಪಯೋಗಿಸಿರುವ ಸಾಧ್ಯತೆಗಳಿವೆ.

ಈ ಎಲ್ಲಾ ಕಟ್ಟಡಗಳಲ್ಲಿ ಅಧಿಷ್ಠಾನ, ಭಿತ್ತಿ ಮತ್ತು ಪ್ಯಾರಪೆಟ್ ವರೆಗಿನ ಭಾಗಗಳನ್ನು ಗ್ರಾನೈಟ್ ಶಿಲೆಯಿಂದ ಮತ್ತು ಛಾವಣಿಭಾಗಗಳನ್ನು ಇಟ್ಟಿಗೆ - ಗಾರೆಗಳಿಂದ ರಚಿತವಾಗಿದೆ. ಮಂಚಬಂಧ ಮಾದರಿಯ ಅಧಿಷ್ಠಾನಗಳಿವೆ. ಭಿತ್ತಿಗಳು ಸರಳವಾಗಿರುವವು. ಎರಡನೇ ಮಠದ ಕಂಬಗಳಲ್ಲಿ ಮಾತ್ರ ಉಬ್ಬು ಚಿತ್ರಗಳಿದ್ದು ಅಲ್ಲಿರುವ ಚಿತ್ರಗಳಲ್ಲಿ ವೀರಭದ್ರನ ಚಿತ್ರಗಳು ಹೆಚ್ಚು ಗಾರೆ ಶಿಲ್ಪಗಳಲ್ಲಿ ದ್ವಿಮುಖ ನಂದಿ ಸಾಮಾನ್ಯ. ಹೀಗಾಗಿ ಈ ಕಟ್ಟಡವು ವೀರಶೈವ ಪರಂಪರೆಗೆ ಸೀಮಿತವಾಗಿದ್ದಿತ್ತೆಂದು ತಿಳಿದು ಬರುತ್ತದೆ. ವೀರಶೈವರಿಗೆ ನಂದಿ ಮತ್ತು ವೀರಭದ್ರ ಇವರ ಮನೆದೇವರು ಎಂಬುವನ್ನು ನೆನಪುಮಾಡಿಕೊಳ್ಳಬಹುದು. ಇದರಿಂದ ಇದೊಂದು ವೀರಶೈವ ಮಠಗಳ ಸಂಕೀರ್ಣವೆಂದು ಹೇಳಬಹುದು. ದೇವಾಲಯದಂತಹ ತಳಪಾಯವುಳ್ಳ ಲಕ್ಷಣಗಳಿಲ್ಲ. ಈಗಿನ ವೀರಶೈವ ಮಠಗಳ ಲಕ್ಷಣಗಳನ್ನು ಇವು ಹೋಲುತ್ತವೆ. ಹಾಗಾದರೆ ಈ ಮಠವು ಯಾರಿಗೆ ಸೇರಿದ್ದು ಅದರ ಮೂಲ ನಾಮಾಂಕಿತವನ್ನು ತಿಳಿಯುವ ಕುತೂಹಲ ಸಹಜವಾಗಿ ಬರುತ್ತದೆ. ಈ ಮಠ ಕುರಿತ ಒಂದು ದಂತಕಥೆಯು ಹೀಗಿದೆ.

ದಂತಕಥೆ

ಹರಪನಹಳ್ಳಿಯ ಪಾಳೆಗಾರರು ಬಹುತೇಕವಾಗಿ ವೈಷ್ಣವ ಮತ್ತು ವೀರಶೈವ ಧರ್ಮಗಳ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ನೀಡಿದ್ದರು. ಈ ಅರಸರ ಅರಮನೆಯಲ್ಲಿ ವೀರಶೈವ ಮತ್ತು ವೈಷ್ಣವ ರಾಜಗುರುಗಳಿದ್ದರು. ಒಮ್ಮೆ ಈ ಮನೆತನದ ಸೋಮಶೇಖರ ರಾಜನಿಗೆ ವೈಷ್ಣವರಾಜಗುರು ಒಬ್ಬ ಆತನ ರಾಣಿಯು ಹೆಣ್ಣುಮಗುವಿಗೆ ಜನ್ಮ ನೀಡಿವಳೆಂದು ಭವಿಷ್ಯನುಡಿದ ಆದರೆ ವೀರಶೈವ ರಾಜಗುರು ಆಕೆಯು ಇಂತಹ ತಿಂಗಳು, ಇಂತಹ ಸಮಯದಲ್ಲಿ ಗಂಡುಮಗುವಿಗೆ ಜನ್ಮ ನೀಡುವಳೆಂದು ಭವಿಷ್ಯ ಹೇಳಿದ ಕೊನೆಗೆ ಈ

ಇಬ್ಬರು ಹೇಳಿದ ಭವಿಷ್ಯದಲ್ಲಿ ವೀರಶೈವ ರಾಜಗುರು ಹೇಳಿದ ಭವಿಷ್ಯವು ನಿಜವಾಯಿತು. ರಾಜನು ಈತನಿಗೆ ಈ ನಗರದ ಪಶ್ಚಿಮದಲ್ಲಿರುವ ಗುಡ್ಡದ ಬುಡದಲ್ಲಿ ಕೆರೆ ಮಠವೊಂದನ್ನು ಕಟ್ಟಿಸಿ ಅವರಿಗೆ ಆಶ್ರಯ ನೀಡಿದ. ಕಾಲ ಕ್ರಮೇಣ ರಾಜಮನೆತನದವರಿಗೆ ಮತ್ತು ವೀರಶೈವ ರಾಜಗುರುಗಳ ನಡುವೆ ಹೆಚ್ಚಿನ ಸ್ನೇಹ ಸಂಬಂಧ ಮತ್ತು ವಿಶ್ವಾಸ ಬೆಳೆಯಿತು. ಇದನ್ನು ಸಹಿಸದ ಅಲ್ಲಿಯ ವೈಷ್ಣವ ರಾಜಗುರು, ವೀರಶೈವ ರಾಜಗುರುವಿನ ಮೇಲೆ ದ್ವೇಷ, ಮತ್ಸರ ಹೆಚ್ಚಾಯಿತು. ವೀರಶೈವ ರಾಜಗುರು ಅರಮನೆಯಲ್ಲಿ ರಾಜಕುಮಾರನಿಗೆ ರಾಣಿಯ ಸಮ್ಮುಖದಲ್ಲಿ ಪಾಠ - ಪ್ರವಚನಗಳನ್ನು ನಿತ್ಯ ಹೇಳುತ್ತಿದ್ದನು. ಇದರಿಂದ ರಾಣಿಯು ಈ ಗುರುಗಳಿಗೆ ಅಪಾರ ಶ್ರದ್ಧೆ, ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಳು. ಅವರ ವಿಶ್ವಾಸಕ್ಕೂ ಪಾತ್ರಳಾದಳು. ಇದನ್ನು ಗಮನಿಸಿದ ವೈಷ್ಣವ ರಾಜಗುರು ರಾಜನಿಗೆ ವೀರಶೈವ ಗುರು ಮತ್ತು ರಾಣಿಯರ ನಡುವೆ ಗುಪ್ತ ಸಂಬಂಧವಿದೆ ಎಂದು ಆರೋಪಿಸಿವನು. ಈ ವಿಷಯವನ್ನು ಕೇಳಿದ ತಕ್ಷಣ ರಾಜನು ವೀರಶೈವ ಗುರುವಿನ ಮೇಲೆ ಕೋಪಿಷ್ಠನಾಗಿ ತಕ್ಷಣ ರಾಜಭಟರನ್ನು ಕರೆದನು. ವೀರಶೈವ ಗುರುವನ್ನು ಹಿಡಿದು ಎಳೆದುಕೊಂಡು ಹೋಗಿ ಆ ನಗರದ ಉತ್ತರಕ್ಕಿರುವ ಗೋಸಾಯಿ ಗುಡ್ಡದ ಮೇಲೆ ತೆಗೆದುಕೊಂಡು ಹೋಗಿ ಆತನ ರುಂಡವನ್ನು ಕಡಿದುಹಾಕಿರೆಂದು ಆಜ್ಞೆವಿಧಿಸಿದನು. ಆ ಭಟರು ಆ ಗುರುವನ್ನು ಹಿಡಿದುಕೊಂಡು ಗೋಸಾಯಿ ಗುಡ್ಡದ ಮೇಲೆ ಕರೆದುಕೊಂಡುಹೋಗಿ ರಾಜಾಜ್ಞೆಯನ್ನು ತಿಳಿಸಿದರು. ಈ ವಿಷಯವನ್ನು ತಿಳಿದ ಆ ಗುರುವು ಕೆಲವು ನಿಮಿಷ ತಾನು ಕುಳಿತು ಧ್ಯಾನ ಮಾಡಲು ಪರವಾನಿಗೆಯನ್ನು ಪಡೆದು ಅಲ್ಲಿ ಕುಳಿತುಕೊಂಡನು. ಆತನು ಕುಳಿತು ಧ್ಯಾನಮಾಡುವಾಗ ಆತನ ಪ್ರಾಣವು ಹಾರಿಹೋಯಿತು. ಇದನ್ನು ಗಮನಿಸಿದ ರಾಜಭಟರು ವಿಸ್ಮಿತರಾಗಿ ಭಯಗ್ರಸ್ಥರಾದರು.

ವೀರಶೈವ ರಾಜಗುರುವಿನ ತಲೆಯನ್ನು ರಾಜನು ಕಡಿಸಿದನೆಂಬ ವಿಷಯ ನಗರದಲ್ಲಿ ಮತ್ತು ಆತನ ಮನೆಗೆ, ಮಠಕ್ಕೆ ಹಬ್ಬಿತು. ಆತನ ಮಠ ಮನೆಯಲ್ಲಿದ್ದ ಪರಿವಾರದವರಿಗೆ ದಿಕ್ಕೂ ತೋಚದಾಯಿತು. ಈ ಗುರುವಿನ ತಾಯಿಯು ಅಂದು ಅಲ್ಲಿದ್ದು ನಾಗರಪಂಚಮಿಯ ನಿಮಿತ್ಯ ಉಂಡಿಗಳನ್ನು ಕಟ್ಟಲು ಎಲ್ಲಾ ಸಾಮಗ್ರಿಗಳನ್ನು ಮುಂದಿಟ್ಟುಕೊಂಡು ಕುಳಿತಿದ್ದಳು. ಈ ವಿಷಯ ಕೇಳಿದ ತಕ್ಷಣ ದಿಘ್‌ಬ್ರಾಂತಳಾಗಿ ರಾಜನ ಮೇಲೆ ಸಿಟ್ಟು ಉಕ್ಕಿಬಂದಿತು. ಅಲ್ಲಿದ್ದ ಸಾಮಾನುಗಳನ್ನು ಬೀದಿಗೆ ಎಸೆಯುತ್ತ ರಾಜವಂಶವನ್ನು ಶಪಿಸುತ್ತ ಹುಚ್ಚಿಯಂತೆ ಚೀರಾಡತೊಡಗಿದಳು. ಅಲ್ಲಿಯ ಪರಿವಾರ ರಾಜ ಕಟ್ಟಿಸಿದ ಈ ಮಠವನ್ನೂ ಕೆಡವ ತೊಡಗಿದರು. ಆ ಕಡೆ ರಾಜನ ಅರಮನೆಯಲ್ಲಿ ರಾಣಿಯು ಈ ವಿಷಯವನ್ನು ತಿಳಿದು ರಾಜನನ್ನು ವಿಚಾರಿಸಿದಳು. ರಾಜನು ತನ್ನ ಪತಿ ವ್ರತತ್ವವನ್ನು ಪರೀಕ್ಷಿಸಲು ಅವಳ ಕೈಯಲ್ಲಿ ಕೆಂಡವನ್ನು ತನ್ನ ಪರಿವಾರದ ಎದುರಿಗೆ ಹಾಕಿಸಿದ. ಅದರಿಂದ ಆಕೆಯ ಕೈ ಸುಡಲಿಲ್ಲ. ಇದನ್ನು ಗಮನಿಸಿದ ರಾಜನು ಪಶ್ಚಾತ್ತಾಪದಿಂದ "ರಾಜಭಟರನ್ನು ಮರಳಿ ಕರೆಯಿಸಿ, ವೀರಶೈವ ರಾಜಗುರುವಿಗೆ ನೀಡಿದ ತನ್ನ ಆಜ್ಞೆಯು ತಪ್ಪಾಗಿದೆ ಆತನನ್ನೂ ಮರಳಿ

ಜೀವಂತವಾಗಿ ಕರೆತರಲು ಆದೇಶ ನೀಡಿದ. ಅಷ್ಟೋತ್ತಿಗಾಗಲೇ ಗುರುವಿನ ಪ್ರಾಣ ಹೋಗಿರುವ ಸುದ್ದಿ ಕೇಳಿದ. ಕೊನೆಗೆ ತಾನು ಘೋರ ಪಾಪಕೃತ್ಯವನ್ನು ಎಸಗಿದೆ. ಅದನ್ನು ಪರಿಹರಿಸಿಕೊಳ್ಳಲು ರಾಜಗುರುವಿನ ಮಠಕ್ಕೆ ಧಾವಿಸಿದ. ಅಲ್ಲಿಯ ದುಃಖಮಯ ದೃಶ್ಯವನ್ನು ನೋಡಿ ಕಂಗಾಲಾದ ಗುರುವಿನ ತಾಯಿಯನ್ನು ಹುಡುಕಿಸಿದ ಅಷ್ಟೋತ್ತಿಗೆ ಮಠವನ್ನು ಹಾಳು ಗೆಡವಲಾಗಿತ್ತು. ಈ ಮಠವನ್ನು ಬಿಟ್ಟು ಈಗಿನ ಕೂಡ್ಲಿಗಿ ತಾಲೂಕಿನ ಜೋಗಿಕಲ್ಲು ಗ್ರಾಮದಲ್ಲಿ ಒಂದು ಮಠವನ್ನು ಕಟ್ಟಿಸಿ ಅದಕ್ಕೆ ದತ್ತಿ ದಾನಗಳನ್ನು ನೀಡಿದನು.

ಮುಂದೆ ಈ ಮನೆತನದವರು ಜೋಗಿಕಲ್ಲಿನ ಮಠದಲ್ಲಿ ವಾಸಮಾಡತೊಡಗಿದರು. ಇದರಿಂದ ಅವರಿಗೆ ಜೋಗಿಕಲ್ಲು ಮಠದವದರೆಂಬ ಹೆಸರು ಬಂದಿತು. ಮುಂದಿನ ತಲೆಮಾರಿನವರು ಉಜ್ಜಯಿನಿ ಗ್ರಾಮಕ್ಕೆ ಆಗಮಿಸಿದರು. ಅವರ ಮನೆತನದ ಶ್ರೀ ಗುರುಸಿದ್ಧಯ್ಯನವರು ಉಜ್ಜಯನಿ ಸಿದ್ಧರ್ಮ ಪೀಠದಲ್ಲಿ ಅಪಾರ ಸೇವೆಯನ್ನು ಸಲ್ಲಿಸಿದರು ಎಂಬೆಲ್ಲ ಕಥೆಯನ್ನು ಈ ಮನೆತನದವರು ಹೇಳುತ್ತಾರೆ.

ಈ ಗುಡ್ಡದ ಮಠವು, ಈ ಮೇಲೆ ನಿರೂಪಿಸಿದ ಕಥೆಯಿಂದ ಈಗಿನ ಜೋಗಿಕಲ್ಲು ಮಠದವರಿಗೆ ಸೇರಿತ್ತೆಂದು ಹೇಳಬಹುದು.

ಇನ್ನೊಂದು ಹೇಳಿಕೆಯಲ್ಲಿ ಹರಪನಹಳ್ಳಿಯಲ್ಲಿ ಮಹಂತಮಠವಿತ್ತು. ಈ ಗುಡ್ಡದ ಮಠವೇ ಆ ಮಹಂತಮಠವಿರಬಹುದೆಂದು ಹೇಳುವರು.

ಈ ಎರಡು ಹೇಳಿಕೆಗಳಲ್ಲಿ ಮೊದಲನೆಯದು ಸರಿ ಎನಿಸುತ್ತದೆ. ಏಕೆಂದರೆ ಇಂದಿಗೂ ಅಲ್ಲಿಯ ಪಾಳೆಗಾರರ ಚರಿತ್ರೆಯ ಬಗ್ಗೆ ಅಲ್ಲಿಯ ಜನರು ಅನೇಕ ವಿಷಯಗಳನ್ನು ಹೇಳುವುದ ರಿಂದ ಮತ್ತು ಆ ಗುಡ್ಡದ ಮಠದ ಅವಶೇಷಗಳು ಈ ಕಾಲಮಾನಕ್ಕೆ ಸೇರುವುದರಿಂದ ಹಾಗೂ ಈ ಮಠದ ವಾಸ್ತು ಶಿಲ್ಪದಲ್ಲಿ ವೀರಭದ್ರ - ನಂದಿಗಳಿಗೆ ಪ್ರಧಾನ್ಯತೆ ಕೊಟ್ಟಿರುವುದ ರಿಂದ ಇದು ಇಂದಿನ ಜೋಗಿಕಲ್ಲು ಮಠದ ವಂಶಸ್ಥರಿಗೆ ಸೇರಿದ್ದೆಂದು ತಿಳಿಯಬಹುದು.

ಕೃತಜ್ಞತೆಗಳು

ಈ ಮಠದ ಸ್ಮಾರಕವನ್ನು ಸುಮಾರು ಎರಡು ದಶಕಗಳ ಹಿಂದೆ ಅಧ್ಯಯನ ಕೈಕೊಳ್ಳಲು ಮೊದಲು ಹರಪನಹಳ್ಳಿಯ ತೆಗ್ಗಿನಮಠದ ಶ್ರೀ ಷ॥ ಚಂದ್ರಮೌಳಿ ಶಿವಾಚಾರ್ಯ ಸ್ವಾಮಿಗಳು ಆರ್ಥಿಕ ನೆರವನ್ನು ನೀಡಿದ್ದರು. ಅದಕ್ಕಾಗಿ ಅವರಿಗೆ ಮತ್ತು ದಂತಕಥೆಯನ್ನು ತಿಳಿಸಿದ ಶ್ರೀ ಗುರುಸಿದ್ಧಯ್ಯನವರಿಗೆ ಈ ಲೇಖನವನ್ನು ವಿಜಯನಗರ ಉತ್ಸವದ ವಿಚಾರ ಸಂಕಿರಣದಲ್ಲಿ ಮಂಡಿಸಲು ಅವಕಾಶ ನೀಡಿದ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯ ನಿರ್ದೇಶಕರಾದ ಡಾ.ಎಂ.ವಿ.ಕೃಷ್ಣಪ್ಪ ಇವರಿಗೆ ಕೃತಜ್ಞತೆಗಳು.

❑❑

೨೦

ಜೆಡೆಯ ಶಂಕರದೇವ ಮತ್ತು ಹಂಪೆ

* ಡಾ. ಮೃತ್ಯುಂಜಯ ರುಮಾಲೆ

ಜೆಡೆಯ ಶಂಕರದೇವ - ಬಸವಪೂರ್ವದ ಕೊಂಡಗುಳಿ ಕೇಶಿರಾಜನಿಗಿಂತಲೂ ಮುಂಚೆಯಿದ್ದ ಶಂಕರದಾಸಿಮಯ್ಯನೆಂಬ (ಕ್ರಿ.ಶ. ೧೦೨೫ - ೧೧೨೫) ಶರಣರ ಆರಾಧ್ಯದೈವ. ಶಂಕರ ದಾಸಿಮಯ್ಯನ ಲಭ್ಯ ಐದು ವಚನಗಳಿಂದ (೯ನೇ ಸಂಪುಟ, ೧೨೮ - ೧೩೨ನೇ ವಚನಗಳು) ತಿಳಿಯುವ 'ನಿಜಗುರು ಶಂಕರದೇವ' ಅಂಕಿತವು ಜೆಡೆಯ ಶಂಕರದೇವನ ಪ್ರಭಾವವನ್ನು ತಿಳಿಸುತ್ತವೆ. ವಿಶೇಷವಾಗಿ ಒಂದು ವಚನ (೯ - ೧೩೦) 'ನಿಜಗುರು ಶಂಕರದೇವನ ಶರಣ ತಾನು' - ಎಂಬುದರಲ್ಲಿ ಇದು ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ.

ಜೆಡೆಯ ಶಂಕರದೇವ - ಎಂಟು ಶಾಸನಗಳಲ್ಲಿ ಮತ್ತು ಕೆಲವು ಪ್ರಮುಖ ಶರಣ ಕಾವ್ಯಗಳಲ್ಲಿಯೂ ಉಲ್ಲೇಖವಾಗಿದೆ. ಪ್ರಾಚೀನ ಶಾಸನವೆಂದರೆ - ಕ್ರಿ.ಶ. ೧೦೧೨ರ ನವಿಲೆಯ ಶಾಸನ. ಪ್ರಾಚೀನ ಸಾಹಿತ್ಯಕೃತಿಯೆಂದರೆ ಹರಿಹರನ ರಗಳೆಗಳು. ಹರಿಹರನ 'ಶಂಕರ ದಾಸಿಮಯ್ಯನ ರಗಳೆ' ಮತ್ತು 'ಪಂಪಾಕ್ಷೇತ್ರದ ರಗಳೆ' - ಎಂಬ ಎರಡೂ ರಗಳೆಗಳಲ್ಲಿ ಉಲ್ಲೇಖವಾಗುತ್ತಿರುವ 'ಜೆಡೆಯಶಂಕರದೇವ' ಬೇರೆ ಬೇರೆಯವೇ. 'ಶಂಕರ ದಾಸಿಮಯ್ಯನ ರಗಳೆ'ಯಲ್ಲಿ ಉಲ್ಲೇಖವಾಗಿರುವ ಜೆಡೆಯಶಂಕರದೇವ ಶಂಕರದಾಸಿಮಯ್ಯನ ಗುರುವಾಗಿದ್ದರೆ, 'ಪಂಪಾಕ್ಷೇತ್ರ ರಗಳೆ'ಯಲ್ಲಿ (ಪುಟ - ೫೦೯ ಉಲ್ಲೇಖವಾಗಿರುವ ಜೆಡೆಯಶಂಕರದೇವ ಹಂಪೆಯಲ್ಲಿ ಆ ಕಾಲದಲ್ಲಿದ್ದ ಸ್ಥಾವರದೈವವನ್ನು ಕುರಿತದ್ದು.

ಪ್ರಸ್ತುತ ಲೇಖನದ ಉದ್ದೇಶಕ್ಕೆ ಅನುಗುಣವಾಗಿ ಹರಿಹರನ ರಗಳೆಗಳನ್ನು ಗಂಭೀರವಾಗಿ ನೋಡುವ ಅಗತ್ಯವಿದೆ. ಶಂಕರದಾಸಿಮಯ್ಯನ ರಗಳೆಯಲ್ಲಿ ಶಂಕರ ದಾಸಿಮಯ್ಯನಿಗೆ ಜೆಡೆಯಶಂಕರದೇವ ಉಪದೇಶ ಮಾಡಿದ ಮತ್ತು ಧೀಕ್ಷೆ ನೀಡಿದ ವಿವರಗಳಿವೆ. ಒಮ್ಮೆ ಶಂಕರ ದಾಸಿಮಯ್ಯನ ಕನಸಿನಲ್ಲಿ ಜೆಡೆಯಶಂಕರದೇವ ಬಂದು -

'ಎಲೆ ಮಗನೆ ಚಳಿಮಳಿಯೊಳೆಡೆಯಾಡಲೇಕಯ್ಯ
ನಲಿವಿನಿಂದಲು ನೀನು ನಮ್ಮೂರ್ಗೆ ಬಾರಯ್ಯ
ಬಂದಡುಪದೇಶಮಂ ಮಾಡಿ ಕರುಣೆಪೆನೆಂದು (ಪುಟ - ೨೭೮
....
ಒಂದು ದೆವಸಂ ನೇಮವಂ ಮಾಡುತಿರ್ಪಲ್ಲಿ
ಇಂದುಧರ ನಿಂತೆಂದನೊಲಿದು ಕರುಣದೊಳಲ್ಲಿ
ನಾಳೆ ಉಪದೇಶಮಂ ಮಾಡಿದಪೆನೆಲೆ ಮಗನೆ
ನಾಳೆ ನೆರೆ ಶುದ್ಧಾಂಗ ನಾಗಿರ್ಪುದೆಲೆ ಮಗನೆ. (ಅಲ್ಲೇ,)

ಎಂದು ಶಂಕರದಾಸಿಮಯ್ಯನಿಗೆ ಜೆಡೆಯ ಶಂಕರದೇವನು ದೀಕ್ಷೆನೀಡಿದ ಘಟನೆಯ ಚಿತ್ರವಿದೆ. ಜೊತೆಗೆ, ಶಂಕರದೇವನಿಂದ ಶಂಕರದಾಸಿಮಯ್ಯ ನೊಸಲಗಣ್ಣು ಪಡೆದ (ಪುಟ - ೨೭೯) ಪವಾಡ ಸದೃಶ ಘಟನೆಯ ವಿಸ್ತೃತ ಚಿತ್ರಣವೂ ರಗಳೆಯಲ್ಲಿದೆ. ಹರಿಹರ - ಜೆಡೆಯ ಶಂಕರದೇವನನ್ನು ಒಬ್ಬ ಐತಿಹಾಸಿಕ ವ್ಯಕ್ತಿಯೆಂಬಂತೆ ಚಿತ್ರಿಸಿದ್ದಾನೆ.

ಭೀಮಕವಿ ತನ್ನ ಬಸವ ಪುರಾಣದಲ್ಲಿ (೨೨ನೇ ಸಂಧಿ, ೪ನೇ ಕಾಂಡ, ಪುಟ - ೩೩೦) 'ಧರೆಯೊಳುಪ್ಪುವ ಜೆಡೆಯಶಂಕರವರ ಮಹಾಸ್ಥಾನದೊಳಮಿತ .....' ಶಂಕರ ದಾಸಿಮಯ್ಯ ನಿದ್ದಂತೆ ಹೇಳುತ್ತಾನೆ. ಆದರೆ, ಜೆಡೆಯಶಂಕರದೇವನ 'ಐತಿಹಾಸಿಕತೆ'ಯ ಬಗ್ಗೆ ಸ್ಪಷ್ಟತೆಯಿಲ್ಲ. ಬಸವಪುರಾಣದ ಸಂಪಾದಕರು (ಡಾ. ಆರ್.ಸಿ.ಹಿರೇಮಠ) - 'ಅನುಬಂಧ'ದ ವ್ಯಕ್ತಿವಾಚಕ ಪದಗಳ ಸೂಚಿಯಲ್ಲೂ ಜೆಡೆಯಶಂಕರದೇವನನ್ನು ಐತಿಹಾಸಿಕನಲ್ಲ ಎಂಬ ಕಾರಣದಿಂದ ಸ್ವೀಕರಿಸಿಲ್ಲ.

ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ' (ಭಾಗ - ೨, ಪುಟ - ೯೬)ವು ಶಂಕರದಾಸಿಮಯ್ಯನು ಜೆಡೆಯಶಂಕರೇಶ್ವರನಿಂದ 'ವೀರಶೈವೋಪದೇಶಮಂ ಪಡೆದು ಅಲ್ಲಿಂದ ಕಲ್ಯಾಣಕ್ಕೆ ಬಂದ' - ಎಂಬುದಾಗಿ ತಿಳಿಸುತ್ತದೆ. (ಶರಣರ ಆ ಕಾಲದ ಬದುಕಿನ ಕಥಾ ಪ್ರಸಂಗಗಳನ್ನು ಸಂಗ್ರಹಿಸಿ ಈ ಕೃತಿ ಬರೆದಿರುವುದಿರಿಂದ 'ಐತಿಹಾಸಿಕತೆ'ಗೆ ಈ ಕೃತಿಯ ಅಂಶವನ್ನು ಗಂಭೀರವಾಗಿ ಪರಿಗಣಿಸಲಾಗದು)

ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ'ಯು ಹಂಪೆಯ ಪರಿಸರದಲ್ಲಿದ್ದ ಸ್ಥಾವರ ದೈವವನ್ನು 'ಪಂಪಾಕ್ಷೇತ್ರ ಮಹಿಮೆ'ಯಲ್ಲಿ '...ನಿರುಪಮಿತ ಜೆಡೆಯಶಂಕರದೇವರುಂ ...' (ಸಂಧಿ - ೩೮, ಪುಟ - ೪೩೬) - ಎಂದು ಉಲ್ಲೇಖಿಸುತ್ತದೆ.

ಹರಿಹರ ಮತ್ತು ಲಕ್ಕಣದಂಡೇಶರುಗಳು ಹಂಪೆಯ ಪರಿಸರದವರಾದ್ದರಿಂದ ಅವರ ಉಲ್ಲೇಖ ಗಮನಾರ್ಹವೆನಿಸುತ್ತದೆ.

ಹಂಪೆಯ ಪರಿಸರದಲ್ಲಿರುವ 'ಜಡೆಯ ಶಂಕರದೇವರ ದಿಡ್ಡಿಶ್ರೀ' ಎಂಬ ಶಾಸನವು ಹರಿಹರ ಮತ್ತು ಲಕ್ಕಣ್ಣದಂಡೇಶರ ಉಲ್ಲೇಖಗಳೊಂದಿಗೆ ಸಮಾಲೋಚಿಸುವಂತೆ ಪುಷ್ಟಿ ನೀಡುತ್ತದೆ. ಈ ಲೇಖನ 'ಹಂಪೆಯ ಜೆಡೆಯ ಶಂಕರದೇವ'ನನ್ನು ಅಭಿಜ್ಞಿಸಲು (Identity) ದೊರಕುವ ಪ್ರಮುಖ ಶಾಸನಿಕ ದಾಖಲೆಯಾಗಿದೆ.

JadeyaSankara devara diddi (Pt. XLI)- On a big boulder on the present road fron Kamalapuram to Hampi is a short inscription Which reads JadeyaSankara devara diddi. It refers to the adjacent entrance in the fortification Which is now in dilapidated condition located near the popularly known akkatangiyara kallu (meaning Sisters boulders). This is named after the God JadeyaSankara, another name for siva (Pp. 97) (Vijayanagar- Progress of Research- 1983-84)

ಶರಣರನ್ನು ಮೊದಲು 'ಐತಿಹಾಸಿಕ'ವಾಗಿ ದಾಖಲಿಸುವ ಹರಿಹರನ 'ಶಂಕರದಾಸಿಮಯ್ಯನ ರಗಳೆ'ಯ ಜೆಡೆಯಶಂಕರದೇವ ಮತ್ತು 'ಪಂಪಾಕ್ಷೇತ್ರ ರಗಳೆ', 'ಶಿವತತ್ವ ಚಿಂತಾಮಣಿ' ಹಾಗು 'ಹಂಪೆಯ ಶಾಸನ' ಇವುಗಳನ್ನು ಎರಡು ಗುಂಪುಗಳಲ್ಲಿ ನೋಡಬಹುದು.

ಹರಿಹರ - ಲಕ್ಕಣ್ಣದಂಡೇಶ ಹೇಳುವ ಪ್ರಕಾರ, ಹಂಪೆಯ ಶಂಕರದೇವ'ನ ಒಂದು ದೇವಸ್ಥಾನ ಅಥವಾ ನೆಲೆಯ ಆವಾಸದ ಕುರುವು ಹಂಪೆಯಲ್ಲಿ ಇದ್ದಿರಬಹುದು. ಶಾಸನ ಹೇಳುವುದು 'ಜೆಡೆಯ ಶಂಕರದೇವರ ದಿಡ್ಡಿಶ್ರೀ' ಎಂದು 'ಸಂದರ್ಶನ ಮಾದರಿ'ಯ ಉಲ್ಲೇಖವನ್ನು ಶಾಸನ ಜೆಡೆಯಶಂಕರದೇವನ ದೇವಾಲಯ ಅಥವಾ ಸ್ಥಾವರ ದೈವವನ್ನು ಕುರಿತು ಹೇಳುತ್ತದೆ ಎನ್ನುವುದಕ್ಕಿಂತಲೂ ನೆಲೆಯ ಅಥವಾ ಆವಾಸವನ್ನು ಹೇಳುತ್ತದೆ ಎಂದೆನಿಸುತ್ತದೆ.

ಮೂಲ ವಿರೂಪಾಕ್ಷನ ಬಲಭಾಗದ 'ಪಂಚಲಿಂಗ, ತ್ರಿಲಿಂಗ' - ಗಳಿರುವ ಹಾಸುಗಲ್ಲಿನ ಮೇಲೆ ಬಿಕ್ಷಟಪ್ಪಯ್ಯನ ಗೋಪುರಕ್ಕೆ ಹೋಗುವ ದಾರಿಯಲ್ಲಿ ಹಾಸುಗಲ್ಲು ಸೀಳಿಕೊಂಡು ಸ್ವಲ್ಪ ಎತ್ತರದ (ಮೂಲ ವಿರೂಪಾಕ್ಷನಿಂದ ಸು. ೬೦ ಮೀ. ದೂರದಲ್ಲಿ) ಸ್ಥಳದಲ್ಲಿ 'ಸ್ವಸ್ತಿ ಶ್ರೀ .....' ಎಂದು ಪ್ರಾರಂಭವಾಗುವ ೭೧/೨ ಸಾಲಿನ ಅಸ್ಪಷ್ಟ ಶಾಸನವಿದೆ. ೬ನೇ ಸಾಲಿನಲ್ಲಿ 'ಜೆಡೆಯಶಂಕರದೇವರಿಗುಂ' ಎಂಬುದನ್ನು ಸ್ಪಷ್ಟವಾಗಿ ಓದಬಹುದು. ರಾಣಿ ಬುಕ್ಕಯವನು ತನ್ನ ಗುರು ಬಾಸ್ಕರ ದೇವಯ್ಯ ಹಾಗು ಮಹಾರಾಜ ಹರಿಹರನಿಗೆ ಪುಣ್ಯವಾಗಬೇಕೆಂದು ಜೆಡೆಯಶಂಕರದೇವರಿಗೆ ದೀಪಮಾಲೆಯ ಕಂಬವನ್ನು ನಿಲ್ಲಿಸಿದಳೆಂದು ಶಾಸನ ಉಲ್ಲೇಖಿಸುವುದು. (ಅ ಯಾರಿ ಇವ; ೧೯೦೮, ೧೯೦೭ರ ಸಂಖ್ಯೆ: ೫೦೧: ೧೯೩೪ - ೩೫ ಸಂ.ಬಿ. ೩೫೦; ಸೌಇಇ XXIII ಸಂಖ್ಯೆ ೫೦೧, ವಿಜಯನಗರ (ಹಂಪೆ) ಶಾಸನಗಳು, ಕರ್ನಾಟಕ ಶಾಸನ ಸಂ.೧, ಸಂ.೨೦೯, ೧೯೯೬.

ಮೊದಲ ಹೇಳಿದ ಶಾಸನ - 'ಅಕ್ಕತಂಗಿಯರ ಕಲ್ಲು' ಸಮೀಪದಲ್ಲಿದೆ. ಅಲ್ಲಿರುವ 'ದಿಡ್ಡಿ' ಎಂಬ ಶಬ್ದ ಆವಾಸಸೂಚಿ ಶಬ್ದವಾಗಿದೆ. ಇಂಥ ಶಿಲಾಲೇಖಗಳನ್ನು ಹಂಪೆಯಲ್ಲಿ ಮತ್ತೆ ಕೆಲವು ಕಡೆ (ಹೊಸತು ಹೊಸತು, ಪುಟ - ೩೦೮) ಕಾಣಬಹುದು.

ಹಂಪೆಯ ಈ ಎರಡು ಶಾಸನಗಳಲ್ಲಿರುವ ಉಲ್ಲೇಖವನ್ನು ಗಮನಿಸಿದರೆ ಜೆಡೆಯ ಶಂಕರದೇವ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದು, ವಿಜಯನಗರ ಸಾಮ್ರಾಜ್ಯ ಪೂರ್ವದಲ್ಲಿ ಪೂರ್ಣಪ್ರಮಾಣದ ಶೈವಕ್ಷೇತ್ರವಾಗಿದ್ದ ಹಂಪೆಗೆ ಬಂದು ಸ್ವಲ್ಪಕಾಲ ತಂಗಿ ಹೋಗಿರಬಹುದೇ? ಎಂಬ ಅಭಿಪ್ರಾಯ ಮೂಡುತ್ತದೆ. ಪ್ರಸ್ತುತ ಶಾಸನಗಳಲ್ಲಿ ಒಂದು ಹೇಮಕೂಟದ ಪರಿಸರದಲ್ಲಿದೆ. 'ಮೂಲವಿರೂಪಾಕ್ಷ'ನಿರುವುದು ಸಹ ಹೇಮಕೂಟದಲ್ಲಿಯೇ. ಸ್ಥಳಪುರಾಣ ಹೇಳುವಪ್ರಕಾರ ಶಿವತಪಸ್ಸು ಮಾಡಿದ್ದು ಹೇಮಕೂಟದಲ್ಲಿಯೇ. ಇವುಗಳನ್ನು ಗಮನಿಸದರೆ - ಜೆಡೆಯಶಂಕರದೇವ ಒಬ್ಬ ಶೈವಸಾಧಕನಾಗಿದ್ದು ಈ ಪರಿಸರದಲ್ಲಿ ಬಂದು ಯೋಗಾನಿಷ್ಠನಾಗಿದ್ದಂತೆ ಕಾಣುತ್ತದೆ.

'ಜೆಡೆಯ ಶಂಕರದೇವನಿಗೆ ಸಂಬಂಧಿಸಿದ ಪ್ರಾಚೀನ ಶಾಸನ ಕ್ರಿ.ಶ. ೧೧೧೨ ಮತ್ತು ವಚನಕಾರ ಶಂಕರದಾಸಿಮಯ್ಯ ಊಹಿತ ಕಾಲಾವಧಿ ಪ್ರಾರಂಭವಾಗುತ್ತಿರುವುದು ಕ್ರಿ.ಶ. ೧೦೨೫. ಅಂದರೆ ಕ್ರಿ.ಶ. ೧೧೧೨ರ ಹೊತ್ತಿಗೆ ಮತ್ತು ಆನಂತರಕ್ಕೆ ಜೆಡೆಯಶಂಕರ ದೇವನು ಪ್ರಖ್ಯಾತನಾದಂತೆ ಕಂಡುಬರುತ್ತದೆ. 'ಭಾವನ ಗಂಧವಾರಣ' ಎಂಬ ಬಿರುದಿನ ಸಾಮಂತನೊಬ್ಬನು ಅನೇಕ ದೇವಾಲಯಗಳನ್ನು ಕಟ್ಟಿಸಿದನೆಂದು - ನಂದವಾಡಿಗಿ ಶಾಸನದ ಬಗ್ಗೆ ಹೇಳುತ್ತಾ ಡಾ. ಎಂ.ಚಿದಾನಂದಮೂರ್ತಿಯವರು 'ನವಿಲೆಯ ಜಡೆಶಂಕರ ದೇವಾಲಯವು ಅದರಲ್ಲೊಂದು' ಎಂದು ತಿಳಿಸುತ್ತಾರೆ. (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಪುಟ - ೧೭೮) ಈ ನಂದವಾಡಿಗಿ ಶಾಸನದ ಕಾಲ ಕ್ರಿ.ಶ. ೧೦೭೦. ಈತ ಈ ಕಾಲದಲ್ಲಿ ಪ್ರಖ್ಯಾತಿ ಪಡೆದಿದ್ದನೆಂಬುದು ಮತ್ತು ಸಂಚಾರಿ ಮನೋಭಾವದನಿರಬೇಕು ಎಂದು ತೋರುತ್ತದೆ. ಇಂಥ ಸಂಚಾರ ಸಂದರ್ಭದಲ್ಲಿ ಜೆಡೆಯಶಂಕರದೇವ ಹಂಪೆಯನ್ನು ಸಂದರ್ಶಿಸಿರಬೇಕು.

ಹೀಗೆ ಹರಿಹರನ 'ಶಂಕರದಾಸಿಮಯ್ಯನ ರಗಳೆ' ಕೊಡುವ 'ಐತಿಹಾಸಿಕ ಸುಳುಹು' (Historical Clue) ಪಂಪಾಕ್ಷೇತ್ರ ರಗಳೆ, ಶಿವತತ್ವ ಚಿಂತಾಮಣಿ - ಉಲ್ಲೇಖಿಸುವ ಸ್ಥಾವರನೆಲೆಯನ್ನು ಸಮರ್ಥಿಸುತ್ತದೆ. ಹಂಪೆಯ ಶಾಸನಗಳು, ಶಂಕರದಾಸಿಮಯ್ಯನ ಬದುಕಿನ ಕಾಲಾವಧಿ ಮತ್ತು ಜೆಡೆಯಶಂಕರದೇವನನ್ನು ಉಲ್ಲೇಖಿಸುವ ಪ್ರಾಚೀನ ನವಿಲೆಯ ಶಾಸನ - ಇವುಗಳ ತುಲನೆಯಿಂದ ಕಾಣುವ ಹೊಂದಾಣಿಕೆಯನ್ನು ಗಮನಿಸಿದರೆ ಜೆಡೆಯಶಂಕರದೇವ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದು ಆತ ಹಂಪೆಯನ್ನು ಸಂದರ್ಶಿಸಿರಬೇಕು ಎಂಬುದು ಸಧ್ಯಕ್ಕೆ ಸ್ಪಷ್ಟವಾಗಿದೆ.

'ಜೆಡೆಯ' ಎಂಬ ಉಪನಾಮ ಮತ್ತು ನವಿಲೆಯ 'ಶಂಕರದೇವ' - ಸ್ಥಾವರ ದೈವಕ್ಕಿರುವ 'ಜೆಡೆಯ' ಕೆತ್ತನೆ ಈತನ ಭೌತಿಕ ವ್ಯಕ್ತಿತ್ವದ ಚಿತ್ರಣವನ್ನು ನೀಡುತ್ತವೆ.

ಆಧಾರ ಗ್ರಂಥಗಳು

೧. ಹರಿಹರನ ರಗಳೆಗಳು -ಡಾ. ಎಂ.ಎಂ.ಕಲಬುರ್ಗಿ (ಸಂ) ವಿದ್ಯಾರಣ್ಯ, ೧೯೯೯

೨. ಬಸವಪುರಾಣ -ಡಾ. ಆರ್.ಸಿ.ಹಿರೇಮಠ (ಸಂ) ಧಾರವಾಡ, ೧೯೭೧

೩. ಶಿವತತ್ವಚಿಂತಾಮಣಿ -ಎಸ್. ಬಸಪ್ಪ (ಸಂ) ಮೈಸೂರು

೪. ಭೈರವೇಶ್ವರನ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ -ಡಾ. ಆರ್.ಸಿ.ಹಿರೇಮಠ -ಡಾ. ಎಂ.ಎಸ್. ಸುಂಕಾಪುರ (ಸಂ) ಧಾರವಾಡ, ೧೯೬೮

೫. ಸಂಕೀರ್ಣ ವಚನ ಸಂಪುಟ -೪-೯ನೇ ಸಂಪುಟ - ಡಾ. ಬಿ.ಆರ್.ಹಿರೇಮಠ (ಸಂ) ಬೆಂಗಳೂರು,೧೯೯೩

೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಡಾ. ಎಂ.ಚಿದಾನಂದಮೂರ್ತಿ, ಮೈಸೂರು, ೧೯೭೯

೭. ಹೊಸತು ಹೊಸತು - ಡಾ. ಎಂ.ಚಿದಾನಂದಮೂರ್ತಿ, ವಿದ್ಯಾರಣ್ಯ

೮. ಶಂಕರದಾಸಿಮಯ್ಯನ ಪುರಾಣ : ಒಂದು ಅಧ್ಯಯನ -ಡಾ. ಅನ್ನಪೂರ್ಣ ಜಾಲವಾದಿ. ಗದಗ, ೧೯೯೯

❑❑

೨೧

ಸ್ವರವಚನಗಳಲ್ಲಿ ಹಂಪೆ - ವಿಜಯನಗರ

* ಡಾ.ಎಫ್.ಟಿ.ಹಳ್ಳಿಕೇರಿ

ನಡುಗನ್ನಡ ವಾಙ್ಮಯದ ಒಂದು ವಿಶಿಷ್ಟ ಪ್ರಕಾರವಾಗಿದೆ, ಸ್ವರವಚನ ಸಾಹಿತ್ಯ. ಬಸವಾದಿ ಶಿವಶರಣರಿಂದ ಸೃಷ್ಟಿಯಾದ ಈ ಸಾಹಿತ್ಯ ವಿಜಯನಗರ ನೂರೊಂದು ವಿರಕ್ತರು ಹಾಗೂ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಕಾಲದಲ್ಲಿ ವೈವಿಧ್ಯಮಯವಾಗಿ ಅಧಿಕಪ್ರಮಾಣದಲ್ಲಿ ರಚನೆಗೊಳ್ಳುತ್ತ ಬಂದಿತು. ಹಾಡುಗಬ್ಬ ಪರಂಪರೆಗೆ ಸೇರಿದ ಸ್ವರವಚನಗಳು ಒಂದು ನಿರ್ದಿಷ್ಟವಾದ ಛಂದೋಬಂಧಕ್ಕೆ ಒಳಗಾಗಿ ರಚನೆಗೊಂಡಿವೆ. ವಚನ ಮತ್ತು ಸ್ವರವಚನಗಳ ಭಿನ್ನತೆಯನ್ನು ಡಾ.ವೀರಣ್ಣ ರಾಜೂರ ಅವರು ಗುರುತಿಸುತ್ತಾ "ಸ್ವರಚಚನ ಉದ್ದೇಶಪೂರ್ವಕ ಸಿದ್ಧರಚನೆ. ಎರಡೂ ನಡೆ - ನುಡಿ ಸಾಮರಸ್ಯ ಸಾಧಿಸಿದ ವ್ಯಕ್ತಿಗಳ ಆತ್ಮಸಾಕ್ಷಿಯ ಅಭಿವ್ಯಕ್ತಿಗಳು. ಎರಡೂ ಅನುಭಾವ ಸಾಹಿತ್ಯದ ಪ್ರಾತಿನಿಧಿಕ ಪ್ರಕಾರಗಳು. ಎರಡರಲ್ಲಿಯೂ ವೀರಶೈವ ತತ್ವ - ನೀತಿ, ಸಮಾಜ ವಿಮರ್ಶೆ ಅಡಕವಾಗಿವೆ. ಒಟ್ಟಿನಲ್ಲಿ ಎರಡರ ಆಶಯ ಒಂದೆ. ಆದರೆ ಆಕೃತಿ ಮಾತ್ರ ಭಿನ್ನ" ಎಂದು ಅಭಿಪ್ರಾಯಪಡುತ್ತಾರೆ.[೧] ಸದ್ಯದ ಮಟ್ಟಿಗೆ ಜೇಡರದಾಸಿಮಯ್ಯ ಸ್ವರವಚನ ಸಾಹಿತ್ಯದ ಆದ್ಯ ಪ್ರವರ್ತಕನೆಂದು ಹೇಳಬಹುದು. ಬವುಳಿ ರಾಗದಲ್ಲಿನ 'ನಿಜವಾಗದೆಂದು ಗಜಬಜೆ ಘುನ ಗುಜು ಗುಜು ಮಾಣದೆ ಮನದಲ್ಲಿ' ಎಂದು ಪ್ರಾರಂಭವಾಗುವ ಈತನ ಸ್ವರವಚನ ಮೊದಲ ಉಪಲಬ್ದ ಸ್ವರವಚನವಾಗಿದೆ. ೧೫ನೆಯ ಶತಮಾನದ ವಿಜಯನಗರದೊರೆ ಪ್ರೌಢದೇವರಾಯನ ಕಾಲದಲ್ಲಿ ಸ್ವರವಚನ ಸಾಹಿತ್ಯ ಸಮೃದ್ಧವಾಗಿ, ಸಶಕ್ತವಾಗಿ ಬೆಳೆದು

ಬಂದಿತು. ಕರಸ್ಥಲ ವೀರಗ್ಗೊಡೆಯ, ಗುರುಬಸವ, ನಿರ್ವಾಣಿ ಚೋಳೇಶ, ಶಂಕರದೇವ, ಕವಿಲಿಂಗ, ಬತ್ತಲೇಶ್ವರ ಮೊದಲಾದವರು ಈ ಕಾಲದಲ್ಲಿ ವೈವಿಧ್ಯಮಯವಾದ ಸ್ವರವಚನಗಳನ್ನು ರಚಿಸಿದ್ದಾರೆ.

ಇನ್ನು ಇವುಗಳ ಸ್ವರೂಪ, ಲಕ್ಷಣ ಕುರಿತು ಹೇಳುವುದಾದರೆ, ಆರಂಭದಲ್ಲಿ ಪಲ್ಲವಿ ಕಡ್ಡಾಯವಾಗಿ ಬರುತ್ತದೆ. ಪದ್ಯದ ಕೊನೆಗೆ ಮುದ್ರಿಕೆ ಅಥವಾ ಅಂಕಿತ, ಆರಾಧ್ಯದೈವದ ಹೆಸರು ಇರುತ್ತದೆ. ಸ್ವರವಚನಗಳ ಮೊದಲಿಗೆ ರಾಗ - ತಾಳಗಳ ನಿರ್ದೇಶನವಿರುತ್ತದೆ. ವೀರಶೈವ ತಾತ್ವಿಕ ಅಂಶಗಳ ನಿರೂಪಣೆ, ನೀತಿಬೋಧೆ ಸ್ವರವರ್ಚಣೆ ಮುಖ್ಯ ಆಶಯ. ಹೀಗಿದ್ದೂ ಕೆಲವು ಸ್ವರವಚನಗಳಲ್ಲಿ ಐತಿಹಾಸಿಕ ಸಂಗತಿಗಳೂ ಪೂರಕವಾಗಿ ಉಲ್ಲೇಖಗೊಂಡಿರುವುದನ್ನು ನಾವು ಗುರುತಿಸಬಹುದು. ಸಮಕಾಲೀನ ಅರಸರ ಸ್ತುತಿ, ವ್ಯಕ್ತಿತ್ವ, ವಂಶವೀವರ, ಕಾರ್ಯಸಾಧನೆಗಳ ಬಗೆಗೆ ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಕೆಲವು ಸ್ವರವಚನಗಳು ಹೇಳುತ್ತವೆ. ಕೆಳದಿ ಅರಸರು, ಚಿತ್ರದುರ್ಗದ ಪಾಳೆಯಗಾರರು, ಹರಪನಹಳ್ಳಿ ಪಾಳೆಯಗಾರರು, ಕುಮ್ಮಟದುರ್ಗ, ಮಂಗಳೂರು ಸಂಸ್ಥಾನ, ಕಿತ್ತೂರದೊರೆ ಮಲ್ಲೇಂದ್ರ, ವಿಜಯನಗರ, ಸೋದೆ ಅರಸರು - ಇತ್ಯಾದಿ ರಾಜ ಮನೆತನಗಳನ್ನು ಕುರಿತು ಮಾಹಿತಿಯನ್ನು ನೀಡುತ್ತವೆ. ಪ್ರಸ್ತುತ ಪ್ರಬಂಧದದ ಸ್ವರವಚನಗಳಲ್ಲಿ ಹಂಪೆ - ವಿಜಯನಗರ ಉಲ್ಲೇಖಗೊಂಡ ಬಗೆಯನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಹಂಪೆ

ಕೆಲವು ಸ್ವರವಚನಗಳಲ್ಲಿ ಹಂಪೆಯ ಆರಾಧ್ಯದೈವವಾದ ವಿರೂಪಾಕ್ಷನ ಗುಣಗಾನವನ್ನು ಮಾಡಲಾಗಿದೆ.

"ದಿನಕೋಟಿ ಪ್ರಭೆಯುಳ್ಳನ ಮನು
ಮುನಿ ಪ್ರಮಥರೊಳಗೆ ಮೆರೆವನ
ಜ್ಞಾನ ಸುಜ್ಞಾನ ಶೀಲದರಮನೆಯೊಳು
ಶೂನ್ಯ ಪೀಠದಿ ನೆಲೆಗೊಂಬ ದೇವ ವಿರೂಪಾಕ್ಷನ ‖ [೨]

"ದೇವರ ದೇವಂಗೆ ದೇವ ಶಿಖಾಮಣಿ
ದೇವಸನ್ಮೋಹ ಸ್ವಾಮಿಗೆ
ದೇವ ಪಂಪಾಪತಿ ವಿರೂಪಾಕ್ಷ ಲಿಂಗಗೆ
ದೇವಗನ್ನಿಕೆಯರಾರತಿಯೆತ್ತಿರೆ"[೩]

ಎಂದು ಸ್ತುತಿಸುತ್ತಾ ಕವಿ ವಿರೂಪಾಕ್ಷನನ್ನು ಕಾಯುತ್ತಾ 'ಭಾನುಕೋಟಿ ದಿವ್ಯತೇಜ ಪ್ರಕಾಶಕನಾದಂಥ ಈತ ಮನಸ್ಸಿನೊಳಗೆ ನೆನೆವರನ್ನು ಕಾಯುವಂಥವನು" ಎಂದಿದ್ದಾನೆ.[೪]

"ಬಾರೋ ಬಾರೋ ಎನ್ನಯ ಕರಕೆ ಮೂರು ಮಂದಿರ ವಾಸನಾದಂಥ ಹಂಪೆಯ ವಿರೂಪಾಕ್ಷನ ಪಾದಕೆ ಎರಗುವೆ" ಎನ್ನುವಲ್ಲಿ ನಿರ್ಮಲ ಭಕ್ತಿಯ ಉತ್ಕಟತೆ ಎದ್ದು ಕಾಣುತ್ತದೆ.[೫] ಕರಿಬಸವೇಶ್ವರನೆಂಬ ಕವಿಯು ತನ್ನ ಸ್ವರವಚನವೊಂದರಲ್ಲಿ -

ಹಂಪೆ ವಿರೂಪಾಕ್ಷನೊಳು ಕೆಂಪಿನ್ಹೊದಕೆಯ
ಸುಟ್ಟುಗೊಪ್ಪೆಯವೆಂದೆನಿಸಿ
ಕೆಂಪಿನ ಗಣೆಯ ವಸವಂತವೆಂದೆಂಬ ನಾಮವನು
ಇಟ್ಟು ಹಂಪೆಯೊಳಗಾಡಿದನು ಕೆಂಪಿನ ವಸವಂತ ||[೬]

ಎನ್ನುವಲ್ಲಿ ಬೆಡಗಿನ ರೂಪದಲ್ಲಿ ವಿರೂಪಾಕ್ಷನನ್ನು ಸ್ತುತಿಗೈಯಲಾಗಿದೆ.

ಸಾಳುವ ನರಸಿಂಹ

ವಿಜಯನಗರವನ್ನಾಳಿದ ಪ್ರಮುಖ ರಾಜರಲ್ಲಿ ಸಾಳುವ ನರಸಿಂಹ (೧೪೮೭ - ೯೩)ನೂ ಒಬ್ಬನಾಗಿದ್ದಾನೆ. ಈತನ ಆಸ್ಥಾನದಲ್ಲಿದ್ದ ಲಿಂಗ ಕವಿಯು ತನ್ನ ಸ್ವರವಚನಗಳಲ್ಲಿ ನರಸಿಂಹನ ಪರಾಕ್ರಮವನ್ನು ಹಾಡಿನ ರೂಪದಲ್ಲಿ ಕೊಂಡಾಡಿದ್ದಾನೆ. 'ನಿಲ್ಲನಾವನೊ ನಿಲ್ಲನಾವನೋ ನರಸಿಂಹಗಿದಿರಾಂತು' ಎಂದು ಆರಂಭವಾಗುವ ಸ್ವರವಚನದಲ್ಲಿ ಈತನ ದಾಳಿಯನ್ನು ಎದುರಿಸಲಾಗದ ಶತ್ರುರಾಜರು ಗಿರಿ ವನ ಜಲ ದುರ್ಗಗಳನ್ನು ಬಿಟ್ಟು ಓಡಿದ ಪರಿಯನ್ನು ತಿಳಿಸುತ್ತಾ -

ಮಲೆವ ರಿಪುರಾಯ ಗಿರಿವಜ್ರವನಾದಾವಾ
ನಲವಯರಿ ವಾರ್ದಿವಡಬ ಸಾಳ್ವ
ಕುಲರನ್ನ ಗುಂಡಭೂವರ ನರಸಿಂಗಗೆ
ತಲೆಯೊಡ್ಡಿ ಬಾಳ್ವ ಭಿಂಭು ಜರುಂಟೆ

ಎಂದು ನರಸಿಂಗನ ಪರಾಕ್ರಮವನ್ನು ವಿವರಿಸಲಾಗಿದೆ.[೭] ಹೀಗೆಯೇ "ಏನುಮೋಹವೋ ಮದನ ಸಮಾನ ಸಾಳುವ ನರಸಿಂಹಗೆ" ಎಂದು ಆತನ ಮಹಿಮೆಯನ್ನು ಹಲವಾರು ಸ್ವರವಚನಗಳಲ್ಲಿ ತಿಳಿಸಿರುವುದನ್ನು ನೋಡಿದರೆ ಕವಿಲಿಂಗನ ಮತ್ತು ನರಸಿಂಗರ ಸಂಬಂಧ ಪಂಪ - ಅರಿಕೇಸರಿ, ಚಿಕ್ಕುಪಾಧ್ಯಾಯ - ಚಿಕ್ಕ ದೇವಭೂಪ ಮೊದಲಾದವರ ಮೈತ್ರಿಗೆ ಸಮಾನಾಗಿರಬೇಕೆಂದು ಹೇಳಬಹುದು.[೮]

ಹಂಪೆ ದೇವಯ್ಯ

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ ಪರಂಪರೆಗೆ ಸೇರಿದ ಬಾಗುಳಿಯ ಗುರುಬಸವಾರ್ಯನು ತನ್ನ ಸ್ವರವಚನವೊಂದರಲ್ಲಿ ಶರಣರ ನೂರೆಂಟು ಹೆಸರುಗಳನ್ನು ಉಲ್ಲೇಖಿಸುತ್ತಾ 'ಹಂಪಿದೇವಯ್ಯ' ಎಂಬ ಶರಣನನ್ನೂ ಸ್ಮರಿಸಿದ್ದಾನೆ.

ಮೇದರ ಕೇತಯ್ಯ
ಮೋಳಿಗೆಯ ಮಾರಯ್ಯ
ಹಾದರದ ಬ್ರಹ್ಮಯ್ಯ ಹಂಪಿದೇವ
ನಾದರದಿ ರಕ್ಷೆಯನು
ಕಾದು ಕೊಂಡಿರುವವರು
ಮೇದಿನಿಯೊಳು ನಮಗೆ ಸರಿಯದಾರೊ ||[೯]

ಎನ್ನುವಲ್ಲಿ ಈತ ಹಂಪಿಯ ಒಬ್ಬ ಶಿವಶರಣನೆಂದು ಹೇಳಬಹುದು. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ,[೧೦] ಶಿವತತ್ವ ಚಿಂತಾಮಣಿ,[೧೧] ಗುರುರಾಜ ಚಾರಿತ್ರ್ಯ[೧೨]ಗಳಲ್ಲಿ ದೇವಯ್ಯನೆಂಬ ಶರಣನ ಉಲ್ಲೇಖಬರುತ್ತದೆ. ಅಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಶಿಷ್ಯರಲ್ಲಿ ಒಬ್ಬನೆಂದು ಹೇಳಲಾಗಿದೆ. ಅಲ್ಲದೆ ವಿರೂಪಾಕ್ಷದೇವಾಲಯದ ಆವರಣದ ಉತ್ತರಕ್ಕಿರುವ ದುರ್ಗಾ ದೇವಾಲಯದಲ್ಲಿನ ಶಾಸನ (ಕ್ರಿ.ಶ. ೧೧೯೯) ವೊಂದರಲ್ಲಿ 'ದೇವಯ್ಯ'ನ ಉಲ್ಲೇಖವಿದೆ.[೧೩]

ಬಹುಶಃ ಸ್ವರವಚನೋಕ್ತ ಹಂಪಿದೇವನೇ ಈತನಾಗಿರಬಹುದೇ? ಈ ಎಲ್ಲ ಸಂಗತಿಗಳನ್ನು ಪರಿಶೀಲಿಸಲು ಇನ್ನೂ ಬಲವಾದ ಆಧಾರಗಳು ಬೇಕೆನಿಸುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆ ಕೈಗೊಳ್ಳಬೇಕಾಗಿದೆ.

ಇಷ್ಟು ನಾನು ಪರಿಶೀಲಿಸಿದ ಸ್ವರವಚನಗಳಿಂದ ಹಂಪೆ - ವಿಜಯನಗರ ಅರಸರ ಬಗೆಗೆನ ಉಲ್ಲೇಖನಗಳನ್ನು ಗಮನಿಸಿದ್ದೇನೆ. ಸಮಗ್ರವಾಗಿ ಸ್ವರವಚನಗಳನ್ನು ಅವಲೋಕಿಸಿದಾಗ ಇನ್ನೂ ಹೆಚ್ಚಿನ ಮಾಹಿತಿಗಳು ಸಿಗಬಹುದು.

ಅಡಿಟಿಪ್ಪಣಿಗಳು

೧. ವೀರಣ್ಣ ರಾಜೂರು, ಸ್ವರವಚನಗಳು, ೧೯೯೯, ಪು. ೫
೨. ಎಸ್.ಶಿವಣ್ಣ, (ಸಂ), ಸ್ವರವಚನ ಸಂಪುಟ - ೨, ೧೯೯೫, ಪು. ೧೭೮
೩. ಅದೇ, ಪು. ೧೪೨
೪. ಅದೇ, ಪು. ೧೪೧
೫. ಅದೇ, ಪು. ೧೭೯
೬. ಜಿ.ಜಿ.ಮಂಜುನಾಥನ್, (ಸಂ), ಸ್ವರವಚನ ಸಂಪುಟ - ೨, ೧೯೯೫, ಪು. ೩೯
೭. ವೈ.ಸಿ.ಭಾನುಮತಿ, (ಸಂ), ಕವಿಲಿಂಗನ ಪದಗಳು, ೧೯೯೮, ಪು. ೭
೮. ಅದೇ, ಪು. ೯
೯. ವೀರಣ್ಣ ರಾಜೂರ, (ಸಂ), ಸ್ವರವಚನ ಸಂಪುಟ - ೯, ೧೯೯೭, ಪು. ೧೨೭
೧೦. ಆರ್.ಸಿ.ಹಿರೇಮಠ, ಎಂ.ಎಸ್.ಸುಂಕಾಪುರ, (ಸಂ), ಭೈ.ಕಾ.ಕ. ಸೂತ್ರ, ರತ್ನಾಕರ ಭಾಗ - ೨, ಪು. ೧೩೮
೧೧. ಎಸ್.ಬಸಪ್ಪ, (ಸಂ), ಶಿವತತ್ವ ಚಿಂತಾಮಣಿ, ೧೯೬೦, ಪು. ೩೭೦
೧೨. ಸಂ.ಶಿ.ಭೂಸನೂರಮಠ, (ಸಂ), ಗುರುರಾಜ ಚಾರಿತ್ರ, ೧೯೫೦, ಪು. ೧೬೪
೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೩, (ಹಂಪಿಯ ಶಾಸನಗಳು) ೨೦೦೦, ಪು. ೪೭

❑❑

೨೨

ವಿಜಯನಗರ ಪಟ್ಟಣದಲ್ಲಿ ನಾಥ ಸಂಪ್ರದಾಯ

* ಟಿ.ಎಂ.ಮಂಜುನಾಥಯ್ಯ

ವಿಜಯನಗರ ಪಟ್ಟಣವು ಹತ್ತು ಹಲವು ಧಾರ್ಮಿಕ ಸಂಪ್ರದಾಯಗಳಿಗೆ ಆಶ್ರಯನೀಡಿ, ಮಧ್ಯಕಾಲದ ಇತಿಹಾಸದಲ್ಲಿ ಉನ್ನತ ಸ್ಥಾನವನ್ನು ಭಾರತದೇಶದಲ್ಲಿ ಪಡೆದುದಾಗಿರುವುರು. ಹೀಗೆ ಅಭಿವೃದ್ಧಿಯನ್ನು ಕಂಡ ಹಲವು ಧಾರ್ಮಿಕ ಸಂಪ್ರದಾಯಗಳಲ್ಲಿ ನಾಥ ಪಂಥವು ಇಲ್ಲಿ ಬೆಳೆದು ಬಂದಿರುದೊಂದು ವಿಶೇಷವಾಗಿದೆ. ವಿಜಯನಗರದ ಅರಸರು ನಾಥ ಪಂಥಕ್ಕೆ ಪ್ರಾಮುಖ್ಯತೆಯನ್ನು ನೀಡಿರುವರು. ತಮ್ಮ ಸಾಮ್ರಾಜ್ಯದ ಹಲವೆಡೆ ಈ ಕುರಿತು ಶಾಸನ ಗಳಿರುವುವು.

ಈ ನಾಥ ಸಂಪ್ರದಾಯವು ಮತ್ಸ್ಯೇಂದ್ರನಾಥ ಮತ್ತು ಗೋರಕನಾಥ ಮುನಿಗಳಿಂದ ನೇಪಾಳ ದೇಶದಲ್ಲಿ ರಾಜಮಾನ್ಯವಾಗಿದ್ದು ಪಶುಪತಿನಾಥನು ಅಲ್ಲಿನ ಅರಸರ ಪ್ರಮುಖ ಆರಾಧ್ಯದೈವವೂ ಆಗಿರುವುದು. ಈಗಲೂ ನೇಪಾಳ ನಾಣ್ಯಗಳಲ್ಲಿ ಗೋರರು ನಾಥನ ಹೆಸರನ್ನೂ ಟಂಕಿಸಿರುವರು ಶ್ರೀ ಗೋರಖನಾಥ ಶ್ರೀಶ್ರೀ ಎಂದಿರುವುರು. ಈ ಪಂಥವು ವಿಜಯನಗರ ಪಟ್ಟಣದಲ್ಲಿಯೂ ಒಂದು ಪ್ರಮುಖ ಪಂಥವಾಗಿದ್ದಂತೆ ಕಂಡುಬರುವುದು. ಇಲ್ಲಿನ ವಿರೂಪಾಕ್ಷ ದೇವಾಲಯದಿಂದ ಮೊದಲುಗೊಂಡು ಹಜಾರ ರಾಮಚಂದ್ರ ದೇವಾಲಯ, ವಿಠಲ, ತಿರುವೇಂಗಳನಾಥ (ಅಚ್ಯುತ ದೇವಾಲಯ) ಮಾಲ್ಯವಂತ ರಘುನಾಥ, ಪಟ್ಟಾಭಿರಾಮ, ಜಂಬುನಾಥ ಹಾಗು ಇನ್ನಿತರ ದೇವಾಲಯಗಳ ಸ್ತಂಭಗಳಗಳ ಮೇಲೆ

ನಾಥಮುನಿಗಳ ಶಿಲ್ಪಗಳು ವಿಶೇಷವಾಗಿ ಕಂಡುಬರುವುವು. ಈ ದಿಶೆಯಲ್ಲಿ ನಾಥಪಂಥಕ್ಕೆ ಸಂಬಂಧಿಸಿದಂತೆ ಶಾಸನಗಳು, ಶಿಲ್ಪಗಳು, ದೇವಾಲಯಗಳು, ಗುಹೆಗಳು ಇರುವುದನ್ನು ಆನೆಗೊಂದಿಯನ್ನು ಒಳಗೊಂಡಂತೆ ಶಾಸನಗಳು ಪ್ರಚುರಪಡಿಸುವವು.

ನಾಥ ಸಂಪ್ರದಾಯದಲ್ಲಿ ಶಿವ-ಶಕ್ತಿಯರನ್ನೂ ಪ್ರಮುಖವಾಗಿ ಆರಾಧಿಸುತ್ತಿದ್ದು ಉಳಿದಂತೆ ಲಕ್ಷ್ಮೀ, ಸರಸ್ವತಿ, ಬ್ರಹ್ಮ, ಭೈರವನನ್ನು ವಿಶಿಷ್ಟವಾಗಿ ಆರಾಧನೆ ಮಾಡುತ್ತಿದ್ದರು. ನಾಥ ಮುನಿಗಳು ಮತ್ಸ್ಯದ ಮೇಲೆ ಕುಳಿತು ಯೋಗಪಟ್ಟನ್ನು ಧರಿಸಿದ್ದು ಕೈಗಳಲ್ಲಿ ಯೋಗದಂಡವು, ಕಿವಿಗಳಲ್ಲಿ ಕುಂಡಲಗಳು ಕೊರಳಲ್ಲಿ ಸಿಂಗಿನಾದ ಎಂಬ ತುತ್ತೂರಿಯನ್ನು ಧರಿಸಿ ವಿವಿಧ ಭಂಗಿಗಗಳಲ್ಲಿ ಹಾಗು ವೃಶ್ಚಿಕದ ಮೇಲೆಯೂ ಕುಳಿತಿರುವ, ಯೋಗ ಚಿಂತನೆಯಲ್ಲಿ, ಕುಳಿತಿರುವ ಭಂಗಿಗಳು ವಿಶೇಷವಾಗಿರುವುವು.

ನಾಥ ಸಂಪ್ರದಾಯದ ಪ್ರತಿಪಾದಕ ಗೋರಕ್ಷ ಮತ್ತು ಅಲ್ಲಮಪ್ರಭು ಇವರ ಸಂವಾದವು ಶೂನ್ಯಸಂಪಾದನೆಯಲ್ಲಿ ಉಲ್ಲೇಖವಾಗಿರುವುದು. ಗೋರಕ್ಷನಿಗೆ ಶೂನ್ಯ ಯೋಗದ ಮಹತ್ವ ವನ್ನು ಅಲ್ಲಮಪ್ರಭು ಬೋಧಿಸಿರುವನೆಂದು, ಗೋರಕ್ಷನನ್ನು ಸಹ ೧೨ನೇ ಶತಮಾನದ ಬಸವಾದಿ ಪ್ರಮಥ ಶರಣರಲ್ಲಿ ಗೋರಕ್ಷನು ಒಬ್ಬ ಶರಣನಾಗಿರುವನು.

ಗೋರಕ್ಷನೇ ಅಲ್ಲಮ ಪ್ರಭುವಿನಿಂದ ಬೋಧನೆಯನ್ನು ಪಡೆದದ್ದು ಶ್ರೀ ಪರ್ವತದಕ್ಕೆ ಅಲ್ಲಮಪ್ರಭು ಹೋಗುವ ಮಾರ್ಗದಲ್ಲಿ ಗೋರಕ್ಷ (ಗೋರಖನಾಥ)ನು ಅಲ್ಲಿಯ ಪ್ರಭುವನ್ನು ತನ್ನ ಖಡ್ಗದಿಂದ ಹೊಡೆದು ಪರೀಕ್ಷೆ ಮಾಡುವ ಉದ್ದೇಶದಿಂದ ಖಡ್ಗವನ್ನು ಅಲ್ಲಮ ಪ್ರಭುವಿನ ಮೇಲೆ ಬೀಸಲು ಖಡ್ಗವು ಕೇವಲ ಗಾಳಿಯ ಬಯಲಲ್ಲಿ ಓಲಾಡುವುದನ್ನು ಕಂಡು ಅಲ್ಲಮನ ಶೂನ್ಯ ದೇಹವನ್ನು ಕಂಡು ಬೆರಗಾಗಿ ತನ್ನ ತಪ್ಪನ್ನು ಮನ್ನಿಸಬೇಕೆಂದು ಕೋರುವನು, ಶ್ರೀ ಪರ್ವತದಲ್ಲಿ ಗೋರಕ್ಷನೆಂಬ ಸಿದ್ದನು ಕಾರ್ಯಸಿದ್ಧಿಯನ್ನು ಸಾಧಿಸಿ ವಜ್ರದೇಹಿಯಾದ. ಗೂರಕ್ಷನನ್ನು ಖಡ್ಗದಿಂದ ಪರೀಕ್ಷಿಸಿ ನೋಡಿ ಬೆರಗಾಗುವರು ಆದರೆ ಇದರಿಂದ ಆದ ಅನುಭವವು, ದೇಹ ಬಲಿತರೇನು ಮನಸ್ಸು ಬಲಿಯಲಿಲ್ಲವೆಂದು, ಅಲ್ಲಮಪ್ರಭುದೇವರು ಗೋರಕ್ಷನಿಗೆ ಲಿಂಗತತ್ವವನ್ನು ಬೋದಿಸಿದ ವಿಷಯವನ್ನು ಚಾಮರಸನು ಪ್ರಭುಲಿಂಗಲೀಲೆಯ ೧೯ನೆಯ ಗತಿಯಲ್ಲಿ ಹೇಳಿರುವನು. ಯೋಗಸಿದ್ದಾಂತವನ್ನು ಪಡೆದನಂತರ ಗೋರಕ್ಷನು ಇದಕ್ಕೆ ಒಪ್ಪಿಕೊಳ್ಳುವನು.

ಈ ಹಿನ್ನೆಲೆಯಲ್ಲಿ ಗೋರಖನಾಥನು ಕ್ರಿ.ಶ. ೧೨ನೇ ಶತಮಾನದಲ್ಲಿ ನಾಥ ಪಂಥವನ್ನು ಪ್ರತಿಪಾದಿಸಿರವನೆಂದು ವ್ಯಕ್ತವಾಗುವುದು. ಕರ್ನಾಟಕದಲ್ಲಿಯೂ ೧೨ನೇ ಶತಮಾನವು ಭಕ್ತಿಯುಗವಾಗಿ ಪರಿಣಮಿಸಿದ್ದು ಗೋರಖನಾಥ ಮತ್ತು ಅಲ್ಲಮಪ್ರಭುವಿನ ಸಂವಾದವು, ಶೂನ್ಯ ಸಂಪಾದನೆಯಲ್ಲಿ ಉಲ್ಲೇಖವಿದ್ದು ಗೋರಕ್ಷನಿಗೆ ಜ್ಞಾನೋದಯ, ಗೋರಕ್ಷ ಪ್ರಭುದೇವರ ಸಂವಾದ ಐಕ್ಯ, ಎಂಬ ಶಿರೋನಾಮೆಯಲ್ಲಿರುವುದು. ಗೋರಕ್ಷನು ತನ್ನ ಸಿದ್ದಿಸಾಧನೆಯಿಂದ ವಜ್ರದೇಹಿಯಾಗಿದ್ದಿರುವುದನ್ನು ಅಲ್ಲಮಪ್ರಭುವಿಗೆ ಹೇಳಿದಾಗ

ವಜ್ರದೇಹದಿಂದಲೇ ಸಾಧನೆ ಸಾಧ್ಯವಿಲ್ಲ ಅದಕ್ಕೆ ಶೂನ್ಯ ಯೋಗವನ್ನು ಸಂಪಾದನೆ ಮಾಡಿದಾಗ ನಿಜವಾದ ಸಾಧನೆ ಎಂಬುದನ್ನು ತೋರಿಸಿಕೊಡುವುದರ ಮೂಲಕ ಗೋರಕ್ಷನಿಗೆ ಜ್ಞಾನೋದಯವಾಯಿತೆಂದು ಇರುವುದು. ಇದರಿಂದ ಕರ್ನಾಟಕದಲ್ಲಿ ನಾಥ ಪಂಥವು ಹೆಚ್ಚಿನ ಮಟ್ಟದಲ್ಲಿ ಬೆಳವಣಿಗೆಯನ್ನು ಕಂಡಿರುವುದು.[೧]

ಗೋರಖನಾಥನಿಂದ ಪ್ರತಿಪಾದಿಸಿದ ಧಾರ್ಮಿಕ ನಾಥಪಂಥವು ನೇಪಾಳ ಮತ್ತು ಭಾರತದೇಶದಲ್ಲಿ ನೆಲೆಯೂರಿದೆ ಹಾಗು ಇಂದಿಗೂ ಜೀವಂತ ಧರ್ಮವಾಗಿರುವುದು.

The sects of Yogis like those of the Nathas or Josmanis need not detain us here being either too well-known or of minor importance in the context of Nepalese art as the cure may be. None of these faiths has grown integrally on the soil except the cult of Gorakhnatha of the Josmanis which have only a limited following also in India.[2]

Nepal has returned the compliment by contributing the cult of Gorakhnatha who is worshipped commonly between Nepal and India till this day.[3]

ನಾಥ ಸಂಪ್ರದಾಯವು ಮತ್ಸ್ಯೇಂದ್ರನಾಥನಿಂದ ಸ್ಥಾಪಿಸಲ್ಪಟ್ಟ ಗೋರಖನಾಥನಿಂದ ಹೆಚ್ಚು ಪ್ರಸಿದ್ಧಿಯನ್ನು ಪಡೆದುದಾಗಿದೆ. ಇವರು ನಾಥರೆಂದು, ಯೋಗಿಗಳೆಂದು ಅಥವಾ ಕಾಣಫಟರೆಂದು ಕರೆಯುತ್ತಿದ್ದು, ಇವರು ಶಿವ ಮತ್ತು ಶಕ್ತಿಯ ಆರಾಧಕರಾಗಿರುವರು. ನವನಾಥರನ್ನು ಅತ್ಯಂತ ಪ್ರಮುಖರೆಂದು ಅವರ ಅನುಯಾಯಿಯಾಗಿ ಸಿದ್ಧಿಯನ್ನು ಪಡೆದ ಯೋಗಿಗಳನ್ನು ಸಿದ್ಧರೆಂದು ಕರೆಯಲಾಗಿದೆ. ಇವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಶೈಲ ಹಾಗು ಕರ್ನಾಟಕದ ಕರಾವಳಿ ತೀರದ ಮಂಗಳೂರಿನಲ್ಲಿ ಇಂದಿಗೂ ಮಠವಿರುವುದು. ಮಂಗಳೂರು ಕದಿರೆಯಲ್ಲಿರುವ ಮಠ ಹಾಗು ಮಂಜುನಾಥ ದೇವಾಲಯಗಳು ಧರ್ಮಸ್ಥಳದ ಮಂಜುನಾಥ ದೇವಾಲಯವು ಇವರ ಸಂಪ್ರದಾಯದ ಕೇಂದ್ರಗಳಾಗಿರುವುವು. ನಾಥ ಮುನಿಗಳನ್ನು ಕುರಿತಾಗಿರುವ ತೆಲುಗುಭಾಷೆಯ 'ನವನಾಥ ಚರಿತ್ರ'ವೆಂಬ ಗ್ರಂಥವು ಗೌರಣ್ಣನಿಂದ ರಚಿತವಾಗಿರುವುದು ನಾಥಮಠದ ಕುರಿತಾಗಿ ಮಂಗಳೂರಿನ ಕದಿರೆಯಲ್ಲಿ ಮಟವು ಇದ್ದು ಶಿಲಾಶಾಸನಗಳು ಇರುವುವು. ಭೈರವ ದೇವರು ಇವರ ಆರಾಧ್ಯದೈವ ಆಗಿರುವುದು.[೪]

ಸುಬ್ಬಣ್ಣ ರೈ ಅವರ ಮೇಲಿನ ಉಲ್ಲೇಖ ಮತ್ತು ಹಂಪೆಯಲ್ಲಿರುವ ನಾಥಮುನಿಗಳ ದೇವಾಲಯ ಶಾಸನ ಶಿಲ್ಪ, ರೇವಣಸಿದ್ಧ ಮತ್ತು ಶಿವಯೋಗಿ ದೇವರ ಗವಿ ಹಾಗು ಸೋಮಯದೇವರ ಲಿಂಗ ಮತ್ತು ಅಲ್ಲಮಪ್ರಭು - ಗೋರಖನಾಥರ ಸಂವಾದದಲ್ಲಿ ಬರುವ ಸಿದ್ಧ ಸೋಮನಾಥ ಎಂಬ ಪದಗಳಿಗೂ ಸಾಮ್ಯವಿದ್ದು ಗೋರಖನಾಥನ ಗುಡಿ ಇದಾಗಿರುವ ಸಾಧ್ಯತೆಗಳಿರುವುವು. ಹಾಗು ಈತನು ೧೨ನೇ ಶತಮಾನದ ಬಸವಾದಿ ಪ್ರಮಥರಲ್ಲಿ ಗೋರಕ್ಷನು ಒಬ್ಬ ಶರಣನಾಗಿರುವನು.

ಗೋರಖನಾಥ ಪ್ರವರ್ತಿತವಾದ ಬಾರಹ ಪಂಥಿ ಮಾರ್ಗಗಳು (ದ್ವಾದಶ ಪಂಥಗಳು) ನಾಥ ಸಂಪ್ರದಾಯ ಎಂದು ಪ್ರಸಿದ್ಧವಾದವು ಈ ಸಂಪ್ರದಾಯದ ಸಾಧಕರು ತಮ್ಮ ಹೆಸರಿನೊಡನೆ 'ನಾಥ' ಶಬ್ದವನ್ನು ಸೇರಿಸಿಕೊಳ್ಳುತ್ತಾರೆ. ಕಿವಿಯನ್ನು ಚುಚ್ಚಿಸಿಕೊಳ್ಳುವುದರಿಂದ 'ಕನಫುಟಾ' (ಕಿವಿಹರುಕರು) ಎಂದೂ ದರ್ಶನ್ ಎಂಬ ಪವಿತ್ರ ಉಂಗುರವನ್ನು ಧರಿಸಿಕೊಳ್ಳುವುದರಿಂದ ದರ್ಶನಿಸಾದು ಎಂದೂ ಕರೆಯಲ್ಪಡುತ್ತಾರೆ. ಇವರಲ್ಲಿ ಗೃಹಸ್ಥರೂ ಇದ್ದಾರೆ, ವಿರಕ್ತರೂ ಇದ್ದಾರೆ. ಕಿವಿಚುಚ್ಚಿಸಿಕೊಳ್ಳದವನನ್ನು ಬಾಘಡ್ ಎಂದು ಕರೆಯುತ್ತಾರೆ.

ಸಿದ್ಧನಾಥರ ಪಟ್ಟಿಯಲ್ಲಿ ಕನ್ನಡನಾಡಿನ ಸಂತರಾದ ರೇವಣಸಿದ್ದ ಹಾಗು ಅಲ್ಲಮ ಪ್ರಭುವಿನ ಹೆಸರುಗಳೂ ಬರುತ್ತವೆ. ಗೋರಕ್ಷನಾಥನು ಕನ್ನಡ ನಾಡಿನವನಾಗಿರಬೇಕೆಂಬ ಅಭಿಪ್ರಾಯ ಒಂದಿದೆ ಆದರೆ ಅದು ಮತ್ಸ್ಯೇಂದ್ರ ನಾಥನ ಶಿಷ್ಯನಾದ ಗೋರಕ್ಷನಾಥನು ಕನ್ನಡ ನಾಡಿನವನಾಗಿರಬೇಕೆಂಬ ಅಭಿಪ್ರಾಯ ಒಂದಿದೆ. ಆದರೆ ಅವು ಮತ್ಸ್ಯೇಂದ್ರ ನಾಥನ ಶಿಷ್ಯನಾದ ಗೋರಕ್ಷನಾಥನೆ? ಅಥವಾ ಆ ಪರಂಪರೆಯಲ್ಲಿ ಬಂದ ನಂತರದ ಇನ್ನೊರ್ವ ಗೋರಕ್ಷನಾಥನೇ? ಎಂಬ ಬಗ್ಗೆ ಖಚಿತ ಆಧಾರಗಳಿಲ್ಲ ಕನ್ನಡನಾಡಿನ ಶಿವಶರಣ (ಸಿದ್ಧ)ರಾದ ರೇವಣಸಿದ್ಧ ಹಾಗೂ ಅಲ್ಲಮ ಪ್ರಭುವಿನ ಸಮಕಾಲೀನನಾಗಿದ್ದು ಅವರಿಬ್ಬರೊಡನೆ ನಡೆದ ಸಂವಾದದಿಂದ ಗರ್ವಭಂಗಕ್ಕೊಳಗಾದ ಗೋರಕ್ಷನಾಥನ ಉಲ್ಲೇಖ ನಮ್ಮ ಸಾಹಿತ್ಯ ಕೃತಿಗಳಲ್ಲಿ ಸಿಗುತ್ತದೆ. ಇದು ಹೌದೆಂದಾದಲ್ಲಿ ಈ ಗೋರಕ್ಷನಾಥನು ಮತ್ಸ್ಯೇಂದ್ರದ್ರನಾಥನ ಶಿಷ್ಯನಾಗಿರಲಾರ; ಆ ಪರಂಪರೆಯಲ್ಲಿನ ನಂತರದ ಒಬ್ಬ ಯೋಗಿಯಾಗಿರಬಹುದು. ಎಂತಿದ್ದರೂ ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರು ಜೊತೆಗೂಡಿ ಕನ್ನಡನಾಡಿಗೆ ಬಂದಿದ್ದರೆಂಬುದು ಮಂಗಳೂರು - ಕದ್ರಿಗೆ ಸಂಬಂಧಿಸಿದ ಐತಿಹ್ಯ ಒಂದರಲ್ಲಿ ಉಲ್ಲೇಖ ವಿದೆ.[೫] ಕಿವಿಯಲ್ಲಿ ಕುಂಡಲವನ್ನು ಧರಿಸುವರು ಹಾಗೂ ಕೊರಳಲ್ಲಿ 'ಸಿಂಗಿನಾದ' ವೆಂಬ ತುತ್ತೂರಿಯನ್ನು ತೂಗು ಹಾಕಿರುವರು. ಇವರು ಊಟಕ್ಕೆ ಮೊದಲು ದೇವರನ್ನು ಪ್ರಾರ್ಥಿಸಿ ಸಿಂಗಿನಾದವನ್ನು ಉದುತ್ತಾರೆ. ಹಾಗು ನಾಥಮುನಿಗಳ ತಲೆಯಲ್ಲಿ ಚಿಕ್ಕದಾದ ಶಿವಲಿಂಗ ವಿರುವುದು. ಗೋರಖನಾಥನನ್ನು ಓರ್ವ ಧಾರ್ಮಿಕಯಗ ಪ್ರಮರ್ತಕನೆಂದು ಕರೆಯುವರು.[೬]

ಕ್ರಿ.ಶ. ೧೨೭೮ರ ಕಲ್ಲೆದೇವರಪುರದ ಶಾಸನದಲ್ಲಿ ನಾಥಮುನಿಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ.

೧. ಆದಿಗದೆ ಎದುನಾಥ
೨. ಚತುರರಗಿನಾಥ
೩. ಗೋರಖನಾಥ
೪. ವಿಸ್ತರಾದೇವಿನಾಥ
೫. ಕಾಹಳಿನಾವಿನಾಥ
೬. ಸುಪ್ರಾಣನಾಥ
೭. ಲೋಕನಾಥ
೮. ನರನಾಥ

ನಾಥ ಪಂಥ ಪ್ರಮಾಣ ಘೋಷನು ಎಂದು ಉಲ್ಲೇಖವಿದೆ.[೭]

ಈ ನಾಥ ಪಂಥವು ಕ್ರಿ.ಶ. ೧೨ನೇ ಶತಮಾನದಿಂದಲೇ ಪ್ರಚಲಿತವಿದ್ದು ಈ ನಾಡಿನಲ್ಲಿ ೧೩ನೇ ಶತಮಾನದಿಂದ ಹೆಚ್ಚು ಪ್ರಚಲಿತವಾದುದನ್ನು ಕಲ್ಲೇದೇವರಪುರದ ಶಾಸನದಿಂದ ವ್ಯಕ್ತವಾಗುವುದು. ನಾಥ ಪಂಥ ಮುನಿವರೇಣ್ಯರು ಹಾಗು ಬಸವಾದಿ ಪ್ರಮಥರನ್ನು ಉಲ್ಲೇಖಿಸುವ ಈ ಶಾಸನವು ಧಾರ್ಮಿಕವಾಗಿ ಹೆಚ್ಚು ಪ್ರಖ್ಯಾತಿಯನ್ನು ಪಡೆದುದಾಗಿರುವುದು.

ಕ್ರಿ.ಶ. ೧೩೫೫ - ೫೬ರಲ್ಲಿ ಬುಕ್ಕರಾಯನು ನಿಜಗಲಿ ಕಟಕರಾಯ ರಾಜಧಾನಿ ಹೊಸಪಟ್ಟಣದಿಂದ ರಾಜ್ಯಭಾರ ಮಾಡುವ ಕಾಲದಲ್ಲಿ ಚಿತ್ರದುರ್ಗ (ಬೆಮ್ಮತ್ತನ ಕಲ್ಲು) ದಲ್ಲಿನ ಸಿದ್ದನಾಥ ದೇವರ ಗುಡಿ ಮಂಟಪವನ್ನು ಕಟ್ಟಿಸಿದನೆಂದು ಮತ್ತು ಸಿದ್ಧನಾಥ ದೇವರಿಗೆ ದತ್ತಿಗಳನ್ನು ಬಿಟ್ಟಿರುವನು. ಕಲ್ಲು ಉಪ್ಪರಿಗೆ ಹಾಗು ಕಲ್ಲಿನ ಉಯ್ಯಾಲೆಯ ಕಂಬವನ್ನು ಎತ್ತಿಸಿ ದೇವಾಲಯದ ಶಿಖರವನ್ನು ಪ್ರತಿಷ್ಠೆ ಮಾಡಿಸಿದನೆಂದು ಚಿತ್ರದುರ್ಗ ಶಾಸನದಲ್ಲಿ ಉಲ್ಲೇಖವಿರುವುದು.[೮]

ನಿರ್ಬಯನಾಥನು ನಾಥಪಂಥದ ಮುನಿಯಾಗಿದ್ದು ಈತನ ಹೆಸರು ಕ್ರಿ.ಶ. ೧೨೮೭ರ ಶಾಸನದಲ್ಲಿ ಉಲ್ಲೇಖವಿದೆ. ನಾಥ ಸಂಪ್ರದಾಯವು ೧೨ನೇ ಶತಮಾನದ ಶಿವಶರಣರ ಸಮಕಾಲೀನನು ಇದೇ ಶಾಸನದಲ್ಲಿ ಶ್ರೀಕಂಥನಾಯ್ಕನ ಮಗ ನಾಗೆಯ ನಾಯಕನು ತಾನು, "ನಿರ್ಬಯನಾಥ ಸ್ವಾಮಿರನ್ನು ಸಂಗಮೇಶ್ವರ ದೇವರ ದಿವ್ಯಪಾದ ಪದ್ಮಾರಾದಕರನೆಂದು ಹೇಳಿಕೊಂಡಿರುವನು.[೯]

ಹರಿಹರ ಕವಿ ರಚಿಸಿದ ರೇವಣಸಿದ್ದೇಶ್ವರ ರಗಳೆಯಲ್ಲಿ ಗೋರಖನಾಥ ಮತ್ತು ರೇವಣಸಿದ್ಧರ ಸಂವಾದ ಕುರಿತಾಗಿ ಉಲೇಖವಿದೆ.[೧೦]

ಕ್ರಿ.ಶ. ೧೩೩೮ರ ಚಿತ್ರದುರ್ಗದ ಗೋಪಾಲಸ್ವಾಮಿ ಹೊಂಡದ ಬಳಿಯಲ್ಲಿನ ಶಾಸನವು, ನಾಥ ಪಂಥದ ಮುನಿಗಳ ಹೆಸರುಗಳನ್ನು ಉಲ್ಲೇಖಿಸುತ್ತಿದ್ದು ಈ ಪ್ರದೇಶವು ಜಗಳೂರು ತಾಲೂಕುಗಳನ್ನೊಳಗೊಂಡಂತೆ ನಾಥ ಪಂಥವು ಪ್ರಚಲಿತವಿತ್ತೆಂದು ಖಚಿತವಾಗಿ ಹೇಳಬಹುದಾಗಿದೆ. ನಾಥಮುನಿಗಳಾದ

೧. ಶ್ರೀ ಚೋಳನಾಥ
೨. ಯಿಮಂಬನಾಥ
೩. ....ನಾಥ
೪. ಶ್ರೀಸಿದ್ಧನಾಥ ಮುನಿಗಳ ಹೆಸರುಗಳು ಇರುವುವು.[೧೧]

ಇದೇ ಚಿತ್ರದುರ್ಗ ನಂ. ೫ರ ಶಾಸನದಲ್ಲಿ ಶ್ರೀ ಸಿದ್ಧ ಬಸವೇಶ್ವರಾಯ ನಮಃ ಎಂದು ಸಿದ್ಧನಾಥನನ್ನು ಬಸವೇಶ್ವರನೊಂದಿಗೆ ಸ್ತುತಿಸಿರುವುದರಿಂದ ಶರಣಾದಿ ಪ್ರಮಥರಲ್ಲಿ ಸಿದ್ಧನಾಥ (ಗೋರಖನಾಥ ಗೋರಕ್ಷ)ನು ಒಬ್ಬನಾಗಿ ಪ್ರಖ್ಯಾತಿಯನ್ನು ಪಡೆದಿರುವನು.[೧೨]

ಆನೆಗೊಂದಿಯೆ ಸಿದ್ಧನಾಥನ ಮೂಲ ಸ್ಥಳವೆಂದು ನಿರ್ಧರಿಸಬಹುದಾಗಿದೆ. ಕಾರಣ ಇಲ್ಲಿರುವ ಆನಂದ ಸಿದ್ಧನ ಗುಹೆ ಮತ್ತು ಅವನ ಕುರಿತಾಗಿ ಉಲ್ಲೇಖದಿಂದ.[೧೩] ಚಿತ್ರದುರ್ಗ ತಾಲೂಕಿನ ಚಿಕ್ಕಪುರಹಳ್ಳಿಯ ಶಾಸನ ಕ್ರಿ.ಶ. ೧೩೫೫ರಲ್ಲಿ ಶ್ರೀಮುನಿ ಮಹಾಮಂಡಲೇಶ್ವರರಾದ ಮಂಡಳೀಕ ಸೋಮಯನಾಯ್ಕನ ಕುಮಾರ ಮಲ್ಲಿನಾಥ ವೊಡೆಯರು ಬೆಮತ್ತನಕಲ್ಲ (ಚಿತ್ರದುರ್ಗ) ಸಿದ್ಧನಾಥ ದೇವರಿಗೆ ಚಿಕ್ಕೆಪುರದ ಗ್ರಾಮ, ಅಪ್ಪಬೋಗ ತೇಜ ಆದಾಯಗಳ ಅಧಿಕಾರವನ್ನು ಮತ್ತು ಸಿದ್ಧನಾಥದೇವರ ಗುಡಿಯನ್ನು ಜೀರ್ಣೋದ್ಧಾರಮಾಡಿದ್ದು, ಸಿದ್ಧನಾಥ ದೇವರ ಗುಡಿಯನ್ನು ನೋಡಿಕೊಳ್ಳುವ ಸ್ಥಾನೀಕ ಅಧಿಕಾರಿ ಸಿದ್ದಣನಿಗೆ ದಾರೆಯರಗಿ ಕೊಟ್ಟರೆಂದು ಇರುವುದು.[೧೪]

ಇದರಿಂದ ಈ ನಾಥ ಪಂಥವು ವಿಜಯನಗರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ತಿಳಿದುಬರುವುದು.

ಆನೆಗೊಂದಿಯಲ್ಲಿರುವ ಶಾಸನವೊಂದು ಆನಂದ ಸಿದ್ಧದೇವ (ಸಿದ್ಧನಾಥ)ನು ಪಾರ್ವತಿಯ ಮಗನೆಂದು, (ತ್ರಿಪುರಾರಿದವ್ವೆಯ ಮಗ) ಹಾಗು ಅವನ ಭಕ್ತಿಗೆ ಮೆಚ್ಚಿ ಶಿವನೆ ಸಿದ್ಧದೇವನ ಗುಹೆಗೆ ಬಂದು ದರ್ಶನ ನೀಡಿ ಆಶೀರ್ವದಿಸುತ್ತಿದ್ದನೆಂದು ಶಾಸನರಲ್ಲಿ ಉಕ್ತವಾಗಿರುವುದು. ಇದೊಂದು ದೊಡ್ಡದಾಗಿರುವ ಪ್ರಾಕೃತಿ ಗುಹೆಯಾಗಿದ್ದು ಈ ಗುಹೆಗೆ ಬಾಗಿಲು ಚೌಕಟ್ಟನ್ನು ಹೊಂದಿಸಲಾಗಿದೆ ಹಾಗು ನಂದಿ ಲಿಂಗ, ನಾಗ ಮತ್ತು ಭೈರವ ಶಿಲ್ಪಗಳು ಇರುವವು.[೧೫] ಪ್ರಸನ್ನಂ ನಂದಿ ದೇವರ ಎದುರಿನಲ್ಲಿರುವ ಗುಹೆಯಲ್ಲಿರುವ ಸಿದ್ಧನಾಥನೆಂದು ಉಲ್ಲೇಖಿರುವುದು.

ಕ್ರಿ.ಶ. ೧೩೭೭ರಲ್ಲಿ ಹಂಪೆಯ ಕೃಷ್ಣದೇವಾಲಯದ ಬಳಿಯಲ್ಲಿ ಆದಿನಾಥ ಮತ್ತು ಪ್ರಗತನಾಥ ದೇವರಿಗೆ ವಿಜಯನಗರ ಬುಕ್ಕರಾಯನ ಮಂತ್ರಿ ಬಸವ ದಂಣಾಯಕನು, ಮಠ, ಮಂಟಪ, ತೋರಣ ಮತ್ತು ಬಾವಿ (ಮಡು)ಯನ್ನು ಕಟ್ಟಿಸಿದನೆಂದು ಶಾಸನವಿದೆ.[೧೬]

ಈ ಸ್ಥಳದಲ್ಲಿ ನಾಥ ಪಂಥದ ಮಠವಿದ್ದ ಬಗ್ಗೆ ಈ ಶಾಸನವು ಪುಷ್ಟೀಕರಿಸುತ್ತದೆ. ವಿಜಯನಗರ ಮತ್ತು ಅದರ ಹಿಂದಿನ ಕಾಲದಲ್ಲಿ ಕಂಪಿಲರಾಯ ಮತ್ತು ಮುಮ್ಮಡಿ ಸಿಂಗೆಯ ನಾಯಕರ ಕಾಲದಲ್ಲಿ ಈ ನಾಥ ಪಂಥದ ಬೆಳವಣಿಗೆಗೆ ಪ್ರೋತ್ಸಾಹ ಸಿಕ್ಕಿರುವುದಕ್ಕೆ ಚಿತ್ರದುರ್ಗ ೨ - ೩ ಹಾಗು ಜಗಳೂರು - ೩೦ ಶಾಸನಗಳು ಸಾಕ್ಷಿಯಾಗಿರುವುವು.[೧೭]

ಆನೆಗೊಂದಿಯ ಚೆಂಚಲ ಕೋಟೆಯಲ್ಲಿ ನಾಗನಾಥ ದೇವಾಲಯವಿದ್ದು ಈ ದೇವಾಲಯವು ಸಹ ನಾಥ ಸಂಪ್ರದಾಯಕ್ಕೆ ಸಂಬಂಧಿಸಿದ್ದಾಗಿದೆ. ಗುಂಡೂರಿನ ಎರಡು ಶಾಸನಗಳು ಈ ದೇವಾಲಯದ ಕುರಿತಾಗಿ ಉಲ್ಲೇಖಿಸುತ್ತಿದ್ದು, ದೇವಾಲಯಕ್ಕೆ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಕ್ರಿ.ಶ. ೧೪೧೧ರಲ್ಲಿ ಮಹಾಮಂಡಳೇಶ್ವರ ಕನ್ನೆಪ್ಪವೊಡೆಯರು ಚೆಂಚಲಕೋಟೆಯ ವಡಹೊಳೆಯ ನಾಗನಾಥ ದೇವರಿಗೆ ಹೊಸದಾಗಿ ಐದುಕುಳದ ಭೂಮಿಯನ್ನು ಕೊಟ್ಟಿರುವರು. ಈ ಹಿಂದೆ ಕ್ರಿ.ಶ. ೧೪೧೧ರಲ್ಲಿ ಇದೇ

ಚೆಂಚಲಕೋಟೆಯ ನಾಗನಾಥ ದೇವರಿಗೆ ಬಸವಪ್ಪಗಳು ಐದುಕುಳದ ಭೂಮಿಯನ್ನು ಕೊಟ್ಟಿರುವರು. ಚೆಂಚಲಕೋಟೆಯಲ್ಲಿ ನಾಗನಾಥದೇವಾಲಯವು ಇದ್ದು, ಜೀರ್ಣವಾಗಿದೆ.[೧೮]

ತುಳುವ ನಸರನಾಯಕನ ಕಾಲದಲ್ಲಿಯೂ ನಾಥಸಂಪ್ರದಾಯವು ಪ್ರಚಲಿತದಲ್ಲಿದ್ದು, ನರಸನಾಯಕನು ಸಿದ್ಧದೇವರಿಗೆ ಆರುವ ವರಹಗಳ ಭೂಮಿಯನ್ನು ಸಿದ್ಧದೇವರಿಗೆ ದಾನವಾಗಿ ನೀಡಿರುವನೆಂದು ಕ್ರಿ.ಶ. ೧೫ - ೧೬ನೇ ಶತಮಾನದ ಶಾಸನವು ಉಲ್ಲೇಖಿಸುವುದು.[೧೯]

ಬೈನಕನ ಬಾವಿಯ ಹತ್ತಿರ ಇರುವ ಬೆಟ್ಟದ ಮೇಲೆ ಶಿಲ್ಪಗಳ ಸಮೂಹವು ಇದ್ದು, ಇದು ನಾಥ ಪಂಥದ ಮುಖ್ಯ ಕೇಂದ್ರವಾಗಿರುವುದು. ಈ ಶಿಲ್ಪಸಮೂಹದಲ್ಲಿ ಗಣೇಶ, ಲಕ್ಷ್ಮಿ, ಮಹಿಷಮರ್ಧಿನಿ, ಭೈರವಿ, ಭೈರವ ಒಂದು ಪಟ್ಟಿಕೆ ಹಾಗು ಹಂಸನ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಬ್ರಹ್ಮನ ಶಿಲ್ಪ, ಭದ್ರಕಾಳಿ, ದುರ್ಗ ಇವುಗಳು ಬಿಡಿ ಶಿಲ್ಪಗಳು.[೨೦]

ಇನ್ನೊಂದು ಪಟ್ಟಿಕೆಯಲ್ಲಿ ಕೈಯಲ್ಲಿ ದಂಡವನ್ನು ಹಿಡಿದುನಿಂತಿರುವ ನಾಥಮುನಿ. (ಗೋರಖನಾಥ) ಯೋಗಸನದಲ್ಲಿ ಕುಳಿತಿರುವ ನಾಥಮುನಿ, ಮೀನಿನ ಮೇಲೆ ಕುಳಿತಿರುವ ಮತ್ಸ್ಯೇಂದ್ರ ನಾಥ, ಪದ್ಮಾಸನದಲ್ಲಿ ಕುಳಿತಿರುವ ಜಟಾ ಶಂಕರ (ಜಡೆಶಂಕರ) ಪದ್ಮಾಸನರಲ್ಲಿ ಕುಳಿತಿರುವ ವಿಷ್ಣು ಶಿಲ್ಪಗಳು ಇರುವುವು.[೨೧]

ಅರಮನೆಯ ಆವರಣದಿಂದ ಮಾತಂಗ ಪರ್ವತಕ್ಕೆ ಹೋಗುವ ಮಾರ್ಗದಲ್ಲಿ ಬೈನಕಾನಭಾವಿಯ ಶಾನಸದ ಬಳಿಯಲ್ಲಿಯೆ ಶ್ರೀ ಸಂತನಾತನ ಶಾಸನವಿದ್ದು, ಸಂತನಾಥನು ವೀರನಾಥ ಬೀರನಾಥನ ಪ್ರತಿಷ್ಠೆಯನ್ನು ಮಾಡಿಸಿದ್ದುದಾಗಿ ಉಲ್ಲೇಖವಿದೆ. ಈ ಶಾಸನದ ಬಳಿಯಲ್ಲಿ ಮಂಟಪ, ಗುಹೆಯೂ ಇದ್ದು, ಗುಹೆಯಲ್ಲಿ ಸಂತನಾಥನ ಶಿಲ್ಪವಿರುವುದು. ಸಂತನಾಥ ಎಂದು ಉಲ್ಲೇಖಿಸುವ ಶಾಸನವೂ ಇರುವುದು ಹಾಗು ಈ ಸ್ಥಳದ ಬಳಿಯಲ್ಲಿ ದೇವರಾಯರ ಕಾಲದಲ್ಲಿ ಬಾವಿಯೊಂದನ್ನು ಕಟ್ಟಿಸಿ ಬೈನಕನ ಬಾವಿ ಎಂದು ಕರೆಯಲಾಗಿದ್ದು, ನಾಥರ ಮಠದ ಉಪಯೋಗಕ್ಕಾಗಿ ಬಾವಿಯನ್ನು ಕಟ್ಟಿಸಿರಬಹುದಾಗಿದೆ. ಈ ಸ್ಥಳಕ್ಕೆ ಹೊಂದಿಕೊಂಡಂತೆ ಇರುವ ಚಿಕ್ಕ ಬೆಟ್ಟದ ಮೇಲೆ ನಾಥಮುನಿಗಳು ಗಣೇಶ ಕಾರ್ತಿಕೇಯ, ಸರಸ್ವತಿ ಭೈರವಮೂರ್ತಿ ಶಿಲ್ಪಗಳ ಸಮೂಹವೇ ಇರುವುದು ಈ ಸ್ಥಳವು ನಾಥಪಂಥದ ಕೇಂದ್ರವಾಗಿರುವುದು. ಇಲ್ಲಿ ವೀರನಾಥನೆಂದು ಕರೆದಿರುವ ಹೆಸರು ಗೋರಖನಾಥನಾಗಿದೆ.

ಗೋರಖನಾಥನು ವಜ್ರದೇಹಿ ಆಗಿದ್ದನೆಂದು ರೇವಣಸಿದ್ಧನು ಖಡ್ಗದಿಂದ ಅವನ ದೇಹದ ಮೇಲೆ ಹೊಡೆದಾಗ ದೇಹಕ್ಕೆ ಯಾವ ತೊಂದರೆಯೂ ಆಗಲಿಲ್ಲವೆಂದು ರೇವಣಸಿದ್ಧನ ಗೊರಖನಾಥರ ಸಂವಾದದಲ್ಲಿ ಉಲ್ಲೇಖವಿರುವುದು.[೨೨]

ಗಾಣಗಿತ್ತಿ ಜಿನಾಲಯದ ಪೂರ್ವ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ನಾಥಪಂಥ ದೇವಾಲಯವಿರುವುದು. ಈ ದೇವಾಲಯ ಗರ್ಭಗೃಹದ ಬಾಗಿಲಿನ ಚೌಕಟ್ಟಿನಲ್ಲಿ ನಾಥಮುನಿಗಳ ಶಿಲ್ಪಗಳಿರುವುವು ದೇವಾಲಯವು ಭಾಗಶಃ ಜೀರ್ಣವಾಗಿರುವುದು. ಈ ದೇವಾಲಯದ ಪೂರ್ವಕ್ಕೆ ಸೋಮಯ್ಯದೇವರ ಲಿಂಗ ಮತ್ತು ಶಿಲ್ಪವೂ ಹಾಗೂ ದಕ್ಷಿಣಕ್ಕೆ

ರೇವಣಸಿದ್ಧದೇವರ ಪಾದದರೆಯ ಗುಂಡು ಹಾಗೂ ಪಶ್ಚಿಮದಿಕ್ಕಿನಲ್ಲಿ ಶಿವಯೋಗಿ ದೇವರ ಗವಿಯೂ ಇರುವುದು ವಿಶೇಷವಾಗಿದೆ.[೨೩]


ಪಸನ್ನ ವಿರೂಪಾಕ್ಷದೇವಾಲಯದ ಉತ್ತರ ದಿಕ್ಕಿನಲ್ಲಿರುವ ಅಕ್ಕತಂಗಿಯ ಗುಂಡಿನ ಬಳಿ ಗಣ್ಯವ್ಯಕ್ತಿಗಳ ಅರಮನೆಗಳ ಆವರಣದ ಪಶ್ಚಿಮಕ್ಕೆ ಬೆಟ್ಟದಲ್ಲಿ ಗುಹಾಲಿಯವಿದ್ದು, ಈ ಗುಹಾಲಯದ ದ್ವಾರದ ಚೌಕಟ್ಟಿನಲ್ಲಿಯೂ ನಾಥಮುನಿಗಳ ಶಿಲ್ಪಗಳಿರುವವು.

ಹಂಪೆಯಲ್ಲಿ ಕೃಷ್ಣದೇವಾಲಯ ಬಳಿಯಲ್ಲಿನ ಆಂಜನೇಯ ದೇವಾಲಯದ ಮುಂದೆ ಇರುವ ಶಾಸನವು ಸಂಗಮ ವಂಶದ ಒಂದನೇ ಬುಕ್ಕರಾಯನ ದಂಡನಾಯಕ ಬಸವ ದಣ್ಣಾಯಕನು ಆದಿಗ (ಎದು) ನಾಥ ಮತ್ತು ಪ್ರಗಥನಾಥರ ಹೆಸರಿನಲ್ಲಿ ಮಠ ಮಂಟಪ ಮತ್ತು ಬಾವಿಯನ್ನು ಕಟ್ಟಿಸಿರುವ ಉಲ್ಲೇಖವಿದೆ.[೨೪]


ಗೋರಕ್ಷನು ತನ್ನ ಕಾಯ (ದೇಹ) ಸಿದ್ಧಿಯ ನಿದ್ರೆಯಿಂದ ಹೆಚ್ಚೆತ್ತು ಯೋಗ ಸಿದ್ಧಿಯನ್ನು ಅಲ್ಲಮ ಪ್ರಭುವಿನಿಂದ ಪಡೆದುದರ ಹಿನ್ನೆಲೆಯಲ್ಲಿ ಗೋರಕ್ಷನನ್ನು ಸಿದ್ಧನೆಂದು ಕರೆದಿರುವುರು. ನಿರ್ವಲಯ ಸಮಾಧಿ ಯೋಗವನ್ನು ಪಡೆದು, ಗೋರಕ್ಷಪಾಲಕ ಮಹಾಪ್ರಭು "ಸಿದ್ಧ ಸೋಮನಾಥ ಲಿಂಗವೇ" ಎಂದು ಅಲ್ಲಮ ಪ್ರಭುವನ್ನು ಕರೆದಿರುವನು. ಇದರಿಂದ ಸಿದ್ಧಿಯನ್ನು ಪಡೆದ ಗೋರಕ್ಷನಿಗೆ ಸಿದ್ಧನೆಂದು ಇದರಿಂದ ಆನಂದಿತ ನಾದವನನ್ನು ಆನಂಧ ಸಿದ್ಧನಾಥನೆಂದು ಕರೆಯಲಾಗಿದೆ.

ಅಲ್ಲಮಪ್ರಭುದೇವರ ಗೊಗ್ಗಯ್ಯನಿಂದ ಗೋರಕ್ಷನವರೆಗೂ ಎಲ್ಲಾ ಶರಣರನ್ನು ಒಳಗೊಂಡಂತೆ ಅನುಭಾವಗೋಷ್ಠಿಯ ಪ್ರಸಂಗವನ್ನು ನೆರವೇರಿಸಿದರೆಂದು ಶೂನ್ಯ ಸಂಪಾದನೆಯಲ್ಲಿ ಉಲ್ಲೇಖವಿರುವುದು.[೨೫]


ಈ ಎಲ್ಲಾ ಅಂಶಗಳ ಅಧ್ಯಯನದಿಂದ ನಾಥ ಪಂಥ ಧರ್ಮ ವಿಜಯನಗರ ಪಟ್ಟಣದಲ್ಲಿ ಬಾಳಿ ಬೆಳಗಿದ ಐತಿಹ್ಯವು ಖಚಿತವಾಗುವುದು. ಶ್ರೀ ಬಿ.ರಾಜಶೇಖರಪ್ಪ ಚಿತ್ರದುರ್ಗ ಇವರು ಚಿತ್ರದುರ್ಗದಲ್ಲಿನ ನಾಥಮುನಿಗಳ ಕುರಿತಾಗಿ ವಿಚಾರ ಸಂಕಿರಣದಲ್ಲಿ ಸಲಹೆ ಮಾಡಿದ್ದಕ್ಕೆ ಕೃತಜ್ಞತೆಗಳು.







ದೇವಾಲಯಗಳ ಸ್ತಂಭಗಳ ಮೇಲಿನ ನಾಥಮುನಿಗಳ ಶಿಲ್ಪಗಳು



ದೇವಾಲಯಗಳ ಸ್ತಂಭಗಳ ಮೇಲಿನ ನಾಥಮುನಿಗಳ ಶಿಲ್ಪಗಳು



ದೇವಾಲಯಗಳ ಸ್ತಂಭಗಳ ಮೇಲಿನ ನಾಥಮುನಿಗಳ ಶಿಲ್ಪಗಳು







ದೇವಾಲಯಗಳ ಸ್ತಂಭಗಳ ಮೇಲಿನ ನಾಥಮುನಿಗಳ ಶಿಲ್ಪಗಳು





ನಾಥಪಂಥದ ದೇವಾಲಯ ಗಾಣಗಿತ್ತಿ, ಚೈತ್ಯಾಲಯದ ಪೂರ್ವಕ್ಕೆ




ನಾಥಪಂಥದ ದೇವಾಲಯ ಗಾಣಗಿತ್ತಿ ಚೈತ್ಯಾಲಯದ ಪೂರ್ವಕ್ಕೆ
ಬಾಗಿಲ ಮೇಲಿರುವ ನಾಥಮುನಿ ಶಿಲ್ಪ







ನಾಗನಾಥ ದೇವಾಲಯ ಚೆಂಚಲಕೋಟೆ, ಆನೆಗೊಂದಿ



ಸಂತನಾಥ ಮುನಿಯ ಗುಹೆ, ಶಿಲ್ಪ, ಶಾಸನ ಮಂಟಪ




ಶ್ರೀ ಸಂತನಾಥ ಮುನಿಯ ಶಾಸನ




ನಾಥಪಂಥದ ಶಿಲ್ಪ ಸಮೂಹ, ಬೆನಕನ ಬಾವಿಯ ಬಳಿ







ನಾಥಮುನಿಗಳು, ಜಟಾಶಂಕರ, ವಿಷ್ಣು, ಗಣೇಶ, ಲಕ್ಷ್ಮಿ, ಮಹಿಷಮರ್ಧಿನಿ, ಭೈರವ, ಬ್ರಹ್ಮ ಶಿಲ್ಪಗಳು ಕ್ರಮವಾಗಿ



ದೇವಿಯರ ಶಿಲ್ಪ



ನಾಥಮುನಿಗಳ ಗುಹಾಲಯವಿರುವ ಸ್ಥಳ
ಗಣ್ಯವ್ಯಕ್ತಿಗಳ ಅರಮನೆಯ ಬಳಿಯ ಅಕ್ಕತಂಗಿಯರ ಗುಂಡು



ನಾಥಮುನಿಗಳ ಗುಹಾಲಯ





ಗುಹಾಲಯ ದ್ವಾರದ ಮೇಲಿರುವ ನಾಥಮುನಿಗಳು



ಆನಂದ ಸಿದ್ಧನಾಥನ ಗುಹಾಲಯ, ಆನೆಗೊಂದಿ





ಆನಂದ ಸಿದ್ಧನಾಥನ ಗುಹಾಲಯದ ಎದುರಿಗಿರುವ ಭೈರವ ಮತ್ತು ನಾಗಶಿಲ್ಪ

ಉಲ್ಲೇಖ ಗ್ರಂಥಗಳು

೧. ಕಾಪಸೆ ಜಿ.ಎಸ್. ೧೯೯೬, ಚಾಮರಸ (ಮುತ್ತಿನಹಾರ), ಪು. ೭೭ - ೭೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬಸವರಾಜು ಎಲ್. ೧೯೯೬, ಶೂನ್ಯಸಂಪಾದನೆ, ಮುತ್ತಿನಹಾರ, ಪು. ೪೪ - ೪೫

೨. Banerjee N.R. 1980, Nepalese Architecture, Pp. 29, Agam Kala Prakashan, New Delhi

೩. Ibid, pp. 29, 168, 169

೪. Anila Veghere, 1995, Religious Traditions at Vijayanagara, Pp. 522, 89, 113, 119

೫. ಸುಬ್ಬಣ್ಣ ರೈ, ೧೯೯೯, ಕದ್ರಿ, ಕನ್ನಡ ವಿಶ್ವವಿದ್ಯಾಲಯ, ಹಂಪೆ, 'ಮಂಟಪಮಾಲೆ' - ೬೫, ಪು. ೧೫ - ೧೬

೬. ಅದೇ, ಪು. ೨೪

೭. EC XI, Jagalur, No.30, Kalledevarapura

೮. EC XI, Chitradurga No. 2,3

೯. ARIE No.B.718, 1919

South Indian Inscriptions IX, Pt.1 No. 384

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. V, ಭಾಗ - ೧, ನಂ. ೩೨೪, ಆಂಧ್ರಪ್ರದೇಶದ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಕಲಬುರ್ಗಿ ಎಂ.ಎಂ. ೧೯೯೯, ಹರಿಹರನ ರಗಳೆಗಳು, ಪು. ೨೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. EC XI, Chitradurga, No.6

೧೨. EC XI, Chitradurga, No.5,12

೧೩. Vijayanagara progress of Research, 1987-88, No.175, Pp. 68-69, Directorate of Archaeology and Museums, Karnataka.

ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, ೧೯೯೬, ಕರ್ನಾಟಕ ಶಾಸನಗಳು ಸಂಪುಟ ೧, ವಿಜಯನಗರದ (ಹಂಪೆಯ) ಶಾಸನಗಳು, ನಂ. ೧೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೪. EC XI, Chitradurga, No.55

ವಸುಂದರಾ ಫಿಲಿಯೋಜಾ, ೧೯೮೦, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು. ೧೪

೧೫. Devaraja D.V., Channabasappa S. Patil, Vijayanagara Progress of Research 1984-87, 1991 No. 175, Pp. 68-69, Plate No. 131-135, Directorate of Archaeology and Museums, Karnataka.

೧೬. ARIEA, 1975-76, No. B.106

ಚನ್ನಬಸಪ್ಪ ಎಸ್. ಪಾಟೀಲ, ವಿನೋದಾ ಪಾಟೀಲ, ೧೯೯೬. ವಿಜಯನಗರದ ಶಾಸನಗಳು, ನಂ. ೨೨೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಗಳ ನಿರ್ದೇಶನಾಲಯ, ಮೈಸೂರು.

೧೭. EC XI, Chitradurga, No. 2-3, Jagalur-30

೧೮. ಭಟಸೂರಿ ಕೆ.ಜಿ. ೧೯೯೯, ಗುಂಡೂರಿನ ಶಾಸನಗಳು, ಇತಿಹಾಸ ಅಕಾಡೆಮಿ, ಸಂ. ೧೪, ಪು. ೫೨ - ೫೩

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೨, ಗಂಗಾವತಿ, ನಂ. ೯೯, ೧೦೦

೧೯. Quarterly Journal of Mythic Society, Vol. VII, No.X

ವಿಜಯನಗರ ಶಾಸನಗಳು, ಕರ್ನಾಟಕ ಶಾಸನ ಸಂಪುಟ - ೧, ನಂ. ೪೬, ಶಾಣಾಪುರ, ಗಂಗಾವತಿ ತಾಲೂಕು.

೨೦. Vijayanagara progress of Research, 1983-84, No.15, P. 31

ವಿಜಯನಗರದ ಶಾಸನಗಳು, ಕರ್ನಾಟಕ ಶಾಸನ ಸಂಪುಟ - ೧, ನಂ. ೨೬೫

೨೧. Manjunathaiah T.M. and Parameshwara Kumar M, 1985, Sculptures on the hillock South of Maṭanga Hill, Vijayanagara Progress of Research, 1983-84, Pp. 36-37

George Michell, 1990, Vijayangara Inventory Pp. 31, NMX 1,2,3

Anila Verghese, 1995, Religious Traditions at Vijayanagara

Anna L. Dallapiccola, Anila Verghese, 1998, Sculpture at Vijayanagara, Iconography and style pp. 79, Manohar Publications, American Institute of Indian Studies, New Delhi.

೨೨. ಕಲಬುರ್ಗಿ ಎಂ.ಎಂ. ೧೯೯೯, ಹರಿಹರನ ರಗಳೆಗಳು, ರೇವಣಸಿದ್ಧನ ರಗಳೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. Vijayanagara progress of Research, 1983-84, No.54, P. 45-46

IBID, 1984-87, No. 111, P. 51

೨೪. ARIE, 1975-76, No. B. 106

ವಿಜಯನಗರದ ಶಾಸನಗಳು, ಕರ್ನಾಟಕ ಶಾಸನ ಸಂಪುಟ - ೧, ನಂ. ೨೨೫

೨೫. ಭೂಸನೂರುಮಠ ಸಂ. ಶಿ. ೧೯೮೩, ಶೂನ್ಯ ಸಂಪಾದನೆಯ ಪರಾಮರ್ಶೆ, ಕರ್ನಾಟಕ ಸರಕಾರ, ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ ನಂ. ೭೭, ಪು. ೬೨, ೨೫೭, ೯೦೯-೧೩, ೯೩೯.

❑❑

ಪ್ರಬಂಧ ಮಂಡಿಸಿದವರು

ಡಾ.ಎಂ.ಟಿ.ಕಾಂಬಳೆ
ಪ್ರಾಧ್ಯಾಪಕರು
ಇತಿಹಾಸ ಮತ್ತು ಪುರಾತತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ ೫೮೦ ೦೦೩

ಪ್ರೊ. ಮಹಾಬಲೇಶ್ವರಪ್ಪ
ಪುರಾತತ್ವ ಮತ್ತು ಇತಿಹಾಸ ವಿಭಾಗ
ಗುಲ್ಬರ್ಗ ವಿಶ್ವವಿದ್ಯಾಲಯ
ಗುಲ್ಬರ್ಗ

ಎಂ.ಜಿ.ನಾಗರಾಜ್
೨೨೧, ೬೮ ನೇ ತಿರುವು
೫ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು ೫೬೦ ೦೧೦

ಪ್ರೊ. ರಾಜಶೇಖರಪ್ಪ ಬಿ.
ಸರ್ಕಾರಿ ವಿಜ್ಞಾನ ಕಾಲೇಜು
ಹಿರಿಯೂರು ೫೭೭ ೧೪೩
ಚಿತ್ರದುರ್ಗ ಜಿಲ್ಲೆ

ಡಾ. ಕೆ.ರವೀಂದ್ರನಾಥ
ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಾ. ಸಿ.ಮಹದೇವ
ಪ್ರವಾಚಕರು
ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಾ. ಎಸ್.ವೈ.ಸೋಮಶೇಖರ್
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಾ. ಶ್ರೀನಿವಾಸ ಪಾಡಿಗಾರ
ಪ್ರಾಧ್ಯಾಪಕರು
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ ೫೮೦ ೦೦೩

ಡಾ. ಸಿ.ಎಸ್.ವಾಸುದೇವನ್
ಅಧ್ಯಾಪಕರು
ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಾ. ಕೆ.ಜಿ.ವೆಂಕಟೇಶ ಜೋಯಿಸ್
ಕ್ಯೂರೇಟರ್
ಕೆಳದಿ ವಸ್ತುಸಂಗ್ರಹಾಲಯ ಮತ್ತು
ಸಂಶೋಧನಾ ಕೇಂದ್ರ
ಕೆಳದಿ ೫೭೭ ೪೦೧
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.

ಪ್ರೊ. ಬಾಲಸುಬ್ರಮಣ್ಯ
ಮುಖ್ಯಸ್ಥರು
ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾಡಲಗೇರಿ ಕೊಟ್ರೇಶ್
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜಗದೀಶ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರಾಸಕೈ ಅನಿನಿಕೈವ, ಯಾದವಗಿರಿ
ಮೈಸೂರು

ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತುಸಂಗ್ರಹಾಲಯ ಮತ್ತು
ಸಂಶೋಧನಾ ಕೇಂದ್ರ
ಕೆಳದಿ ೫೭೭ ೪೦೧

ಡಾ. ನಾ.ಶಿ.ರಂಗರಾಜು
ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ವಿಭಾಗ
ಮಾನಸಗಂಗೋತ್ರಿ
ಮೈಸೂರು ೫೭೦ ೦೦೬

ಶ್ರೀ ಆರ್.ಎಚ್.ಕುಲಕರ್ಣಿ
೧೧೦೧೪ ೧ ೩ನೇ ಕ್ರಾಸ್
ಆಶ್ರಮ ರಸ್ತೆ, ಹಿನ್‌ಕಲ್
ಮೈಸೂರು ೫೭೦ ೦೧೭

ಸಿ.ಟಿ.ಎಂ. ಕೊಟ್ರಯ್ಯ
೩೪೦, ಎಂ ಬ್ಲಾಕ್
ಕುವೆಂಪು ನಗರ
ಮೈಸೂರು ೫೭೦ ೦೨೩

ವಿನೋದಾ ಪಾಟೀಲ್
ಅಕ್ಕಿಆಲೂರು .
ಹಾನಗಲ್ಲು ತಾಲೂಕು
ಹಾವೇರಿ ಜಿಲ್ಲೆ.

ಡಾ. ರು.ಮ.ಷಡಕ್ಷರಯ್ಯ
ಪ್ರಾಧ್ಯಾಪಕರು
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ ೫೮೦ ೦೦೩

ಡಾ. ಮೃತ್ಯುಂಜಯ ರುಮಾಲೆ
ಅಧ್ಯಾಪಕರು
ವಿಜಯನಗರ ಕಾಲೇಜು
ಹೊಸಪೇಟೆ ೫೮೩ ೨೦೧

ಡಾ. ಎಫ್.ಟಿ.ಹಳ್ಳಿಕೇರಿ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಟಿ.ಎಂ.ಮಂಜುನಾಥಯ್ಯ
ಪುರಾತತ್ವ ಸಹಾಯಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ
ಕಮಲಾಪುರ ೫೮೩ ೨೨೧
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಐತಿಹಾಸಿಕ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಮರುಕಳಿಸುವಂತೆ ಮಾಡುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಆರಂಭಿಸಿ, ಉತ್ಖನನ, ಸಂರಕ್ಷಣೆ ಮತ್ತು ಸಂಶೋಧನಾತ್ಮಕವಾದ ಚಟುವಟಿಕೆಗಳೇ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ವಿಜಯನಗರ ಅಧ್ಯಯನ ಸಂಪುಟಗಳು ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲುವುದರಲ್ಲಿ ವಿದ್ವಾಂಸರಿಗೆ ಮತ್ತು ಸಾರ್ವಜನಿಕರಿಗೆ ಉತ್ತಮ ಆಕರ ಗ್ರಂಥಗಳಾಗಲಿ ಎಂದು ಆಶಿಸುತ್ತೇವೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಹೊಸಪೇಟೆ